₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಭಾನುವಾರ 16.02.2025 ಸಂಪುಟ: 10 ಸಂಚಿಕೆ:33 ಪುಟಗಳು: 10+4 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ

ವಿಶ್ವಾಸವೇ ವಿಶ್ವ

ಮಾಜಿ ಸಚಿವ ಅರವಿಂದ ಲಿಂಬಾವಳಿ ಅವರು ಪತ್ನಿ, ಶಾಸಕಿ ಮಂಜುಳಾ ಲಿಂಬಾವಳಿ ಅವರೊಂದಿಗೆ ಉತ್ತರಪ್ರದೇಶದ ಪ್ರಯಾಗರಾಜ್‌ನಲ್ಲಿ ನಡೆಯುತ್ತಿರುವ ಮಹಾಕುಂಭ ಮೇಳದಲ್ಲಿ ಭಾಗವಹಿಸಿ ಪವಿತ್ರ ಸ್ನಾನ ಮಾಡಿದರು.

ರಾಜ್ಯದ ಹಿತಕ್ಕಾಗಿ ರಾಜಕೀಯ ಮರೆತು ಹೋರಾಟ ಮಾಡೋಣ

ವಿವರಪುಟ → 5

ಸೊಂಪಾದ ಪುಟಗಳು



ಜಪಾನಿನಲ್ಲಿ ಒಂಟಿತನ ನೀಗಿಸಿಕೊಳ್ಳಲು ಆಲಿಂಗನ ಕೆಫೆಗಳಿಗೆ ಹೋಗಬಹುದು!

ಇದೇ ಅಂತರಂಗ ಸುದ್ದಿ ವಿಶ್ವೇಶ್ವರ ಭಟ್ 6



ಉಚಿತಗಳ ಹರಿಕಾರ ಮಫ್ಲರ್‌ವಾಲನ ಮಹಾಪತನ

ವಿದ್ಯಮಾನ ವಿನಾಯಕ ವೆಂ.ಭಟ್ಟ ಅಂಬ್ಲಿಹೊಂಡ 7

ದಾರಿದೀಪೋಕ್ತಿ

ಬೇಸರ ಅಥವಾ ಖೇದಕ್ಕೆ ಮುಖ್ಯ ಕಾರಣ ಒಂದು ವಿಷಯದ ಬಗ್ಗೆ ಅತಿಯಾಗಿ ಯೋಚಿಸುವುದು. ನಿಮ್ಮ ನಿಯಂತ್ರಣದಲ್ಲಿ ಇಲ್ಲದ ವಿಷಯಗಳ ಬಗ್ಗೆ ಯೋಚಿಸಿ ಫಲವಿಲ್ಲ. ಸಾಧ್ಯವಾದಷ್ಟು ಮನಸ್ಸನ್ನು ಇಂಥ ಚಿಂತೆಗಳಿಂದ ಮುಕ್ತವಾಗಿಟ್ಟುಕೊಳ್ಳುವುದನ್ನು ರೂಢಿಸಿಕೊಳ್ಳಬೇಕು.

ವಕ್ರತುಂಡೋಕ್ತಿ

ಯಾರಾದರೂ ತಮ್ಮ ಬಗ್ಗೆ ಬಡಾಯಿ ಕೊಚ್ಚಿಕೊಳ್ಳುವುದು ಒಳ್ಳೆಯದು. ಅಂಥವರು ಅಷ್ಟು ಹೊತ್ತು ಕನಿಷ್ಠ ಬೇರೆಯವರ ಅವಹೇಳನ ಮಾಡುವುದಿಲ್ಲ.

ಹರಿಯಾಣ ಉಸ್ತುವಾರಿಯಾಗಿ ಬಿ.ಕೆ. ಹರಿಪ್ರಸಾದ್

ದೆಹಲಿ: ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಅವರನ್ನು ಹರಿಯಾಣ ರಾಜ್ಯದ ಪಕ್ಷದ ಉಸ್ತುವಾರಿಯಾಗಿ, ರಾಜ್ಯ ಸಭಾ ಸದಸ್ಯ ಸಯ್ಯದ್ ನಾಸಿರ್ ಹುಸೇನ್ ಅವರನ್ನು ಜಮ್ಮು ಮತ್ತು ಕಾಶ್ಮೀರದ ಪ್ರ. ಕಾರ್ಯದರ್ಶಿಯಾಗಿ, ಎಐಸಿಸಿ ಶನಿವಾರ ನೇಮಿಸಿದೆ. ಛತ್ತೀಸಗಢದ ಮಾಜಿ ಸಿಎಂ ಭೂಪೇಶ್ ಬಘೇಲ್ ಅವರಿಗೂ ಪ್ರಧಾನ ಕಾರ್ಯದರ್ಶಿ ಹುದ್ದೆ ನೀಡಲಾಗಿದೆ. ಪಕ್ಷದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ಪಕ್ಷದ ಸಂಘಟನೆಯ ಪುನರ್ ರಚನೆ ಪ್ರಕ್ರಿಯೆಗೆ ಪಕ್ಷ ಚಾಲನೆ ನೀಡಿದೆ.

ಮಾತಂದ್ರೆ ಮಾತು

ಸಿದ್ದರಾಮಯ್ಯ ಅವರು ರಾಜ್ಯಕ್ಕಷ್ಟೇ ಅಲ್ಲ, ದೇಶಕ್ಕೆ ಅನಿವಾರ್ಯವಾಗಿದ್ದಾರೆ. ಸಿದ್ದರಾಮಯ್ಯ ಅವರು ಇರುವುದರಿಂದ ಕಾಂಗ್ರೆಸ್ ಪಕ್ಷಕ್ಕೆ ಅನುಕೂಲ. ಇದಕ್ಕೆ ಈ ಬಾರಿಯ ವಿಧಾನಸಭೆ ಚುನಾವಣೆಯೇ ಸಾಕ್ಷಿಯಾಗಿದೆ. ಅವರು ಒಂದು ರೀತಿ ರೋಲ್ ಮಾಡೆಲ್ ಇದ್ದಂತೆ.

– ಕಂಪ್ಲಿ ಗಣೇಶ್
ಶಾಸಕ

ಫನ್‌ತರಂಗ

– ರಘುಪತಿ ಶೃಂಗೇರಿ –



ಮುಖ್ಯಮಂತ್ರಿ ಸಿದ್ದರಾಮಯ್ಯ ಬದಲಾವಣೆ ಇಲ್ಲ: ಸಚಿವ ಕೆ.ಎನ್.ರಾಜಣ್ಣ

ಕೆಪಿಸಿಸಿ ಅಧ್ಯಕ್ಷ ಸ್ಥಾನ ನೀಡುವಂತೆ ಹೈಕಮಾಂಡ್ ಮೇಲೆ ಜಾರಕಿಹೊಳಿ ಒತ್ತಡ

ಹೈಕಮಾಂಡ್ ಭೇಟಿ ಸಿದ್ದು ಬಣ ಬಲಿಷ್ಠ

ವಿಶ್ವವಾಣಿ ಸುದ್ದಿಮನೆ

ಬೆಂಗಳೂರು: ರಾಜ್ಯ ಕಾಂಗ್ರೆಸ್ ನಾಯಕರಿಗೆ ಸ್ವತಃ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಎಚ್ಚರಿಕೆಯ ಹೊರತಾಗಿಯೂ, ಮುಖ್ಯಮಂತ್ರಿ ಬದಲಾವಣೆ ಹಾಗೂ ಕೆಪಿಸಿಸಿ ಅಧ್ಯಕ್ಷರ ಬದಲಾವಣೆಗೆ ಸಂಬಂಧಿಸಿದಂತೆ ನಿರಂತರ ಹೇಳಿಕೆ ಮುಂದುವರಿದಿದೆ. ಅದರಲ್ಲಿಯೂ ದಲಿತ ಸಚಿವರ ದೆಹಲಿ ಪರೇಡ್ ಬಳಿಕ, ಹೇಳಿಕೆಗಳಿಗೆ ಇನ್ನಷ್ಟು 'ಗಟ್ಟಿತನ' ತುಂಬಿರುವುದು ಭಾರಿ ಕುತೂಹಲಕ್ಕೆ ಕಾರಣವಾಗಿದೆ.

ಅದರಲ್ಲಿಯೂ ಸಚಿವ ಕೆ.ಎನ್.ರಾಜಣ್ಣ ಹಾಗೂ ಸತೀಶ್ ಜಾರಕಿಹೊಳಿ ದೆಹಲಿಯಿಂದ ವಾಪಸಾಗುತ್ತಿದ್ದಂತೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಬದಲಾವಣೆಯಿಲ್ಲ ಎಂದು ಹೇಳುವ ಜತೆಜತೆಗೆ ಕೆಪಿಸಿಸಿ ಅಧ್ಯಕ್ಷ ಸ್ಥಾನ ಕೊಟ್ಟರೆ ನಿಭಾಯಿಸಲು ಸಿದ್ಧ ಎಂದು ಬಹಿರಂಗವಾಗಿಯೇ ಹೇಳುತ್ತಿದ್ದಾರೆ. ಈ ಇಬ್ಬರೂ ಹೈಕಮಾಂಡ್ ನಾಯಕರನ್ನು ಭೇಟಿಯಾದ ಬಳಿಕ ಈ ಹೇಳಿಕೆ ಬರುತ್ತಿರುವುದು ಹಾಗೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರೇ ಪಿಸಿಸಿ ಅಧ್ಯಕ್ಷರ ಬದಲಾವಣೆ ಬಗ್ಗೆ ಮಾತನಾಡಿರುವುದರಿಂದ ಕುತೂಹಲ ಇನ್ನಷ್ಟು ಹೆಚ್ಚಾಗಿದೆ.

ಕೇವಲ ಬದಲಾವಣೆಯ ಮಾತುಗಳಷ್ಟೇ ಅಲ್ಲದೇ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ತೀವ್ರವಾಗಿ ವಿರೋಧಿಸಿದ್ದ ಶೋಷಿತರ ಸಮುದಾಯದ ಸಮಾವೇಶಕ್ಕೆ ಮತ್ತೆ ಜೀವ ಬಂದಿದ್ದು, ಈ ಬಗ್ಗೆ ಹೈಕಮಾಂಡ್ ಒಪ್ಪಿಸುವಲ್ಲಿ ಪರಮೇಶ್ವರ ಹಾಗೂ ಸತೀಶ್ ಜಾರಕಿಹೊಳಿ ಯಶಸ್ವಿಯಾಗಿದ್ದಾರೆ ಎನ್ನಲಾಗಿದೆ. ಈ ಸಮಾವೇಶಕ್ಕೆ ಸ್ವತಃ ಹೈಕಮಾಂಡ್ ನಾಯಕರೇ ಭಾಗವಹಿಸುವ ಸಾಧ್ಯತೆಯಿರುವುದರಿಂದ, ಸಿದ್ದರಾಮಯ್ಯ ಬಣ 'ಬಲಿಷ್ಠ'ವಾಗಿದೆ ಎನ್ನುವ ವಿಶ್ಲೇಷಣೆಗಳು ಇದೀಗ ಶುರುವಾಗಿದೆ.

ಒಕ್ಕಲಿಗ ಸಮಾವೇಶ

ಶೋಷಿತರ ಸಮಾವೇಶಕ್ಕೆ ಗ್ರೀನ್ ಸಿಗ್ನಲ್ ಸಿಗುವ ಸಾಧ್ಯತೆ ಕಾಣಿಸುತ್ತಿದ್ದಂತೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಶನಿವಾರ ಕನಕಪುರದಲ್ಲಿ ಬೃಹತ್ ಸಮಾವೇಶ ಹಮ್ಮಿಕೊಂಡು ಒಕ್ಕಲಿಗರ ಬಲಪ್ರದರ್ಶನ ಮಾಡಲು ಪ್ರಯತ್ನಿಸಿದ್ದಾರೆ. ಕಾರ್ಯಕ್ರಮದಲ್ಲಿ, 'ನಿಮ್ಮ ನಿಮ್ಮಲ್ಲಿರುವ ಕೋಪ, ಭಿನ್ನಾಭಿಪ್ರಾಯದಿಂದ ಸೋಲಾಗಿದೆ. ನಾನು ಹಾಗೂ ಯೋಗೇಶ್ವರ್ ಅವರ ಮಧ್ಯೆ ಎಷ್ಟೇ ಜಗಳವಿದ್ದರೂ ಪಕ್ಷ ಮುಖ್ಯ' ಎಂದು ಹೇಳುವ ಮೂಲಕ ಸಿದ್ದರಾಮಯ್ಯ ಬಣಕ್ಕೆ ಪರೋಕ್ಷ ಟಾಂಗ್ ಕೊಟ್ಟಿದ್ದಾರೆ.

ದಲಿತ ಸಚಿವರ ಸಭೆ?

ರಾಜ್ಯ ಕಾಂಗ್ರೆಸ್‌ನಲ್ಲಿ ಬಣ ಬಡಿದಾಟ ಜೋರಾಗುತ್ತಿರುವ ನಡುವೆಯೇ, ದಲಿತ ಸಚಿವರು ಇನ್ನೆರೆಡು ದಿನಗಳಲ್ಲಿ ಸಭೆ ಸೇರಲಿದ್ದಾರೆ ಎನ್ನಲಾಗಿದೆ. ಈ ಸಭೆಯಲ್ಲಿ ಪ್ರಮುಖವಾಗಿ ಶೋಷಿತರ ಸಮಾವೇಶವನ್ನು ಯಾವಾಗ ನಡೆಸಬೇಕು ಎನ್ನುವ ಬಗ್ಗೆ ಚರ್ಚಿಸುವ ಸಾಧ್ಯತೆಯಿದೆ. ಇದರೊಂದಿಗೆ ದೆಹಲಿ ಭೇಟಿಯ ವೇಳೆ ಹೈಕಮಾಂಡ್ ಜತೆ ನಡೆದಿರುವ ವಿಷಯಗಳ ಬಗ್ಗೆಯೂ ಚರ್ಚಿಸಿ, ಮುಂದಿನ ಹೋರಾಟದ ಬಗ್ಗೆ ರೂಪುರೇಷೆ ಸಿದ್ಧಪಡಿಸುವ ಸಾಧ್ಯತೆಯಿದೆ ಎನ್ನಲಾಗಿದೆ.

ಹೊಸ ನಾಯಕತ್ವ ಸಿದ್ಧಗೊಳ್ಳುವ ತನಕ ಸಿದ್ದರಾಮಯ್ಯ ಅನಿವಾರ್ಯ. ಮುಂದಿನ ಚುನಾವಣೆ ಗೆಲ್ಲಬೇಕು ಅಂದರೆ ಸಿದ್ದರಾಮಯ್ಯ ಬೇಕು. ಅವರು ಚುನಾವಣಾ ರಾಜಕೀಯದಿಂದ ನಿವೃತ್ತಿಯಾದರೂ ರಾಜಕೀಯದಲ್ಲಿ ಇರಬೇಕು. ಕೆಪಿಸಿಸಿ ಅಧ್ಯಕ್ಷ ಸ್ಥಾನದಲ್ಲಿ ಯಾರಿರಬೇಕು ಎನ್ನುವುದನ್ನು ಪಕ್ಷದ ಹೈಕಮಾಂಡ್ ತೀರ್ಮಾನಿಸುತ್ತದೆ.

– ಸತೀಶ್ ಜಾರಕಿಹೊಳಿ, ಸಚಿವ

ರಾಜ್ಯದಲ್ಲಿ ಮುಖ್ಯಮಂತ್ರಿ ಸ್ಥಾನ ಖಾಲಿ ಇಲ್ಲ. ಆದ್ದರಿಂದ ದಲಿತ ಮುಖ್ಯಮಂತ್ರಿ ಕುರಿತ ಪ್ರಸ್ತಾಪ ಅನಾವಶ್ಯಕ. ದೆಹಲಿಯಲ್ಲಿ ಹೈಕಮಾಂಡ್ ಜತೆ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದೇನೆ. ಮುಖ್ಯಮಂತ್ರಿ ಸ್ಥಾನದಲ್ಲಿ ಸಿದ್ದರಾಮಯ್ಯ ಈಗಿನ ಐದು ವರ್ಷ ಸೇರಿದಂತೆ ಮುಂದಿನ 10 ವರ್ಷದವರೆಗೂ ಮುಂದುವರಿಯಲಿದ್ದಾರೆ.

– ಕೆ.ಎನ್.ರಾಜಣ್ಣ, ಸಹಕಾರ ಸಚಿವ

ಬದಲಾವಣೆ ಬಗ್ಗೆ ಯಾರೂ ಮಾತನಾಡಬಾರದು ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ವೇಣುಗೋಪಾಲ್ ಹೇಳಿದ್ದಾರೆ. ನಮ್ಮ ಹೈಕಮಾಂಡ್ ಗಟ್ಟಿ ಇದೆ. ಯಾವಾಗ ಏನು ಮಾಡಬೇಕು ಎನ್ನುವುದು ಗೊತ್ತಿದೆ. ರಾಜಣ್ಣ ಅವರು ಹೇಳಿದ ಮಾತ್ರಕ್ಕೆ ಬದಲಾವಣೆಯಾಗಲ್ಲ. ಬಹಿರಂಗವಾಗಿ ಯಾವುದೇ ಹೇಳಿಕೆ ನೀಡಬಾರದು.

– ಜಿ.ಸಿ.ಚಂದ್ರಶೇಖರ್, ಕೆಪಿಸಿಸಿ ಕಾರ್ಯಾಧ್ಯಕ್ಷ

ಮೈಸೂರಿನ ದಸರಾ ವಸ್ತುಪ್ರದರ್ಶನ ಆವರಣದಲ್ಲಿ ನಟ ಡಾಲಿ ಧನಂಜಯ–ಡಾ.ಧನ್ಯತಾ ಅವರ ಮದುವೆ ಶಾಸ್ತ್ರ ಶನಿವಾರ ನೆರವೇರಿತು.

ಸಿಇಸಿ ಆಯ್ಕೆ: ಮೋದಿ ನೇತೃತ್ವದಲ್ಲಿ ಸಭೆ ನಾಳೆ

ದೆಹಲಿ: ಕೇಂದ್ರ ಮುಖ್ಯ ಚುನಾವಣಾ ಆಯುಕ್ತ(ಸಿಇಸಿ) ರಾಜೀವ್ ಕುಮಾರ್ ಅವರು ಫೆ.18ರಂದು ನಿವೃತ್ತರಾಗಲಿದ್ದು, ನೂತನ ಸಿಇಸಿ ಆಯ್ಕೆ ಸಂಬಂಧ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಆಯ್ಕೆ ಸಮಿತಿ ಫೆ.17ರಂದು ಸಭೆ ಸೇರಿ ಚರ್ಚಿಸಿ ನಿರ್ಧಾರ ಕೈಗೊಳ್ಳಲಿದೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಸಮಿತಿ ಸದಸ್ಯರಾಗಿದ್ದಾರೆ. ಕಾನೂನು ಸಚಿವ ಅರ್ಜುನ್ ಮೇಘವಾಲ್ ಅಧ್ಯಕ್ಷತೆಯ ಶೋಧ ಸಮಿತಿ ಸಭೆ ಸೇರಿ ಚರ್ಚಿಸಿ ಈಗಾಗಲೇ ಐವರ ಹೆಸರುಗಳಿರುವ ಪಟ್ಟಿ ಸಿದ್ಧಪಡಿಸಿದೆ. ಪ್ರಧಾನಿ ನೇತೃತ್ವದ ಸಮಿತಿಯ ಸಭೆಯಲ್ಲಿ ಪಟ್ಟಿ ಚರ್ಚೆಗೆ ಬರಲಿದೆ.ಆಯ್ಕೆ ಸಮಿತಿ ಮಾಡುವ ಶಿಫಾರಸ್ಸಿನ ಆಧಾರದಲ್ಲಿ ರಾಷ್ಟ್ರಪತಿ ಅವರು ಸಿಇಸಿ ನೇಮಕ ಮಾಡಲಿದ್ದಾರೆ.

ಸಂಭಾವ್ಯ ಪಟ್ಟಿಯಲ್ಲಿ ಯಾರ‍್ಯಾರು?: ಸದ್ಯ ಚುನಾವಣಾ ಆಯೋಗದಲ್ಲಿ ಸಿಇಸಿ ಹೊರತುಪಡಿಸಿ ಜ್ಞಾನೇಶ್ ಕುಮಾರ್ ಮತ್ತು ಸುಖಬೀರ್ ಸಿಂಗ್ ಸಂಧು ಚುನಾವಣಾ ಆಯುಕ್ತರಾಗಿದ್ದಾರೆ. ಕೇರಳ ಕೇಡರ್‌ನ 1988ನೇ ಬ್ಯಾಚ್‌ನ ನಿವೃತ್ತ ಐಎಎಸ್ ಅಧಿಕಾರಿಯಾಗಿರುವ ಜ್ಞಾನೇಶ್ ಕುಮಾರ್ ಸದ್ಯ ಅತಿ ಹಿರಿಯ ಚುನಾವಣಾ ಆಯುಕ್ತರಾಗಿದ್ದು, ಸಿಇಸಿ ಹುದ್ದೆಯ ಸಂಭಾವ್ಯರ ಪಟ್ಟಿಯಲ್ಲಿದ್ದಾರೆ. ವಯೋಮಿತಿಯನ್ವಯ ಚುನಾವಣಾ ಆಯೋಗದಲ್ಲಿನ ಅವರ ಅಧಿಕಾರಾವಧಿ 2029ರ ಜ.26ರವರೆಗಿದೆ.

ಕೇಂದ್ರ ಸಚಿವ ವಿ.ಸೋಮಣ್ಣ ವಿರುದ್ಧ ಸಿಎಂ ಸಿದ್ದರಾಮಯ್ಯ ವಾಗ್ದಾಳಿ

ರಾಜ್ಯಕ್ಕೆ ತೆರಿಗೆ ಮಾತ್ರವಲ್ಲ, ಜೆಜೆಎಂನಲ್ಲೂ ಅನ್ಯಾಯ

ವಿಶ್ವವಾಣಿ ಸುದ್ದಿಮನೆ

ಬೆಂಗಳೂರು: ರಾಜ್ಯದ ಮತದಾರರಿಂದ ಆಯ್ಕೆಯಾಗಿ ಕೇಂದ್ರದಲ್ಲಿ ಸಚಿವರಾಗುತ್ತಿದ್ದಂತೆ ಕರ್ನಾಟಕವನ್ನು ಮರೆತು ತನ್ನ ಪಕ್ಷ ಹಾಗೂ ಪ್ರಧಾನಿಗಳನ್ನು ರಕ್ಷಿಸುವುದಕ್ಕಾಗಿ ಕೇಂದ್ರ ಸಚಿವ ವಿ. ಸೋಮಣ್ಣ ಸುಳ್ಳು ಹೇಳುತ್ತಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದ್ದಾರೆ.

ಜಲಜೀವನ ಮಿಷನ್ ಯೋಜನೆಗೆ ರಾಜ್ಯಕ್ಕೆ ಸಮರ್ಪಕ ಅನುದಾನ ನೀಡದಿದ್ದರೂ, ವಿ. ಸೋಮಣ್ಣ ಅವರು ಸುಳ್ಳು ಹೇಳುತ್ತಿದ್ದಾರೆ. ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಕೇಂದ್ರ ಸರಕಾರ ಬಿಡುಗಡೆಗೊಳಿಸಿರುವ ಅನುದಾನ ಗಮನಿಸಿದರೆ, ಈ ಯೋಜನೆಯನ್ನೇ ಹಾಳುಗೆಡವಲು ಪ್ರಯತ್ನಿಸಿದಂತಿದೆ. ಕೇಂದ್ರ ಸರಕಾರದ ಈ ಅನ್ಯಾಯದ ವಿರುದ್ಧ ಧ್ವನಿ ಎತ್ತಬೇಕಿದ್ದ ಸೋಮಣ್ಣ ಅವರು, ರಾಜ್ಯಕ್ಕಾಗಿರುವ ದ್ರೋಹವನ್ನು ಮುಚ್ಚಿಹಾಕಲು ಸುಳ್ಳು ಹೇಳುತ್ತಿದ್ದಾರೆ ಎಂದು ಟೀಕಿಸಿದ್ದಾರೆ.

ಈ ಬಗ್ಗೆ ಅಂಕಿ–ಅಂಶ ಸಮೇತ ಸುದೀರ್ಘ ಪೋಸ್ಟ್ ಹಾಕಿರುವ ಸಿದ್ದರಾಮಯ್ಯ ಅವರು, ಜಲಜೀವನ ಮಿಷನ್ ಯೋಜನೆಗೆ ಒಟ್ಟು 49,262 ಕೋಟಿ ರು. ಹಂಚಿಕೆ ಮಾಡಲಾಗಿದೆ. ಇದರಲ್ಲಿ ಕೇಂದ್ರದ 26,119 ಹಾಗೂ ರಾಜ್ಯದ 23,142 ಕೋಟಿ ರು. ಹಂಚಿಕೆ ಮಾಡಲಾಗಿದೆ. ಆದರೆ ಒಟ್ಟು 32202 ಕೋಟಿ ರು. ಅನುದಾನ ಬಿಡುಗಡೆಯಾಗಿದೆ. ಇದರಲ್ಲಿ ಕೇಂದ್ರದ ಪಾಲು 11,760 ಕೋಟಿ ರು. ಹಾಗೂ ರಾಜ್ಯದ ಪಾಲು 20,442 ಕೋಟಿ ರು. ಆಗಿದೆ. ಕರ್ನಾಟಕ ಒಟ್ಟು 29,413 ಕೋಟಿ ಖರ್ಚು ಮಾಡಿದೆ. ಆದರೆ ಕೇಂದ್ರದ ಪಾಲಿನಲ್ಲಿ 26,119 ಕೋಟಿ ಪೈಕಿ ಕೇವಲ 11,760 ಕೋಟಿ ಬಿಡುಗಡೆಯಾಗಿದೆ. ಅಂದರೆ ಶೇ.45ರಷ್ಟು ಮಾತ್ರ ಬದ್ಧತೆಯನ್ನು ಹೊಂದಿದೆ ಎಂದು ಟೀಕಿಸಿದ್ದಾರೆ.

ಅನುದಾನ ಸಮರ್ಪಕ ಬಳಕೆ: ಕೇಂದ್ರ ಸರಕಾರ ನೀಡಿರುವ ಅನುದಾನ ಸರಿಯಾಗಿ ಬಳಕೆಯಾಗಿಲ್ಲ ಎಂದು ಬಿಜೆಪಿಯವರು ಆರೋಪ ಮಾಡುತ್ತಿದ್ದಾರೆ. ಆದರೆ ಕೇಂದ್ರ ಸರಕಾರ ಬಿಡುಗಡೆ ಮಾಡಿದ ಪ್ರತಿಯೊಂದು ರುಪಾಯಿಯನ್ನು ರಾಜ್ಯ ಸರಕಾರವು ಉದ್ದೇಶಿತ ಯೋಜನೆಗಳನ್ನು ಯಶಸ್ವಿಯಾಗಿ ಜಾರಿಗೊಳಿಸಲು ಸಂಪೂರ್ಣವಾಗಿ ಬಳಸಿಕೊಂಡಿದೆ.

→ 4

ಸೋಮಣ್ಣ ಅವರು ಕನ್ನಡಿಗರ ದಾರಿ ತಪ್ಪಿಸುವ ಬದಲು ಕಳೆದ ವರ್ಷ ಹಂಚಿಕೆಯಾಗಿದ್ದ ಪೂರ್ಣ ಅನುದಾನ ಏಕೆ ನೀಡಿಲ್ಲವೆಂದು ನರೇಂದ್ರ ಮೋದಿಯವರನ್ನು ಪ್ರಶ್ನಿಸಬೇಕು. ಬಿಜೆಪಿಯ ಇಂತಹ ಕೃತ್ಯಗಳ ಹೊರತಾಗಿಯೂ ಕರ್ನಾಟಕದಲ್ಲಿ ನಮ್ಮ ಸರಕಾರವು ನುಡಿದಂತೆ ನಡೆದು ಉತ್ತಮ ಸಾಧನೆ ಮಾಡಿದೆ. ಬಿಜೆಪಿ ನೇತೃತ್ವದ ಕೇಂದ್ರ ಸರಕಾರವು ಕರ್ನಾಟಕದ ಬಗ್ಗೆ ಮಲತಾಯಿ ಧೋರಣೆಯನ್ನು ಮುಂದುವರಿಸುತ್ತಿದ್ದರೂ ಜಲ ಜೀವನ್ ಮಿಷನ್ ಯೋಜನೆಯ ಮುಖಾಂತರ ಪ್ರತಿ ಮನೆಗೆ ಕುಡಿಯುವ ನೀರನ್ನು ನೀಡಲು ಬದ್ಧವಾಗಿದ್ದೇವೆ.

– ಸಿದ್ದರಾಮಯ್ಯ, ಮುಖ್ಯಮಂತ್ರಿ

9 ವಿವಿ ಮುಚ್ಚುವ ಸರಕಾರದ ಪ್ರಸ್ತಾಪಕ್ಕೆ ಬಿಜೆಪಿ ವಿರೋಧ

ಗ್ಯಾರಂಟಿ ಯೋಜನೆಗಳಿಗಾಗಿ ವಿವಿ ಮುಚ್ಚಲು ಹುನ್ನಾರ

ವಿಶ್ವವಾಣಿ ಸುದ್ದಿಮನೆ

ಬೆಂಗಳೂರು: ಕಳೆದ ಬಿಜೆಪಿ ಸರಕಾರದ ಅವಧಿಯಲ್ಲಿ ಆರಂಭಗೊಂಡಿದ್ದ 10 ವಿಶ್ವವಿದ್ಯಾಲಯಗಳ ಪೈಕಿ ಒಂಬತ್ತು ಮುಚ್ಚಲು ಮುಂದಾಗಿರುವ ರಾಜ್ಯ ಸರಕಾರದ ತೀರ್ಮಾನವನ್ನು ಬಿಜೆಪಿ ಹಾಗೂ ಎಬಿವಿಪಿ ಖಂಡಿಸಿದೆ.

ವರ್ಷದಿಂದ ವರ್ಷಕ್ಕೆ ಶಿಕ್ಷಣ ಸಂಸ್ಥೆ ಹಾಗೂ ವಿಶ್ವವಿದ್ಯಾಲಯಗಳನ್ನು ಹೆಚ್ಚಿಸಬೇಕಾದ ರಾಜ್ಯ ಸರಕಾರ, ತಗ್ಗಿಸುತ್ತಾ ಬಂದಿರುವುದು ಖಂಡನೀಯ. ಇದರಿಂದಾಗಿ ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಕರ್ನಾಟಕದ ಪ್ರತಿಭೆಗಳಿಗೆ ಅವಕಾಶ ಸಿಗುವುದಿಲ್ಲ. ಗ್ರಾಮೀಣ ಭಾಗದಲ್ಲಿ ಪದವಿದಾರರ ಸಂಖ್ಯೆ ಹೆಚ್ಚಾಗಬೇಕು ಎನ್ನುವ ಕಾರಣಕ್ಕೆ ಬಿಜೆಪಿ ಸರಕಾರದ ಅವಧಿಯಲ್ಲಿ 10 ವಿಶ್ವವಿದ್ಯಾಲಯಗಳನ್ನು ಆರಂಭಿಸಿ, ಅನುದಾನ ನೀಡಿತ್ತು. ಆದರೆ ಕಾಂಗ್ರೆಸ್ ಸರಕಾರ ಈ ವಿವಿಗಳನ್ನು ಮುಚ್ಚಿಸುವ ಮೂಲಕ ಗ್ರಾಮೀಣ ಭಾಗದ ಪ್ರತಿಭಾವಂತರಿಗೆ ಅನ್ಯಾಯ ಮಾಡಲು ಮುಂದಾಗಿದೆ.

ರಾಜ್ಯ ಸರಕಾರ ಜಾರಿಗೊಳಿಸಿರುವ ಗ್ಯಾರಂಟಿ ಯೋಜನೆಗಳಿಂದ ಸರಕಾರದ ಬಳಿ ದುಡ್ಡಿಲ್ಲ. ಆದ್ದರಿಂದ ವಿಶ್ವವಿದ್ಯಾಲಯಗಳಿಗೆ ಅನುದಾನ ನೀಡಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ವಿವಿಗಳನ್ನೇ ಮುಚ್ಚಸಲು ಸರಕಾರ ಮುಂದಾಗಿದೆ ಎನ್ನುವ ಆರೋಪ ಮಾಡಲಾಗಿದೆ.

ರಾಜ್ಯಪಾಲರ ಮಧ್ಯಪ್ರವೇಶಕ್ಕೆ ಹೆಚ್ಚಿದ ಒತ್ತಡ

ಒಂಬತ್ತು ವಿಶ್ವವಿದ್ಯಾಲಯಗಳನ್ನು ಮುಚ್ಚುವ ಸರಕಾರದ ತೀರ್ಮಾನಕ್ಕೆ ರಾಜ್ಯಪಾಲರು ಕೂಡಲೇ ಮಧ್ಯಪ್ರವೇಶಿಸಬೇಕು ಎಂದು ವಿಧಾನ ಪರಿಷತ್ ಸದಸ್ಯ ಎನ್.ರವಿಕುಮಾರ್ ಆಗ್ರಹಿಸಿದ್ದಾರೆ. ವಿವಿಗಳ ಆರ್ಥಿಕ ಹೊರೆ, ಮೂಲಭೂತ ಸೌಕರ್ಯದ ಕೊರತೆ, ಬೋಧಕ- ಬೋಧಕೇತರ ಸಿಬ್ಬಂದಿ ಕೊರತೆ, ವಿದ್ಯಾರ್ಥಿಗಳ ದಾಖಲು ಸೇರಿದಂತೆ ಅನೇಕ ಕಾರಣಗಳನ್ನು ನೀಡಿ ರಾಜ್ಯದಲ್ಲಿ ಹೊಸದಾಗಿ ಸ್ಥಾಪಿಸಿದ ವಿಶ್ವವಿದ್ಯಾಲಯಗಳನ್ನು ರಾಜ್ಯ ಕಾಂಗ್ರೆಸ್ ಸರಕಾರ ಮುಚ್ಚುವ ನಿರ್ಧಾರ ಮಾಡುತ್ತಿರುವುದು ಖಂಡನೀಯ ಎಂದು ಹೇಳಿದ್ದಾರೆ.

ಕರ್ನಾಟಕದಲ್ಲಿ ವಿವಿಗಳನ್ನು ಮುಚ್ಚಿಸುವ ಭಾಗ್ಯವನ್ನು ಕಾಂಗ್ರೆಸ್ ನೀಡಿದೆ. ಕಿಸಾನ್ ಸಮ್ಮಾನ್, ವಿದ್ಯಾನಿಧಿ ಸೇರಿ ಅನೇಕ ಯೋಜನೆ ಮುಚ್ಚಿ ಹಾಕಲಾಗಿದೆ. ಈಗ ಮಾರಿ ಕಣ್ಣು ಹೋರಿ ಮೇಲೆ ಎಂಬಂತೆ, ಸಿಎಂ ಕಣ್ಣು ವಿವಿಗಳ ಮೇಲೆ ಬಿದ್ದಿದೆ. ಯುವ ಜನರು ಪದವೀಧರರಾಗುವುದನ್ನು ತಪ್ಪಿಸಲು ಈ ರೀತಿ ಮಾಡಲಾಗಿದೆ. ಯಾರೂ ಪದವಿಧರರಾಗದೇ ಇದ್ದಲ್ಲಿ ಯುವನಿಧಿ ಯೋಜನೆ ನಿಲ್ಲಿಸಬಹುದು ಎಂಬುದು ಕಾಂಗ್ರೆಸ್ ಚಿಂತನೆ.

– ಆರ್.ಅಶೋಕ
ವಿಧಾನಸಭೆ ಪ್ರತಿಪಕ್ಷ ನಾಯಕ

ಆರ್ಥಿಕವಾಗಿ ವಿಶ್ವವಿದ್ಯಾಲಯ ಗಳನ್ನು ಬಲಪಡಿಸಬೇಕಿರುವುದು ಸರಕಾರದ ಕರ್ತವ್ಯ. ಆದರೆ ರಾಜ್ಯ ಸರಕಾರವು 300 ಕೋಟಿ ಹಣ ಕೊಡಲಾಗದೆ ಅವುಗಳನ್ನು ಮುಚ್ಚಲು ಮುಂದಾಗಿರುವುದು ಕರ್ನಾಟಕದ ಶೈಕ್ಷಣಿಕ ಕ್ಷೇತ್ರದ ಹಿನ್ನಡೆಗೆ ಕಾರಣವಾಗುತ್ತದೆ. ವಿಶ್ವವಿದ್ಯಾಲಯಗಳ ಕುಲಾಧಿಪತಿಗಳಾದ ರಾಜ್ಯಪಾಲರು ಕೂಡಲೇ ಮಧ್ಯಪ್ರವೇಶಿಸಬೇಕು.

– ಎನ್.ರವಿಕುಮಾರ್
ವಿಧಾನ ಪರಿಷತ್ ಸದಸ್ಯ

ವಿದ್ಯುತ್ ದರ ಹೆಚ್ಚಳಕ್ಕೆ ಪ್ರಸ್ತಾವ

ಬೆಂಗಳೂರು: ಸಾರಿಗೆ ಬಸ್‌ಗಳು, ನೀರಿನ ದರ, ಮೆಟ್ರೋ ಟಿಕೆಟ್ ದರ ಹೆಚ್ಚಳದಿಂದ ಬಳಲಿರುವ ರಾಜ್ಯದ ಜನತೆಗೆ ಬೆಸ್ಕಾಂ ವಿದ್ಯುತ್ ದರ ಹೆಚ್ಚಳದ ಮೂಲಕ ಮತ್ತೊಂದು ದರ ಏರಿಕೆಯ ಬರೆ ಬೀಳಲಿದೆ. ಈ ನಿಟ್ಟಿನಲ್ಲಿ ಕೆಇಆರ್‌ಸಿಗೆ ಬೆಸ್ಕಾಂ ಪ್ರಸ್ತಾವನೆ ಸಲ್ಲಿಸಿದ್ದು, ಮುಂದಿನ ಮೂರು ವರ್ಷಗಳಿಗೆ ವಿದ್ಯುತ್ ದರ ಏರಿಕೆ ಮಾಡಲು ಮನವಿ ಮಾಡಿದೆ. ಹೀಗಾಗಿ ಮುಂದಿನ ದಿನಗಳಲ್ಲಿ ಜನರಿಗೆ ನೀರಿನ ಜತೆಗೆ ವಿದ್ಯುತ್ ಬಿಲ್ ಹೆಚ್ಚಳದಿಂದ ಜೇಬಿಗೆ ಕತ್ತರಿ ಬೀಳುವುದು ಖಾತ್ರಿಯಾಗಿದೆ.

ಮೆಟ್ರೊ ದರ ಏರಿಕೆ ರಾಜ್ಯವೇ ಹೊಣೆ

ಬೆಂಗಳೂರು: ಮೆಟ್ರೋ ಪ್ರಯಾಣದ ಟಿಕೆಟ್ ದರ ಏರಿಕೆಗೆ ಪ್ರಸ್ತಾವನೆ ನೀಡಿದ್ದೇ ರಾಜ್ಯ ಸರಕಾರ. ದರ ಏರಿಕೆಗೆ ರಾಜ್ಯ ಸರಕಾರ ಹೊಣೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮೆಟ್ರೊ ಪ್ರಯಾಣ ದರ ಏರಿಕೆಗೆ ಕೇಂದ್ರ ಸರಕಾರ ಕಾರಣ ಎನ್ನು ಆರೋಪ ಸರಿಯಲ್ಲ. ಬಿಎಂಆರ್‌ಸಿಎಲ್‌ನಲ್ಲಿ ಕೇಂದ್ರದ ಪಾಲು ಹೊಂದಿದ್ದರೂ ನಿರ್ವಹಣೆ, ಕಾರ್ಯಾಚರಣೆ ರಾಜ್ಯದ್ದೇ ಆಗಿರುತ್ತದೆ. ದೆಹಲಿ, ಮುಂಬೈ, ಹೈದರಾಬಾದ್‌ನಲ್ಲೂ ಇದೆ. ಅಲ್ಲಿ ಇಷ್ಟೊಂದು ದರ ಏಕೆ ಇಲ್ಲ? ಎಂದು ಪ್ರಶ್ನಿಸಿದರು.

ರಾಜ್ಯ ಚಲನಚಿತ್ರ ಅಕಾಡೆಮಿಗೆ ನೇಮಕ

ಬೆಂಗಳೂರು: ಚಲನಚಿತ್ರ ಅಕಾಡೆಮಿಗೆ ಸದಸ್ಯರನ್ನು ಸರಕಾರ ನೇಮಕಗೊಳಿಸಿದೆ. ಹಿರಿಯ ಪತ್ರಕರ್ತೆ ಸಾವಿತ್ರಿ ಮಜುಂದಾರ್, ಚಿದಾನಂದ ಪಾಟೀಲ್, ಸಿನಿಮಾ ವಿಶ್ಲೇಷಕ ದೇಶಾದ್ರಿ ಎಚ್., ಸಿನಿಮಾ ಕಲಾವಿದರಾದ ನಿಖಿತಾಸ್ವಾಮಿ ಎಸ್., ಸಿನಿಮಾ ಪ್ರಚಾರಕ ಡಿ.ಜಿ. ವೆಂಕಟೇಶ್, ಚಿತ್ರೋದ್ಯಮಿ ವಿಷ್ಣುಕುಮಾರ್.ಎಸ್., ಸಿನಿಮಾ ತಂತ್ರಜ್ಞ ಐವಾನ್ ಡಿ.ಸಿಲ್ವಾ ಅವರು ಚಲನಚಿತ್ರ ಅಕಾಡಮಿಯ ನೂತನ ಸದಸ್ಯರಾಗಿ ನೇಮಕವಾಗಿದ್ದಾರೆ. ಅಧ್ಯಕ್ಷರನ್ನಾಗಿ ಸಾಧು ಕೋಕಿಲ ಅವರನ್ನು ಕಳೆದ ವರ್ಷ ಸರಕಾರ ನೇಮಕ ಮಾಡಿತ್ತು.

ಸಮಾಚಾರ ಸಣ್ಣದಲ್ಲ

ಸೈಬರ್ ವಂಚನೆ : 19.30 ಲಕ್ಷಕ್ಕೆ ಕನ್ನ

ಮೈಸೂರು: ಕೇವಲ ಒಂದು ಗಂಟೆಯಲ್ಲಿ ಎರಡು ಖಾತೆಗಳಿಂದ ಖದೀಮರು 19.30 ಲಕ್ಷ ಲಪಟಾಯಿಸಿದ ವಂಚನೆ ಪ್ರಕರಣ ಸೆನ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ. ಶ್ರೀರಾಂಪುರ ನಿವಾಸಿ, ಫಾರ್ಮಾಸ್ಯೂಟಿಕಲ್ಸ್ ಒಂದರಲ್ಲಿ ಕೆಲಸ ಮಾಡಿ ನಿವೃತ್ತರಾದ ಮುರುಗೇಶ್ ಎಂಬುವರ ಖಾತೆಗಳಿಗೆ ಖದೀಮರು ಕನ್ನ ಹಾಕಿದ್ದಾರೆ. ಐಸಿಐಸಿಐ ಬ್ಯಾಂಕ್ ಖಾತೆಯಿಂದ 17 ಲಕ್ಷ ಹಾಗೂ ಮತ್ತೊಂದು ಖಾತೆಯಿಂದ 2.30 ಲಕ್ಷ ಹಣ ವರ್ಗಾವಣೆ ಮಾಡಿಕೊಂಡಿದ್ದಾರೆ. ಇಂಟರ್ನೆಟ್ ಬ್ಯಾಂಕಿಂಗ್ ವ್ಯವಸ್ಥೆ ಹೊಂದಿದ್ದ ಮುರುಗೇಶ್ ಖಾತೆ ವಿವರವನ್ನು ಹ್ಯಾಕ್ ಮಾಡಿರಬಹುದೆಂದು ಶಂಕಿಸಲಾಗಿದೆ. ಮುರುಗೇಶ್ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಫೆ.22ಕ್ಕೆ ನಾಗದೇವರ ಪ್ರತಿಷ್ಠಾಪನಾ ಉತ್ಸವ

ಮಡಿಕೇರಿ : ಕುಂದುರುಮೊಟ್ಟೆ ಶ್ರೀ ಚೌಟಿ ಮಾರಿಯಮ್ಮ ದೇವಾಲಯದ ನಾಗದೇವರ ನೂತನ ಆಲಯ ಮತ್ತು ಪುನಃ ಪ್ರತಿಷ್ಠಾಪನಾ ಮಹೋತ್ಸವ ಹಾಗೂ ನಾಗ ದರ್ಶನ ಫೆ.22 ಮತ್ತು 23 ರಂದು ನಡೆಯಲಿದೆ. ಕ್ಷೇತ್ರ ತಂತ್ರಿಗಳಾದ ಕೆ.ಶ್ರೀಕೃಷ್ಣ ಉಪಾಧ್ಯ ನೇತೃತ್ವದಲ್ಲಿ ಎರಡು ದಿನಗಳ ಕಾಲ ವಿವಿಧ ಪೂಜಾ ಕೈಂಕರ್ಯಗಳು ಜರುಗಲಿದೆ. ಫೆ.22 ರಂದು ಸಂಜೆ 6 ಗಂಟೆಯಿಂದ ಗುರುಗಣಪತಿ ಪೂಜೆ, ಹೋಮ, ವಾಸ್ತುಪೂಜೆ, ವಾಸ್ತು ಬಲಿ, ಆಶ್ಲೇಷ ಬಲಿ, ಮಹಾಮಂಗಳಾರತಿ ಜರುಗಲಿದೆ. ಫೆ.23 ರಂದು ಗಣಪತಿ ಹೋಮ, 8.36ಕ್ಕೆ ನಾಗದೇವರ ಪ್ರತಿಷ್ಠೆ, ಮಹಾಪೂಜೆ ನಡೆಯಲಿದ್ದು, 11.30ಕ್ಕೆ ಉಡುಪಿಯ ಶ್ರೀಎ.ಸುಬ್ರಮಣ್ಯ ಮಧ್ಯಸ್ಥ ನಾಗಪಾತ್ರಿ ನಾಗದರ್ಶನ ಸೇವೆ ನಡೆಸಿಕೊಡಲಿದ್ದಾರೆ.

ಕೊಡಗು, ಚಿಕ್ಕಮಗಳೂರು, ಹಾಸನ ಜಿಲ್ಲೆಗಳ ಉದ್ಯಮಿಗಳ ಸಭೆ | ಡಾ.ವೆಂಕಟರಮಣ ಅಕ್ಕಿರಾಜು ಚಾಲನೆ

ನವ ಬಂದರಿನಿಂದ ಕಾಫಿ ರಫ್ತು ನಿರೀಕ್ಷೆ

ಅನಿಲ್ ಎಚ್.ಟಿ.ಮಡಿಕೇರಿ

ದೇಶದ ಬಂದರುಗಳಲ್ಲಿಯೇ ನವ ಮಂಗಳೂರು ಬಂದರು ಮೂರನೇ ಸ್ಥಾನ ಹೊಂದಿದೆ. ಕಾಫಿ ರಫ್ತಿಗೆ ಸಕಲ ಸೌಲಭ್ಯ ಹೊಂದಿದೆ. ಈ ಆರ್ಥಿಕ ವರ್ಷದಲ್ಲಿ ವಿದೇಶಗಳಿಗೆ ಕಾಫಿ ಉತ್ತಮ ರಫ್ತು ವಹಿವಾಟು ನಡೆಸುವ ಗುರಿಯಿದೆ ಎಂದು ನವಮಂಗಳೂರು ಬಂದರು ಟ್ರಸ್ಟ್ ಅಧ್ಯಕ್ಷ ಡಾ. ವೆಂಕಟರಮಣ ಅಕ್ಕಿರಾಜು ಹೇಳಿದ್ದಾರೆ.

ನಗರದ ಹೊರವಲಯದ ತಾಜ್ ವಿವಂಟಾ ರೆಸಾರ್ಟ್‌ನಲ್ಲಿ ನವಮಂಗಳೂರು ಬಂದರು ವತಿಯಿಂದ ಆಯೋಜಿತ ಕೊಡಗು, ಚಿಕ್ಕಮಗಳೂರು, ಹಾಸನ ಜಿಲ್ಲೆಗಳ ಚೇಂಬರ್ ಆಫ್ ಕಾಮರ್ಸ್ ಪದಾಧಿಕಾರಿಗಳು, ಕಾಫಿ ಉದ್ಯಮಿಗಳು, ರಫ್ತುದಾರರ ವಹಿವಾಟುದಾರರ ಸಭೆ ಉದ್ಘಾಟಿಸಿ ಅವರು ಮಾತನಾಡಿದರು.

ಭಾರತದಲ್ಲೀಗ ಅಭಿವೃದ್ಧಿಯ ಶಕೆಯೊಂದಿಗೆ ಆರ್ಥಿಕ ಕ್ರಾಂತಿ ಕೂಡ ನಡೆಯುತ್ತಿದೆ. ಮಂಗಳೂರಿನ ಬಂದರು ಕೂಡ ಸಕಲ ರೀತಿ ಸೌಲಭ್ಯ ಕಲ್ಪಿಸುವಲ್ಲಿ ನವನವೀನ ತಂತ್ರಜ್ಞಾನಗಳೊಂದಿಗೆ ಆಧುನೀಕರಣಗೊಂಡಿದೆ ಎಂದು ಹೇಳಿದರು.

ನವ ಮಂಗಳೂರು ಬಂದರು ಮೂಲಕ ಹೋಗುವ ಉತ್ಪನ್ನಗಳ ಸಾರಿಗೆ ವೆಚ್ಚ ಇಳಿಸುವಲ್ಲಿ ಯೋಜನೆ ರೂಪಿಸಲಾಗುತ್ತಿದೆ. ಈ ಬಂದರು ಮೂಲಕ 45.07 ಲಕ್ಷ ಮೆಟ್ರಿಕ್ ಟನ್ ಉತ್ಪನ್ನ ಸಾಗಣೆಯಾಗಿದೆ. ಕಾಫಿಯೇ ಅತ್ಯಧಿಕ ಪ್ರಮಾಣದ ಗಮನಾರ್ಹ ಎಂದು ಅಕ್ಕಿರಾಜು ಹೇಳಿದರು.

ಮೊದಲು ಕೊಚ್ಚಿನ್ ಬಂದರಿನಿಂದ ಹೋಗುತ್ತಿದ್ದ ಕಾಫಿ ಈಗ ಮಂಗಳೂರು ಬಂದರಿನಿಂದ ಸಾಗಣೆಯಾಗುತ್ತಿದೆ. ಕೋವಿಡ್ ಲಾಕ್ ಡೌನ್ ಬಳಿಕ ನವಮಂಗಳೂರಿನಿಂದ ಕಾಫಿ ರಫ್ತು ಶೇ.29 ರಷ್ಟು ಹೆಚ್ಚಾಗಿದೆ. ಉತ್ತಮ ಸ್ಥಾನ ತಲುಪಿರುವ ಮಂಗಳೂರು ಬಂದರನ್ನು ಅತ್ಯುತ್ತಮ ಸ್ಥಾನಕ್ಕೆ ಕೊಂಡೊಯ್ಯುವ ಗುರಿ ತನ್ನ ಮುಂದೆ ಇದೆ. ಯಂತ್ರೋಪರಣಗಳ ಅಧಿಕ ಬಳಕೆಯಿಂದ ಕಾರ್ಮಿಕರ ಕೊರತೆಯ ಸವಾಲನ್ನು ಎದುರಿಸುವುದು ಆದ್ಯತೆಯಾಗಲಿ ಎಂದು ಕಾಫಿ ಉದ್ಯಮಿಗಳಿಗೆ ಅವರು ಕಿವಿಮಾತು ಹೇಳಿದರು.

ಕೊಡಗು ಜಿಲ್ಲಾ ಚೇಂಬರ್ ಅಧ್ಯಕ್ಷ ಬಿ. ಆರ್. ನಾಗೇಂದ್ರಪ್ರಸಾದ್ ಮಾತನಾಡಿ, ಕಾಫಿಗೆ ಹೆಚ್ಚಿನ ಬೆಲೆ ದೊರಕುತ್ತಿರುವ ಈ ವರ್ಷ ದೇಶದಲ್ಲಿಯೇ ಅತ್ಯಧಿಕ ಕಾಫಿ ಬೆಳೆ ಬೆಳೆಯುವ ಕೊಡಗಿನಿಂದ ಅತ್ಯಧಿಕ ಪ್ರಮಾಣದಲ್ಲಿ ನವಮಂಗಳೂರು ಬಂದರಿಗೆ ಕಾಫಿ ಹೋಗಿ ವಹಿವಾಟು ಅತ್ಯಧಿಕವಾಗುವ ನಿರೀಕ್ಷೆಯಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕಾಮರ್ಸ್ ಮಾಜಿ ಅಧ್ಯಕ್ಷ ಜಿ. ಚಿದ್ವಿಲಾಸ್ ಮಾತನಾಡಿ, ಮೈಸೂರು ಮತ್ತು ಮಡಿಕೇರಿಯಿಂದ ಮಂಗಳೂರಿನ ಬಂದರಿಗೆ ಉತ್ತಮ ಸಂಪರ್ಕ ರಸ್ತೆ ಅಗತ್ಯವಿದೆ. ಹೀಗಾದಾಗ ಉತ್ಪನ್ನಗಳು ಮಂಗಳೂರು ಬಂದರಿನ ಮೂಲಕ ಸಾಗಣೆಯಾಗಲು ಸಾಧ್ಯವಾಗಲಿದೆ ಎಂದು ಅಭಿಪ್ರಾಯಪಟ್ಟರು.

ಉದ್ಯಮಿ ನಾಗರಾಜ ಶೆಟ್ಟಿ ಮಾತನಾಡಿ, ಕೆಲ ವದಂತಿಗಳು ಮಂಗಳೂರು ಬಂದರಿನ ಬಗ್ಗೆ ಕೇಳಿಬರುತ್ತಿದೆ. ಇಂಥ ವದಂತಿಗಳಿಗೆ ಕಾಫಿ ಉದ್ಯಮಿಗಳು ಕಿವಿಗೊಡದೇ ನವಮಂಗಳೂರು ಬಂದರಿನ ಮೂಲಕವೇ ವಹಿವಾಟು ಕೈಗೊಳ್ಳುವಂತೆ ಮನವಿ ಮಾಡಿದರು.

ಮಡಿಕೇರಿಯಲ್ಲಿ ವಹಿವಾಟುದಾರರ ಸಭೆಯನ್ನ ನವಮಂಗಳೂರು ಬಂದರು ಟ್ರಸ್ಟ್ ಅಧ್ಯಕ್ಷ ಡಾ. ವೆಂಕಟರಮಣ ಅಕ್ಕಿರಾಜು ಉದ್ಘಾಟಿಸಿದರು.

ಅತ್ಯಾಧುನಿಕ ಸ್ಕ್ಯಾನರ್ ಅಳವಡಿಕೆ

ನವಮಂಗಳೂರು ಬಂದರು ಇದೀಗ 50 ನೇ ವರ್ಷದ ಸುವರ್ಣ ಸಂಭ್ರಮದಲ್ಲಿದ್ದು, 5 ಹೊಸ ಟ್ರಕ್ ಟರ್ಮಿನಲ್ ಸೇರಿದಂತೆ, ಬಂದರಿನಲ್ಲಿ ಅತ್ಯಾಧುನಿಕ ಸ್ಕ್ಯಾನರ್ ಯಂತ್ರಗಳನ್ನು ಅಳವಡಿಸಲಾಗುತ್ತಿದ್ದು, ಕಂಟೈನರ್, ಲಾರಿ ಚಾಲಕರು, ಸಿಬ್ಬಂದಿಗಳಿಗೆ ವಿಶ್ರಾಂತಿ ಕೊಠಡಿ ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದೆ ಎಂದೂ ಡಾ. ವೆಂಕಟರಮಣ ಅಕ್ಕಿರಾಜು ಹೇಳಿದರು.

> ಕೊಡಗಿನ ಕಾಫಿ ತೋಟಗಳಲ್ಲಿರುವ ವಲಸೆ ಕಾರ್ಮಿಕರ ಬಗ್ಗೆ ದೂರದೃಷ್ಟಿಯ ಚಿಂತನೆ ಅತ್ಯಗತ್ಯ. ಒಂಟಿ ಮನೆಗಳಲ್ಲಿ ವಾಸವಾಗಿರುವ ಗ್ರಾಮೀಣ ಜನತೆ ಈಗ ಆತಂಕದಲ್ಲಿಯೇ ಜೀವಿಸುವ ಪರಿಸ್ಥಿತಿಯಿದೆ. ವಲಸೆ ಕಾರ್ಮಿಕರ ಮೇಲೇ ಅವಲಬಿತವಾಗಿರುವ ಕೊಡಗಿನ ಕಾಫಿ ಉದ್ಯಮ ಭವಿಷ್ಯದಲ್ಲಿ ಮತ್ತಷ್ಟು ಸಮಸ್ಯೆ ಎದುರಿಸುವ ಸಾಧ್ಯತೆಗಳೇ ಹೆಚ್ಚಾಗಿದೆ.
> – ಜಿ. ಚಿದ್ವಿಲಾಸ್ , ಕಾಮರ್ಸ್ ಮಾಜಿ ಅಧ್ಯಕ್ಷ

ಬಂದರಿನ ಮಾಜಿ ಅಧಿಕಾರಿ ನವನೀತ್ ಕುಮಾರ್ ಮಾತನಾಡಿ, ಮಾಣಿ – ಮಂಗಳೂರು ಹೆದ್ದಾರಿ ವಿಸ್ತರಣೆ ಕಾಮಗಾರಿ ಮೇ ಅಂತ್ಯದಲ್ಲಿ ಮುಗಿಯಲಿದ್ದು ಆ ಬಳಿಕ ಈ ಹೆದ್ದಾರಿ ಅತ್ಯಂತ ಪ್ರಶಸ್ತವಾಗುತ್ತದೆ ಎಂದೂ ಹೆಮ್ಮೆಯಿಂದ ನುಡಿದರು.

ಈ ಸಭೆಯಲ್ಲಿ ಕೊಡಗು ಚೇಂಬರ್ ಪ್ರಮುಖರಾದ ಗಿರೀಶ್ ಗಣಪತಿ, ಬಿ.ಎನ್. ಪ್ರಕಾಶ್, ಎಸ್.ಕೆ.ಸತೀಶ್, ಎಂ.ಡಿ. ರಂಗಸ್ವಾಮಿ, ಮೋಂತಿ ಗಣೇಶ್, ಅಂಬೆಕಲ್ ನವೀನ್ ಕುಶಾಲಪ್ಪ, ಪೊನ್ನಿಮಾಡ ಸುರೇಶ್, ಸುನೀಲ್ ಮುದ್ದಪ್ಪ , ಕಾಫಿ ಉದ್ಯಮಿ ಅಲೆಮಾಡ ಹರೀಶ್, ವೆಂಕಟೇಷನ್ ಸೇರಿದಂತೆ ಕಾಫಿ ಉದ್ಯಮರಂಗದವರು ಹಾಜರಿದ್ದರು.

ಮೈಸೂರಿನಲ್ಲಿ ಫೆ.23ರವರೆಗೆ ನಡೆಯುವ ಗಾಂಧಿ ಶಿಲ್ಪ ಬಜಾರ್ ಮೇಳಕ್ಕೆ ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಚಾಲನೆ ನೀಡಿದರು.ಉದ್ಘಾಟನಾ ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಸಂಸ್ಥೆಗಳ ಆಡಳಿತಾಧಿಕಾರಿ ಎಸ್.ಪಿ. ಉದಯಶಂಕರ್ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷರಾದ ಆಯೂಬ್ ಖಾನ್, ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಎಚ್.ಆರ್. ರಾಜಪ್ಪ , ಕರಕುಶಲ ಸೇವಾ ಕೇಂದ್ರ ಜವಳಿ ಮಂತ್ರಾಲಯದ ಸಹಾಯಕ ನಿರ್ದೇಶಕ ಕೆ.ಎಸ್. ಸುನಿಲ್ ಕುಮಾರ್ ಉಪಸ್ಥಿತರಿದ್ದರು.

ಪಠ್ಯೇತರಗಳ ಕಡೆಗೂ ಗಮನ ನೀಡಿ

ಕೆ ಆರ್ ಪೇಟೆ: ವಿದ್ಯಾರ್ಥಿಗಳು ಪಠ್ಯ ಪುಸ್ತಕಗಳ ಜೊತೆಗೆ ಪಠ್ಯೇತರ ಚಟುವಟಿಕೆಗಳ ಕಡೆಗೂ ಗಮನ ನೀಡಿ ಸಾಧನೆ ಮಾಡಬೇಕು ಎಂದು ಆರ್ ಟಿಒ ಸಂಘದ ರಾಜ್ಯಾಧ್ಯಕ್ಷ ಮಲ್ಲಿಕಾರ್ಜುನ್ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಬೂಕನಕೆರೆ ಹೋಬಳಿ ಬಳ್ಳೇಕೆರೆ ಹಿರಿಯ ಪ್ರಾಥಮಿಕ ಶಾಲಾ ವಾರ್ಷಿಕೋತ್ಸವದ ಸಮಾರಂಭದಲ್ಲಿ ಮಾತನಾಡಿದರು.

ವಿದ್ಯಾರ್ಥಿಗಳು ಸಂಕುಚಿತ ಮನೋಭಾವ ಇಟ್ಟುಕೊಳ್ಳದೇ ನಿಮಗೆ ಯಾವ ವಿಷಯದಲ್ಲಿ ಆಸಕ್ತಿ ಇದೆಯೋ ಅದರಲ್ಲಿ ಹೆಚ್ಚಿನ ಸಾಧನೆ ಮಾಡಿದಾಗ ಸಮಾಜದಲ್ಲಿ ನಿಮಗೆ ಗೌರವ ಪ್ರಶಸ್ತಿ ಹುಡುಕಿ ಬರುತ್ತವೆ. ಇದರಿಂದ ಹುಟ್ಟಿದ ಊರಿಗೂ ಕೀರ್ತಿ ಬರುತ್ತದೆ. ಆದರೆ ಕೆಲವರು ಬರೀ ಪಠ್ಯ ಪುಸ್ತಕಗಳ ಕಡೆಗೆ ಹೆಚ್ಚು ಗಮನ ಹರಿಸುತ್ತಾರೆ. ಪೋಷಕರು ಸಹ ತಮ್ಮ ಮಕ್ಕಳು ಯಾವ ವಿಷಯಗಳ ಬಗ್ಗೆ ಆಸಕ್ತಿ ವಹಿಸುತ್ತಾರೆ ಎಂಬುದನ್ನು ತಿಳಿದು ಅದಕ್ಕೆ ಪ್ರೋತ್ಸಾಹ ನೀಡುವಂತೆ ಸಲಹೆ ನೀಡಿದರು.

ಇದೇ ಶಾಲೆಯ ಇಬ್ಬರು ಕ್ರೀಡಾ ಸಾಧನೆ ತೋರಿದ ಸ್ಮಿತಾ ಹಾಗೂ ವಿಕಾಸ್ ಅವರನ್ನು ಅಭಿನಂದಿಸಲಾಯಿತು.ಈ ಸಂದರ್ಭದಲ್ಲಿ ಶಾಸಕರ ಸಹೋದರ ಲೋಕೇಶ್, ನೌಕರರ ಸಂಘದ ತಾ.ಅಧ್ಯಕ್ಷ ಆನಂದಕುಮಾರ್,ಎನ್ ಜಿ ಒ ಪದ್ಮೇಶ್ ,ಎಸ್ಸಿ ಎಸ್ಟಿ ನೌಕರರ ಸಂಘದ ಅಧ್ಯಕ್ಷ ಹಳೆಯೂರು ಯೋಗೇಶ್ ,ಮಂಜುನಾಥ್, ಸಿ ಆರ್ ಸಿ ನಾಗೇಂದ್ರ,ಕಸಾಪ ಅಧ್ಯಕ್ಷ ಪೂರ್ಣಚಂದ್ರ ತೇಜಸ್ವಿ, ನೌಕರರ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ರಮೇಶ್,ಮುಖ್ಯ ಶಿಕ್ಷಕ ಎನ್ ಸಿ ವೀರಪ್ಪ, ಎಸ್ ಡಿ ಎಂ ಸಿ ಅಧ್ಯಕ್ಷ ಕಿರಣ್ ,ಬಸವರಾಜು ಇದ್ದರು.

ಆರ್ ಟಿಒ ಸಂಘದ ರಾಜ್ಯಾಧ್ಯಕ್ಷ ಮಲ್ಲಿಕಾರ್ಜುನ್ ಬಳ್ಳೇಕೆರೆ ಹಿರಿಯ ಪ್ರಾಥಮಿಕ ಶಾಲಾ ವಾರ್ಷಿಕೋತ್ಸವ ಉದ್ಘಾಟಿಸಿದರು.

IN THE COURT OF THE CIVIL JUDGE
(J.D.) AT MADAKASIRA
O.S. No. 244/2023
Plaintiff- Kristappa
V/S
Defendants: Puttanarasamma & Ors.
Paper Publication
Notice to 8th defendant Umadevi W/o Prasanna D/o Late Hanumantharayappa R/o Sasalukunta, Pavagada Taluuk. The above named plaintiff has filed the suit against you for partition of his share in the suit properties before the Hon'ble Civil Judge (J.D.) Madakasira. The matter is posted to 21-02-2025 for your appearance. Your are require to appear before this Hon'ble Court on 21-02-2025 at 10:30 am either in person or through your advocate. Failing which the matter will proceed placing you Ex-party and decided the matter on merits.
By the order of Court
Shirastedar,
CIVIL JUDGE (J.D.) AT MADAKASIRA
Advocate for plaintiff
Y.C. Govardhana Reddy
Advocate, Madakasira.

ಪತ್ನಿ ಕರೆ ತರಲು ಹೋದ ಪತಿಗೆ ಕಾರದಪುಡಿ ಎರಚಿ ಹಲ್ಲೆ

ಚಾಮರಾಜನಗರ: ಕೌಟುಂಬಿಕ ಕಾರಣದಿಂದ ಮನೆ ತೊರೆದಿದ್ದ ಪತ್ನಿಯನ್ನು ಕರೆ ತರಲು ತೆರಳಿದ ವೇಳೆ ಪತಿಗೆ ಪತ್ನಿ, ಅತ್ತೆ, ಮೈದುನ ಸೇರಿ ಕಾರದಪುಡಿ ಎರಚಿ ಹಲ್ಲೆ ಮಾಡಿರುವ ಘಟನೆ ಕೊಳ್ಳೇಗಾಲದ ನಾಯಕರ ಬೀದಿಯಲ್ಲಿ ನಡೆದಿದೆ. ಕೊಳ್ಳೇಗಾಲದ ನಂಜಯ್ಯನಕಟ್ಟೆ ನಿವಾಸಿ ಧರ್ಮ(39) ಗಾಯಗೊಂಡಿದ್ದು ಪತ್ನಿ ರಾಜೇಶ್ವರಿ, ಅತ್ತೆ ಮಹಾದೇವಮ್ಮ, ಬಾಮೈದುನ ನಾಗೇಶ್ ಹಲ್ಲೆ ಮಾಡಿದ ಆರೋಪಿಗಳು. ರಾಜೇಶ್ವರಿ ಹಾಗೂ ಧರ್ಮನಿಗೆ ಮದುವೆಯಾಗಿ 8 ವರ್ಷವಾಗಿದ್ದು ಮೂವರು ಮಕ್ಕಳಿದ್ದಾರೆ. ಕೌಟಂಬಿಕ ಕಲಹಕ್ಕೆ ಪತಿ ತೊರೆದು ತಂದೆ ಮನೆಯಲ್ಲಿ ರಾಜೇಶ್ವರಿ ಬಂದು ನೆಲೆಸಿದ್ದಳು. ಬುದ್ಧಿವಾದ ಹೇಳಿ ಪತ್ನಿ ಕರೆತರಲು ತೆರಳಿದ್ದ ವೇಳೆ ಪತಿಗೆ ನಿಂದಿಸಿ ಕಾರದಪುಡಿ ಎರಚಿ ಕಬ್ಬಿಣದ ರಾಡ್ ನಿಂದ ಹಲ್ಲೆ ಮಾಡಿದ್ದಾರೆ.ತೀವ್ರವಾಗಿ ಗಾಯಗೊಂಡಿರುವ ಧರ್ಮ ಕೊಳ್ಳೇಗಾಲ ಉಪವಿಭಾಗ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು ಕೊಳ್ಳೇಗಾಲ ಪಟ್ಟಣ ಠಾಣೆಯಲ್ಲಿ ಪತ್ನಿ, ಅತ್ತೆ, ಬಾಮೈದುನನ ವಿರುದ್ಧ ಪ್ರಕರಣ ದಾಖಲಾಗಿದೆ.

ಕೇವಲ ಆದೇಶಗಳಿಂದ ಕನ್ನಡ ಉಳಿಯದು

ನಗರದ ಡಿಸಿ ಕಚೇರಿ ಸಭಾಂಗಣದಲ್ಲಿ' ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮೈಸೂರು: ಕನ್ನಡ ಭಾಷೆಯನ್ನು ಆಡಳಿತದಲ್ಲಿ ಕಡ್ಡಾಯವಾಗಿ ಬಳಕೆ ಮಾಡುವ ಮೂಲಕ ಉಳಿಸಿ ಬೆಳೆಸಬೇಕಾದ ಜವಾಬ್ದಾರಿ ನಮ್ಮ ನಿಮ್ಮೆಲ್ಲರ ಮೇಲಿದೆ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ತಿಳಿಸಿದರು.

ನಗರದ ಡಿಸಿ ಕಚೇರಿ ಸಭಾಂಗಣದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಕನ್ನಡ ಅನುಷ್ಠಾನ ಕುರಿತ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕನ್ನಡವನ್ನು ಆಡಳಿತದಲ್ಲಿ ಅನುಷ್ಠಾನಕ್ಕೆ ತರಲು ಸರಕಾರ ಹಲವು ಆದೇಶಗಳನ್ನು ಹೊರಡಿಸಿವೆ. 2000 ವರ್ಷಗಳ ಇತಿಹಾಸ ಇರುವ ಭಾಷೆಯನ್ನು ಉಳಿಸಿ ಬೆಳೆಸುವುದು ನಮ್ಮೆಲ್ಲರ ಜವಾಬ್ದಾರಿ. ದೇಶದಲ್ಲಿ ಹಲವು ಭಾಷೆಗಳು ನಶಿಸಿ ಹೋಗುತ್ತಿವೆ ಎಂದು ಕಳವಳ ವ್ಯಕ್ತಪಡಿಸಿದರು.

ಕನ್ನಡದಲ್ಲಿ ಹೆಚ್ಚು ಕೃತಿಗಳನ್ನು ರಚನೆ ಮಾಡಿದವರು ಕುವೆಂಪು. ಮೈಸೂರು ಸಾಹಿತಿಗಳ ತವರೂರು. ಕನ್ನಡ ಬಳಕೆಗೆ 3000 ಆದೇಶಗಳನ್ನು ಮಾಡಲಾಗಿದೆ. ಕೇವಲ ಆದೇಶಗಳಿಂದ ಭಾಷೆ ಉಳಿಸಲು ಸಾಧ್ಯವಿಲ್ಲ. ಕನ್ನಡವನ್ನು ಬಳಕೆ ಮಾಡುವ ಮೂಲಕ ಉಳಿಸಬೇಕು ಎಂದು ತಿಳಿಸಿದರು.

ಕನ್ನಡ ಭಾಷೆಯ ಬೋಧನೆಯನ್ನು ಸುಲಭಗೊಳಿಸಿ ಬೋಧನೆ ಮಾಡಬೇಕು. ಜಿಲ್ಲಾ ತರಬೇತಿ ಸಂಸ್ಥೆಗಳಲ್ಲಿ ತರಬೇತಿ ಪಡೆಯುವ ಅಧಿಕಾರಿ ಹಾಗೂ ಸಿಬ್ಬಂದಿಗೆ ಕನ್ನಡ ಬೋಧನೆಯನ್ನು ಹೆಚ್ಚು ಮಾಡಬೇಕು. ಬ್ಯಾಂಕ್ ಸಿಬ್ಬಂದಿ 3 ತಿಂಗಳ ಒಳಗೆ ಕನ್ನಡ ಕಲಿತು ವ್ಯವಹಾರ ನಡೆಸಬೇಕು. ಇಲ್ಲದಿದ್ದಲ್ಲಿ ಸ್ಥಳೀಯರೊಂದಿಗೆ ವ್ಯವಹಾರ ಮಾಡಲು ಕಷ್ಟ ಆಗುತ್ತದೆ ಎಂದರು.

ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ ಮಾತನಾಡಿ, ನಾಮಫಲಕ ಕೆಲವು ಕಡೆ 60:40 ಪ್ರಮಾಣ ಇಲ್ಲ ಎಂಬ ಬಗ್ಗೆ ಪರಿಶೀಲನೆ ನಡೆಸಿ ಪರವಾನಗಿ ರಿನಿವಲ್ ಗೆ ಬಂದಾಗ ಈ ಬಗ್ಗೆ ಷರತ್ತನ್ನು ವಿಧಿಸಿ ಅನುಷ್ಠಾನ ಮಾಡಲಾಗುವುದು ಎಂದು ತಿಳಿಸಿದರು.

ಪ್ರಾಧಿಕಾರದ ಕಾರ್ಯದರ್ಶಿ ಸಂತೋಷ್ ಹಾನಗಲ್ ಮಾತನಾಡಿ, ಜಿಲ್ಲೆಯ ಅಂಗಡಿ ಮುಂಗಟ್ಟುಗಳ ಬೋರ್ಡುಗಳು ಶೇ.60ರಷ್ಟು ಕನ್ನಡದಲ್ಲಿ ಇರಬೇಕು. ಕಡತಗಳಲ್ಲಿ ಕನ್ನಡ ಬಳಕೆ ಮಾಡಬೇಕು. ಎಸ್ ಎಸ್ ಎಲ್ ಸಿ ಪರೀಕ್ಷೆ ಕನ್ನಡ ಭಾಷೆಯಲ್ಲಿ ಮಕ್ಕಳು ಅನುತ್ತೀರ್ಣ ಆಗುತ್ತಿರುವ ಬಗ್ಗೆ ವರದಿ ಇದ್ದು, ಈ ಬಗ್ಗೆ ಗಮನ ಹರಿಸಬೇಕು ಎಂದು ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಭೆಯಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ನಾಮನಿರ್ದೇಶಿತ ಸದಸ್ಯ ಟಿ ಗುರುರಾಜ್, ಕನ್ನಡ ಕ್ರಿಯಾ ಸಮಿತಿಯ ಕಾರ್ಯಾಧ್ಯಕ್ಷ ಸಾರಾ ಸುದರ್ಶನ್ , ಜಿಪಂ ಸಿಇಒ ಕೆ.ಎಂ.ಗಾಯತ್ರಿ, ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು, ಇತರೆ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಪೋಷಕರು ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಲಿ

ಮದ್ದೂರು : ಪೋಷಕರು ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವ ಜತೆಗೆ ಸಾಂಸ್ಕೃತಿಕ, ಕ್ರೀಡೆ, ಸಂಗೀತ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಸಾಧನೆ ಮಾಡಲು ಪ್ರೇರೇಪಿಸುವ ಮೂಲಕ ಅವರಲ್ಲಿರುವ ಅಗಾಧ ಪ್ರತಿಭೆಯನ್ನು ಹೊರಚೆಲ್ಲಲು ಕೈಜೋಡಿಸಬೇಕೆಂದು ಮನ್‌ಮುಲ್ ನಿರ್ದೇಶಕ ಹಾಗೂ ಬಿ.ಜೆ.ಪಿ ಮುಖಂಡ ಎಸ್.ಪಿ.ಸ್ವಾಮಿ ತಿಳಿಸಿದರು.

ಮದ್ದೂರು ತಾಲೂಕಿನ ಕೊಪ್ಪ ಹೋಬಳಿಯ ಟಿ. ಬಳ್ಳಕೆರೆ ಗ್ರೀನ್‌ವುಡ್ ಪ್ರಾಥಮಿಕ ಮತ್ತು ಪ್ರೌಢಶಾಲೆ ಆವರಣದಲ್ಲಿ ಆಯೋಜಿಸಿದ್ದ ''ಹಸಿರೋತ್ಸವ-2025'' ಮಕ್ಕಳ ಸಾಂಸ್ಕೃತಿಕ ಕಲರವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಪ್ರತಿಭಾನ್ವಿತ ಮಕ್ಕಳಿಗೆ ಪೋಷಕರು ಪ್ರೋತ್ಸಾಹ ನೀಡುವ ಜತೆಗೆ ಮಕ್ಕಳನ್ನು ಸಮಾಜದ ಮುಖ್ಯ ವಾಹಿನಿಗೆ ತಂದು ದೇಶದ ಅತ್ಯುತ್ತಮ ವ್ಯಕ್ತಿಯನ್ನಾಗಿ ರೂಪಿಸುವ ಮಹತ್ತರ ಜವಾಬ್ದಾರಿ ತಮಗೂ ಇದ್ದು ಶಿಕ್ಷಕರೊಟ್ಟಿಗೆ ಕೈ ಜೋಡಿಸಿದಾಗ ಶೈಕ್ಷಣಿಕ ಕ್ಷೇತ್ರದಲ್ಲಿ ಉನ್ನತ ಸಾಧನೆ ಮಾಡಿ ಪೋಷಕರ ಹಾಗೂ ಶಿಕ್ಷಕರ ಕನಸನ್ನು ನನಸು ಮಾಡುತ್ತಾನೆಂದು ಹೇಳಿದರು.

ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಒದಗಿಸಿದಲ್ಲಿ ಉತ್ತಮ ಸಾಧನೆ ಮಾಡುವ ಜತೆಗೆ ಜೀವನದುದ್ದಕ್ಕೂ ತಮ್ಮ ಬದುಕನ್ನು ರೂಪಿಸಿಕೊಳ್ಳಲು ಸಹಕಾರಿಯಾಗಲಿದ್ದು ಹಳ್ಳಿಗಾಡಿನ ಮಕ್ಕಳಿಗೆ ಸಂಸ್ಥೆಯು ಉತ್ತಮ ರೀತಿಯ ಶಿಕ್ಷಣ ಒದಗಿಸಿ ವಿದ್ಯಾರ್ಥಿಗಳ ಭವಿಷ್ಯಕ್ಕೆ ಭದ್ರ ಬುನಾದಿ ಹಾಕುತ್ತಿದ್ದಾರೆಂದು ಹೇಳಿದರು.

ಶಿಕ್ಷಣ ಕಲಿತರೆ ಸಂಸ್ಕಾರ, ಆಚಾರ, ವಿಚಾರ, ನಡೆ, ನಡಿಯನ್ನು ಅನುಸರಿಸಿಕೊಳ್ಳಲು ಜತೆಗೆ ಒಳ್ಳೆಯ ವ್ಯಕ್ತಿತ್ವ, ಸೇವಾ ಮನೋಭಾವ, ಮಾನವೀಯ ಮೌಲ್ಯ ಮೈಗೂಡಿಸಿಕೊಂಡು ದೇಶದ ಸತ್ಪ್ರಜೆಯಾಗಿ ರೂಪುಗೊಂಡು ಭವಿಷ್ಯದ ನಾಯಕರಾಗಿ ಹೊರಹೊಮ್ಮುತ್ತಾರೆಂದರು.

ಪೋಷಕರು ಮಕ್ಕಳಿಗಾಗಿ ಆಸ್ತಿ ಮಾಡದೆ ಮಕ್ಕಳನ್ನೇ ಆಸ್ತಿಯನ್ನಾಗಿ ಮಾಡುವಂತೆ ಇತ್ತೀಚಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಸ್ಪರ್ಧೆಗನುಗುಣವಾಗಿ ಮಕ್ಕಳನ್ನು ಅಣಿಗೊಳಿಸಬೇಕಾದ ಜವಾಬ್ದಾರಿ ಶಿಕ್ಷಕರಿಗೆ ಮತ್ತು ಪೋಷಕರಿಗಿದ್ದು ಈಗಿನಿಂದಲೇ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಪಾಲ್ಗೊಳ್ಳಲು ಪೂರಕ ವಾತಾವರಣ ನಿರ್ಮಾಣ ಮಾಡಬೇಕೆಂದರು.

ಗ್ರೀನ್‌ವುಡ್ ವಿದ್ಯಾಸಂಸ್ಥೆಯ ಅಧ್ಯಕ್ಷ ಅಕ್ಷರಂ ವೆಂಕಟೇಶ್ ಮಾತನಾಡಿ ಪ್ರತಿ ವರ್ಷ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳ ಪೋಷಕರನ್ನು ಗುರುತಿಸಿ ಹಸುವೊಂದನ್ನು ನೀಡುತ್ತಿರುವುದು ತಮಗೆ ಸಂತಸವನ್ನುಂಟು ಮಾಡಿದ್ದು ಇದರಿಂದಾಗಿ ಕುಟುಂಬದ ಜೀವನ ನಿರ್ವಹಣೆ ಜತೆಗೆ ಮಗುವಿನ ಶಿಕ್ಷಣಕ್ಕೂ ಅನುಕೂಲ ಕಲ್ಪಿಸಿದಂತಾಗುತ್ತದೆಂದು ಹೇಳಿದರು.

ಸುಮಾರು 14 ವರ್ಷಗಳಿಂದಲೂ ಗುಣಾತ್ಮಕ ಶಿಕ್ಷಣ ನೀಡುವ ಜತೆಗೆ ಕಲೆ, ಸಾಹಿತ್ಯ, ಕ್ರೀಡೆ ಸೇರಿದಂತೆ ಪಠ್ಯೇತರ ಚಟುವಟಿಕೆಗಳಲ್ಲೂ ಭಾಗವಹಿಸಲು ಮಕ್ಕಳನ್ನು ಅಣಿಗೊಳಿಸಲಾಗುತ್ತಿದೆ ಎಂದು ಹೇಳಿದರು.

ಗೋಪೂಜೆ:
ಕಾರ್ಯಕ್ರಮಕ್ಕೂ ಮುನ್ನ ಶಾಲಾ ಆವರಣದಲ್ಲಿ ಶಾಲಾ ಆಡಳಿತ ಮಂಡಳಿ, ಶಿಕ್ಷಕರು, ವಿದ್ಯಾರ್ಥಿಗಳು, ಪೋಷಕರು ಹಿಂದೂ ಸಂಪ್ರದಾಯದಂತೆ ಗೋಪೂಜೆ ನೆರವೇರಿಸಿ ಬಳಿಕ ವಿವಿಧ ಕಾರ್ಯಕ್ರಮಗಳಿಗೆ ಚಾಲನೆ ನೀಡಿ ಪರಿಸರ ಸಂರಕ್ಷಣೆ ಕುರಿತು ಸ್ಥಳೀಯ ಸಾರ್ವಜನಿಕರಿಗೆ ಜಾಗೃತಿ ಮೂಡಿಸಿದರು.

ಈ ವೇಳೆ ಕೊಪ್ಪ ಗ್ರಾ.ಪಂ. ಅಧ್ಯಕ್ಷ ಪಿ.ರುದ್ರೇಶ್, ಸದಸ್ಯ ಬಿ.ಸಿ.ಸುರೇಶ್, ಮಾಜಿ ಅಧ್ಯಕ್ಷ ಮನು, ನಿವೃತ್ತ ಬಿ.ಇ.ಓ ಸಿ.ಎಚ್.ಕಾಳೀರಯ್ಯ, ಮುಖ್ಯ ಶಿಕ್ಷಕಿ ಹರ್ಷಿತ ಅಕ್ಷರಂ, ಸಂಸ್ಥೆಯ ಕಾರ್ಯದರ್ಶಿ ಬೆಟ್ಟಸ್ವಾಮಿ, ವಕೀಲೆ ಅಕ್ಷತಾಶೆಟ್ಟಿ, ಮುಖಂಡರಾದ ಡಾಬಾ ಕಿಟ್ಟಿ, ಹೊನ್ನೇಗೌಡ, ನಾರಾಯಣ್, ಹುಚ್ಚೇಗೌಡ ಇತರರಿದ್ದರು.

SBI ಭಾರತೀಯ ಸ್ಟೇಟ್ ಬ್ಯಾಂಕ್
ಹಲ್ಲಗೆರೆ ಶಾಖೆ (40454)
ಹಲ್ಲಗೆರೆ ಗ್ರಾಮ, ಬಸರಾಳು ಹೋಬಳಿ, ಮಂಡ್ಯ ತಾಲ್ಲೂಕು ಮತ್ತು ಜಿಲ್ಲೆ–571446
E-mail: sbi.40454@sbi.co.in
Ref: 40812237587
ನಿಯಮ 8(1)
ಸ್ವಾಧೀನದ ಸೂಚನೆ (ಸ್ತಿರಾಸ್ಥಿಗಳಿಗಾಗಿ)
ಈ ಕೆಳಗಿನ ಸಹಿದಾರರು ಭಾರತೀಯ ಸ್ಟೇಟ್ ಬ್ಯಾಂಕ್ ಇದರ ಅಧಿಕೃತ ಅಧಿಕಾರಿಯಾಗಿದ್ದು, ಸೆಕ್ಯುರಿಟೈಜೇಶನ್ ಅಂಡ್ ರಿಕನಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟ್ರೆಸ್ಟ್ ಆಕ್ಟ್ 2002 ಪ್ರಧಾನ ಮಾಡಿದ ಅಧಿಕಾರವನ್ನು ಕಲಂ 13(12) ಆಕ್ಟ್ ಅಡಿಯಲ್ಲಿ ನಿಯಮ 9ರಂತೆ ಜೊತೆಗೆ ಸೆಕ್ಯುರಿಟಿ ಇಂಟ್ರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ (54ರ 2002) ಕಾಯಿದೆಯಡಿಯಲ್ಲಿ ಅಧಿಕಾರ ಚಲಾಯಿಸಿ ಆ ನೋಟೀಸ್ ತಲುಪಿದ 60 ದಿನಗಳೊಳಗಾಗಿ ಪಾವತಿಸಲು ಕೋರಲಾಗಿದೆ. ಈ ಕೆಳಕಂಡ ಸಾಲಗಾರರು ಹಣ ಪಾವತಿ ಮಾಡಲು ವಿಫಲರಾಗಿರುವುದರಿಂದ, ನೋಟೀಸ್ ಅನ್ನು ನಿಮಗೂ ಹಾಗೂ ಸಾರ್ವಜನಿಕರಿಗೂ ನೀಡಿದ್ದು, ಕೆಳಗೆ ಸಹಿ ಮಾಡಿರಿವ ಅಧಿಕೃತ ಅಧಿಕಾರಿಯು ಸೆಕ್ಯುರಿಟೈಜೇಶನ್ ಕಾಯ್ದೆಯ 13(4) ಹಾಗು 9ನೇ ನಿಯಮದಲ್ಲಿ ಅನ್ವಯಿಸುವಂತೆ ಕೆಳಗೆ ನಮೂದಿಸಿರುವ ಸ್ತಿರಾಸ್ಥಿ ಸ್ವತ್ತನ್ನು ಬ್ಯಾಂಕ್ ತನ್ನ ವಶಕ್ಕೆ / ಸ್ವಾಧೀನಕ್ಕೆ ಪಡೆದಿರುತ್ತಾರೆಂದು ಸಾರ್ವಜನಿಕರಿಗೆ ಈ ಮೂಲಕ ತಿಳಿಸಿರುತ್ತಾರೆ. ಮುಖ್ಯವಾಗಿ ಸಾಲಗಾರರಿಗೆ ಮತ್ತು ಸಾರ್ವಜನಿಕರಿಗೂ ಈ ಮೂಲಕ ತಿಳಿಸುವುದೇನೆಂದರೆ ಸ್ಥಿರಾಸ್ತಿ ಸ್ವತ್ತು ಕುರಿತಾದ ಯಾವುದೇ ವ್ಯವಹಾರವನ್ನು ಮಾಡಬಾರದಾಗಿ ಎಚ್ಚರಿಸಲಾಗುತ್ತದೆ. ಮತ್ತು ಸ್ಥಿರಾಸ್ತಿ ಸ್ವತ್ತಿನ ಮೇಲೆ ಯಾವುದೇ ವ್ಯವಹಾರವನ್ನು ಮಾಡಿದರೆ ಭಾರತೀಯ ಸ್ಟೇಟ್ ಬ್ಯಾಂಕ್ ನಿಮಿತಕ್ಕೆ ಒಳಪಡುತ್ತದೆ.
ಈ ಮೂಲಕ ಸಾಲಗಾರರ ಗಮನಕ್ಕೆ ತರುವುದೇನೆಂದರೆ ಈ ಕೆಳಗೆ ಸಹಿ ಮಾಡಿರುವ ಅಧಿಕೃತ ಅಧಿಕಾರಿಯು ಸೆಕ್ಯುರಿಟೈಜೇಷನ್ ಕಾಯ್ದೆಯ ಉಪವಿಭಾಗ (8) ಹಾಗೂ 13ರ ಕಾಯಿದೆಯಲ್ಲಿ ಅನ್ವಯಿಸುವಂತೆ ಕೆಳಗೆ ನಮೂದಿಸಿರುವ ಸ್ಥಿರಾಸ್ತಿ ಸ್ವತ್ತನ್ನು ಸ್ವಾಧಿನಕ್ಕೆ ಪಡೆದಿರುತ್ತಾರೆಂದು ಸಾರ್ವಜನಿಕರಿಗೆ ತಿಳಿಸುತ್ತಿದ್ದಾರೆ.
• **ಡಿಮ್ಯಾಂಡ್ ನೋಟಿಸ್‌ನ ದಿನಾಂಕ:** 16.09.2024 • **ಸ್ವಾಧೀನ ಪಡೆದುಕೊಂಡ ದಿನಾಂಕ:** 11.02.2025
• **ಒಟ್ಟು ಸಾಲದ ಮೊತ್ತ:** ರೂ. 8,39,649.86/– (ಎಂಟು ಲಕ್ಷದ ಮೂವತ್ತೊಂಭತ್ತು ಸಾವಿರದ ಆರನೂರ ನಲತ್ತೊಂಭತ್ತು ರೂಪಾಯಿ ಎಂಭತ್ತಾರು ಪೈಸೆಗಳು ಮಾತ್ರ) ದಿನಾಂಕ 11.02.2025 ರವರೆಗೆ ಮತ್ತು ನಂತರದ ಬಡ್ಡಿ ಹಾಗೂ ಇತರೆ ಶುಲ್ಕಗಳು.
• **ಸಾಲಗಾರರ ಹೆಸರು ಮತ್ತು ವಿಳಾಸ:** ಶ್ರೀ ಡಿ.ಎಸ್. ಪ್ರಕಾಶ್ S/o ಲೇಟ್ ಶಂಕರ ಹೆಗ್ಗಡೆ, ದ್ಯಾಪಸಂದ್ರ ಗ್ರಾಮ, ಚಿಕ್ಕಬಳ್ಳಿ ಅಂಚೆ, ಬಸರಾಳು ಹೋಬಳಿ, ಮಂಡ್ಯ ತಾಲ್ಲೂಕು ಮತ್ತು ಜಿಲ್ಲೆ–571446.
• **ಸಹ–ಸಾಲಗಾರರ ಹೆಸರು ಮತ್ತು ವಿಳಾಸ:** ಡಿ.ಎಸ್. ನಾಗೇಂದ್ರ S/o ಲೇಟ್ ಶಂಕರ ಹೆಗ್ಗಡೆ, ದ್ಯಾಪಸಂದ್ರ ಗ್ರಾಮ, ಚಿಕ್ಕಬಳ್ಳಿ ಅಂಚೆ, ಬಸರಾಳು ಹೋಬಳಿ, ಮಂಡ್ಯ ತಾಲ್ಲೂಕು ಮತ್ತು ಜಿಲ್ಲೆ–571446.
• **ಅಡಮಾನವಿಟ್ಟ ಆಸ್ತಿಯ ವಿವರಗಳು:** ಎಲ್ಲಾ ತುಂಡು ಮತ್ತು ಪಾರ್ಸೆಲ್ ಹೊಂದಿರುವ ಆಸ್ತಿ ಪಿಐಡಿ ಸಂಖ್ಯೆ 152100406200200422 ಖಾತಾ ಸಂಖ್ಯೆ 25/25, ವಿಳಾಸ ಚಿಕ್ಕಬಳ್ಳಿ ಗ್ರಾಮ ಹಲ್ಲಗೆರೆ ಗ್ರಾಮಪಂಚಾಯಿತಿ ಪರಿಮಿತಿ, ಬಸರಾಳು ಹೋಬಳಿ, ಮಂಡ್ಯ ತಾಲ್ಲೂಕು ಮತ್ತು ಜಿಲ್ಲೆ ಡಿ.ಎಸ್. ಪ್ರಕಾಶ್ S/o ಲೇಟ್ ಶಂಕರ ಹೆಗ್ಗಡೆ ಮತ್ತು ಡಿ.ಎಸ್. ನಾಗೇಂದ್ರ S/o ಲೇಟ್ ಶಂಕರ ಹೆಗ್ಗಡೆರವರ ಹೆಸರಿನಲ್ಲಿ ಪೂರ್ವದಿಂದ ಪಶ್ಚಿಮ: 15.24 ಮೀ., ಉತ್ತರದಿಂದ ದಕ್ಷಿಣ: 18.288 ಮೀ. ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಶಿವಲಿಂಗಯ್ಯರವರಿಗೆ ಸೇರಿದ ಆಸ್ತಿ, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಕೃಷ್ಣ ಹೆಗ್ಗಡೆಯವರಿಗೆ ಸೇರಿದ ಆಸ್ತಿ.
ಸಹಿ/–
ಅಧಿಕೃತ ಅಧಿಕಾರಿ
ದಿನಾಂಕ: 11.02.2025 ಭಾರತೀಯ ಸ್ಟೇಟ್ ಬ್ಯಾಂಕ್
ಸ್ಥಳ: ಹಲ್ಲಗೆರೆ (SARFAESI ಕಾಯಿದೆ–2002 ಅಡಿಯಲ್ಲಿ)

SBI ಭಾರತೀಯ ಸ್ಟೇಟ್ ಬ್ಯಾಂಕ್
ಶಿವಪುರ ಶಾಖೆ (07907)
ಶಿವಪುರ, ಮದ್ದೂರು, ಮಂಡ್ಯ ಜಿಲ್ಲೆ–571429
E-mail: sbi.07907@sbi.co.in
Ref: 32501616069 / 34839726800
ನಿಯಮ 8(1)
ಸ್ವಾಧೀನದ ಸೂಚನೆ (ಸ್ತಿರಾಸ್ಥಿಗಳಿಗಾಗಿ)
ಈ ಕೆಳಗಿನ ಸಹಿದಾರರು ಭಾರತೀಯ ಸ್ಟೇಟ್ ಬ್ಯಾಂಕ್ ಇದರ ಅಧಿಕೃತ ಅಧಿಕಾರಿಯಾಗಿದ್ದು, ಸೆಕ್ಯುರಿಟೈಜೇಶನ್ ಅಂಡ್ ರಿಕನಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟ್ರೆಸ್ಟ್ ಆಕ್ಟ್ 2002 ಪ್ರಧಾನ ಮಾಡಿದ ಅಧಿಕಾರವನ್ನು ಕಲಂ 13(12) ಆಕ್ಟ್ ಅಡಿಯಲ್ಲಿ ನಿಯಮ 9ರಂತೆ ಜೊತೆಗೆ ಸೆಕ್ಯುರಿಟಿ ಇಂಟ್ರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ (54ರ 2002) ಕಾಯಿದೆಯಡಿಯಲ್ಲಿ ಅಧಿಕಾರ ಚಲಾಯಿಸಿ ಆ ನೋಟೀಸ್ ತಲುಪಿದ 60 ದಿನಗಳೊಳಗಾಗಿ ಪಾವತಿಸಲು ಕೋರಲಾಗಿದೆ. ಈ ಕೆಳಕಂಡ ಸಾಲಗಾರರು ಹಣ ಪಾವತಿ ಮಾಡಲು ವಿಫಲರಾಗಿರುವುದರಿಂದ, ನೋಟೀಸ್ ಅನ್ನು ನಿಮಗೂ ಹಾಗೂ ಸಾರ್ವಜನಿಕರಿಗೂ ನೀಡಿದ್ದು, ಕೆಳಗೆ ಸಹಿ ಮಾಡಿರಿವ ಅಧಿಕೃತ ಅಧಿಕಾರಿಯು ಸೆಕ್ಯುರಿಟೈಜೇಶನ್ ಕಾಯ್ದೆಯ 13(4) ಹಾಗು 9ನೇ ನಿಯಮದಲ್ಲಿ ಅನ್ವಯಿಸುವಂತೆ ಕೆಳಗೆ ನಮೂದಿಸಿರುವ ಸ್ತಿರಾಸ್ಥಿ ಸ್ವತ್ತನ್ನು ಬ್ಯಾಂಕ್ ತನ್ನ ವಶಕ್ಕೆ / ಸ್ವಾಧೀನಕ್ಕೆ ಪಡೆದಿರುತ್ತಾರೆಂದು ಸಾರ್ವಜನಿಕರಿಗೆ ಈ ಮೂಲಕ ತಿಳಿಸಿರುತ್ತಾರೆ. ಮುಖ್ಯವಾಗಿ ಸಾಲಗಾರರಿಗೆ ಮತ್ತು ಸಾರ್ವಜನಿಕರಿಗೂ ಈ ಮೂಲಕ ತಿಳಿಸುವುದೇನೆಂದರೆ ಸ್ಥಿರಾಸ್ತಿ ಸ್ವತ್ತು ಕುರಿತಾದ ಯಾವುದೇ ವ್ಯವಹಾರವನ್ನು ಮಾಡಬಾರದಾಗಿ ಎಚ್ಚರಿಸಲಾಗುತ್ತದೆ. ಮತ್ತು ಸ್ಥಿರಾಸ್ತಿ ಸ್ವತ್ತಿನ ಮೇಲೆ ಯಾವುದೇ ವ್ಯವಹಾರವನ್ನು ಮಾಡಿದರೆ ಭಾರತೀಯ ಸ್ಟೇಟ್ ಬ್ಯಾಂಕ್ ನಿಮಿತಕ್ಕೆ ಒಳಪಡುತ್ತದೆ.
ಈ ಮೂಲಕ ಸಾಲಗಾರರ ಗಮನಕ್ಕೆ ತರುವುದೇನೆಂದರೆ ಈ ಕೆಳಗೆ ಸಹಿ ಮಾಡಿರುವ ಅಧಿಕೃತ ಅಧಿಕಾರಿಯು ಸೆಕ್ಯುರಿಟೈಜೇಷನ್ ಕಾಯ್ದೆಯ ಉಪವಿಭಾಗ (8) ಹಾಗೂ 13ರ ಕಾಯಿದೆಯಲ್ಲಿ ಅನ್ವಯಿಸುವಂತೆ ಕೆಳಗೆ ನಮೂದಿಸಿರುವ ಸ್ಥಿರಾಸ್ತಿ ಸ್ವತ್ತನ್ನು ಸ್ವಾಧಿನಕ್ಕೆ ಪಡೆದಿರುತ್ತಾರೆಂದು ಸಾರ್ವಜನಿಕರಿಗೆ ತಿಳಿಸುತ್ತಿದ್ದಾರೆ.
• **ಡಿಮ್ಯಾಂಡ್ ನೋಟಿಸ್‌ನ ದಿನಾಂಕ:** 21.10.2024 • **ಸ್ವಾಧೀನ ಪಡೆದುಕೊಂಡ ದಿನಾಂಕ:** 11.02.2025
• **ಒಟ್ಟು ಸಾಲದ ಮೊತ್ತ:** ರೂ. 10,71,502/– (ಹತ್ತು ಲಕ್ಷದ ಎಪ್ಪತ್ತೊಂದು ಸಾವಿರದ ಐನೂರ ಎರಡು ರೂಪಾಯಿಗಳು ಮಾತ್ರ) ದಿನಾಂಕ 30.01.2025 ರವರೆಗೆ ಮತ್ತು ನಂತರದ ಬಡ್ಡಿ ಹಾಗೂ ಇತರೆ ಶುಲ್ಕಗಳು.
• **ಸಾಲಗಾರರ ಹೆಸರು ಮತ್ತು ವಿಳಾಸ:** ಶ್ರೀ ಮಹದೇವ ಜಿ.ಎನ್ S/o ನಿಂಗೇಗೌಡ ಜಿ.ಎನ್., # 102/2, ಗಾಜನೂರು ಗ್ರಾಮ, ಕಸಬಾ ಹೋಬಳಿ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ–571430.
• **ಜಾಮೀನುದಾರರ ಹೆಸರು ಮತ್ತು ವಿಳಾಸ:** ಕೋರಿ ಮಲ್ಲಿಕಾರ್ಜುನ S/o ಕೋರಿ ಬಸವರಾಜ ವಿಳಾಸ: 217, ಕೊಂಚಿಗೇರಿ ಗ್ರಾಮ, ತೆಕ್ಕಲಕೋಟೆ ಹೋಬಳಿ, ಸಿರಗುಪ್ಪ ತಾಲ್ಲೂಕು, ಬಳ್ಳಾರಿ ಜಿಲ್ಲೆ–583120.
• **ಅಡಮಾನವಿಟ್ಟ ಆಸ್ತಿಯ ವಿವರಗಳು: ಆಸ್ತಿ ಸಂಖ್ಯೆ. 1)** ಎಲ್ಲಾ ತುಂಡು ಮತ್ತು ಪಾರ್ಸೆಲ್ ಹೊಂದಿರುವ ಮನೆ ಆಸ್ತಿ ಸಂಖ್ಯೆ 233/233/1 ಮನೆ (ಹಳೆ ಸಂಖ್ಯೆ 233) ಪಿಐಡಿ ಸಂಖ್ಯೆ: 152100301700200298, ವಿಳಾಸ: ಗಾಜನೂರು ಗ್ರಾಮ, ಕಸಬಾ ಹೋಬಳಿ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ. ಮಹದೇವ ಜಿ.ಎನ್ S/o ನಿಂಗೇಗೌಡ ಜಿ.ಎನ್.ರವರ ಹೆಸರಿನಲ್ಲಿ ಪೂರ್ವದಿಂದ ಪಶ್ಚಿಮಕ್ಕೆ: 15.757 ಮೀ., ಉತ್ತರದಿಂದ ದಕ್ಷಿಣಕ್ಕೆ: 6.363 ಮೀ. ಒಟ್ಟು 100.26 ಚ.ಮೀ. ಕಟ್ಟಡದ ಪ್ರದೇಶ 90.71 ಚ.ಅಡಿ. ಪೂರ್ವಕ್ಕೆ: ಜಿ. ಮಾದೇಗೌಡರವರ ಮನೆ, ಪಶ್ಚಿಮಕ್ಕೆ: ಜಿ.ಎನ್. ಮಾದೇಗೌಡರ ನಿವೇಶನ, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಸ್ವಂತ ಆಸ್ತಿ. **ಆಸ್ತಿ ಸಂಖ್ಯೆ. 2)** ಎಲ್ಲಾ ತುಂಡು ಮತ್ತು ಪಾರ್ಸೆಲ್ ಹೊಂದಿರುವ ಆಸ್ತಿ ಸಂಖ್ಯೆ 233/233/2 ಖಾಲಿ ನಿವೇಶನ (ಹಳೆ ಸಂಖ್ಯೆ 233) ಪಿಐಡಿ ಸಂಖ್ಯೆ: 152100301700220009, ವಿಳಾಸ: ಗಾಜನೂರು ಗ್ರಾಮ, ಕಸಬಾ ಹೋಬಳಿ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ. ಮಹದೇವ ಜಿ.ಎನ್ S/o ನಿಂಗೇಗೌಡ ಜಿ.ಎನ್.ರವರ ಹೆಸರಿನಲ್ಲಿ ಪೂರ್ವದಿಂದ ಪಶ್ಚಿಮಕ್ಕೆ: 3.939 ಮೀ., ಉತ್ತರದಿಂದ ದಕ್ಷಿಣಕ್ಕೆ: 6.363 ಮೀ. ಒಟ್ಟು: 25.06 ಚ.ಮೀ. ಪೂರ್ವಕ್ಕೆ: ಜಿ. ಮಾದೇಗೌಡರವರ ಮನೆ, ಪಶ್ಚಿಮಕ್ಕೆ: ಜಿ.ಎನ್. ಮಾದೇಗೌಡರ ನಿವೇಶನ, ಉತ್ತರಕ್ಕೆ: ಸ್ವಂತ ಆಸ್ತಿ, ದಕ್ಷಿಣಕ್ಕೆ: ಚಿಕ್ಕ ಮಾದೇಗೌಡರವರ ಆಸ್ತಿ.
ಸಹಿ/–
ಅಧಿಕೃತ ಅಧಿಕಾರಿ
ದಿನಾಂಕ: 11.02.2025 ಭಾರತೀಯ ಸ್ಟೇಟ್ ಬ್ಯಾಂಕ್
ಸ್ಥಳ: ಶಿವಪುರ (SARFAESI ಕಾಯಿದೆ–2002 ಅಡಿಯಲ್ಲಿ)

SBI ಭಾರತೀಯ ಸ್ಟೇಟ್ ಬ್ಯಾಂಕ್
ಕೊಡಿಯಾಲ ಶಾಖೆ (08039)
ಕೊಡಿಯಾಲ ಗ್ರಾಮ, ಬಜಾರ್ ರಸ್ತೆ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ–571415
E-mail: sbi.08039@sbi.co.in
Ref: 41432739160
ನಿಯಮ 8(1)
ಸ್ವಾಧೀನದ ಸೂಚನೆ (ಸ್ತಿರಾಸ್ಥಿಗಳಿಗಾಗಿ)
ಈ ಕೆಳಗಿನ ಸಹಿದಾರರು ಭಾರತೀಯ ಸ್ಟೇಟ್ ಬ್ಯಾಂಕ್ ಇದರ ಅಧಿಕೃತ ಅಧಿಕಾರಿಯಾಗಿದ್ದು, ಸೆಕ್ಯುರಿಟೈಜೇಶನ್ ಅಂಡ್ ರಿಕನಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟ್ರೆಸ್ಟ್ ಆಕ್ಟ್ 2002 ಪ್ರಧಾನ ಮಾಡಿದ ಅಧಿಕಾರವನ್ನು ಕಲಂ 13(12) ಆಕ್ಟ್ ಅಡಿಯಲ್ಲಿ ನಿಯಮ 9ರಂತೆ ಜೊತೆಗೆ ಸೆಕ್ಯುರಿಟಿ ಇಂಟ್ರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ (54ರ 2002) ಕಾಯಿದೆಯಡಿಯಲ್ಲಿ ಅಧಿಕಾರ ಚಲಾಯಿಸಿ ಆ ನೋಟೀಸ್ ತಲುಪಿದ 60 ದಿನಗಳೊಳಗಾಗಿ ಪಾವತಿಸಲು ಕೋರಲಾಗಿದೆ. ಈ ಕೆಳಕಂಡ ಸಾಲಗಾರರು ಹಣ ಪಾವತಿ ಮಾಡಲು ವಿಫಲರಾಗಿರುವುದರಿಂದ, ನೋಟೀಸ್ ಅನ್ನು ನಿಮಗೂ ಹಾಗೂ ಸಾರ್ವಜನಿಕರಿಗೂ ನೀಡಿದ್ದು, ಕೆಳಗೆ ಸಹಿ ಮಾಡಿರಿವ ಅಧಿಕೃತ ಅಧಿಕಾರಿಯು ಸೆಕ್ಯುರಿಟೈಜೇಶನ್ ಕಾಯ್ದೆಯ 13(4) ಹಾಗು 9ನೇ ನಿಯಮದಲ್ಲಿ ಅನ್ವಯಿಸುವಂತೆ ಕೆಳಗೆ ನಮೂದಿಸಿರುವ ಸ್ತಿರಾಸ್ಥಿ ಸ್ವತ್ತನ್ನು ಬ್ಯಾಂಕ್ ತನ್ನ ವಶಕ್ಕೆ / ಸ್ವಾಧೀನಕ್ಕೆ ಪಡೆದಿರುತ್ತಾರೆಂದು ಸಾರ್ವಜನಿಕರಿಗೆ ಈ ಮೂಲಕ ತಿಳಿಸಿರುತ್ತಾರೆ. ಮುಖ್ಯವಾಗಿ ಸಾಲಗಾರರಿಗೆ ಮತ್ತು ಸಾರ್ವಜನಿಕರಿಗೂ ಈ ಮೂಲಕ ತಿಳಿಸುವುದೇನೆಂದರೆ ಸ್ಥಿರಾಸ್ತಿ ಸ್ವತ್ತು ಕುರಿತಾದ ಯಾವುದೇ ವ್ಯವಹಾರವನ್ನು ಮಾಡಬಾರದಾಗಿ ಎಚ್ಚರಿಸಲಾಗುತ್ತದೆ. ಮತ್ತು ಸ್ಥಿರಾಸ್ತಿ ಸ್ವತ್ತಿನ ಮೇಲೆ ಯಾವುದೇ ವ್ಯವಹಾರವನ್ನು ಮಾಡಿದರೆ ಭಾರತೀಯ ಸ್ಟೇಟ್ ಬ್ಯಾಂಕ್ ನಿಮಿತಕ್ಕೆ ಒಳಪಡುತ್ತದೆ.
ಈ ಮೂಲಕ ಸಾಲಗಾರರ ಗಮನಕ್ಕೆ ತರುವುದೇನೆಂದರೆ ಈ ಕೆಳಗೆ ಸಹಿ ಮಾಡಿರುವ ಅಧಿಕೃತ ಅಧಿಕಾರಿಯು ಸೆಕ್ಯುರಿಟೈಜೇಷನ್ ಕಾಯ್ದೆಯ ಉಪವಿಭಾಗ (8) ಹಾಗೂ 13ರ ಕಾಯಿದೆಯಲ್ಲಿ ಅನ್ವಯಿಸುವಂತೆ ಕೆಳಗೆ ನಮೂದಿಸಿರುವ ಸ್ಥಿರಾಸ್ತಿ ಸ್ವತ್ತನ್ನು ಸ್ವಾಧಿನಕ್ಕೆ ಪಡೆದಿರುತ್ತಾರೆಂದು ಸಾರ್ವಜನಿಕರಿಗೆ ತಿಳಿಸುತ್ತಿದ್ದಾರೆ.
• **ಡಿಮ್ಯಾಂಡ್ ನೋಟಿಸ್‌ನ ದಿನಾಂಕ:** 14.10.2024 • **ಸ್ವಾಧೀನ ಪಡೆದುಕೊಂಡ ದಿನಾಂಕ:** 11.02.2025
• **ಒಟ್ಟು ಸಾಲದ ಮೊತ್ತ:** ರೂ. 10,01,662.29/– (ಹತ್ತು ಲಕ್ಷದ ಒಂದು ಸಾವಿರದ ಆರನೂರ ಅರವತ್ತೆರಡು ರೂಪಾಯಿ ಇಪ್ಪತ್ತೊಂಬತ್ತು ಪೈಸೆಗಳು ಮಾತ್ರ) ದಿನಾಂಕ 11.02.2025 ರವರೆಗೆ ಮತ್ತು ನಂತರದ ಬಡ್ಡಿ ಹಾಗೂ ಇತರೆ ಶುಲ್ಕಗಳು.
• **ಸಾಲಗಾರರ/ಮಾಲೀಕರ ಹೆಸರು ಮತ್ತು ವಿಳಾಸ:** ಶ್ರೀಮತಿ ರೇಣುಕ W/o ಚಿಕ್ಕದೇವೇಗೌಡ, # 573, ತಡಗವಾಡಿ ಗ್ರಾಮ, ಅರಕೆರೆ ಹೋಬಳಿ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ–571415.
• **ಸಹ–ಸಾಲಗಾರರ ಹೆಸರು ಮತ್ತು ವಿಳಾಸ:** 1) ಚಿಕ್ಕದೇವೇಗೌಡ S/o ಲೇಟ್ ಚಿಕ್ಕಮುದುಕೆಗೌಡ, 2) ರಕ್ಷಿತ್ ಕುಮಾರ್ ಟಿ.ಸಿ. S/o ಚಿಕ್ಕದೇವೇಗೌಡ, 3) ರವಿ ಟಿ.ಸಿ. S/o ಚಿಕ್ಕದೇವೇಗೌಡ ಮೂವರ ವಿಳಾಸ: 573, ತಡಗವಾಡಿ ಗ್ರಾಮ, ಅರಕೆರೆ ಹೋಬಳಿ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ–571415 ಹಾಗೂ 4) ರಮ್ಯ ಟಿ.ಸಿ. W/o ಭಾಸ್ಕರ್ ಜೆ., ಪೀಹಳ್ಳಿ ಗ್ರಾಮ, ಅರಕೆರೆ ಹೋಬಳಿ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ–571415.
• **ಅಡಮಾನವಿಟ್ಟ ಆಸ್ತಿಯ ವಿವರಗಳು:** ಎಲ್ಲಾ ತುಂಡು ಮತ್ತು ಪಾರ್ಸೆಲ್ ಹೊಂದಿರುವ ತಡಗವಾಡಿ ಗ್ರಾಮ ಪಂಚಾಯತಿ ಖಾತಾ ಸಂಖ್ಯೆ: 505, ಪಿಐಡಿ ಸಂಖ್ಯೆ 152100701900600601, ವಿಳಾಸ: ತಡಗವಾಡಿ ಗ್ರಾಮ, ಅರಕೆರೆ ಹೋಬಳಿ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ. ಶ್ರೀಮತಿ ರೇಣುಕ W/o ಚಿಕ್ಕದೇವೇಗೌಡ ಮತ್ತು ಮಕ್ಕಳು 1) ರಕ್ಷಿತ್ ಕುಮಾರ್ ಟಿ.ಸಿ. S/o ಚಿಕ್ಕದೇವೇಗೌಡ, 2) ರವಿ ಟಿ.ಸಿ. S/o ಚಿಕ್ಕದೇವೇಗೌಡ 3) ರಮ್ಯ ಟಿ.ಸಿ. W/o ಭಾಸ್ಕರ್ ಜೆ. ರವರ ಹೆಸರಿನಲ್ಲಿ ಒಟ್ಟು: ಅಸಮ ನಿವೇಶನ 181.16 ಚ.ಮೀ. ಪೂರ್ವಕ್ಕೆ: ಕೆಂಪಮ್ಮ W/o ಕೆಂಪೇಗೌಡರವರ ನಿವೇಶನ, ಪಶ್ಚಿಮಕ್ಕೆ: ನೀಲೇಗೌಡ S/o ನೀಲೇಗೌಡರವರ ಆಸ್ತಿ, ಉತ್ತರಕ್ಕೆ: ಗಲ್ಲಿ ಮತ್ತು ಟಿ.ಎಂ. ದೇವೇಗೌಡ S/o ಚಿಕ್ಕ ಮುದುಕೆಗೌಡರವರ ಮನೆ, ದಕ್ಷಿಣಕ್ಕೆ: ರಸ್ತೆ.
ಸಹಿ/–
ಅಧಿಕೃತ ಅಧಿಕಾರಿ
ದಿನಾಂಕ: 11.02.2025 ಭಾರತೀಯ ಸ್ಟೇಟ್ ಬ್ಯಾಂಕ್
ಸ್ಥಳ: ಕೊಡಿಯಾಲ (SARFAESI ಕಾಯಿದೆ–2002 ಅಡಿಯಲ್ಲಿ)

ಸಮಾಚಾರ ಸಣ್ಣದಲ್ಲ

ತಾಲೂಕು ಕಚೇರಿಗೆ ಜಿಲ್ಲಾಧಿಕಾರಿ ಭೇಟಿ

ಮಂಡ್ಯ: ಜಿಲ್ಲಾಧಿಕಾರಿ ಡಾ: ಕುಮಾರ ಅವರು ಮಂಡ್ಯ ತಾಲೂಕು ಕಚೇರಿಗೆ ಅನಿರೀಕ್ಷಿತ ಭೇಟಿ ನೀಡಿ ಪರಿಶೀಲನೆ ನಡೆಸಿದರು.ಸಾರ್ವಜನಿಕರಿಂದ ಕುಂದು ಕೊರತೆ ಅರ್ಜಿಗಳನ್ನು ಸ್ವೀಕರಿಸಿ ಕಾನೂನು ರೀತ್ಯ ವಿಲೇವಾರಿ ಮಾಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ವಿವಿಧ ಶಾಖೆಗಳಿಗೆ ಭೇಟಿ ನೀಡಿ ಕಡತ ವಿಲೇವಾರಿ ಕುರಿತು ಮಾಹಿತಿ ಪಡೆದು, ವಿನಾಕರಣ ಸಾರ್ವಜನಿಕರನ್ನು ಕಚೇರಿಗೆ ಅಲೆದಾಡಿಸಬಾರದು ಎಂದು ಸೂಚನೆ ನೀಡಿದರು. ವಿದ್ಯಾರ್ಥಿಗಳಿಗೆ ಜಾತಿ, ಆದಾಯ ಪ್ರಮಾಣ ಪತ್ರಗಳ ತೊಂದರೆ ತಪ್ಪಿಸಿ ತುರ್ತಾಗಿ ನೀಡಲು ಸಹಾಯವಾಣಿ ಸಹ ತೆರೆಯಲಾಗಿದೆ ಎಂದರು. ಜಿಲ್ಲಾಧಿಕಾರಿ ಕಡತಗಳ ಗಣಕೀಕರಣ ಪರಿಶೀಲಿಸಿದರು. ಇದೇ ಸಂದರ್ಭದಲ್ಲಿ ಮುಷ್ಕರ ನಿರತ ಗ್ರಾಮ ಆಡಳಿತಾಧಿಕಾರಿಗಳಿಂದ ಮನವಿ ಸ್ವೀಕರಿಸಿದರು.

ಸಂತ ಸೇವಾಲಾಲ್ ಜಯಂತಿ ಇಂದು

ಮಂಡ್ಯ: ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಫೆಬ್ರವರಿ 16 ರಂದು ಬೆಳಗ್ಗೆ 11 ಗಂಟೆಗೆ ಬಿ.ಟಿ.ಲಲಿತಾ ನಾಯಕ್ ಬಡಾವಣೆಯಲ್ಲಿ ಸಂತ ಸೇವಾಲಾಲ್ ಜಯಂತಿ ಹಮ್ಮಿಕೊಳ್ಳಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವರಾದ ಎನ್. ಚೆಲುವರಾಯಸ್ವಾಮಿ ಉದ್ಘಾಟಿಸಲಿದ್ದು, ಕೇಂದ್ರ ಸಚಿವ ಎಚ್. ಡಿ. ಕುಮಾರಸ್ವಾಮಿ ಘನ ಉಪಸ್ಥಿತಿ ವಹಿಸಲಿದ್ದಾರೆ. ಶಾಸಕರಾದ ಎ.ಬಿ ರಮೇಶ ಬಂಡಿಸಿದ್ದೇಗೌಡ, ಮಳವಳ್ಳಿ ಶಾಸಕ ಪಿ. ಎಂ.ನರೇಂದ್ರಸ್ವಾಮಿ ಗೌರವ ಉಪಸ್ಥಿತಿವಹಿಸು ವರು. ಮಂಡ್ಯ ಶಾಸಕ ಪಿ.ರವಿಕುಮಾರ್ ಅಧ್ಯಕ್ಷತೆ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ವಿಧಾನ ಪರಿಷತ್ ಸದಸ್ಯರಾದ ಮಧು ಜಿ.ಮಾದೇಗೌಡ, ದಿನೇಶ್ ಗೂಳಿಗೌಡ, ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣ್ಣಯ್ಯ, ಕೆಆರ್ ಪೇಟೆ ಶಾಸಕ ಎಚ್ .ಟಿ ಮಂಜು, ಮದ್ದೂರು ಶಾಸಕ ಕೆ.ಎಂ ಉದಯ, ನಗರಸಭೆ ಅಧ್ಯಕ್ಷರಾದ ಎಂ.ವಿ.ಪ್ರಕಾಶ್ ಆಗಮಿಸಲಿದ್ದಾರೆ.

ಪ್ರಮಾಣ ಪತ್ರ ವಿತರಣೆಗೆ ಸೂಚನೆ

ಮಂಡ್ಯ: ಗ್ರಾಮ ಆಡಳಿತ ಅಧಿಕಾರಿಗಳು ತಮ್ಮ ಬೇಡಿಕೆಗಳ ಈಡೇರಿಕೆಗಳಿಗಾಗಿ ಫೆಬ್ರವರಿ 10 ರಿಂದ ಮುಷ್ಕರ ನಡೆಸುತ್ತಿದ್ದು, ಇದರ ಪರಿಣಾಮವಾಗಿ ಜಾತಿ, ಆದಾಯ ಪ್ರಮಾಣ ಪತ್ರ, ವಾಸಸ್ಥಳ ದೃಢೀಕರಣಗಳನ್ನು ಪಡೆಯಲು ಅರ್ಜಿ ಸಲ್ಲಿಸಿದವರಿಗೆ, ವಿವಿಧ ಕ್ಷೇತ್ರ ಪರೀಕ್ಷಾರ್ಥಿಗಳಿಗೆ ಅಡಚಣೆ ಉಂಟಾಗಿದೆ. ಸ್ವಿಕೃತವಾಗುವ ಹೊಸ ಅರ್ಜಿಗಳನ್ನು ರಾಜಸ್ವ ನಿರೀಕ್ಷಕರು ತಪಾಸಣೆ ನಡೆಸಿ ವಿತರಿಸಲು ಜಿಲ್ಲೆಯ ಎಲ್ಲಾ ತಹಸಿಲ್ದಾರಾರಿಗೆ ತಿಳಿಸಲಾಗಿದೆ.ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ವಾಸಸ್ಥಳ ದೃಢೀಕರಣ ಸ್ವೀಕರಿಸಲು ಯಾವುದೇ ರೀತಿಯ ಅಡಚಣೆ ಆದಲ್ಲಿ ಮೊ: 8277862938 ಸಂಪರ್ಕಿಸಲು ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ಗ್ರಾಮಗಸ್ತು ಸದಸ್ಯರ ಸಭೆ

ಮಂಡ್ಯ: ಶಿವಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯ ಚಂದಗಾಲು ಗ್ರಾಮದಲ್ಲಿ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ನೇತೃತ್ವದಲ್ಲಿ ಗ್ರಾಮಗಸ್ತು ಸದಸ್ಯರ ಸಭೆ ನಡೆಯಿತು. ಪೊಲೀಸ್ ಅಧೀಕ್ಷಕರಾದ ಮಲ್ಲಿಕಾರ್ಜುನ ಬಾಲಾದಂಡಿ ಮಾತನಾಡಿ, ಗ್ರಾಮದಲ್ಲಿ ಯಾವುದೇ ಕಾನೂನು ಬಾಹಿರ ಚಟುವಟಿಕೆ ಕಂಡುಬಂದಲ್ಲಿ ಕೂಡಲೇ ಬೀಟ್ ಸಿಬ್ಬಂದಿಗೆ ಮಾಹಿತಿ ನೀಡಲು ಹೇಳಿದರು. ಅಪರ ಪೊಲೀಸ್ ಅಧೀಕ್ಷಕರಾದ ತಿಮ್ಮಯ್ಯ, ಗಂಗಾಧರಸ್ವಾಮಿ, ಉಪವಿಭಾಗ ಪೊಲೀಸ್ ಉಪಾಧೀಕ್ಷಕರಾದ ಎಲ್. ಕೆ ರಮೇಶ್, ಕೆರೆಗೋಡು ವೃತ್ತ ನಿರೀಕ್ಷಕರಾದ ಮಹೇಶ್ ಉಪಸ್ಥಿತರಿದ್ದರು.

ಸರಳು ಚುಚ್ಚಿ ಗಾಯ: ಚಿಕಿತ್ಸೆಗೆ ಪಾರಾದ ಹಾವು

ಚಾಮರಾಜನಗರ: ಮನೆ ಅಡಿಪಾಯ ತೆಗೆಯುವಾಗ ಗಾಯಗೊಂಡ ಹಾವಿಗೆ ಪಶು ವೈದ್ಯರು ಸೂಕ್ತ ಚಿಕಿತ್ಸೆ ನೀಡುವ ಮೂಲಕ ಮರುಜೀವ ನೀಡಿದ ಘಟನೆ ಚಾಮರಾಜನಗರದಲ್ಲಿ ಪಶುಪಾಲನ ಪಾಲಿ ಕ್ಲಿನಿಕ್ ನಲ್ಲಿ ನಡೆದಿದೆ. ಕೆಲ್ಲಂಬಳ್ಳಿ ಗ್ರಾಮದಲ್ಲಿ ಮನೆ ನಿರ್ಮಾಣಕ್ಕೆ ಅಡಿಪಾಯ ತೆಗೆಯುವಾಗ ಭಾರೀ ಉದ್ದದ ಕೇರೆಹಾವಿಗೆ ಕಬ್ಬಿಣ ಸರಳು ಚುಚ್ಚಿ ತೀವ್ರವಾಗಿ ಗಾಯಗೊಂಡಿತ್ತು.ಹಾವು ಗಾಯಗೊಂಡ ವಿಚಾರ ತಿಳಿದ ಉತ್ತುವಳ್ಳಿ ಗ್ರಾಮದ ಸ್ನೇಕ್ ಸುರೇಶ್ ಕೇರೆ ಹಾವನ್ನು ಚಾಮರಾಜನಗರದ ಜಿಲ್ಲಾ ಪಶುಪಾಲನ ಪಾಲಿ ಕ್ಲಿನಿಕ್‌ಗೆ ತೆಗೆದುಕೊಂಡು ಹೋದರು. ಪಶುಪಾಲನ ಸಹಾಯಕ ನಿರ್ದೇಶಕ ಡಾ. ಎಂ.ಮೂರ್ತಿ ಮತ್ತು ಸಿಬ್ಬಂದಿ ಚಿಕಿತ್ಸೆ ನೀಡಿದ ನಂತರ ಚೇತರಿಸಿಕೊಂಡಿದ್ದು ಕೇರೆಹಾವನ್ನು ಹತ್ತಿರದ ಕಾಡಿಗೆ ಬಿಟ್ಟು ಬರಲಾಗಿದೆ.

{ಎಚ್.ಡಿ.ಕುಮಾರಸ್ವಾಮಿ} ಕೇಂದ್ರ ಸಚಿವ

ಹಾಸನ ಜಿಲ್ಲೆಯಲ್ಲಿ ಎಷ್ಟು ಜನ ಕಾಡಾನೆ ತುಳಿತದಿಂದ ಸತ್ತಿದ್ದಾರೆ. ರಾಜ್ಯ ಸರಕಾರ ಇದನ್ನು ಗಂಭೀರವಾಗಿ ತೆಗೆದುಕೊಂಡಿದೆಯಾ? ಬೆಂಗಳೂರು ಮೆಟ್ರೋ ದರ ಏರಿಕೆಯಿಂದ ಜನಸಾಮಾನ್ಯರ ಮೇಲೆ ಹೊರೆಯಾಗಿದೆ. ಪ್ರತಿದಿನ ಐದು ಗ್ಯಾರಂಟಿಗಳಿಗೆ ಹಣ ತುಂಬಿಸಲು ಹೆಣಗಾಡುತ್ತಿದ್ದಾರೆ. ರಾಜ್ಯದಲ್ಲಿ ಸರಕಾರ ಇದೆ ಎಂಬುದನ್ನೇ ಜನ ಮರೆಯುತ್ತಿದ್ದಾರೆ.



'ಶಿಕ್ಷಣ ಶ್ರೀನಿಧಿ' ಅಭಿನಂದನಾ ಗ್ರಂಥ ಲೋಕಾರ್ಪಣೆ | ಗೃಹ ಸಚಿವ ಡಾ.ಜಿ.ಪರಮೇಶ್ವರ್

ತುಮಕೂರು ಕೀರ್ತಿ ಬೆಳಗಿದ ಸಂಸ್ಥೆ

ತುಮಕೂರು: ವಿದ್ಯಾವಾಹಿನಿ ತುಮಕೂರಿನ ಕೀರ್ತಿಯನ್ನು ರಾಷ್ಟ್ರ ಮಟ್ಟಕ್ಕೆ ಕೊಂಡೊಯ್ದಿದೆ ಎಂದು ಗೃಹ ಸಚಿವ ಡಾ.ಜಿ. ಪರಮೇಶ್ವರ್ ಶ್ಲಾಘಿಸಿದರು.

ವಿದ್ಯಾವಾಹಿನಿ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಕೆ.ಬಿ.ಜಯಣ್ಣ ಅವರ ಅಭಿನಂದನಾ ಸಮಾರಂಭದಲ್ಲಿ 'ಶಿಕ್ಷಣ ಶ್ರೀನಿಧಿ' ಎಂಬ ಅಭಿನಂದನಾ ಗ್ರಂಥವನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದರು.

ಎಪ್ಪತ್ತು ವರ್ಷಗಳ ಹಿಂದಿನ ಸ್ಥಿತಿಗೆ ಹೋಲಿಸಿಕೊಂಡರೆ ನಮ್ಮ ದೇಶ ಆರ್ಥಿಕವಾಗಿ ಅಭಿವೃದ್ಧಿಯಾಗುತ್ತಿದೆ. ಪ್ರಪಂಚದ ನಾಲ್ಕನೇ ದೊಡ್ಡಶಕ್ತಿಯಾಗಿದೆ. ಇದರ ಹಿಂದೆ ಶಿಕ್ಷಣಕ್ಷೇತ್ರದ ಕೊಡುಗೆ ಅಪಾರ. ವಿದ್ಯೆಯೆಂಬ ಆಸ್ತಿ ಎಲ್ಲ ಜನತೆಯಲ್ಲಿ ಇರುವಂತೆ ಮಾಡಿದ್ದರಿಂದ ಈ ಸುಧಾರಣೆ ಸಾಧ್ಯವಾಗಿದೆ. ಕಲ್ಪತರು ನಗರ ಶೈಕ್ಷಣಿಕ ನಗರವಾಗುವಲ್ಲಿ ಶಿಕ್ಷಣಸಂಸ್ಥೆಗಳನ್ನು ಕಟ್ಟಿಬೆಳೆಸಿದ ಮಹನೀಯರ ಕನಸಿದೆ ಎಂದರು.

ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಮಾತನಾಡಿ, ಕೆ.ಬಿ.ಜಯಣ್ಣ ಗ್ರಾಮೀಣ ಪ್ರದೇಶದ ಮಕ್ಕಳಿಗೆ ಉನ್ನತ ಶಿಕ್ಷಣ ಒದಗಿಸುವಲ್ಲಿ ಸಾಕಷ್ಟು ಶ್ರಮ ವಹಿಸಿದ್ದಾರೆ. ಅವರ ನಡೆ ನುಡಿ ಎಲ್ಲರಿಗೂ ಆದರ್ಶವಾಗಲಿ ಎಂದರು.

ಶಿಕ್ಷಣ ಶ್ರೀನಿಧಿ ಅಭಿನಂದನಾ ಗ್ರಂಥವನ್ನು ಶ್ರೀ ಸಿದ್ದಲಿಂಗ ಸ್ವಾಮೀಜಿ ಲೋಕಾರ್ಪಣೆಗೊಳಿಸಿದರು.

ಶ್ರೀ ಸಿದ್ದಲಿಂಗ ಸ್ವಾಮೀಜಿ ಮಾತನಾಡಿ, ಜಯಣ್ಣ ಶಿಕ್ಷಣ ಕ್ಷೇತ್ರದಲ್ಲಿ ಮಾತ್ರವಲ್ಲದೇ ಸಮಾಜ ಸೇವಕರಾಗಿಯೂ ಗುರುತಿಸಿಕೊಂಡವರು. ವಿದ್ಯಾವಾಹಿನಿ ಸಮೂಹ ಸಂಸ್ಥೆಗಳು ಎಲ್ಲಾ ರೀತಿಯಿಂದ ವಿದ್ಯಾರ್ಥಿಗಳಿಗೆ ಅತ್ಯುತ್ತಮ ಅವಕಾಶಗಳನ್ನು ಕಲ್ಪಿಸಿಕೊಡುತ್ತಿವೆ. ಈ ಸೇವೆಯನ್ನು ಸಮರ್ಪಕವಾಗಿ ಮುಂದುವರಿಸಿಕೊಂಡು ಹೋಗುವಲ್ಲಿ ಪ್ರದೀಪ್ ಕುಮಾರ್ ಶ್ರಮಿಸುತ್ತಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಸಚಿವ ರಾಜಣ್ಣ, ಶಾಸಕರಾದ ಜ್ಯೋತಿಗಣೇಶ್, ಸುರೇಶ ಗೌಡ, ಸಿ. ಸೋಮಶೇಖರ್, ವಿದ್ಯಾ ವಾಹಿನಿ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಪ್ರದೀಪ್ ಕುಮಾರ್ ಮಾತನಾಡಿದರು. ಮಾಜಿ ವಿಪ ಸದಸ್ಯ ಹುಲಿನಾಯ್ಕರ್, ಸೀತಾರಾಂ, ಲಕ್ಷ್ಮಣದಾಸ್, ಕೆ.ಎಸ್. ಸಿದ್ದಲಿಂಗಪ್ಪ, ಮಾಜಿ ಲೋಕಸಭಾ ಸದಸ್ಯ ಜಿ. ಎಸ್.ಬಸವರಾಜು, ವಿಪ ಸದಸ್ಯ ಚಿದಾನಂದ್, ಮಾಜಿ ವಿಪ ಸದಸ್ಯ ಎಚ್.ಎಸ್. ಶಿವಶಂಕರ್, ಟಿ.ಬಿ.ಶೇಖರ್, ಡಿ.ಎನ್. ಯೋಗೀಶ್ವರಪ್ಪ, ಪ್ರಿಯಾ ಪ್ರದೀಪ್ ಕುಮಾರ್, ಪ್ರಾಂಶುಪಾಲ ಸಿದ್ದೇಶ್ವರ ಸ್ವಾಮಿ ಉಪಸ್ಥಿತರಿದ್ದರು.

ಶುಲ್ಕ ಭರಿಸಿದ ದಲಿತ ಮುಖಂಡ

ಕೋಲಾರ: ಮಾದಿಗ ಮಾದಾರ ಸಂಘದ ರಾಜ್ಯಾಧ್ಯಕ್ಷ ಹಾರೋಹಳ್ಳಿ ರಮೇಶ್ ಅವರು ಸಂಕಷ್ಟದಲ್ಲಿದ್ದ ಶಾಲಾ ವಿದ್ಯಾರ್ಥಿಯ 25 ಸಾವಿರ ರೂ. ಶುಲ್ಕ ಭರಿಸುವ ಮೂಲಕ ನೆರವಾಗಿದ್ದಾರೆ.

ನಗರದ ಕೆಎಚ್‌ಬಿ ಕಾಲೋನಿಯ ಶಾಹಿದ್ ನಗರದ ವಿಧವೆ ಉಸ್ಮಾ ಕೌಸರ್‌ಗೆ ಐವರು ಮಕ್ಕಳಿದ್ದು ಇವರ ನಾಲ್ವರು ಮಕ್ಕಳು ಗೋಕುಲ್ ಶಾಲೆಯಲ್ಲಿ ಅಭ್ಯಾಸ ಮಾಡುತ್ತಿದ್ದು ಇದರಲ್ಲಿ ಒಬ್ಬ ಮಗನ ಶಾಲಾ ಶುಲ್ಕ ಪಾವತಿ ಮಾಡುವಲ್ಲಿ ಕೌಸರ್ ವಿಫಲರಾದ ಕಾರಣ ತರಗತಿ ಬಿಡಿಸಿ ಕೆಲಸಕ್ಕೆ ಸೇರಿಸಲಿದ್ದರು. ದಲಿತ ಮುಖಂಡ ರಮೇಶ್ ಮಾಹಿತಿ ಪಡೆದು ಶಾಲೆಗೆ ತೆರಳಿ 25 ಸಾವಿರ ರೂ. ಶುಲ್ಕ ಪಾವತಿಸಿ ಮಾನವೀಯತೆ ಮೆರೆದಿದ್ದಾರೆ. ಕ್ಷಯ ಪೀಡಿತರಾಗಿದ್ದ ಕೌಸರ್ ಪತಿ ಕೆಲ ವರ್ಷಗಳ ಹಿಂದೆ ನಿಧನರಾಗಿದ್ದಾರೆ.

ಶಾಲಾ ವಿದ್ಯಾರ್ಥಿಯ 25 ಸಾವಿರ ರೂ. ಶುಲ್ಕ ಭರಿಸಿದ ಹಾರೋಹಳ್ಳಿ ರಮೇಶ್.

ಸರ್ವ ಜಾತಿಗೆ ಸೇವಾಲಾಲ್ ಆದರ್ಶ ಅನ್ವಯ

ಶಿರಾ: ಶೋಷಿತ ವರ್ಗಗಳಿಗೆ ನ್ಯಾಯ ಒದಗಿಸಲು ಶ್ರಮಿಸಿದ ಸಮಾಜ ಸುಧಾರಕ ಸಂತ ಸೇವಾಲಾಲ್ ಅವರ ಆದರ್ಶಗಳು ಕೇವಲ ಒಂದು ಜನಾಂಗಕ್ಕೆ ಸೀಮಿತವಾಗಿಲ್ಲ, ಎಲ್ಲಾ ಜಾತಿ ಹಾಗೂ ಧರ್ಮಗಳಿಗೆ ಸರ್ವಕಾಲದಲ್ಲೂ ಅನ್ವಯಿಸುತ್ತದೆ ಎಂದು ಶಿಶು ಅಭಿವೃದ್ಧಿ ಯೋಜನಾಧಿಕಾರಿ ರಾಜ ನಾಯಕ್ ಅಭಿಪ್ರಾಯ ವ್ಯಕ್ತಪಡಿಸಿದರು.

ತಾಲೂಕ್ ಆಡಳಿತ ಮತ್ತು ಲಂಬಾಣಿ ಶ್ರೇಯೋಭಿವೃದ್ಧಿ ಸಂಘ ದ ವತಿಯಿಂದ ನಡೆದ ನಡೆದ ಸೇವಾಲಾಲ್ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ಸಂತ ಸೇವಾಲಾಲ್ ಅವರು ಶಿಕ್ಷಣ, ಧಾರ್ಮಿಕತೆ ಹಾಗೂ ಸ್ವಾವಲಂಬನೆಗೆ ಪ್ರೇರೇಪಿಸಿ ದೈವಿಕ ಶಕ್ತಿಯೊಂದಿಗೆ ಜನರನ್ನು ಸತ್ ಮಾರ್ಗದಲ್ಲಿ ನಡೆಯುವಂತೆ ಮಾಡಿದ್ದರು. ಬಂಜಾರಾ ಪರಂಪರೆಯ ಸಂರಕ್ಷಣೆ ಜಗತ್ತಿಗೆ ಪರಿಚಯಿಸುವಲ್ಲಿ ಅವರ ಪಾತ್ರ ಪ್ರಮುಖವಾಗಿದೆ ಎಂದು ಹೇಳಿದರು.

ಸಂಘದ ಅಧ್ಯಕ್ಷ ಕೆ. ಎನ್. ಶೇಷ ನಾಯಕ್ ಮಾತನಾಡಿ, ಲಂಬಾಣಿ ತಾಂಡದಲ್ಲಿ ಯುವಕರು ಕುಡಿತಕ್ಕೆ ಒಳಗಾಗಿರುವುದರಿಂದ ತಮ್ಮ ಆರೋಗ್ಯ ಹಾಗೂ ಸಮಾಜದ ಸ್ವಾಸ್ಥ್ಯವನ್ನು ಹಾಳು ಮಾಡುತ್ತಿದ್ದಾರೆ. ಕುಡಿತ ಮೊದಲು ನಿಲ್ಲಿಸಿ ಶಿಕ್ಷಣದ ಕಡೆ ಒತ್ತು ನೀಡಿ ಎಂದರು.

ಈ ಸಂದರ್ಭದಲ್ಲಿ ಗ್ರೇಡ್-2 ತಹಸೀಲ್ದಾರ್ ಮೋಹನ್, ಸಹಾಯಕ ಕೃಷಿ ನಿರ್ದೇಶಕ ನಾಗರಾಜು, ಸಹಾಯಕ ಭೂಮಾಪನ ಅಧಿಕಾರಿ ಮಂಜುನಾಥ್, ತೋಟಗಾರಿಕೆ ಇಲಾಖೆಯ ಶಿವಕುಮಾರ್ ಅಬಕಾರಿ ನಿರೀಕ್ಷಕ ಅರುಣ್ ಕುಮಾರ್, ತಾಲೂಕು ಪಂಚಾಯಿತಿ ಯೋಜನಾಧಿಕಾರಿ ರಂಗನಾಥ್,ಬಗರ್ ಹುಕುಂ ಕಮಿಟಿ ಸದಸ್ಯ ತಿಪ್ಪೇಸ್ವಾಮಿ, ಲಂಬಾಣಿ ಸಮಾಜದ ಮುಖಂಡರಾದ ಚಂಪಕಮಾಲಾ, ಗ್ರಾಮ ಪಂಚಾಯಿತಿ ಅಧ್ಯಕ್ಷ ರಾಜಮ್ಮ ಚಂದ್ರನಾಯಕ್ ,ನಗರ ಯೂತ್ ಕಾಂಗ್ರೆಸ್ ಅಧ್ಯಕ್ಷ ಅಂಜನ್ ಕುಮಾರ್ ಇದ್ದರು.

ಬೂದಿಹಾಳ್ ಸಹಕಾರ ಸಂಘ ಕಾಂಗ್ರೆಸ್ ತೆಕ್ಕೆಗೆ

ನೆಲಮಂಗಲ: ಘಟಾನುಘಟಿಗಳ ಕದನ ಕುತೂಹಲಕ್ಕೆ ಕಾರಣವಾಗಿದ್ದ ಬೂದಿಹಾಳ್ ವಿಎಸ್‌ಎಸ್‌ಎನ್ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿಗರು 3ಸ್ಥಾನ ಪಡೆದರೆ ಕಾಂಗ್ರೆಸ್ ಬೆಂಬಲಿಗರು 9 ಸ್ಥಾನ ಪಡೆಯುವ ಮೂಲಕ ಭರ್ಜರಿ ಗೆಲುವು ಸಾಧಿಸಿದ್ದಾರೆ.

ಬೂದಿಹಾಳ್ ವಿಎಸ್‌ಎಸ್‌ಎನ್ ಆಡಳಿತಮಂಡಳಿಯ 12 ನಿರ್ದೇಶಕ ಸ್ಥಾನದ ಚುನಾವಣೆಯಲ್ಲಿ ಸಾಮಾನ್ಯ 5 ಸ್ಥಾನಕ್ಕೆ 11 ಅಭ್ಯರ್ಥಿಗಳು, ಮಹಿಳಾ ಮೀಸಲು 2ಸ್ಥಾನಕ್ಕೆ 4 ಅಭ್ಯರ್ಥಿಗಳು, ಎಸ್ಸಿಎಸ್ಟಿ 2ಸ್ಥಾನಕ್ಕೆ 4 ಮಂದಿ, ಹಿಂದುಳಿದ ವರ್ಗ ಎ ಮತ್ತು ಬಿ 2 ಸ್ಥಾನಕ್ಕೆ 4 ಅಭ್ಯರ್ಥಿಗಳು, ಸಾಲಗಾರರಲ್ಲದ 1 ಕ್ಷೇತ್ರಕ್ಕೆ 2 ಸೇರಿದಂತೆ ಒಟ್ಟಾರೆ 25 ಅಭ್ಯರ್ಥಿಗಳು ಸ್ಪರ್ಧೆ ಮಾಡಿದ್ದರು. ಭಾರಿ ಪೈಪೋಟಿ ನಡೆದು 12 ಅಭ್ಯರ್ಥಿಗಳು ಜಯಗಳಿಸಿದ್ದಾರೆ.

ಭರ್ಜರಿ ಜಯ: ಬೂದಿಹಾಳ್ ವಿಎಸ್‌ಎಸ್‌ಎನ್ ಚುನಾವಣೆಯಲ್ಲಿ ಸಾಮಾನ್ಯ ಸ್ಥಾನದಿಂದ ಗಿರೀಶ್.ಆರ್, ಮಧುಕುಮಾರ್, ಚಂದ್ರಶೇಖರ್‌ಗೌಡ, ನಾಗರಾಜು, ತಿಮ್ಮರಾಯಪ್ಪ, ಬಿಸಿಎಂ ಪ್ರವರ್ಗ ಎ ನಲ್ಲಿ ವೆಂಕಟೇಶ್, ಪ್ರವರ್ಗ ಬಿಯಿಂದ ಕೃಷ್ಣಪ, ಎಸ್ಸಿಯಿಂದ ರಾಮಯ್ಯ , ಎಸ್ಟಿಯಿಂದ ನರಸಿಂಹರಾಜು(246), ಸಾಲಗಾರರಲ್ಲದ ಕ್ಷೇತ ದಿಂಡ ನನಾ(9), ಮಹಿಳಾ ಮೀಸಲು ಸ್ಥಾನದಿಂದ ಭಾಗ್ಯಮೃತಮೇಶ್ (269), ಲಕ್ಷ್ಮಮ್ಮ ತಿಮ್ಮೇಗೌಡ(2 481, ಹೆಚ್ಚಿನ ಮತಗಳನ್ನು ಪಡೆದುಕೊಳ್ಳುವ ಮೂಲಕ ಭರ್ಜರಿ ಜಯಗಳಿಸಿದರು.

ಬೂದಿಹಾಳ್ ಗ್ರಾಪಂ ಮಾಜಿ ಅಧ್ಯಕ್ಷ ಎಂ.ಕೆ ನಾಗರಾಜು ಮಾತನಾಡಿ, ಬೂದಿಹಾಳ್ ವಿಎಸ್‌ಎಸ್‌ಎನ್‌ನಲ್ಲಿ ಕಾಂಗ್ರೆಸ್ ಬೆಂಬಲಿತ ನಿರ್ದೇಶಕರನ್ನು ರೈತರು ಭರ್ಜರಿ ಜಯಗಳಿಸಿದ್ದಾರೆ. ಶಾಸಕರ ಅಭಿವೃದ್ಧಿ ಕೆಲಸಗಳು ಹಾಗೂ ಮುಖಂಡರ ಶ್ರಮದಿಂದ ತಾಲೂಕಿನ ರೈತರು ಕಾಂಗ್ರೆಸ್ ಪರವಾಗಿ ನಿಂತಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಟಿ.ನಾಗರಾಜು, ವಕೀಲ ಮೋಹನ್‌ಕುಮಾರ್, ವಿಎಸ್‌ಎಸ್‌ಎನ್ ಮಾಜಿ ಅಧ್ಯಕ್ಷ ಲಕ್ಷ್ಮಿ ವೆಂಕಟೇಶ್, ಜಿಲ್ಲಾ ಕೆಡಿಪಿ ಸದಸ್ಯ ನಾರಾಯಣಗೌಡ, ಮುಖಂಡರಾದ ಬಿ.ಆನಂದ್, ಮಂಜುನಾಥ್ ಗೌಡ, ಮೋಹನ್ ಕುಮಾರ್, ಶೈಲೇಂದ್ರ, ಗಂಗರಾಜು, ಬೈರೇಗೌಡ, ಪುರುಷೋತ್ತಮ್ ಮತ್ತಿತರರಿದ್ದರು.

ಲಂಬಾಣಿ ಸಮುದಾಯ ಮುಖ್ಯವಾಹಿನಿಗೆ ಬರಲಿ

ಚಿಕ್ಕಬಳ್ಳಾಪುರ: ಲಂಬಾಣಿ ಸಮುದಾಯ ಸಾಂಸ್ಕೃತಿಕವಾದ ಶ್ರೀಮಂತಿಕೆ ಉಳಿಸಿ ಕೊಂಡಿರುವ ಬುಡಕಟ್ಟು ಸಮುದಾಯ ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಡಾ. ಎನ್. ಭಾಸ್ಕರ್ ತಿಳಿಸಿದರು.

ನಗರದ ಅಂಬೇಡ್ಕರ್ ಭವನದಲ್ಲಿ ಸೋಮವಾರ ಜಿಲ್ಲಾಡಳಿತದಿಂದ ನಡೆದ ಸಂತ ಸೇವಾಲಾಲ್ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಲಂಬಾಣಿ ಸಮುದಾಯದ ಸಾಧಕರಿಗೆ ಜಿಲ್ಲಾಡಳಿತದಿಂದ ಸನ್ಮಾನ ಮಾಡಲಾಯಿತು.

ನಾಗರೀಕ ಸಮಾಜದ ಸೋಂಕಿಲ್ಲದೆ ಸಾವಿರಾರು ವರ್ಷಗಳಿಂದ ಅರಣ್ಯ ವಾಸಿಗಳಾಗಿ ಜೀವನ ಸಾಗಿಸುತ್ತಿದ್ದ ಲಂಬಾಣಿ ಸಮುದಾಯವನ್ನು ಸಮಾಜದ ಮುಖ್ಯವಾಹಿನಿಗೆ ತರಲು ಸೇವಾಲಾಲ್ ಶ್ರಮಿಸಿದರು ಎಂದರು.

ಜಾನಪದ ಲೋಕದ ಕ್ಯುರೇಟರ್ ಡಾ. ಯು.ಎಂ. ರವಿ ಮಾತನಾಡಿ, ಸರಕಾರ ಪ್ರತಿ ವರ್ಷ ಫೆಬ್ರವರಿ 15ರಂದು ಸಂತ ಸೇವಾಲಾಲ್ ಜಯಂತಿ ಆಚರಣೆ ಮಾಡುತ್ತಿದೆ. ಸಾವಿರಾರು ವರ್ಷಗಳ ಕಾಲ ರಾಜರ ಸಂಸ್ಥಾನದಲ್ಲಿದ್ದ ಲಂಬಾಣಿ ಸಮುದಾಯ ಕಾಡು ಹಾದಿಯಲ್ಲಿ ವ್ಯಾಪಾರ ಮಾಡುತ್ತಾ ಕಾಯಕವನ್ನು ಮುನ್ನಡೆಸಿದರು. ಕಸೂತಿ ಕಲೆ, ಬೇಟೆಯ ಕಲೆ ಹೀಗೆ ನೂರಾರು ಪ್ರಥಮಗಳನ್ನು ಸಾಧಿಸಿದ ಶ್ರಮಿಕರು ಆಗಿದ್ದಾರೆ. ಲಂಬಾಣಿಕರ ಆರಾಧ್ಯ ದೈವ ಬುಡಕಟ್ಟು ದೈವ, ಐತಿಹಾಸಿಕ ವೀರಸೇನಾನಿ ಎಂದರು.

ಲಂಬಾಣಿ ಸಮುದಾಯದ ಸಾಧಕರಿಗೆ ಜಿಲ್ಲಾಡಳಿತದಿಂದ ಸನ್ಮಾನ ಮಾಡಲಾಯಿತು. ಇದಕ್ಕೂ ಮುನ್ನ ಸ್ತಬ್ದ ಚಿತ್ರಗಳೊಂದಿಗೆ ಬೃಹತ್ ಮೆರವಣಿಗೆ ಸೇವಾಲಾಲರ ಭಜನೆಯೊಂದಿಗೆ ವೇದಿಕೆ ಕಾರ್ಯಕ್ರಮದವರೆಗೂ ಸಾಗಿ ಬಂತು.

ಈ ಸಂದರ್ಭದಲ್ಲಿ ನಗರಸಭೆ ಅಧ್ಯಕ್ಷ ಎ. ಗಜೇಂದ್ರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ರವಿ ಕುಮಾರ್, ಸಮುದಾಯದ ಮುಖಂಡರಾದ ನರಸಿಂಹ ನಾಯಕ್, ಉಷಾ ಕಿರಣ್, ಡಾ ಬಾಲಪ್ಪ, ಗೋವಿಂದ್, ಪ್ರಾಣೇಶ್ವರೀಬಾಯಿ, ಶಂಕರ್ ನಾಯಕ್, ಕೃಷ್ಣನಾಯಕ್, ಗೋಪಿ ಇದ್ದರು.

6 ಕೋಟಿ ವೆಚ್ಚದ ಕಾಮಗಾರಿಗೆ ಚಾಲನೆ

ಚಿಂತಾಮಣಿ: ತಾಲೂಕಿನಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಚಾಲನೆ ನೀಡಿದರು. ಶೆಟ್ಟಿಹಳ್ಳಿ ಗ್ರಾಮದಲ್ಲಿ ಶುದ್ಧ ಕುಡಿಯುವ ನೀರಿನ ಘಟಕ, ಅಣ್ಣೇಹಳ್ಳಿ ಸಿಸಿ ರಸ್ತೆ ಅಭಿವೃದ್ಧಿ, ನಿಮ್ಮಕಾಯಲಹಳ್ಳಿ,ಕೊತ್ತಪಲ್ಲಿ ಎಲ್ಲಿ ಶುದ್ಧ ನೀರಿನ ಕುಡಿಯುವ ಘಟಕ ಹಾಗೂ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಮತ್ತು ಮುದ್ದಲಹಳ್ಳಿ ಬಲಿ ನೀರಿನ ಚೆಕ್ ಡ್ಯಾಮ್ ,ನೀಲಪಲ್ಲಿ ನೀರಿನ ಘಟಕ ಹಾಗೂ ಬೈಯನಹಳ್ಳಿ, ಕಾಪಲ್ಲಿ ಗ್ರಾಮದಲ್ಲಿ ರಸ್ತೆ ಕಾಮಗಾರಿಗಳಿಗೆ ಒಟ್ಟು ಸುಮಾರು 6 ಕೋಟಿ ವೆಚ್ಚದ ಕಾಮಗಾರಿಗಳಿಗೆ ಗುದ್ದಲಿ ಪೂಜೆ ನೆರವೇರಿಸಿದರು.

ಗ್ರಾಮಗಳಿಗೆ ಭೇಟಿ ನೀಡಿದ ವೇಳೆ ಗ್ರಾಮಸ್ಥರು ಹಲವು ಸಮಸ್ಯೆಗಳ ಬಗ್ಗೆ ದೂರು ನೀಡಿದ್ದು ಪರಿಹರಿಸಬೇಕಾದ ಅಧಿಕಾರಿಗಳು ಯಾರೂ ಇಲ್ಲದ್ದರಿಂದ ಗರಂ ಆದ ಸಚಿವರು ಜಿಲ್ಲಾಧಿಕಾರಿಗಳಿಗೆ ಫೋನ್ ಮಾಡಿ ತರಾಟೆಗೆ ತಗೆದುಕೊಂಡರು.

ಈ ಸಂದರ್ಭದಲ್ಲಿ ಮುರುಗುಮಲ್ಲ ಗ್ರಾಪಂ ಅಧ್ಯಕ್ಷ ಹಾಜಿ ಅನ್ಸರ್ ಖಾನ್, ಪೆದ್ದೂರು ಗ್ರಾಪಂ ಅಧ್ಯಕ್ಷರಾದ ವೀರಪರೆಡ್ಡಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಲಕ್ಷ್ಮೀನಾರಾಯಣ ರೆಡ್ಡಿ, ಉಪಾಧ್ಯಕ್ಷರಾದ ಶಂಕರಪ್ಪ, ಜಿಪಂ ಮಾಜಿ ಸದಸ್ಯ ಶ್ರೀನಿವಾಸ್, ಗ್ರಾಪಂ ಸದಸ್ಯರಾದ ಅಮೀರ್ ಜಾನ್,ನಿಮ್ಮ ಕಾಯಲಹಳ್ಳಿ ಮೌಲಾ ಜಿ ರಾವ್, ಸೋಮಶೇಖರ ರೆಡ್ಡಿ,ಮಿಲ್ಟ್ರಿ ಶಿವಾಜಿ ರಾವ್,ಕಾರ್ತಿಕ್,ರವೀಂದ್ರ ಇದ್ದರು.


ತಾಲೂಕಿನಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಉನ್ನತ ಶಿಕ್ಷಣ ಸಚಿವ ಡಾ.ಎಂಸಿ ಸುಧಾಕರ್ ಚಾಲನೆ ನೀಡಿದರು.

ಸುಮ್ಮನೇ ಬಾಯಿಗೆ ಬಂದಂತೆ ಮಾತನಾಡಿಬೇಡಿ: ಸಚಿವ ರಾಜಣ್ಣ

ತುಮಕೂರು: ಬಾಯಿಗೆ ಬಂದಂತೆ ಮಾತನಾಡಿಬೇಡಿ. ಮೌಲ್ಯಯುತವಾಗಿ ಮಾತನಾಡಿ ಎಂದು ಶಾಸಕ ಸುರೇಶ್ ಗೌಡ ಹಾಗೂ ಮಾಜಿ ಶಾಸಕ ಗೌರಿಶಂಕರ್ ಅವರಿಗೆ ಸಚಿವ ರಾಜಣ್ಣ ಎಚ್ಚರಿಕೆ ನೀಡಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ತುಮಕೂರು ಗ್ರಾಮಾಂತರ ಕ್ಷೇತ್ರದ ಹಾಲಿ ಶಾಸಕರಾದ ಸುರೇಶಗೌಡ ಹಾಗೂ ಮಾಜಿ ಶಾಸಕರಾದ ಡಿ.ಸಿ.ಗೌರಿಶಂಕರ್ ಅವರು ವೈಯಕ್ತಿಕ ಆರೋಪಗಳಿಗಿಳಿರುವುದು ಶೋಭೆ ತರುವುದಿಲ್ಲ, ಸೇಡಿನ ರಾಜಕಾರಣ ಸಲ್ಲದು ಎಂದರು. ಶಾಸಕ ಬಿ. ಸುರೇಶಗೌಡ ಸಂಭಾವಿತ ಮನುಷ್ಯರಾಗಿರುವ ಪರಮೇಶ್ವರ್ ಅವರನ್ನು ತೇಜೋವಧೆ ಮಾಡುವುದು ಅವರ ಘನತೆಗೆ ತಕ್ಕದ್ದಲ್ಲ, ಪರಮೇಶ್ವರ್ ಅವರಿಗೆ ಕುಂದು ಬರುವ ರೀತಿ ಪದಬಳಕೆ ಸರಿಯಲ್ಲ ಎಂದರು. ಶಾಸಕರು ಪದ ಬಳಕೆ ಮಾಡುವಾಗ ಹದ್ದುಬಸ್ತಿನಲ್ಲಿರಬೇಕು, ಯಾರಿಗೂ ನೊವಾಗದ ರೀತಿ ಮಾತನಾಡಬೇಕು. ರಾಜಕಾರಣವೇ ಹೊಂದಾಣಿಕೆ ಮೇಲಿದ್ದು ಯಾರಿಗೆ ಬೇಕಾದರೂ ಸಹಾಯ ಮಾಡುತ್ತೇನೆ, ನಾನು ಸುರೇಶಗೌಡರ ಗೆಲುವಿಗೂ ಸಹಾಯ ಮಾಡಿದ್ದೇನೆ ಮತ್ತು ಗೌರಿಶಂಕರ ಗೆಲುವಿಗೂ ಸಹಾಯ ಮಾಡಿದ್ದೇನೆ ಎಂದರು.

ಮದುವೆಯ ವಂಚನೆ: ಆರೋಪಿಯ ಪರಾರಿ

ಚಾಮರಾಜನಗರ: ಮದುವೆಯಾಗುವುದಾಗಿ ಮಹಿಳೆಗೆ ನಂಬಿಸಿ ಲೈಂಗಿಕ ಕ್ರಿಯೆ ನಡೆಸಿ ಬಳಿಕ ಪರಾರಿಯಾಗಿರುವ ಘಟನೆ ಹನೂರು ತಾಲೂಕಿನ ಗ್ರಾಮವೊಂದರಲ್ಲಿ ನಡೆದಿದೆ. ಜಾನ್ ಪ್ರೆಸಿಲ್ಲಾ ಎಂಬಾಕೆ ವಂಚನೆಗೊಳಗಾಗಿದ್ದು ಕ್ಲಿಂಟನ್ ಎಂಬಾತ ವಂಚಿಸಿ ಪರಾರಿಯಾಗಿರುವವನು. ಮದುವೆಯಾಗಲು ನಾನಾ ಸಬೂಬು ಹೇಳಿದ್ದಕ್ಕೆ 2022ರಲ್ಲಿ ಕುಟುಂಬಸ್ಥರು ತಮಿಳುನಾಡು ಮೂಲದ ಸ್ಟೀಫನ್ ರಾಜ್ ಎಂಬಾತನೊಂದಿಗೆ ಪ್ರೆಸಿಲ್ಲಾ ಳನ್ನುಮದುವೆ ಮಾಡಿಕೊಟ್ಟಿದ್ದರು. ಆದಾದ ಬಳಿಕ, ಹಲವು ಫೋಟೋಗಳನ್ನು ಸ್ಟೀಫನ್ ರಾಜ್ ಗೆ ಕ್ಲಿಂಟನ್ ಕಳುಹಿಸಿ ವಿಚ್ಛೇದನಕ್ಕೆ ಕಾರಣನಾಗಿದ್ದ. ಬಳಿಕ, 10 ತಿಂಗಳು ಮದುವೆಯಾಗದೇ ಸಹ ಜೀವನ ನಡೆಸಿದ್ದರು. ಮದುವೆ ಮಾಡಿಕೊಳ್ಳುವಂತೆ ಪಟ್ಟು ಹಿಡಿದಿದ್ದಕ್ಕೆ ಈಗ ಕ್ಲಿಂಟನ್ ಪರಾರಿಯಾಗಿದ್ದಾನೆಂದು ಪ್ರೆಸಿಲ್ಲಾ ಕಣ್ಣೀರಿಟ್ಟಿದ್ದಾರೆ. ರಾಮಾಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ವಂಚನೆ ಘಟನೆ ನಡೆದಿದೆ.

ಕಾರು ಡಿಕ್ಕಿಯಾಗಿ ಪಾದಾಚಾರಿ ಸಾವು

ಚಾಮರಾಜನಗರ: ಕಾರೊಂದು ಡಿಕ್ಕಿ ಹೊಡೆದ ಪರಿಣಾಮ ಪಾದಾಚಾರಿ ಮೃತಪಟ್ಟಿರುವ ಘಟನೆ ರಾ.ಹೆದ್ದಾರಿ-766 ಹಾದು ಹೋಗಿರುವ ಗುಂಡ್ಲುಪೇಟೆ ತಾಲೂಕಿನ ಗರಗನಹಳ್ಳಿ ಗೇಟ್ ಬಳಿ ನಡೆದಿದೆ. ಅಗತಗೌಡನಹಳ್ಳಿ ಗ್ರಾಮದ ನಾಗಪ್ಪ(55) ಮೃತ ವ್ಯಕ್ತಿ. ಈತ ರಸ್ತೆ ಬದಿ ನಡೆದು ಬರುತಿದ್ದ ವೇಳೆ ಮೈಸೂರಿನಿಂದ ಬರುತ್ತಿದ್ದ ಕೇರಳ ಮೂಲದ ಕಾರು ಹಿಂಬದಿಯಿಂದ ಡಿಕ್ಕಿ ಹೊಡೆದಿದೆ. ಇದರಿಂದ ಪಾದಾಚಾರಿ ತಲೆಗೆ ತೀವ್ರ ಪೆಟ್ಟು ಬಿದ್ದಿದೆ. ಕಾರು ಚಾಲಕನೇ ಸ್ವತಃ ಗುಂಡ್ಲುಪೇಟೆ ಆಸ್ಪತ್ರೆಗೆ ಕರೆದು ತರುವಾಗ ಮಾರ್ಗ ಮಧ್ಯೆದಲ್ಲಿಯೇ ಪಾದಾಚಾರಿ ಮೃತಪಟ್ಟಿದ್ದಾನೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ಚಾಲಕ ಹಾಗೂ ಕಾರನ್ನು ಪೊಲೀಸರು ವಶಕ್ಕೆ ಪಡೆದು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಆಯ್ಕೆ

ಬಾಗೇಪಲ್ಲಿ: ಜಿಲ್ಲಾ ಯುವ ಕಾಂಗ್ರೆಸ್ ಸಮಿತಿಗೆ ಆನ್‌ಲೈನ್‌ನಲ್ಲಿ ನಡೆದಿದ್ದ ಚುನಾವಣೆಯಲ್ಲಿ ಬಾಗೇಪಲ್ಲಿ ತಾಲೂಕಿನ ಮಿಟ್ಟೇಮರಿ ಗ್ರಾಮದ ಶೇಖರ್ ಜಿಲ್ಲಾ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದಾರೆ. ತಮ್ಮನ್ನು ಆಯ್ಕೆ ಮಾಡಲು ಸಹಕಾರ ನೀಡಿದ ಶಾಸಕರಿಗೂ, ಜಿಲ್ಲಾ ಕಾಂಗ್ರೆಸ್ ಘಟಕಕ್ಕೂ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ ಎಂದು ಹೇಳಿದರು.ಈ ವೇಳೆ ಮಾತನಾಡಿದ ನರೇಂದ್ರ, ಮುಂದಿನ ದಿನಗಳಲ್ಲಿ ಸರಕಾರದ ಸೌಲಭ್ಯಗಳನ್ನು ಹಿಂದುಳಿದ ವರ್ಗಗಳ, ದಲಿತ, ಬಡವರಿಗೆ, ಕೃಷಿ ಹಾಗೂ ಕೂಲಿ ಕಾರ್ಮಿಕರಿಗೆ ದೊರೆಯುವಂತೆ ಮಾಡಿ ಕಾಂಗ್ರೆಸ್ ಪಕ್ಷವನ್ನು ಬೂತ್ ಮಟ್ಟದಿಂದ ಬಲಪಡಿಸುವಂತೆ ಹೇಳಿದರು.

ಗಾಂಜಾ ಕೇಸ್ ಒಬ್ಬನ ಬಂಧನ

ಚಾಮರಾಜನಗರ: ಹೆಚ್ಚಿನ ಬೆಲೆಗೆ ಮಾರಾಟ ಮಾಡಲು ಜಮೀನಿನಲ್ಲಿ ಅಕ್ರಮವಾಗಿ ಗಾಂಜಾ ಸಂಗ್ರಹಿಸಿಟ್ಟಿದ್ದ ಯುವಕನನ್ನು ಅಬಕಾರಿ ಪೊಲೀಸರು ಬಂಧಿಸಿರುವ ಘಟನೆ ಹನೂರು ತಾಲೂಕಿನ ಕುರಟ್ಟಿ ಹೊಸೂರಲ್ಲಿ ನಡೆದಿದೆ. ಕುರಟ್ಟಿ ಹೊಸೂರು ಗ್ರಾಮದ ಸಚಿನ್ ಬಂಧಿತ ಆರೋಪಿ. ಜಮೀನಿನಲ್ಲಿ ಗಾಂಜಾ ಮಾರಾಟ ಮಾಡುವ ಬಗ್ಗೆ ದೊರೆತ ಖಚಿತ ಮೇರೆಗೆ ಅಬಕಾರಿ ಪೊಲೀಸರು ದಾಳಿ ನಡೆಸಿದ್ದರು. ಈ ವೇಳೆ 1.58 ಲಕ್ಷ ಮೌಲ್ಯದ 1.14 ಕೆಜಿ ಗಾಂಜಾ ಹಾಗೂ ಬೈಕ್ ವಶಕ್ಕೆ ಪಡೆದಿದ್ದಾರೆ.

ಸಂದೇಶ ಸಾರಿದ ಸೇವಾಲಾಲ್

ಚಿಕ್ಕನಾಯಕನಹಳ್ಳಿ: ನಾವು ಪ್ರಕೃತಿಯನ್ನು ಪೋಷಿಸಿ ಆರಾಧಿಸಬೇಕು. ಸಕಲ ಜೀವರಾಶಿಗೂ ಒಳಿತನ್ನು ಬಯಸಬೇಕು ಎಂಬ ಮಾನವತೆಯ ಸಂದೇಶ ಸಾರಿದ ಸಂತ ಸೇವಾಲಾಲರು ಎಂದು ಸಂಶೋಧಕ ಡಾ.ಬಿ.ಜಿ.ಅಶೋಕ ನಾಯಕ್ ನುಡಿದರು.

ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿ ವತಿಯಿಂದ ಶನಿವಾರ ನಡೆದ ಸೇವಾಲಾಲ್ ಜಯಂತಿಯಲ್ಲಿ ಉಪನ್ಯಾಸ ನೀಡಿದರು.

ತಮ್ಮ ಸೇವಾ ಮನೋಭಾವದಿಂದ ಸಮುದಾಯದ ಜನರಿಗೆ ಸೇವಾಲಾಲರು ದಾರ್ಶನಿಕರಾಗಿ ಕಂಡರು. ಸೇವಾಲಾಲರ ಬಗ್ಗೆ ಇರುವ ಲಾವಣಿ ಹಾಡುಗಳಲ್ಲಿ ಇದನ್ನ ಕಾಣಬಹುದು. ಹಸಿದವರಿಗೆ ರೊಟ್ಟಿ ಕೊಡಿ, ಬಾಯಾರಿದವರಿಗೆ ನೀರುಣಿಸಿ, ಕ್ರೋಧಕ್ಕೆ ಕೊಳ್ಳಿ ಇಡಿ, ಸತ್ಯ ಬಂಜಾರ ಧರ್ಮವನ್ನು ಮುನ್ನಡೆಸಿ ಎಂಬ ಹಾಡು ಸೇವಾಲಾಲ ಬರೆದಿದ್ದಾರೆ. ಇದು ಬಡವರ ಬಗ್ಗೆ ಇರುವ ಕಾಳಜಿಯನ್ನು ತೋರುತ್ತದೆ. ಈ ಮನಸ್ಥಿತಿಯನ್ನು ಎಲ್ಲರೂ ಬೆಳಸಿಕೊಳ್ಳಬೇಕು ಎಂದರು.

ಬಂಜಾರ ಸಂಘದ ತಾ. ಅಧ್ಯಕ್ಷ ರಘುನಾಥ್ ಮಾತನಾಡಿ, ಬಂಜಾರ ಸಮುದಾಯದ ಉನ್ನತಿಗಾಗಿ ಸೇವಾಲಾಲರು ಹೋರಾಡಿದ್ದಾರೆ. ಸಮುದಾಯವನ್ನು ಒಗ್ಗೂಡಿಸಲು ಸಂತನಾಗಿ ಶ್ರಮಿಸಿದ್ದಾರೆ ಎಂದು ಸ್ಮರಿಸಿದರು.

ಮುದ್ದೇನಹಳ್ಳಿ ಗ್ರಾ.ಪಂ ಅಧ್ಯಕ್ಷ ಗಂಗಾಧರ ನಾಯಕ್, ತಹಸೀಲ್ದಾರ್ ಪುರಂದರ್, ಬಂಜಾರ ಸಮುದಾಯದ ಮುಖಂಡ ವೇದಮೂರ್ತಿ ನಾಯಕ್, ದೇವರಾಜು, ಮತ್ತಿತರರಿದ್ದರು.

RBI-LCE No - UBD.KAN.1614P
ಸ್ಥಾಪನೆ : 1998
ನವನಗರ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ.,
ಆಡಳಿತ ಕಛೇರಿ : ಅರ್ಕನಾಥ ರಸ್ತೆ, ಕೃಷ್ಣರಾಜನಗರ - 571 602,
ಮೈಸೂರು ಜಿಲ್ಲೆ. 08223-262312

ಶ್ರೀ ಎಸ್. ನಂಜಪ್ಪನವರು
ಮಾಜಿ ಸಚಿವರು
ಸಂಸ್ಥಾಪಕ ಅಧ್ಯಕ್ಷರು

ರೇವಣಿಗಳ ಮೇಲೆ ಆಕರ್ಷಕ ಬಡ್ಡಿ ದರ

ಅನುಕೂಲಕರ ವ್ಯವಹಾರಿಕ ವೇಳೆ
ರೇವಣಿಗಳ ಮೇಲೆ ಆಕರ್ಷಕ ಬಡ್ಡಿದರ
ಸರಳ ರೀತಿಯ ಸಾಲ ಸೌಲಭ್ಯ

ಅವಧಿ	ಇತರರಿಗೆ	ಹಿರಿಯ ನಾಗರೀಕರಿಗೆ
181-364 ದಿನಗಳು	8.00%	8.50%
1 ವರ್ಷಕ್ಕೆ	8.50%	9.00%
2 ವರ್ಷ & ಮೇಲ್ಪಟ್ಟು	9.00%	9.50%

UNFIXED DEPOSIT FACILITIES AVAILABLE AND
NO PRE MATURE PENALTY FOR UNFIXED DEPOSIT
ನವಜ್ಯೋತಿ ಠೇವಣಿ 8 ವರ್ಷಕ್ಕೆ ದ್ವಿಗುಣ
ಸಮಯ - ಬೆಳಗ್ಗೆ 9:00 ರಿಂದ 1:00 ಸಂಜೆ - 4:00 ರಿಂದ 7:00 ರವರೆಗೆ
2ನೇ ಶನಿವಾರ ಮತ್ತು 4ನೇ ಶನಿವಾರ ನಮ್ಮ ಎಲ್ಲ ಶಾಖೆಗಳು ತೆರೆದಿರುತ್ತವೆ. ಭಾನುವಾರ ಕೆ.ಆರ್.ನಗರ ಶಾಖೆ ತೆರೆದಿರುತ್ತದೆ.
ಬ್ಯಾಂಕಿನ ಒಟ್ಟು ಠೇವಣಿಗಳು ₹423 ಕೋಟಿ, ಒಟ್ಟು ಸಾಲಗಳು ₹325 ಕೋಟಿ ಹಾಗೂ ಒಟ್ಟು ವಹಿವಾಟು ₹748 ಕೋಟಿ
ಬ್ಯಾಂಕಿನ ಒಟ್ಟು ಆಸ್ತಿಗಳು ₹501 ಕೋಟಿ

ಇಬ್ಬರು ಮಹಿಳೆಯರು ನೀರುಪಾಲು

ಮಂಡ್ಯ: ಕಾವೇರಿ ನದಿಯಲ್ಲಿ ಸ್ನಾನಮಾಡಲು ಹೋಗಿ ಇಬ್ಬರು ಮಹಿಳೆಯರ ಸಾವನ್ನಪ್ಪಿದ ಘಟನೆ ಹಲಗೂರಿನ ಮುತ್ತತ್ತಿಯಲ್ಲಿ ಶನಿವಾರ ನಡೆದಿದೆ. ಕನಕಪುರ ತಾಲೂಕಿನ ಗಾಣಾಳು ಗ್ರಾಮದ ವಡಿವೇಲು ಅವರ ಪುತ್ರಿ ನದೀಯಾ (19), ಮುರಳಿ ಪತ್ನಿ ಶೋಭಾ (23) ಮೃತಪಟ್ಟವರು.. ಮಳವಳ್ಳಿ ತಾಲೂಕಿನ ಹಲಗೂರಿನ ಮುತ್ತತ್ತಿಯ ಶ್ರೀ ಆಂಜನೇಯ ಸ್ವಾಮಿ ದೇವರ ಕಾರ್ಯಕ್ಕೆಂದು ಗಾಣಾಳು ಗ್ರಾಮದ 50ಕ್ಕೂ ಹೆಚ್ಚು ಮಂದಿ ಮುತ್ತತ್ತಿಗೆ ತೆರಳಿದ್ದರು. ಕಾವೇರಿ ನದಿಯಲ್ಲಿ ಸ್ನಾನಮಾಡಲು ಹೋದಾಗ ನದೀಯಾ ಮತ್ತು ಶೋಭಾ ಜಾರಿ ನೀರಿಗೆ ಬಿದ್ದು ಮೃತಪಟ್ಟಿದ್ದಾರೆ ಎಂದು ತಿಳಿದು ಬಂದಿದೆ. ಹಲಗೂರು ಪೊಲೀಸರು ಸ್ಥಳಕ್ಕೆ ಧಾವಿಸಿ, ಇಬ್ಬರ ಶವಗಳನ್ನು ಹೊರಕ್ಕೆ ತೆಗೆದು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ರವಾನಿಸಿದ್ದಾರೆ.

ಆಟೋ ಚಾಲಕನ ದುಷ್ಕೃತ್ಯ ಗೋವಾ ಮಾಜಿ ಶಾಸಕ ಸಾವು

ಬೆಳಗಾವಿಯಲ್ಲಿ ಆಟೋಗೆ ಕಾರು ಡಿಕ್ಕಿ: ಚಾಲಕನಿಂದ ಮಾರಣಾಂತಿಕ ಹಲ್ಲೆ | ಸ್ಥಳದಲ್ಲೇ ಕುಸಿದುಬಿದ್ದು ಮೃತಪಟ್ಟ ಲಾವೋ ಮಾಮಲೇದಾರ್ | ಪೊಲೀಸರಿಂದ ಆರೋಪಿ ಸೆರೆ

ಬೆಳಗಾವಿ: ಆಟೋರಿಕ್ಷಾಗೆ ಕಾರು ಡಿಕ್ಕಿಯಾದ ಕ್ಷುಲ್ಲಕ ಕಾರಣಕ್ಕೆ ಮಾರಣಾಂತಿಕ ಹಲ್ಲೆ ನಡೆಸಿದ ಪರಿಣಾಮ ಗೋವಾದ ಮಾಜಿ ಶಾಸಕ ಲಾವೋ ಮಾಮಲೇದಾರ್ (68) ಮೃತಪಟ್ಟ ಘಟನೆ ಬೆಳಗಾವಿಯಲ್ಲಿ ಶನಿವಾರ ನಡೆದಿದೆ.

ಹಲ್ಲೆ ಮಾಡಿರುವ ಆರೋಪಿ

ಬೆಳಗ್ಗೆ ಖಡೇ ಬಜಾರ್, ಮಾರ್ಕೆಟ್ ರಸ್ತೆಯಲ್ಲಿ ಮಾಮಲೇದಾರ್ ಅವರ ಕಾರು ಆಟೋಗೆ ಡಿಕ್ಕಿಯಾಗಿದೆ. ಇದರಿಂದ ಆಕ್ರೋಶಗೊಂಡ ಆಟೋ ಚಾಲಕ ಮುಜಾಹಿದಿಲ್ ಶ್ರೀನಿವಾಸ ಲಾಡ್ಜ್ ಬಳಿ ಲಾವೋ ಮಾಮಲೇದಾರ್ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದ್ದಾನೆ. ತೀವ್ರವಾಗಿ ಅಸ್ವಸ್ಥಗೊಂಡು ಕುಸಿದುಬಿದ್ದ ಮಾಜಿ ಶಾಸಕರು ಬೆಳಗಾವಿ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾರೆ.

ವೈಯಕ್ತಿಕ ಕೆಲಸಕ್ಕೆ ಆಗಮನ: 2012 ರಿಂದ 17 ರ ವರೆಗೆ ಗೋವಾದ ಪೋಂಡಾ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಶಾಸಕರಾಗಿದ್ದ ಲಾವೋ ಮಾಮಲೇದಾರ್, ಬೆಳಗಾವಿಯ ಶ್ರೀನಿವಾಸ ಲಾಡ್ಜ್ ನಲ್ಲಿ ತಂಗಿದ್ದರು. ವೈಯಕ್ತಿಕ ಕೆಲಸಕ್ಕೆ ಹೊರಗೆ ಹೋಗಿದ್ದು ಮರಳುವ ಸಂದರ್ಭದಲ್ಲಿ ಆಟೋಗೆ ಅವರ ಕಾರು ಡಿಕ್ಕಿಯಾಗಿದೆ. ನಂತರ ಲಾಡ್ಜ್‌ಗೆ ಬಂದು ಕಾರು ಪಾರ್ಕ್‌ಮಾಡಿ ಹೊರಬಂದ ವೇಳೆ ಅವರ ಮೇಲೆ ಆಟೋಚಾಲಕ ಮುಜಾಹಿದಿಲ್ ಜಮಾದಾರ್ ಹಲ್ಲೆ ನಡೆಸಿ ಕೆನ್ನೆಗೆ ಬಾರಿಸಿದ್ದಾನೆ.

ಹಲ್ಲೆಯಿಂದ ತೀವ್ರವಾಗಿ ಅಸ್ವಸ್ಥಗೊಂಡ ಮಾಮಲೇದಾರ್ ಅವರನ್ನು ಕೂಡಲೇ ಜಿಲ್ಲಾಸ್ಪತ್ರೆಗೆ ದಾಖಲಿಸಲಾಯಿತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಮಾಮಲೇದಾರ್ ಮೃತಪಟ್ಟಿದ್ದಾರೆ. ಹಲ್ಲೆ ನಡೆಸಿದ ಆರೋಪಿಯನ್ನು ಸ್ಥಳೀಯ ಪೊಲೀಸರಿಗೆ ಒಪ್ಪಿಸಲಾಗಿದೆ. ಆರೋಪಿ ಜತೆ ಆಟೋವನ್ನು ವಶಕ್ಕೆ ಪಡೆದ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಮಾಜಿ ಶಾಸಕ ಸಾವಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರತ್ಯಕ್ಷದರ್ಶಿ ಅಡಿವೆಪ್ಪ ಕರಿಲಿಂಗನವರ ಎಂಬುವವರು ನೀಡಿದ ದೂರಿನ ಅನ್ವಯ ನಗರದ ಮಾರ್ಕೆಟ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕೊಲ್ಲುವ ಉದ್ದೇಶದಿಂದಲೇ ಆರೋಪಿ ಮುಜಾಹಿದಿಲ್ ಶಕೀಲ್ ಬೆನ್ನಟ್ಟಿ ಲಾವೋ ಮಾಮಲೇದಾರ್ ಮೇಲೆ ಹಲ್ಲೆ ನಡೆಸಿದ್ದಾನೆಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ತಂದೆಯ ಶವದ ಮುಂದೆ ಕಣ್ಣೀರಿಟ್ಟ ಮಗಳು .

ಲಾವೋ ಮಾಮಲೇದಾರ್ ಅವರಿಗೆ ಆಟೋ ಚಾಲಕ ಮುಜಾಹಿದಿಲ್ ಜಮಾದಾರ್ ಎಂಬಾತ ಥಳಿಸಿದ ನಡೆಸಿರುವ ದೃಶ್ಯ ಸಿಸಿಟಿವಿಯಲ್ಲಿ ಸೆರೆಯಾಗಿದೆ. ಹಲ್ಲೆಗೊಳಗಾದ ವ್ಯಕ್ತಿ ಕೆಲವೇ ಕ್ಷಣದಲ್ಲಿ ಕುಸಿದು ಬಿದ್ದು ಸಾವನ್ನಪ್ಪಿದ್ದಾರೆ. ತನಿಖೆ ನಡೆಸಲಾಗುತ್ತಿದೆ. ಆರೋಪಿಯನ್ನು ಬಂಧಿಸಿದ್ದು, ಮೃತರ ಮನೆಯವರಿಗೆ ಮಾಹಿತಿ ನೀಡಿಲಾಗಿದೆ.

-ರೋಹನ್ ಜಗದೀಶ್
ಕಾನೂನು ಸುವ್ಯವಸ್ಥೆ ಡಿಸಿಪಿ

ತಂದೆಯ ಶವದ ಮುಂದೆ ಕಣ್ಣೀರಿಟ್ಟ ಮಗಳು

ಆಟೋಚಾಲಕ ನಡೆಸಿದ ಮಾರಣಾಂತಿಕ ಹಲ್ಲೆಯಲ್ಲಿ ಮೃತಪಟ್ಟ ಲಾವೋ ಮಾಮಲೇದಾರ್ ಅವರ ಮೃತದೇಹ ಕಂಡು ಪುತ್ರಿ ಅಕ್ಷತಾ ಮಾಮಲೇದಾರ್ ಕಣ್ಣೀರಿಟ್ಟರು. ಶನಿವಾರ ಸಂಜೆ ನಗರದ ಜಿಲ್ಲಾಸ್ಪತ್ರೆಯಲ್ಲಿ ಇಟ್ಟಿದ್ದ ಮಾಜಿ ಶಾಸಕರ ಕಳೇಬರನ್ನು ಮೃತದೇಹವನ್ನು ಕುಟುಂಬದವರಿಗೆ ಹಸ್ತಾಂತರಿಸಲಾಯಿತು.

ರಾಜ್ಯಕ್ಕೆ ತೆರಿಗೆ ಮಾತ್ರವಲ್ಲ, ಜೆಜೆಎಂನಲ್ಲೂ ಅನ್ಯಾಯ

← ಮೊದಲಪುಟದಿಂದ

ಆದರೆ ಪ್ರಧಾನಿ ನರೇಂದ್ರ ಮೋದಿ ಸರಕಾರವು ಕರ್ನಾಟಕಕ್ಕೆ ನ್ಯಾಯಬದ್ಧವಾಗಿ ಸಿಗಬೇಕಾದ ಅನುದಾನದ ಪಾಲನ್ನು ನೀಡಲು ನಿರಾಕರಿಸುತ್ತಾ ಬಂದಿದೆ. ಕೇಂದ್ರ ಸರಕಾರವು ಜಲಜೀವನ ಮಿಷನ್‌ಗೆ 3,804 ಕೋಟಿ ಹಂಚಿಕೆ ಮಾಡಿದೆ. ಆದರೆ ಅದರಲ್ಲಿ 570 ಕೋಟಿ ಮಾತ್ರ ಬಿಡುಗಡೆಯಾಗಿರುತ್ತದೆ. ಈ ವಿಚಾರವಾಗಿ ಹಲವಾರು ಪತ್ರಗಳನ್ನು ಬರೆದು ಸರಕಾರದ ಗಮನಕ್ಕೆ ತಂದಿದ್ದರೂ ಯಾವುದೇ ಹಣ ಬಿಡುಗಡೆ ಮಾಡಿಲ್ಲ. ಮತ್ತೊಂದೆಡೆ, ಕರ್ನಾಟಕವು ತನ್ನ ಬಜೆಟ್‌ನಲ್ಲಿ 7,652 ಕೋಟಿ ಹಂಚಿಕೆ ಮಾಡಿದ್ದು, 4,977 ಕೋಟಿ ಹಣವನ್ನು ಬಿಡುಗಡೆ ಮಾಡಿದೆ ಎಂದು ಅಂಕಿ-ಅಂಶ ಸಮೇತ ವಿವರಿಸಿದ್ದಾರೆ.

ಈ ರೀತಿಯ ಅನ್ಯಾಯ ಕೇವಲ ಕರ್ನಾಟಕಕ್ಕೆ ಮಾತ್ರ ಆಗಿಲ್ಲ. ದೇಶದ ಎಲ್ಲ ರಾಜ್ಯಗಳಿಗೆ ಮಾಡುತ್ತಿರುವ ಅನ್ಯಾಯ. 2024-25ನೇ ಸಾಲಿನಲ್ಲಿ ಜೆಜೆಎಂಗೆಂದು ಬಜೆಟ್‌ನಲ್ಲಿ ಅಂದಾಜು 70,163 ಕೋಟಿ ಮೀಸಲಿಟ್ಟಿದ್ದರೆ, ಪರಿಷ್ಕೃತ ಅಂದಾಜು ಮೊತ್ತವನ್ನು ಕೇವಲ 22,694 ಕೋಟಿಗೆ ಇಳಿಸಲಾಗಿದೆ. ನರೇಂದ್ರ ಮೋದಿ ಅವರ ಸರಕಾರ ತನ್ನ ಬಜೆಟ್‌ನಲ್ಲಿ ಅಗತ್ಯ ಪ್ರಮಾಣದ ಅನುದಾನ ನೀಡದೇ ಜಲ ಜೀವನ್ ಮಿಷನ್ ಯೋಜನೆಯನ್ನು ಕೊಲ್ಲುತ್ತಿದೆ ಎಂದು ಟೀಕಿಸಿದ್ದಾರೆ.

ಸತ್ತು ಬದುಕಿದ್ದ ವ್ಯಕ್ತಿ ಚಿಕಿತ್ಸೆ ಫಲಕಾರಿಯಾಗದೆ ಸಾವು

ಹಾವೇರಿ: ಸತ್ತನೆಂದು ಆಸ್ಪತ್ರೆಯಿಂದ ಊರಿಗೆ ಕರೆತರುವಾಗ ಬದುಕಿದ್ದ ವ್ಯಕ್ತಿ, ವಾರದ ನಂತರ ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ ಘಟನೆ ಶಿಗ್ಗಾವಿ ತಾಲೂಕಿನ ಬಂಕಾಪುರ ಗ್ರಾಮದಲ್ಲಿ ನಡೆದಿದೆ.

ಬಿಷ್ಟಪ್ಪ ಅಶೋಕ್ ಗುಡಿಮನಿ (45) ಮೃತ ವ್ಯಕ್ತಿ. 15 ದಿನಗಳ ಹಿಂದೆ ಕಾಮಾಲೆ ರೋಗದಿಂದ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದರು.

ಚಿಕಿತ್ಸೆ ನೀಡಿದ ವೈದ್ಯರು ಸಾವನ್ನಪ್ಪಿದ್ದಾರೆ, ಊರಿಗೆ ತೆಗೆದುಕೊಂಡು ಹೋಗಿ ಎಂದು ತಿಳಿಸಿದ್ದರು. ಊರಿಗೆ ವಾಪಸ್ ಬರುತ್ತಿದ್ದ ವೇಳೆ, ಅವರ ಇಷ್ಟವಾದ ಡಾಬಾದ ಬಳಿ, 'ಡಾಬಾ ಬಂತು ನೋಡು, ಊಟ ಮಾಡುತ್ತೀಯಾ 'ಎಂದು ಪತ್ನಿ ಗೋಳಾಡಿ ಕಣ್ಣೀರಿಟ್ಟಾಗ ಮೃತಪಟ್ಟಿದ್ದನೆಂದ ಹೇಳಲಾದ ವ್ಯಕ್ತಿ ಉಸಿರಾಡಿ ಜೀವ ಬಂದಿತ್ತು. ಕೂಡಲೇ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ, ನಂತರ ಹುಬ್ಬಳ್ಳಿ ಕಿಮ್ಸ್ ಆಸ್ಪತ್ರೆಗೆ ದಾಖಲಿಸಿ, ನಿರಂತರವಾಗಿ ಒಂದು ವಾರ ಚಿಕಿತ್ಸೆ ನೀಡಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಶನಿವಾರ ಕೊನೆಯುಸಿರೆಳೆದಿದ್ದಾರೆ.ಸ್ವಗ್ರಾಮ ಬಂಕಾಪುರದಲ್ಲಿ ಮೃತರ ಅಂತ್ಯಕ್ರಿಯೆ ನಡೆಯಲಿದೆ.

ಹೈಕಮಾಂಡ್ ಭೇಟಿ ಸಿದ್ದು ಬಣ ಬಲಿಷ್ಠ

← ಮೊದಲಪುಟದಿಂದ

ದೆಹಲಿ ಪ್ರವಾಸದ ವೇಳೆ ಪ್ರಮುಖವಾಗಿ ಸಚಿವ ಸತೀಶ್ ಜಾರಕಿಹೊಳಿ ಮೂಲಕ ರಾಹುಲ್ ಗಾಂಧಿ ಅವರಿಗೆ ರಾಜ್ಯ ರಾಜಕೀಯಕ್ಕೆ ಸಂಬಂಧಿಸಿದಂತೆ ಮಾಹಿತಿ ನೀಡಿದ್ದಾರೆ ಎನ್ನಲಾಗಿದೆ. ಮೊದಲಿನಿಂದಲೂ ರಾಹುಲ್ ಗಾಂಧಿ ಅವರೊಂದಿಗೆ ಉತ್ತಮ ಒಡನಾಟ ಹೊಂದಿರುವ ಸತೀಶ್, ತಮಗೆ ಕೆಪಿಸಿಸಿ ಅಧ್ಯಕ್ಷ ಸ್ಥಾನ ನೀಡುವಂತೆ ಒತ್ತಡ ಹೇರಿದ್ದಾರೆ. ಇದರೊಂದಿಗೆ ಸರಕಾರ ರಚನೆ ವೇಳೆ ಲೋಕಸಭಾ ಚುನಾವಣೆ ಬಳಿಕ ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಬಗ್ಗೆ ಹೇಳಲಾಗಿತ್ತು. ಆದ್ದರಿಂದ ಇದೀಗ ಬದಲಾವಣೆ ಮಾಡಲು ಸೂಕ್ತ ಸಮಯ ಎಂಬ ಚರ್ಚೆಯಾಗಿದೆ ಎಂದು ಮೂಲಗಳು ತಿಳಿಸಿವೆ.

ಬ್ಲ್ಯಾಕ್‌ಮೇಲ್‌ಗೆ ಬೇಸತ್ತು ಸರ್ವೇ ಇಲಾಖೆ ಸಿಬ್ಬಂದಿ ಆತ್ಮಹತ್ಯೆ

ಚಿಕ್ಕಮಗಳೂರು: ನೇಣು ಬಿಗಿದು ಆತ್ಮಹತ್ಯೆಗೆ ಶರಣಾಗಿದ್ದ ಸರ್ವೇಯರ್ ಇಲಾಖೆಯ ಶಿವಕುಮಾರ್ ಪ್ರಕರಣಕ್ಕೆ ತಿರುವು ದೊರೆತಿದ್ದು , ಆತ ಬರೆದಿಟ್ಟಿರುವ ಡೆತ್‌ನೋಟ್ ಮೂಡಿಗೆರೆ ಸರ್ವೇ ಇಲಾಖೆಯ ಕಚೇರಿಯಲ್ಲಿ ಪತ್ತೆಯಾಗಿದೆ. ಕೆಲಸದ ಒತ್ತಡ ಜತೆಗೆ ಮಹಿಳೆಯೊಬ್ಬ ರಿಂದ ಬ್ಲ್ಯಾಕ್‌ಮೇಲ್‌ಗೆ ಒಳಗಾಗಿ ಆತ್ಮಹತ್ಯೆ ಮಾಡಿಕೊಂಡಿರುವುದು ಬೆಳಕಿಗೆ ಬಂದಿದೆ. ಶಿವಕುಮಾರ್‌ರ ಡೆತ್‌ನೋಟ್ ಆಧರಿಸಿ ಪತ್ನಿ ಪುಷ್ಪಾಲತಾ, ಡೆತ್‌ನೋಟ್‌ನಲ್ಲಿ ಹೆಸರಿಸಿರುವ ಗ್ರೆಗೋರೊಯನ್ ಡಿ. ಕುನ್ಹ, ಕುನ್ನಹಳ್ಳಿಯ ಡೊನಾಲ್ಡ್ ಡಿ'ಸೋಜಾ, ಸ್ವಪ್ನ ಎಂಬುವರ ವಿರುದ್ಧ ಮೂಡಿಗೆರೆ ಠಾಣೆಯಲ್ಲಿ ಪ್ರಕರಣ ದಾಖಲಿಸಿ ದ್ದಾರೆ. ಭೂಮಾಪಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಶಿವಕುಮಾರ್ ಗುರುವಾರ ಮೂಡಿಗೆರೆಯಲ್ಲಿ ತಾವು ವಾಸಿಸುತ್ತಿದ್ದ ಮನೆಯಲ್ಲಿ ನೇಣು ಬಿಗಿದು ಆತ್ಮಹತ್ಯೆಗೆ ಶರಣಾಗಿದ್ದರು.

ಕರ್ನಾಟಕ ಸರ್ಕಾರ
ಆಡಳಿತ ವೈದ್ಯಾಧಿಕಾರಿಗಳ ಕಛೇರಿ, ಉಪವಿಭಾಗೀಯ ಆಸ್ಪತ್ರೆ ಸಾಗರ
ಸಂ:ಉ.ವಿ.ಆ.ಸಾ/ಹೊ.ಗು.ಸೆ.ಟೆ/155/2024-25 ದಿನಾಂಕ: 12.02.2025
ನಾನ್ ಕ್ಲಿನಿಕಲ್ & ಗ್ರೂಪ್ ಡಿ ಸಿಬ್ಬಂದಿಗಳ ಹೊರಗುತ್ತಿಗೆ ಸೇವೆ ಪಡೆಯುವ ಕುರಿತು ಇ- ಟೆಂಡರ್ ಪ್ರಕಟಣೆ
ಉಪವಿಭಾಗೀಯ ಆಸ್ಪತ್ರೆ ಸಾಗರ ಹಾಗೂ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಸಾಗರ ಇಲ್ಲಿಗೆ ಸಿಬ್ಬಂದಿಗಳನ್ನು ಹೊರಗುತ್ತಿಗೆಯಿಂದ ಪಡೆಯಲು ಅರ್ಹ ಸಂಸ್ಥೆಗಳಿಂದ two tender document system ರಂತೆ E- Procurement ಮುಖಾಂತರ ಟೆಂಡರ್ ಆಹ್ವಾನಿಸಿದ್ದು, ಆಸಕ್ತ ಅರ್ಹ ಟೆಂಡರ್‌ದಾರರು ದಿನಾಂಕ:14.02.2025 ರಿಂದ ದರಗಳನ್ನು upload ಮಾಡಬಹುದು ಹಾಗೂ ಈ ಕುರಿತು ಇಲಾಖಾ ವೆಬ್ ಸೈಟ್‌ಗೆ www.kppp.karnataka.gov.in ಲಾಗ್ ಆನ್ ಮಾಡಲು ಕೋರಲಾಗಿದೆ.
ಹೆಚ್ಚಿನ ಮಾಹಿತಿಗಾಗಿ ಇ-ಪೋರ್ಟಲ್‌ನಲ್ಲಿ ಪಡೆಯತಕ್ಕದ್ದು.
ಸಹಿ/- ಆಡಳಿತ ವೈದ್ಯಾಧಿಕಾರಿಗಳು, ಉಪವಿಭಾಗೀಯ ಆಸ್ಪತ್ರೆ, ಸಾಗರ
ವಾ.ಸಾ.ಸಂ.ಇ/ಕೆ.ಎಸ್.ಎಂ.ಸಿ.ಎ/ಶಿ/24-25/103/02/1662

ನಗರಸಭಾ ಕಾರ್ಯಾಲಯ, ಶಿರಸಿ (ಉ.ಕ.)
ದೂರವಾಣಿ: 08384-226338 ವೆಬ್‌ಸೈಟ್: www.sirsicity.mrc.gov.in
ಇ-ಮೇಲ್: comm_srs@yahoo.com
ನಂ. ನಸಶಿ/ನೈವಿ/ಟೆಂಡರ/ಪೌ.ಉ./ವಿವ-/2024-25 ದಿನಾಂಕ: 13.02.2025
ಟೆಂಡರ್ ಪ್ರಕಟಣೆ
ಕರ್ನಾಟಕ ಸರ್ಕಾರದ ಸಾರ್ವಜನಿಕ ಪಾರದರ್ಶಕತೆ ಕಾಯ್ದೆ 1999 ಹಾಗೂ ನಿಯಮಾವಳಿ- 2000 ರಂತೆ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ನೋಂದಾಯಿತ ಏಜೆನ್ಸಿದಾರರು/ಅಧೀಕೃತ ಪೂರೈಕೆದಾರರಿಂದ ಟೆಂಡರ್ ಡಾಕ್ಯುಮೆಂಟ್ KC-8ರ ನಿಬಂಧನೆಗೊಳಪಟ್ಟಂತೆ, KPP Portalನಲ್ಲಿ ರಜಿಸ್ಟ್ರೇಷನ್ ಮಾಡಿಸಿದ ನೋಂದಾಯಿತ ಅರ್ಹ ನೋಂದಾಯಿತ ಏಜೆನ್ಸಿದಾರರು/ಅಧೀಕೃತ ಪೂರೈಕೆದಾರರಿಂದ (1) DMA/2024-25/SE4671 (ಅಂದಾಜು ಮೊತ್ತ ರೂ. 12.64 ಲಕ್ಷಗಳು) ಕಾಮಗಾರಿಗೆ ಟೆಂಡರಗಳನ್ನು KPP Portal ಮೂಲಕ ಕರೆಯಲಾಗಿದ್ದು, KPP Portal ನಿಯಮಗಳ ಮತ್ತು ಟೆಂಡರು ಕರಾರುಗಳ ಅನ್ವಯ ಟೆಂಡರ್ ಫಾರ್ಮಗಳನ್ನು ಪಡೆಯುವುದು, ಭರ್ತಿ ಮಾಡುವುದು ಮತ್ತು ಸಲ್ಲಿಸುವುದು.
(1) KPP Portal ಮೂಲಕ ಟೆಂಡರಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 27.02.2025 (ಸಂಜೆ 16.15 ಗಂಟೆವರೆಗೆ) (2) KPP Portal ಮೂಲಕ ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ: 28.02.2025 (ಸಂಜೆ 16.30 ಗಂಟೆಗೆ) (ರಜಾ ಇದ್ದಲ್ಲಿ ಬೇರೆ ದಿನಾಂಕ ತಿಳಿಸಲಾಗುವುದು)
ಟೆಂಡರನಲ್ಲಿಯ ನಿಬಂಧನೆಗಳನ್ನು ಹಾಗೂ ಷರತ್ತುಗಳ ವಿವರಗಳನ್ನು KPP Portal ಪ್ಲಾಟ್ ಫಾರಂನಲ್ಲಿ www.kppp.karnataka.gov.in ರಲ್ಲಿ ಪಡೆಯಬಹುದು ಹಾಗೂ ಕಚೇರಿಯಲ್ಲಿ ಹೆಚ್ಚಿನ ಮಾಹಿತಿಗಳನ್ನು ಪಡೆಯತಕ್ಕದ್ದು.
ಸಹಿ/- ಪೌರಾಯುಕ್ತರು, ನಗರಸಭೆ, ಶಿರಸಿ.
DIPR/ADK/KSMCA/885/24-25 dt.15.02.2025

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ಕಾರ್ಯನಿರ್ವಾಹಕ ಇಂಜನೀಯರರು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಬೆಳಗಾವಿ.
ದೂರವಾಣಿ ಸಂ:(0831) 2463850/ಫ್ಯಾಕ್ಸ್ ಸಂ:(0831) 2423008
No.EE /MI&GWDDD/BGM/TND/AE/2024-25/920 Date:14-02-2025
ಅಲ್ಪಾವಧಿ ಟೆಂಡರ ಪ್ರಕಟಣೆ (ಕೆ.ಡಬ್ಲ್ಯೂ-4)
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ ಅಧಿನಿಯಮ-2000ರ ಮತ್ತು ಇತ್ತೀಚಿನ ತಿದ್ದುಪಡಿಗಳಂತೆ, ಅರ್ಹ ಗುತ್ತಿಗೆದಾರರಿಂದ ಐಟಂ ದರದಂತೆ ಗುತ್ತಿಗೆಯನ್ನು "ಕೆಪಿಪಿಪಿ" ಮುಖಾಂತರ ಕಾರ್ಯನಿರ್ವಾಹಕ ಇಂಜನೀಯರರು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ, ಬೆಳಗಾವಿ ಇವರಿಂದ ಆವ್ಹಾನಿಸಲಾಗಿದೆ. ಬೆಳಗಾವಿ/ಗೋಕಾಕ ಉಪ ವಿಭಾಗಗಳಡಿಯ ಒಟ್ಟು 03 ಕಾಮಗಾರಿಗಳ ಅಂದಾಜು ಮೊತ್ತ ಗರಿಷ್ಠ ರೂ.339.00 ಲಕ್ಷಗಳು ಹಾಗೂ ಕನಿಷ್ಠ ರೂ.119.00 ಲಕ್ಷಗಳು. 1.ಕೆ.ಡಬ್ಲ್ಯೂ-4 ಕಾಮಗಾರಿಗಾಗಿ ಪೂರ್ವಟೆಂಡರ ಸಭೆಯು ದಿನಾಂಕ:21-02-2025 ಮುಂ 11.00 ಘಂಟೆಗೆ, 2. ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ:24-02-2025 ಸಾಯಂಕಾಲ 4.00 ಗಂಟೆಯವರೆಗೆ, 3.ಟೆಂಡರ ತೆರೆಯುವ ದಿನಾಂಕ:25-02-2025 ಸಾಯಂಕಾಲ 4.30 ಮುಂದುವರೆದು (ಸಾಧ್ಯವಾದಲ್ಲಿ), 4.ಹೆಚ್ಚಿನ ವಿವರಗಳಿಗೆ ಸಂಪರ್ಕಿಸುವ ವಿಳಾಸ:ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಬೆಳಗಾವಿ & www.kppp.gov.in
ಸಹಿ/-ಕಾರ್ಯನಿರ್ವಾಹಕ ಅಭಿಯಂತರರು, ಸ.ನೀ ಮತ್ತು ಅಂ.ಅ.ಇ ವಿಭಾಗ, ಬೆಳಗಾವಿ.
DIPR/BGM/RO-NO-1689/KSMCA/2024-25

ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಕೋಲಾರ ವಿಭಾಗ, ಕೋಲಾರ-563101. e-mail: eepwdkolar07@gmail.com, website: www.kpwd.gov.in, e-portal : http://kppp.karnataka.gov.in
ದೂರವಾಣಿ ಸಂಖ್ಯೆ: 08152-222022
ಇ-ಟೆಂಡರ್ ಪ್ರಕಟಣೆ- ಕೆಡಬ್ಲ್ಯು -4
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ-41/2024-25
ದಿನಾಂಕ: 12.02.2025
ಕೋಲಾರ ಜಿಲ್ಲೆ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ಕೋಲಾರ, ಬಂಗಾರಪೇಟೆ, ಕೆ.ಜಿ.ಎಫ್, ಮಾಲೂರು, ಮುಳಬಾಗಿಲು, ಹಾಗೂ ಶ್ರೀನಿವಾಸಪುರ ತಾಲ್ಲೂಕು ವ್ಯಾಪ್ತಿಯಲ್ಲಿ ಲೆಕ್ಕಶೀರ್ಷಿಕೆ: 5054- ಜಿಲ್ಲಾ ಮತ್ತು ಇತರೆ ರಸ್ತೆಗಳ ಸುಧಾರಣೆ ಮತ್ತು ರಾಜ್ಯ ಹೆದ್ದಾರಿ ರಸ್ತೆಗಳ ಸುಧಾರಣೆ ಹಾಗೂ ಜಿಲ್ಲಾ ಮುಖ್ಯ ರಸ್ತೆಗಳ ನವೀಕರಣ ಮತ್ತು ರಾಜ್ಯ ಹೆದ್ದಾರಿ ರಸ್ತೆಗಳ ನವೀಕರಣ ಅಡಿಯಲ್ಲಿ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು, **ಕಾಮಗಾರಿಯ ಅಂದಾಜು ಮೊತ್ತ: ಕನಿಷ್ಠ: ರೂ. 150.00 ಲಕ್ಷಗಳು ಹಾಗೂ ಗರಿಷ್ಠ: 500.00 ಲಕ್ಷಗಳು ಮತ್ತು ಇ.ಎಂ.ಡಿ ಮೊತ್ತವನ್ನು ಕೆ.ಪಿ.ಪಿ ಪೋರ್ಟಲ್ ನಲ್ಲಿ ನಮೂದಿಸಿರುತ್ತಾರೆ ಕಾಲಾವಧಿ : 06 ತಿಂಗಳು ನಿರ್ವಹಿಸಲು ಕೆಡಬ್ಲ್ಯು -4 ರ ಕಾಮಗಾರಿಗೆ ಅರ್ಹ ನೊಂದಾಯಿತ ಸಿವಿಲ್ ಗುತ್ತಿಗೆದಾರರಿಂದ ಕೆಪಿಪಿಪಿ ಅನ್ವಯ ಟೆಂಡರ್ ಆಹ್ವಾನಿಸಲಾಗಿದೆ.** ಗುತ್ತಿಗೆದಾರರು ಕೆಡಬ್ಲ್ಯು- 4 ರ ಟೆಂಡರ್ ಡಾಕ್ಯುಮೆಂಟ್‌ಗಳನ್ನು ಕರ್ನಾಟಕ ರಾಜ್ಯದ **ಕೆ.ಪಿ.ಪಿ ಪೋರ್ಟಲ್ (Viz., http://kppp. karnataka.gov.in)** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ.
ಭರ್ತಿ ಮಾಡಿದ ಟೆಂಡರ್‌ಗಳನ್ನು ಆನ್‌ಲೈನ್ ಮುಖಾಂತರ ಕರ್ನಾಟಕ ರಾಜ್ಯದ **ಕೆ.ಪಿ.ಪಿ ಪೋರ್ಟಲ್‌ನಲ್ಲಿ ದಿನಾಂಕಃ 28.02.2025 ರಂದು ಸಂಜೆ 16.00 ಗಂಟೆ ಒಳಗೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಸ್ವೀಕೃತವಾದ ಟೆಂಡರ್‌ಗಳನ್ನು ದಿನಾಂಕ: 01.03.2025 ರಂದು ಸಂಜೆ 16.30 ಗಂಟೆಯ ನಂತರ ಕೆ.ಪಿ.ಪಿ ಪೋರ್ಟಲ್ ನಲ್ಲಿ ತೆರೆಯಲಾಗುವುದು.** ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗೆ ಹಾಗೂ ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು **ಕೆ.ಪಿ.ಪಿ ಪೋರ್ಟಲ್ (Viz., http://kppp.karnataka.gov.in)**ನಲ್ಲಿ ಸಂಪರ್ಕಿಸ ಬಹುದಾಗಿದೆ. ಹಾಗೂ ಈ ಕಛೇರಿಯ ಕೆಲಸದ ವೇಳೆಯಲ್ಲಿ ಹೆಚ್ಚಿನ ವಿವರಗಳನ್ನು ಪಡೆಯಲು ಸಹಾ ಕೋರಲಾಗಿದೆ.
ವಿಶೇಷ ಸೂಚನೆ: ಸದರಿ ನೋಟಿಫಿಕೇಶನ್‌ಗೆ ಸಂಬಂಧಿಸಿದಂತೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾಗಿ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.
ಸಹಿ/- ಕಾರ್ಯಪಾಲಕ ಇಂಜಿನಿಯರ್ ಲೋ.ಇ. ಕೋಲಾರ ವಿಭಾಗ, ಕೋಲಾರ
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:476/ಕೆಎಸ್‌ಎಂಸಿಎ/2024-25

ಕರ್ನಾಟಕ ಸರ್ಕಾರ
ಉಪ ನಿರ್ದೇಶಕರ ಕಛೇರಿ, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ), ಶಿವನಗರ, ಬೀದರ - 585401
ಸಂಖ್ಯೆ: ಪಪೂಶಿಇ/ಉನಿಬೀ/ಹೊ.ಆದರ್ಶ.ಕಾ/ಅ.ಸೌ/ಟೆಂಡರ್/2024-25 ದಿನಾಂಕಃ 11.02.2025
:: ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಾಲ್‌ನಲ್ಲಿ ಅಲ್ಪಾವಧಿ ಟೆಂಡರ್ ಪ್ರಕಟಣೆ ::
ಕರ್ನಾಟಕ ರಾಜ್ಯಪಾಲರ ಪರವಾಗಿ 2024-25 ನೇ ಸಾಲಿಗೆ ಈ ಕೆಳಕಂಡ ಕಾಮಗಾರಿಗಳ, ಲೆಕ್ಕ ಶಿರ್ಷಿಕೆ 4202-01-201-1-04 ಉಪಶೀರ್ಷಿಕೆ 180 (ಯಂತ್ರೋಪಕರಣಗಳು ಮತ್ತು ಸಾಧನ ಸಾಮಗ್ರಿಗಳ) ಅಡಿಯ ಕನಿಷ್ಠ ರೂ. 16.00 ಲಕ್ಷಗಳ ಮತ್ತು ಗರಿಷ್ಠ ರೂ. 48.00 ಲಕ್ಷಗಳ ಮೊತ್ತದ ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಾಲ್ ಮುಖಾಂತರ ಟೆಂಡರ್‌ಗಳನ್ನು ಕರೆಯಲಾಗಿದೆ.
ವರ್ಕ್ ಇಂಡೆಂಟ್ ಸಂಖ್ಯೆ : PUED/2024-25/IND0056-48Lakh, PUED/2024-25/IND0062-36 Lakh, & PUED/2024-25/IND0063-16 Lakh
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಾಲ್ https://kppp.karnataka.gov.in ರಿಂದ ದಾಖಲಾತಿಗಳನ್ನು ದಿನಾಂಕ: 11.02.2025 ರಿಂದ ಡೌನ್‌ಲೋಡ್ ಮಾಡಿಕೊಂಡು ದಿನಾಂಕ: 27.02.2025 ರ ಸಂಜೆ 16.00 ಗಂಟೆಯವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಅಂತರ್ಜಾಲ ತಾಣ ಅಥವಾ ಈ ಕಚೇರಿಗೆ ಸಂಪರ್ಕಿಸುವುದು.
ವಿಶೇಷ ಸೂಚನೆ :- ಯು.ಡಿ.ಐ ನಂಬರ ಹೊಂದಿರುವ ಟರ್ನಓವರ್ ಸರ್ಟಿಫಿಕೆಟ್ ಗಳನ್ನು ಮಾತ್ರ ಪರಿಗಣಿಸಲಾಗುವುದು ಎಂದು ಗುತ್ತಿಗೆದಾರರ ಗಮನಕ್ಕೆ ತರಲಾಗಿದೆ.
ಸಹಿ/-ಉಪ ನಿರ್ದೇಶಕರು ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಶಿವನಗರ, ಬೀದರ
ವಾ.ಸಾ.ಸಂ.ಇ/ಬೀದರ/402/ಕೆ.ಎಸ್.ಎಂ.ಸಿ.&ಎ/2024-25

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-560001. website: www.kiadb.in
ನಂ. ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ-ಇಪಿ-48/899/2024-25 ದಿನಾಂಕ: 15.02.2025
ಟೆಂಡರ್ ಆಹ್ವಾನ ಪ್ರಕಟಣೆ
ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ
ಕೆಐಡಿಬಿಯು ಈ ಕೆಳಕಂಡ ಕಾಮಗಾರಿಗಳಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ ಮಾನವಶಕ್ತಿ ಮತ್ತು ಇದೇ ರೀತಿಯ ಕೆಲಸದಲ್ಲಿ ಸಾಕಷ್ಟು ಅನುಭವ ಹೊಂದಿರುವ ಅರ್ಹ ಗುತ್ತಿಗೆದಾರರಿಂದ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮ 2000 ರನ್ವಯ ದ್ವಿ ಲಕೋಟೆ ಪದ್ಧತಿಯಡಿಯಲ್ಲಿ ಐಟಂ ದರ ಆಧಾರದ ಮೇಲೆ ವಿದ್ಯುನ್ಮಾನ ಪೋರ್ಟಲ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ.
ಕಾಮಗಾರಿಯ ಹೆಸರು : (1) ತುಮಕೂರು, ವಸಂತನರಸಪುರ ಹಂತ-1, 2 &3 ಕೈಗಾರಿಕ ಪ್ರದೇಶದಲ್ಲಿ ನೀರು ಸರಬರಾಜು ವಿತರಣಾ ಜಾಲವನ್ನು ಒದಗಿಸುವ ಕಾಮಗಾರಿ. (2) ತುಮಕೂರು ಜಿಲ್ಲೆ, ಕೋಡಿತಿಮ್ಮನಹಳ್ಳಿ ಜಂಕ್ಷನ್ ಬಳಿ ಕೊರಟಗೆರೆ ಪಟ್ಟಣ ಮತ್ತು ಮಧುಗಿರಿಗೆ ನೀರು ಸರಬರಾಜು ಮಾಡಲು ಹಾಲಿ ಇರುವ 600ಮಿ.ಮೀ ವ್ಯಾಸದ ಪಿಎಸ್‌ಸಿ ಕೊಳವೆ ಪರ್ಯಾಯವಾಗಿ 610 ಮಿಮೀ ವ್ಯಾಸದ ಎಂಎಸ್ ಗ್ರಾವಿಟಿ ಮೇನ್ 1800 ಮೀ ಉದ್ದಕ್ಕೂ ನೀರು ಸರಬರಾಜು ಕೊಳವೆ ಅಳವಡಿಸುವ ಕಾಮಗಾರಿ. (Supply, laying, jointing, testing and commissioning)
ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 19.03.2025 ಸಂಜೆ 4.30 ಗಂಟೆಯವರೆಗೆ
ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.
ಸಹಿ/-
ಮುಖ್ಯ ಅಭಿಯಂತರರು-1, ಕೆಐಎಡಿಬಿ, ಬೆಂಗಳೂರು
DIPR/CP/5075/Zen/2024-25

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್ ರವರ ಕಾರ್ಯಾಲಯ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚನ್ನರಾಯಪಟ್ಟಣ
ಕಛೇರಿ ದೂರವಾಣಿ: 08176-252749
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:37 /2024-25 ದಿನಾಂಕ: 15.02.2025
ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚನ್ನರಾಯಪಟ್ಟಣ ವ್ಯಾಪ್ತಿಯ ಅರಸೀಕೆರೆ ತಾಲ್ಲೋಕಿಗೆ 2024-25ನೇ ಸಾಲಿನ ತಾಲ್ಲೂಕು ಪಂಚಾಯತಿಯ ವಿವಿಧ ಲೆಕ್ಕಶೀರ್ಷಿಕೆಯಡಿಯಲ್ಲಿ ಅನುಮೋದನೆಯಾಗಿರುವ 1) ಅರಸೀಕೆರೆ ನಗರದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆ ಕಟ್ಟಡ ದುರಸ್ತಿ RDPR/2024-25/BD/WORK_INDENT 13044 ಟೆಂಡರ್ ಮೊತ್ತ ರೂ 11.60 ಲಕ್ಷಗಳಿಗೆ (EXCLUDING GST) (2) ಅರಸೀಕೆರೆ ನಗರದ ಆಯುಷ್ ಆಸ್ಪತ್ರೆ ಕಟ್ಟಡ ದುರಸ್ತಿ RDPR/2024-25/BD/WORK_INDENT13045 ಟೆಂಡರ್ ಮೊತ್ತ ರೂ 6.62 ಲಕ್ಷಗಳಿಗೆ (EXCLUDING GST) ಲೋಕೋಪಯೋಗಿ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ/ಎನ್‌ರೋಲ್ ಮಾಡಿಸಿರುವ ಅರ್ಹ ಗುತ್ತಿಗೆದಾರರಿಂದ ಸ್ಪರ್ಧಾತ್ಮಕ ಟೆಂಡರನ್ನು KPPP ಅಂತರ್ಜಾಲದಲ್ಲಿ ದಿನಾಂಕ: 24.02.2025ರ ಸಂಜೆ 5.00 ಘಂಟೆಯವರೆಗೆ ಟೆಂಡರ್‌ನ್ನು ನಿಗಧಿತ ನಮೂನೆಗಳನ್ನು https://kppp.karnataka.gov.in/kpppನಲ್ಲಿ ಡೌನ್‌ಲೋಡ್ ಮಾಡಿ ಅವಶ್ಯ ಮಾಹಿತಿಗಳೊಂದಿಗೆ ಹಾಗೂ ನಿಗಧಿತ ಇ.ಎಂ.ಡಿ.ಯೊಂದಿಗೆ ದಿನಾಂಕ: 24.02.2025ರ ಸಂಜೆ 5.00 ಗಂಟೆಯೊಳಗೆ ಅಪ್‌ಲೋಡ್ ಮಾಡತಕ್ಕದ್ದು. ದಿನಾಂಕ 21.02.2025ರವರೆಗೆ ಗುತ್ತಿಗೆದಾರರು ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಯಾವುದೇ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ. ದಿನಾಂಕ: 27.02.2025ರಂದು ಬೆಳಿಗ್ಗೆ 11.00ಗಂಟೆಗೆ ಗುತ್ತಿಗೆದಾರರ ತಾಂತ್ರಿಕ ಬಿಡ್ಡನ್ನು ತೆರೆಯಲಾಗುವುದು. ತಾಂತ್ರಿಕ ಬಿಡ್ಡ್ ಅನುಮೋದನೆಯಾದ ನಂತರ ಗುತ್ತಿಗೆದಾರರ ಆರ್ಥಿಕ ಬಿಡ್ಡನ್ನು ತೆರೆಯಲಾಗುವುದು. ಕಾಮಗಾರಿಗಳ ವಿವರಗಳು KPPP ಅಂತರ್ಜಾಲದಲ್ಲಿ ಲಭ್ಯವಿರುತ್ತವೆ. ಸದರಿ ಕಾಮಗಾರಿಗೆ ಸಂಬಂಧಪಟ್ಟಂತೆ ಒಂದು ವೇಳೆ ಏನಾದರೂ ತಿದ್ದುಪಡಿ ಉಂಟಾದಲ್ಲಿ ಸದರಿ ತಿದ್ದುಪಡಿಯನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.
ಸಹಿ/- ಕಾರ್ಯಪಾಲಕ ಇಂಜಿನಿಯರ್, ಪ.ರಾಜ್. ಇಂ.ವಿಭಾಗ, ಚನ್ನರಾಯಪಟ್ಟಣ.
ವಾಸಾಸಂಇ/ಹಿಸನಿ/ಹಾಸನ/961/ಕೆಎಸ್‌ಎಂಸಿಎ/2024-25

ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮಡಿಕೇರಿ
ಕೊಡಗು ಜಿಲ್ಲೆ, ಕರ್ನಾಟಕ
ಫೋನ್:08272 298220, ವೆಬ್ ಸೈಟ್ : kimskodagu.karnataka.gov.in
ಇ-ಮೇಲ್ directormckodagu@gmail.com
ಸಂಖ್ಯೆ:ಕೊ.ವೈ.ವಿ.ಸಂ.ಮ/ಇ.ಎಸ್.ಟಿ(1)/431/2024-25 ದಿನಾಂಕ:14/02/2025
ಗುತ್ತಿಗೆ ಆಧಾರದ ನೇಮಕಾತಿ ಅಧಿಸೂಚನೆ
ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಭೋಧಕ ಆಸ್ಪತ್ರೆಗೆ ಮತ್ತು ಇಲ್ಲಿನ (VRDL) ಪ್ರಯೋಗಾಲಯಕ್ಕೆ ಅವಶ್ಯವಿರುವ ಈ ಕೆಳಕಂಡ ಕ್ರಮ ಸಂಖ್ಯೆ 1 ರಿಂದ 3 ರ ವರೆಗಿನ ಹುದ್ದೆಯನ್ನು ಗುತ್ತಿಗೆ ಆಧಾರದ ಮೇಲೆ ತಾತ್ಕಾಲಿಕವಾಗಿ 11 ತಿಂಗಳ ಅವಧಿಗೆ ಹಾಗೂ ಕ್ರಮ ಸಂಖ್ಯೆ 4 ಹುದ್ದೆಯನ್ನು 6 ತಿಂಗಳ ಅವಧಿಗೆ ಕರ್ತವ್ಯ ನಿರ್ವಹಿಸಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿದ್ಯಾರ್ಹತೆ ಹಾಗೂ ಅನುಭವವನ್ನು ಪರಿಗಣಿಸಲಾಗುವುದು.

ಕ್ರ ಸಂ	ಹುದ್ದೆಯ ಹೆಸರು	ಹುದ್ದೆ ಸಂಖ್ಯೆ	ಕನಿಷ್ಠ ವಿದ್ಯಾರ್ಹತೆ ಮತ್ತು ಮೀಸಲಾತಿ	ಮಾಸಿಕ ವೇತನ
1	Scientist B(Med)	1	MD,MS,DNS	56000+HRA
2	Scientist B(Non Med)	1	M.Sc Ph D	56000+HRA
3	Research Assistant	1	M.Sc Med Micro	35000
4	Junior Pharmacist	2	D Form (SC-O-ST-M	20600

ಸಂಸ್ಥೆಯ ಅಂತರ್ಜಾಲದಿಂದ ಅರ್ಜಿಯನ್ನು ಡೌನ್ ಲೋಡ್ ಮಾಡಿಕೊಂಡು ಪೂರಕ ದಾಖಲೆಗಳ ನಕಲುಗಳನ್ನು ಲಗತ್ತಿಸಿ ಪತ್ರಾಂಕಿತ ಅಧಿಕಾರಿಯ ಅಥವಾ ನೋಟರಿ ಧೃಢೀಕರಣದೊಂದಿಗೆ ನಿರ್ದೇಶಕರು ಹಾಗೂ ಡೀನ್ ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮಡಿಕೇರಿ ಇವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ದಿನಾಂಕ 24/02/2025 ರ ಸಂಜೆ 4:00 ಗಂಟೆಯ ಒಳಗೆ ಸಲ್ಲಿಸುವುದು. ಹೆಚ್ಚಿನ ಮಾಹಿತಿಗೆ ಸಂಸ್ಥೆಯ ಕಛೇರಿಯನ್ನು ಸಂಪರ್ಕಿಸಲು ತಿಳಿಸಲಾಗಿದೆ. ಅಂತರ್ಜಾಲ:kimskodagu.karnataka.gov.in
ಸಹಿ/-
ನಿರ್ದೇಶಕರು ಹಾಗೂ ಡೀನ್
ಕೊ.ವೈ.ವಿ.ಸಂ, ಮಡಿಕೇರಿ

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ, ಚಾವಿಸನಿನಿ, ಮೈಸೂರು-570017
Telephone No: 0821-2544963
CHAMUNDESHWARI ELECTRICITY SUPPLY CORPORATION LIMITED
(A Government of Karnataka Undertaking)
Corporate Office, CESC, Mysuru-570017
Web Site: www.cescmysore.org
E-mail ID:gmproc@cescmysore.org
Company Identity Number[CIN]:-U40109KA2004SGC035177
ಸಂಖ್ಯೆ: ಪ್ರವ್ಯ(ಖ)/ಉಪ್ರವ್ಯ(ಕಾ)/ಸಪ್ರವ್ಯ(ಕಾ)/ನಿ.ಕ/ಎಫ್-20/2024-25/29400 ದಿ: 14.02.2025
ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ)
ಪ್ರಧಾನ ವ್ಯವಸ್ಥಾಪಕರು(ಖರೀದಿ), ನಿಗಮ ಕಛೇರಿ, ಚಾವಿಸನಿನಿ, ಮೈಸೂರು ಇವರು ಚಾವಿಸನಿನಿಯ ಪರವಾಗಿ ಈ ಕೆಳಕಂಡ ಸಿವಿಲ್ ಕಾಮಗಾರಿಗಳಿಗೆ ಅರ್ಹ ಬಿಡ್ಡುದಾರರಿಂದ ಟೆಂಡರನ್ನು ಆಹ್ವಾನಿಸಿರುತ್ತಾರೆ.

ಕ್ರ. ಸಂ.	ವಿಚಾರಣಾ ಸಂಖ್ಯೆ	ಕಾಮಗಾರಿ ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
1.	CESC/CO/GM(Proc)/ CIVIL/2024-25/CVL-04 D:13.02.2025.	ನಿಗಮದ ಕೆಸರೆ ಕಾಲೋನಿಯಲ್ಲಿ ಕಾಂಕ್ರಿಟ್ ರಸ್ತೆ ನಿರ್ಮಾಣ ಮತ್ತು ಇನ್ನಿತರೆ ಅವಶ್ಯಕ ಕಾಮಗಾರಿ.	150.00
2.	CESC/CO/GM(Proc)/ CIVIL/2024-25/CVL-05 D:13.02.2025.	ಮಂಡ್ಯ(ಜಿ), ನಾಗಮಂಗಲ(ತಾ), ಬೆಳ್ಳೂರಿನಲ್ಲಿ ಉಪ-ವಿಭಾಗೀಯ ಕಛೇರಿ ನಿರ್ಮಾಣ ಕಾಮಗಾರಿ	220.00
3.	CESC/GM(Proc)/2024-25/CVL-05 D:26.06.2024.	ನಿಗಮದ ಜ್ಯೋತಿನಗರ ಕಾಲೋನಿಯಲ್ಲಿ ಹೊಸ ಒಳಚರಂಡಿ ವ್ಯವಸ್ಥೆಯನ್ನು ನಿರ್ಮಿಸುವ ಮತ್ತು ಇನ್ನಿತರೆ ಅವಶ್ಯಕ ನಿರ್ಮಾಣ ಕಾಮಗಾರಿ.(Randomised to ST Category)(CALL-3)	85.00

ಹೆಚ್ಚಿನ ಮಾಹಿತಿಗಾಗಿ ಇ-ಪ್ರಕ್ಯೂರ್‌ಮೆಂಟ್ ವೆಬ್‌ಸೈಟ್ http//kppp.karnataka.gov.in ಗೆ ಲಾಗಿನ್ ಆಗಿ ದಿ: 17.02.2025ರ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಹೆಲ್ಪ್ ಲೈನ್ 080-46010000/22631200/68948777ಗೆ ಅಥವಾ ಇ-ಮೇಲ್ ವಿಳಾಸ support@eprochelpdesk.com. ಸದರಿ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು ಕಡೆಯ ದಿ: 03.03.2025. ಉಳಿದಂತೆ ಹೆಚ್ಚಿನ ವಿವರಗಳನ್ನು ಈ ಕಛೇರಿಯಿಂದ ಪಡೆಯಬಹುದು.
ಸಹಿ/- ಪ್ರಧಾನ ವ್ಯವಸ್ಥಾಪಕರು (ಖರೀದಿ), ನಿಗಮ ಕಛೇರಿ, ಚಾವಿಸನಿನಿ, ಮೈಸೂರು
DIPR/DDMYS/1298/KSMCA/926/2024-25

ಟ್ವೀಟು-ಖಾರಾ

ಸಿದ್ದರಾಮಯ್ಯ, ಮುಖ್ಯಮಂತ್ರಿ

ಕರ್ನಾಟಕದ ಹಿತಾಸಕ್ತಿಗೆ ದ್ರೋಹ ಬಗೆದ ಬಿಜೆಪಿಯ ಬಣ್ಣ ಬಯಲು..! ಕರ್ನಾಟಕದಲ್ಲಿ ಜಲಜೀವನ ಮಿಷನ್ ಅನ್ನು ರಾಜ್ಯದ ಎಲ್ಲ ಗ್ರಾಮೀಣ ಪ್ರದೇಶದ ಮನೆಗಳಿಗೆ ನಳ ನೀರಿನ ಸಂಪರ್ಕ ಕಲ್ಪಿಸುವ ಉದ್ದೇಶದಿಂದ ಜಾರಿಗೊಳಿಸಲಾಗಿತ್ತು. ಆದರೆ, ಕೇಂದ್ರ ಬಜೆಟ್‌ನಲ್ಲಿ ಕರ್ನಾಟಕಕ್ಕೆ ಬಿಡುಗಡೆ ಮಾಡಿರುವ ಅನುದಾನ ಗಮನಿಸಿದರೆ ಉದ್ದೇಶಪೂರ್ವಕವಾಗಿ ಈ ಯೋಜನೆಯನ್ನು ಹಾಳುಗೆಡವಲು ಮುಂದಾಗಿರುವಂತಿದೆ. ಇದರ ವಿರುದ್ಧ ದನಿ ಎತ್ತಬೇಕಾಗಿದ್ದ ಕೇಂದ್ರ ಸಚಿವ ಸೋಮಣ್ಣ ಅವರು ಈ ದ್ರೋಹವನ್ನು ಮುಚ್ಚಿಹಾಕಲು ಸುಳ್ಳು ಹೇಳುತ್ತಿದ್ದಾರೆ.

ವಿಶ್ವ ಹೊಳ್ಳ, ಬೆಂಗಳೂರು

ಕೇಂದ್ರದ ಹಣ ಯಾಕೆ ಬೇಕು ನಿಮಗೆ..? ಬಿಟ್ಟಿಭಾಗ್ಯಕ್ಕೆ ಹಣ ಇದೆ ನಿಮ್ಮ ಹತ್ರ. ಅಭಿವೃದ್ಧಿಗೆ ಇಲ್ಲಾ..?

ನಾಡ ಸಮಸ್ಯೆಗೆ ಸಿಎಂ ಪರಿಹಾರ



- ಸ್ಥಳ : ರಾಯಚೂರು

ಸಮಸ್ಯೆಯೇನು..?

- ರಾಯಚೂರು ಜಿಲ್ಲೆಯ ಯಾಪಲದಿನ್ನಿ, ಯಾರಿರ್ಗೇ,ಗಿಲ್ಲೆಸೂಗೂರು ಗ್ರಾಮದಲ್ಲಿ ಅತ್ಯಧಿಕ ನಕಲಿ ವೈದ್ಯರು,ಅಕ್ರಮ ಕ್ಲಿನಿಕ್‌ಗಳು ನಡೆಯುತ್ತಿರುವ ಬಗ್ಗೆ.
- **ಪರಿಹಾರ:** ರಾಯಚೂರು ಜಿಲ್ಲೆಯ ಯಾಪಲದಿನ್ನಿ, ಯಾರಿರ್ಗೇ,ಗಿಲ್ಲೆಸೂಗೂರು ಗ್ರಾಮದಲ್ಲಿ ಅತ್ಯಧಿಕ ನಕಲಿ ವೈದ್ಯರು,ಅಕ್ರಮ ಕ್ಲಿನಿಕ್‌ಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಕೆಪಿಎಂಇ ಕಾಯ್ದೆ ಉಲ್ಲಂಘಿಸಿರುವ ಕ್ಲಿನಿಕ್ ಅನ್ನು ಸೀಲ್ ಮಾಡಲಾಗಿದೆ.

ಸಮಾಚಾರ ಸಣ್ಣದಲ್ಲ

ಕುಂಭಮೇಳ: ರಾಜ್ಯದ ವ್ಯಕ್ತಿ ಸಾವು

ರಾಯಚೂರು: ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಕುಂಭಮೇಳಕ್ಕೆ ಹೋಗಿದ್ದ ರಾಯಚೂರಿನ ಭಕ್ತರೊಬ್ಬರು ರಸ್ತೆ ಅಪಘಾತದಲ್ಲಿ ಮೃತಪಟ್ಟಿದ್ದಾರೆ. ಮಹಾದೇವ ವಾಲೇಕರ್ (48) ಮೃತ ದುರ್ದೈವಿ. ಮಧ್ಯಪ್ರದೇಶದ ಮೇಹೂರ್ ಬಳಿ

ಅವರಿಗೆ ಕಾರು ಡಿಕ್ಕಿ ಹೊಡೆದಿದ್ದರಿಂದ ಸಾವನ್ನಪ್ಪಿದ್ದಾರೆ. ರಾಯಚೂರು ತಾಲೂಕಿನ ಚಂದ್ರಬಂಡಾ ಗ್ರಾಮದ ಮಹಾದೇವ ಕುಟುಂಬ ಸ್ನೇಹಿತರೊಂದಿಗೆ ಪ್ರಯಾಗ್‌ರಾಜ್ ಕುಂಭಮೇಳದಿಂದ ವಾಪಸ್ ಬರುತ್ತಿದ್ದಾಗ ಈ ದುರ್ಘಟನೆ ನಡೆದಿದೆ. ಮಹಾದೇವ ವಾಲೇಕರ್ ಪ್ರಯಾಣಿಸುತ್ತಿದ್ದ ಕಾರು ರಸ್ತೆಬದಿ ನಿಂತಿತ್ತು. ಕಾರಿನಲ್ಲಿದ್ದವರು ಕೆಳಗಡೆ ಇಳಿದಿದ್ದರು. ಈ ವೇಳೆ, ರಸ್ತೆಬದಿ ನಿಂತಿದ್ದ ಮಹಾದೇವ ಮೇಲೆ ಹೈದರಾಬಾದ್ ಮೂಲದ ಕಾರು ಹರಿದಿದೆ. ತಕ್ಷಣವೇ ಮಹಾದೇವ್‌ರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದಾರೆ.

ಟಾರ್ಚ್ ಬೆಳಕಿನಲ್ಲಿ ಚಿಕಿತ್ಸೆ: ವರದಿಗೆ ಸೂಚನೆ

ಬಳ್ಳಾರಿ: ಬಳ್ಳಾರಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (ವಿಮ್ಸ್)ಯ ಅಧೀನದ ಟ್ರಾಮಾ ಕೇರ್ ಸೆಂಟರ್‌ನ ತುರ್ತು ಚಿಕಿತ್ಸಾ ವಾರ್ಡ್‌ನಲ್ಲಿ ಗಾಯಾಳುಗೆ ಟಾರ್ಚ್ ಬೆಳಕಿನಲ್ಲಿ ಚಿಕಿತ್ಸೆ ನೀಡುತ್ತಿರುವ ವಿಡಿಯೊ ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿದೆ. ಈ ಕುರಿತು ವರದಿ ನೀಡುವಂತೆ ಸಂಸ್ಥೆಯ ನಿರ್ದೇಶಕರು ಅಧಿಕಾರಿಗಳಿಗೆ ಆದೇಶಿಸಿದ್ದಾರೆ. ಟ್ವಿಟರ್ ಖಾತೆಯೊಂದರಲ್ಲಿ ಗುರುವಾರ ರಾತ್ರಿ ವಿಡಿಯೊ ಹಂಚಿಕೊಳ್ಳಲಾಗಿತ್ತು. ಗಾಯಾಳುವೊಬ್ಬರಿಗೆ ರಕ್ತಸ್ರಾವವಾಗುತ್ತಿದ್ದರೂ ವೈದ್ಯರು ಸಕಾಲಕ್ಕೆ ಚಿಕಿತ್ಸೆ ನೀಡಿಲ್ಲ. ಈ ಮಧ್ಯೆ ವಿದ್ಯುತ್ ಕೈಕೊಟ್ಟಿತು. ಜನರೇಟರ ವ್ಯವಸ್ಥೆ ಇಲ್ಲ. ಸೊಳ್ಳೆಗಳ ಕಾಟ ಹೆಚ್ಚಾಗಿತ್ತು ಎಂದು ಆರೋಪಿಸಿ ಮುಖ್ಯಮಂತ್ರಿ, ಆರೋಗ್ಯ ಸಚಿವರು ಸೇರಿದಂತೆ ಹಲವರಿಗೆ ವಿಡಿಯೊವನ್ನು ಟ್ಯಾಗ್ ಮಾಡಲಾಗಿತ್ತು. ಇದರ ಆಧಾರದಲ್ಲಿ ಮುಖ್ಯಮಂತ್ರಿ ಕಚೇರಿಯ ವಿಶೇಷ ಕರ್ತವ್ಯಾಧಿಕಾರಿಯೂ ವಿಮ್ಸ್ ಸಂಸ್ಥೆಯಿಂದ ಸ್ಪಷ್ಟನೆ ಕೇಳಿದ್ದಾರೆ.

ಗೋದಾವರಿ-ಕೃಷ್ಣಾ-ಕಾವೇರಿ ಜೋಡಣೆ ಯೋಜನೆ | ಕರ್ನಾಟಕಕ್ಕೆ 25 ಟಿಎಂಸಿ ಅಡಿ ನೀರು ಹಂಚಿಕೆ ಮಾಡಿ

ರಾಜ್ಯದ ಹಿತಕ್ಕಾಗಿ ರಾಜಕೀಯ ಮರೆತು ಹೋರಾಟ ಮಾಡೋಣ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಗೋದಾವರಿ-ಕೃಷ್ಣ-ಕಾವೇರಿ ನೀರಾವರಿ ಯೋಜನೆಯಲ್ಲಿ ಕರ್ನಾಟಕಕ್ಕೆ 25 ಟಿಎಂಸಿ ಅಡಿ ನೀರು ಹಂಚಿಕೆ ಆಗಬೇಕು. ಈ ಗುರಿ ಸಾಧನೆಗಾಗಿ ಎಲ್ಲಾ ಪಕ್ಷಗಳನ್ನು ಒಳಗೊಂಡು ಹೋರಾಟ ಮಾಡುತ್ತೇನೆ ಎಂದು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು ಹೇಳಿದ್ದಾರೆ.

ಪಕ್ಷದ ರಾಜ್ಯ ಕಚೇರಿ ಜೆಪಿ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 25 ಟಿಎಂಸಿ ಅಡಿ ನೀರು ಪಡೆಯುವುದಕ್ಕಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕಾಂಗ್ರೆಸ್ ಸಂಸದರ ಜತೆಗೂಡಿ ಹೋರಾಟ ನಡೆಸಲು ನನಗೆ ಯಾವುದೇ ಹಿಂಜರಿಕೆ ಇಲ್ಲ. ನಾಡಿನ ವಿಷಯ ಬಂದಾಗ ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಎನ್ನುವ ಭೇದ ಮರೆತು ಒಟ್ಟಾಗಿ ಕೆಲಸ ಮಾಡಬೇಕು. ಇಂತಹ ಸಂಘಟಿತ ಪ್ರಯತ್ನಕ್ಕೆ ನಾನು ಹಿಂಜರಿಯುವುದಿಲ್ಲ ಎಂದರು.

ಸಂಸತ್ ಅಧಿವೇಶನದಲ್ಲಿ ಇದೇ ವಿಷಯ ಪ್ರಸ್ತಾಪ ಮಾಡಿ ಚರ್ಚೆ ಮಾಡಿದ್ದೇನೆ. ಗೋದಾವರಿ- ಕೃಷ್ಣ-ಕಾವೇರಿ ಯೋಜನೆ ವಿಚಾರವಾಗಿ ರಾಜ್ಯಕ್ಕೆ ನೀರಿನ ಹಂಚಿಕೆ ಹೆಚ್ಚಳ ಮಾಡುವಂತೆ ನಾನು ಪ್ರಧಾನಿಗಳು ಹಾಗೂ ಕೇಂದ್ರದ ಜಲಶಕ್ತಿ ಸಚಿವರಿಗೆ ಮನವಿ ಮಾಡಿದ್ದೇನೆ. ಜಲಶಕ್ತಿ ಸಚಿವರಿಗೆ ಪತ್ರ ಬರೆಯಲಾಗಿದ್ದು, ಸದ್ಯ ಈ ಯೋಜನೆಯಲ್ಲಿ ಕರ್ನಾಟಕಕ್ಕೆ 15.891 ಟಿಎಂಸಿ ನೀರು ಹಂಚಿಕೆ ಮಾಡಲಾಗಿದೆ. ಆದರೆ, ಈ ಪ್ರಮಾಣ 25 ಟಿಎಂಸಿಗೆ ಹೆಚ್ಚಳ ಮಾಡಬೇಕು ಅಂತ ಒತ್ತಾಯ ಮಾಡಿದ್ದೇನೆ ಎಂದರು.

ಕಾಂಗ್ರೆಸ್ ನವರು ಅನೇಕ ನೀರಾವರಿ ಯೋಜನೆಗಳನ್ನು ಮಾಡಿದರು. ಆದರೆ, ಅನುಷ್ಠಾನಕ್ಕೆ ಹಣ ಇಡಲಿಲ್ಲ. ಅದರ ಬಗ್ಗೆ ನಾನು ಯಾಕೆ ಚರ್ಚೆ ಮಾಡಲಿ? ನಾನೇನು ಮಾಡಿದ್ದೇನೆ ಎಂಬುದಕ್ಕೆ ದಾಖಲೆ ಇದೆ. ಕಾವೇರಿ ನೀರು ಸದ್ವಿನಿಯೋಗ ಮಾಡಿಕೊಳ್ಳಲು ನಾನೇನು ಮಾಡಿದ್ದೇನೆ ಎನ್ನುವುದಕ್ಕೆ ದೊಡ್ಡ ಇತಿಹಾಸ ಇದೆ. ಸದನದಲ್ಲಿ ನಾನು ಏನೆಲ್ಲಾ ಹೋರಾಟ ನಡೆಸಿದ್ದೇನೆ ಎನ್ನುವುದಕ್ಕೆ ದಾಖಲೆ ಇದೆ. ಪರಿಶೀಲನೆ ಮಾಡಬಹುದು. ಭದ್ರಾ ಮೇಲ್ದಂಡೆಗೆ ಅನುಮತಿ ಕೊಡಿ ಎಂದು ಕೇಂದ್ರಕ್ಕೆ ಪತ್ರ ಬರೆದು ಒತ್ತಾಯ ಮಾಡಿದ್ದೇನೆ. ನಾನು ಸುಮ್ಮನೆ ಕುಳಿತುಕೊಳ್ಳುವ ವ್ಯಕ್ತಿಯಲ್ಲ. ಮಹದಾಯಿ ಬಗ್ಗೆ ಕೂಡ ನಾನು ಹೋರಾಟ ನಡೆಸಿದ್ದೇನೆ ಎಂದರು.

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕರಾದ ಸುರೇಶ್ ಬಾಬು, ಮಾಜಿ ಸಚಿವರಾದ ಸಿ.ಎಸ್.ಪುಟ್ಟರಾಜು, ಸಂಸದ ಮಲ್ಲೇಶ್ ಬಾಬು, ಮಾಜಿ ಸಂಸದ ಕುಪೇಂದ್ರ ರೆಡ್ಡಿ, ವಿಧಾನ ಪರಿಷತ್ ಸದಸ್ಯ ಟಿ.ಎ.ಶರವಣ, ಕೆ.ಎ.ತಿಪ್ಪೇಸ್ವಾಮಿ, ಜವರಾಯಿ ಗೌಡ, ಮಾಜಿ ಶಾಸಕ ಇ.ಕೃಷ್ಣಪ್ಪ, ಜೆಡಿಎಸ್ ನಗರ ಘಟಕದ ಅಧ್ಯಕ್ಷ ಎಚ್.ಎಂ.ರಮೇಶ್ ಗೌಡ ಸೇರಿದಂತೆ ಅನೇಕ ನಾಯಕರು ಉಪಸ್ಥಿತರಿದ್ದರು.

ರಾಜ್ಯಕ್ಕೆ ನೀರಿನ ವಿಷಯದಲ್ಲಿ ನ್ಯಾಯ ಸಿಗಬೇಕು. ಅದೇ ನನ್ನ ಜೀವನದ ಕೊನೆಯ ಆಸೆ. ಈ ದೇಹ ಅಂತ್ಯ ಆಗುವುದರ ಒಳಗಾಗಿ ನಮ್ಮ ರಾಜ್ಯಕ್ಕೆ ನೀರಾವರಿ ವಿಷಯದಲ್ಲಿ ಆಗಿರುವ ಅನ್ಯಾಯ ಸರಿ ಹೋಗಬೇಕು. ನಾನು ಇನ್ನೂ ನಾಲ್ಕಾರು ವರ್ಷ ಬದುಕಿರುತ್ತೇನೆ. ಅಷ್ಟರಲ್ಲಿ ಈ ನೀರಿನ ಸಮಸ್ಯೆ ಬಗೆಹರಿಸಬೇಕು ಎನ್ನುವ ಛಲವಿದೆ, ಬಗೆಹರಿಸುತ್ತೇನೆ. ಎಲ್ಲರನ್ನೂ ಒಟ್ಟಿಗೆ ಸೇರಿಸಿಕೊಂಡು ನಾನು ಹೋರಾಟ ಮಾಡುತ್ತೇನೆ.
-ಎಚ್.ಡಿ.ದೇವೇಗೌಡರು, ಮಾಜಿ ಪ್ರಧಾನಿ

ಅನ್ಯಾಯ ಸರಿ ಮಾಡಬೇಕಿದೆ

ಕಾವೇರಿ, ಕಳಸಾ ಬಂಡೂರಿ ಯೋಜನೆಗಳಲ್ಲಿ ರಾಜ್ಯಕ್ಕೆ ಭಾರೀ ಅನ್ಯಾಯ ಆಗಿದೆ. ಈಗ ಗೋದಾವರಿ- ಕಾವೇರಿ ಜೋಡಣೆ ಯೋಜನೆಯಲ್ಲಿಯೂ ರಾಜ್ಯಕ್ಕೆ ಅನ್ಯಾಯ ಆಗುತ್ತಿದೆ. ನಾವು ದನಿಯೆತ್ತಬೇಕಿದೆ. ಕಳಸಾ ಬಂಡೂರಿ ಬಗ್ಗೆ ರಾಜ್ಯದ ಮುಖ್ಯಮಂತ್ರಿಗಳು ಪ್ರಧಾನಿಗಳಿಗೆ ಪತ್ರ ಬರೆದಿದ್ದಾರೆ. ಆದರೆ, ಈ ವಿವಾದ ಸುಪ್ರೀಂ ಕೋರ್ಟಿನಲ್ಲಿದೆ. ಹೀಗಾಗಿ ಪ್ರಧಾನಿಗಳು ಯಾವುದೇ ನಿರ್ಧಾರ ಕೈಗೊಳ್ಳಲು ಸಾಧ್ಯವಾಗುತ್ತಿಲ್ಲ. ನಮ್ಮ ವಕೀಲರು ಸುಪ್ರೀಂಕೋರ್ಟಿನಲ್ಲಿ ವಾದ ಮಂಡಿಸಿ ಗೆಲ್ಲಬೇಕು. ರಾಜ್ಯಕ್ಕೆ ಆಗಿರುವ ಅನ್ಯಾಯ ಸರಿ ಮಾಡುವ ನಿಟ್ಟಿನಲ್ಲಿ ಎಲ್ಲರೂ ಒಟ್ಟಿಗೆ ಕೆಲಸ ಮಾಡಬೇಕಿದೆ ಎಂದರು.

- ನೀರು ಪಡೆಯಲು ಸಿದ್ದರಾಮಯ್ಯ, ಡಿಕೆಶಿ ಜತೆ ಸೇರಿ ಹೋರಾಟಕ್ಕೆ ಹಿಂಜರಿಕೆ ಇಲ್ಲ
- ನಾನು ಪ್ರಧಾನಿಗಳು ಹಾಗೂ ಕೇಂದ್ರದ ಜಲಶಕ್ತಿ ಸಚಿವರಿಗೆ ಮನವಿ ಮಾಡಿದ್ದೇನೆ
- ಭದ್ರಾ ಮೇಲ್ದಂಡೆಗೆ ಅನುಮತಿ ಕೊಡಿ ಎಂದು ಕೇಂದ್ರಕ್ಕೆ ಒತ್ತಾಯ ಮಾಡಿದ್ದೇನೆ
- ಮಹದಾಯಿ ಬಗ್ಗೆ ಕೂಡ ನಾನು ಹೋರಾಟ ನಡೆಸಿದ್ದೇನೆ

ತಿಂಗಳ ಬಳಿಕ ಫೋಟೊ ಬಿಡುಗಡೆ ಮಾಡಿದ ಪೊಲೀಸರು

ಬೀದರ್ ಎಟಿಎಂ ದರೋಡೆ ಆರೋಪಿಗಳ ಗುರುತು ಪತ್ತೆ

ಬೀದರ್: ನಗರದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮುಖ್ಯ ಕಚೇರಿ ಎದುರು ನಡೆದ ದರೋಡೆ ಪ್ರಕರಣದ ಇಬ್ಬರು ದರೋಡೆಕೋರರ ಗುರುತು ಪತ್ತೆ ಹಚ್ಚುವಲ್ಲಿ ಬೀದರ್ ಜಿಲ್ಲಾ ಪೊಲೀಸರು ಯಶಸ್ವಿಯಾಗಿದ್ದಾರೆ.

ಬಿಹಾರ ರಾಜ್ಯದ ವೈಶಾಲಿ ಜಿಲ್ಲೆಯ ಫತೇಪುರ ಫುಲ್ವರಿಯಾ ನಿವಾಸಿ ಅಮನ್ ಕುಮಾರ್ ರಾಜಕಿಶೋರ್ ಸಿಂಗ್ ಹಾಗೂ ಅದೇ ಜಿಲ್ಲೆಯ ಮಹಿಸೋರ್ ನಿವಾಸಿ ಅಲೋಕ್ ಕುಮಾರ್ ಅಲಿಯಾಸ್ ಅಶುತೋಷ್ ಶತ್ರುಘ್ನ ಪ್ರಸಾದ್ ಸಿಂಗ್ ಕೃತ್ಯ ಎಸಗಿದವರು ಎಂದು ಗುರುತಿಸಿದ್ದಾರೆ.

ಇಬ್ಬರೂ ಉತ್ತರ ಪ್ರದೇಶದ ಮಿರ್ಜಾಪುರ ಸೇರಿದಂತೆ ಹಲವೆಡೆ ಈ ರೀತಿಯ ದರೋಡೆ ಪ್ರಕರಣಗಳಲ್ಲಿ ಭಾಗಿಯಾಗಿದ್ದರು ಎಂಬ ಮಾಹಿತಿ ಪೊಲೀಸರಿಗೆ ಲಭ್ಯವಾಗಿದೆ. ಆರೋಪಿಗಳಿಬ್ಬರ ಕುಟುಂಬದವರನ್ನೂ ವಿಚಾರಣೆಗೆ ಒಳಪಡಿಸಿದ್ದಾರೆ ಎಂದು ಖಚಿತ ಮೂಲಗಳು ವಿಶ್ವವಾಣಿಗೆ ತಿಳಿಸಿವೆ.

5 ಲಕ್ಷ ಬಹುಮಾನ ಘೋಷಣೆ

ಇಬ್ಬರ ಗುರುತು ಪತ್ತೆಯಾದ ನಂತರ ಬೀದರ್‌ಜಿಲ್ಲಾ ಪೊಲೀಸರು ಬಿಹಾರದ ಹಲವೆಡೆ ಬೇಕಾಗಿದ್ದಾರೆ ಎಂದು ಪೋಸ್ಟರ್ ಅಂಟಿಸಿದ್ದಾರೆ. ಇಬ್ಬರ ಬಗ್ಗೆ ಮಾಹಿತಿ ಕೊಟ್ಟವರಿಗೆ 5 ಲಕ್ಷ ನಗದು ಬಹುಮಾನ ಕೂಡ ಘೋಷಿಸಿದ್ದಾರೆ ಎಂದು ತಿಳಿದು ಬಂದಿದೆ. ಜ.16ರಂದು ಬ್ಯಾಂಕಿನಿಂದ ಎಟಿಎಂಗ ಳಿಗೆ ಜಮೆ ಮಾಡಲು ಹಣ ಕೊಂಡೊ ಯ್ಯುತ್ತಿದ್ದ ಎಸ್‌ಬಿಐನ ಸಿಎಂಎಸ್ ಕಂಪನಿಯ ಇಬ್ಬರು ನೌಕರರ ಮೇಲೆ ಗುಂಡಿನ ದಾಳಿ ನಡೆಸಿ, 83 ಲಕ್ಷ ನಗದು ಹಣವಿದ್ದ ಟ್ರಂಕ್‌ನೊಂದಿಗೆ ಬೈಕ್ ಮೇಲೆ ಪರಾರಿಯಾಗಿದ್ದರು.

ವಿವಿ ಕುಲಸಚಿವರ ಸಹಿ ಫೋರ್ಜರಿ

ಬಳ್ಳಾರಿ: ಬಳ್ಳಾರಿಯ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದಲ್ಲಿ ಈ ಬಾರಿ ಡಿ ಗ್ರೂಪ್ ಸಿಬ್ಬಂದಿ ಕುಲಸಚಿವರ ಸಹಿಯನ್ನೇ ನಕಲು ಮಾಡಿ ಸಿಕ್ಕಿ ಬಿದ್ದಿದ್ದಾನೆ.

ವಿದ್ಯಾರ್ಥಿಗಳ ವಲಸೆ ಪ್ರಮಾಣಪತ್ರಕ್ಕೆ ಉಪಕುಲಸಚಿವರ ಸಹಿಯನ್ನು ಡಿ ಗ್ರೂಪ್ ನೌಕರ ವೈ.ಕೃಷ್ಣಮೂರ್ತಿ ನಕಲು ಮಾಡಿರುವ ಆರೋಪ ಕೇಳಿಬಂದಿದೆ. ಈ ಸಂಬಂಧ ವಿವಿಯ ಕುಲಪತಿ ವಿಚಾರಣೆ ಕಾಯ್ದಿರಿಸಿ ಸಿಬ್ಬಂದಿಯನ್ನು ಅಮಾನತುಗೊಳಿಸಿ ಆದೇಶಿಸಿದ್ದಾರೆ. ವಿದ್ಯಾರ್ಥಿಗಳಿಂದ ಹಣ ಪಡೆದ ಕೃಷ್ಣಮೂರ್ತಿ ಉಪ ಕುಲಸಚಿವರ ನಕಲಿ ಸಹಿ ಮಾಡಿ ಪ್ರಮಾಣ ಪತ್ರ ವಿತರಿಸಿರುವುದು ಮೇಲ್ನೋಟಕ್ಕೆ ಖಚಿತವಾಗಿದೆ.

ರಾಜ್ಯ ಸರಕಾರಕ್ಕೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ತರಾಟೆ

ಕೆಪಿಎಸ್‌ಸಿ ಪರೀಕ್ಷೆ: ಯುವಕರ ಜತೆ ಚೆಲ್ಲಾಟ

ಸಕಲೇಶಪುರ: ಯಾವ ಪಕ್ಷದಲ್ಲಿ ಯಾರನ್ನು ನಾಯಕನನ್ನಾಗಿ ಮಾಡಿ ಕೊಂಡರೇನು, ಯಾರನ್ನು ತೆಗೆದರೇನು, ಅದು ಈ ರಾಜ್ಯಕ್ಕೆ ಬೇಕಾಗಿಲ್ಲ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ಪಟ್ಟಣದಲ್ಲಿ ನೂತನ ನಾಡಪ್ರಭು ಕೆಂಪೇಗೌಡ ಪ್ರತಿಮೆಗೆ ಮಾಲಾರ್ಪಣೆ ಹಾಗೂ ರಾಜ್ಯ ಮಟ್ಟದ ಕೃಷಿ ಮೇಳದಲ್ಲಿ ಭಾಗವಹಿಸಿ ಮಾತನಾಡಿ, ಒಂದೇ ಒಂದು ಉದ್ಯೋಗ ಕೆಪಿಎಸ್‌ಸಿಯಲ್ಲಿ ಸೃಷ್ಟಿ ಆಗಿಲ್ಲ. 15 ಜನ ಮೆಂಬರ್‌ಗಳನ್ನು ಮಾಡಿಕೊಂಡು ಏನು ಸುಧಾರಣೆ ತಂದ್ರಿ, ಕೆಪಿಎಸ್‌ಸಿ ಪರೀಕ್ಷೆ ಮಾಡಲು ಆಗುತ್ತಿಲ್ಲ, ಯುವಕರ ಜತೆ ಚೆಲ್ಲಾಟ ಆಡುತ್ತಿದ್ದೀರಿ, ಮೊದಲು ಇದರ ಬಗ್ಗೆ ಗಮನ ಕೊಡಿ ಎಂದು ಒತ್ತಾಯಿಸಿದರು.

ರಾಜ್ಯದಲ್ಲಿ ಹಲವಾರು ಸಮಸ್ಯೆಗಳಿವೆ, ಒಂದು ಸಮಾಜದವರು ಸೋಶಿಯಲ್ ಮಿಡೀಯಾದಲ್ಲಿ ಪೋಸ್ಟ್ ಮಾಡಿದ್ದರಿಂದ ಇನ್ನೊಂದು ಸಮಾಜದವರು ಪೊಲೀಸ್ ಠಾಣೆ ಮೇಲೆ ಕಲ್ಲು ತೂರಾಟ ಮಾಡಲು ಹೊರಟಿದ್ದರು. ಈಗ ರಾಜಕೀಯ ಪ್ರಾರಂಭವಾಗಿದೆ. ರಾಜ್ಯದಲ್ಲಿ ಯಾವ ಪರಿಸ್ಥಿತಿಗೆ ಹೋಗುತ್ತಿದ್ದೇವೆ, ಅದರ ಬಗ್ಗೆ ಗಮನ ಕೊಡುವುದು ಸೂಕ್ತ ಎಂದು ಸಲಹೆ ನೀಡಿದರು. ಎಲ್ಲರ ಕಾಲದಲ್ಲೂ ನಡೆಯುತ್ತಲೇ ಇದೆ, ನಡೆಯಲಿ, ನಾನು ಕಷ್ಟಪಟ್ಟು ಸಂಪಾದನೆ ಮಾಡಿದ್ದಕ್ಕೆ ಈ ಸ್ಥಿತಿ. ಲೂಟಿ ಹೊಡೆದು ಇವರೆಲ್ಲ ಮಾಡಿಕೊಂಡಿದ್ದಾರಲ್ಲಾ ಅದನ್ನು ಕೇಳೋರೇ ಇಲ್ಲ, ಇದಕ್ಕೆಲ್ಲಾ ನಾನು ಹೆದರಲ್ಲ ಎಂದು ತಿರುಗೇಟು ನೀಡಿದರು.

ಕಾಂಗ್ರೆಸ್ ಸರಕಾರ ನಾಟಕದ ಕಂಪನಿ

ಚಿತ್ರದುರ್ಗ: ಕಾಂಗ್ರೆಸ್ ಸರಕಾರವೊಂದು ದೊಡ್ಡಾಟ ಹಾಗೂ ಬಯಲಾಟ ಆಡುವ ನಾಟಕದ ಕಂಪನಿ ಎಂದು ಸಂಸದ ಗೋವಿಂದ ಕಾರಜೋಳ ಟೀಕಿಸಿದ್ದಾರೆ.

ಕಾಂಗ್ರೆಸ್‌ನಿಂದ ರಾಜ್ಯದಲ್ಲಿ ದಲಿತ ಸಮಾವೇಶ ನಡೆಸಲು ಭರದ ಸಿದ್ಧತೆ ವಿಚಾರವಾಗಿ ಪ್ರತಿಕ್ರಿಯಿಸಿದ ಕಾರಜೋಳ, ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ 70 ವರ್ಷದಲ್ಲಿ 60 ವರ್ಷ ಕಾಂಗ್ರೆಸ್ ಆಡಳಿತ ನಡೆಸಿದೆ.ಕಾಂಗ್ರೆಸ್ ಆಡಳಿತದಲ್ಲಿ ಇಂಥ ಗಿಮಿಕ್ ಬಹಳ ಮಾಡಿದ್ದಾರೆ. ಅವರಿಗೆ ಕುರ್ಚಿಯ ಕಂಟಕ ಬಂದಾಗ, ಮತದಾರರು ಅವರನ್ನು ತಿರಸ್ಕರಿಸಿದಾಗ ಹೊಸ ನಾಟಕ ಶುರು ಮಾಡುತ್ತಾರೆ. ಹೀಗಾಗಿ ಈ ಸರಕಾರ ಬಯಲಾಟ ಹಾಗೂ ದೊಡ್ಡಾಟ ಅಡುವ ದೊಡ್ಡ ನಾಟಕ ಕಂಪನಿ ಎನಿಸಿದೆ ಎಂದು ಕಿಡಿಕಾರಿದರು. ಕಾಂಗ್ರೆಸ್‌ನವರು ದಲಿತರನ್ನು ಸಿಎಂ ಮಾಡಲ್ಲ. ದೀರ್ಘಾವಧಿ ಅಧಿಕಾರದಲ್ಲಿದ್ದ ಖರ್ಗೆಯವರನ್ನೇ ಸಿಎಂ ಮಾಡಲಿಲ್ಲ ಎಂದು ಕಿಡಿಕಾರಿದರು.

ದಲಿತರ ಸಮಾವೇಶ ನಡೆಸುವ ನೈತಿಕತೆ ಕಾಂಗ್ರೆಸ್‌ಗೆ ಇಲ್ಲ. ಆರ್ಥಿಕವಾಗಿ ಈ ಸರಕಾರ ದಿವಾಳಿಯಾಗಿದೆ. ದಲಿತರ ಮೇಲೆ ಅಷ್ಟೊಂದು ಕಾಳಜಿಯಿದ್ದರೆ ಶಿಕ್ಷಣ ಮತ್ತು ದಲಿತರ ಏಳಿಗೆಗೆ ಅನುದಾನ ಕೊಡಿಸಬೇಕು. ರಾಜ್ಯದ 9 ವಿವಿಗಳನ್ನು ಮುಚ್ಚುತ್ತಿರೋದು ನೋಡಿದರೆ ಸರಕಾರದಲ್ಲಿ ಆರ್ಥಿಕ ದಿವಾಳಿ ಎದ್ದು ಕಾಣಿಸುತ್ತಿದೆ.
-ಗೋವಿಂದ ಕಾರಜೋಳ, ಸಂಸದ

ನೋಂದಣಿಯಾಗದ ಅಕ್ರಮ ಫೈನಾನ್ಸ್ ಕಂಪನಿ ಬಂದ್ ಆಗಬೇಕು

ಸುಗ್ರೀವಾಜ್ಞೆ ವಿಫಲವಾಗದಿರಲಿ: ಸಿಎಂ

ಬೆಂಗಳೂರು: ರಾಜ್ಯದಲ್ಲಿ ಭಾರಿ ವಿವಾದಕ್ಕೆ ಕಾರಣವಾಗಿದ್ದ ಮೈಕ್ರೋಫೈನಾನ್ಸ್ ಕಂಪನಿಗಳ ಕಿರುಕುಳ ಮಟ್ಟಹಾಕಲು ಜಾರಿಗೊಳಿಸಿರುವ ಸುಗ್ರೀವಾಜ್ಞೆ ಯಾವುದೇ ಕಾರಣಕ್ಕೂ ವಿಫಲವಾಗಬಾರದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಕೆ ನೀಡಿದ್ದಾರೆ.

ಅಧಿಕೃತ ನಿವಾಸ ಕಾವೇರಿಯಲ್ಲಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳೊಂದಿಗೆ ವಿಡಿಯೊ ಸಂವಾದ ನಡೆಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಮೈಕ್ರೋ ಫೈನಾನ್ಸ್ ಸಂಸ್ಥೆಗಳಿಂದ ಸಾರ್ವಜನಿಕರಿಗೆ ಆಗುತ್ತಿರುವ ಸಮಸ್ಯೆಯನ್ನು ನಿಯಂತ್ರಿಸಬೇಕು. ಅಕ್ರಮವಾಗಿ ನಡೆಯುತ್ತಿರುವ ಫೈನಾನ್ಸ್ ಸಂಸ್ಥೆಗಳನ್ನು ಮುಚ್ಚಬೇಕು. ಜನರ ಒಳಿತಾಗಿ ಜಾರಿಗೊಳಿಸಿರುವ ಸುಗ್ರೀವಾಜ್ಞೆ ವಿಫಲವಾಗಲು ಬಿಡಬಾರದು ಎಂದು ಸ್ಪಷ್ಟ ಸೂಚನೆ ನೀಡಿದರು.

ಸಾಲ ವಸೂಲಾತಿ ಸಂದರ್ಭದಲ್ಲಿ ಸಾಲ ಪಡೆದವರಿಗೆ ಯಾವುದೇ ಕಿರುಕುಳ ಉಂಟಾಗಬಾರದು ಎಂಬ ಉದ್ದೇಶದಿಂದ ಈ ಕಾಯಿದೆಯನ್ನು ಜಾರಿಗೊಳಿಸಲಾಗಿದೆ. ಕಾಯಿದೆಯ ಎಲ್ಲಾ ಅಂಶಗಳನ್ನು ಜಿಲ್ಲೆಗಳಲ್ಲಿ ಕಟ್ಟುನಿಟ್ಟಿನಿಂದ ಜಾರಿಗೊಳಿಸಬೇಕು. ಪರವಾನಗಿ ಪಡೆಯದ ಮೈಕ್ರೋ ಫೈನಾನ್ಸ್ ಸಂಸ್ಥೆಗಳ ಮೇಲೆ ನಿರಂತರ ನಿಗಾ ಇರಿಸಬೇಕು. ಪರವಾನಿಗೆ ಪಡೆದಿರುವ ಮೈಕ್ರೋ ಫೈನಾನ್ಸ್ ಸಂಸ್ಥೆಗಳು ಆರ್‌ಬಿಐ ಮಾರ್ಗಸೂಚಿಯನ್ನು ಕಡ್ಡಾಯವಾಗಿ ಪಾಲಿಸುವುದನ್ನು ಖಾತ್ರಿಪಡಿಸಬೇಕು. ಬಲವಂತದ ವಸೂಲಾತಿ ಮಾಡುವವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕು ಎಂದು ಎಚ್ಚರಿಸಿದರು.

ಕಾಯಿದೆ ಜಾರಿಗೊಳಿಸಿದ ಬಳಿಕ ಹಲವು ಜಿಲ್ಲೆಗಳಲ್ಲಿ ಪ್ರಕರಣಗಳ ಸಂಖ್ಯೆಯಲ್ಲಿ ಗಣನೀಯವಾಗಿ ಇಳಿಮುಖವಾಗಿದ್ದು, ಕಟ್ಟುನಿಟ್ಟಿನಿಂದ ಕಾಯ್ದೆಯ ಅಂಶಗಳನ್ನು ಜಾರಿಗೊಳಿಸುವ ಮೂಲಕ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಮುನ್ನೆಚ್ಚರಿಕೆ ವಹಿಸಬೇಕು ಎಂದು ಮುಖ್ಯಮಂತ್ರಿ ಅವರು ಸೂಚನೆ ನೀಡಿದರು.

ಸಭೆಯಲ್ಲಿ ಕಾನೂನು ಸಚಿವ ಎಚ್.ಕೆ.ಪಾಟೀಲ್, ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ನಸೀರ್ ಅಹ್ಮದ್, ಗೋವಿಂದರಾಜು, ಸರಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿ ಎಲ್.ಕೆ.ಅತೀಕ್, ಕಾನೂನು ಸಲಹೆಗಾರ ಎ.ಎಸ್. ಪೊನ್ನಣ್ಣ, ಅಡ್ವಕೇಟ್ ಜನರಲ್ ಶಶಿಕಿರಣ ಶೆಟ್ಟಿ, ಪೊಲೀಸ್ ಮಹಾ ನಿರ್ದೇಶಕ ಅಲೋಕ್ ಮೋಹನ್, ಬೆಂಗಳೂರು ನಗರ ಪೊಲೀಸ್ ಆಯುಕ್ತ ದಯಾನಂದ್ ಮತ್ತಿತರ ಅಧಿಕಾರಿಗಳು ಉಪಸ್ಥಿತರಿದ್ದರು.

ಅಧಿಕೃತ ನಿವಾಸ ಕಾವೇರಿಯಲ್ಲಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ವಿಡಿಯೊ ಸಂವಾದ ನಡೆಸಿದರು.

ಬಲವಂತದ ವಸೂಲಿಗೆ ತಕ್ಷಣ ಬ್ರೇಕ್ ಹಾಕಿ

ಎಲ್ಲಾ ಜಿಲ್ಲೆಗಳಲ್ಲಿ ಈಗಾಗಲೇ ಸಹಾಯವಾಣಿ ಪ್ರಾರಂಭಿಸಲು ಸೂಚಿಸಲಾಗಿದ್ದು, ಬಲವಂತದ ಸಾಲ ವಸೂಲಾತಿ ಮಾಡುವ ಪ್ರಕರಣಗಳಲ್ಲಿ ಸ್ವಯಂಪ್ರೇರಿತವಾಗಿ ಮೊಕದ್ದಮೆ ದಾಖಲಿಸಬೇಕು. ಸಾಲ ನೀಡುವವರಿಗೆ ತೊಂದರೆ ಉಂಟು ಮಾಡುವ ಯಾವುದೇ ಉದ್ದೇಶದಿಂದ ಈ ಕಾಯ್ದೆಯನ್ನು ಜಾರಿಗೊಳಿಸಿಲ್ಲ. ಆದರೆ ಬಲವಂತದ ವಸೂಲಾತಿ, ಮಾನಹಾನಿ, ಕಿರುಕುಳದ ಮೂಲಕ ಸಾಲ ವಸೂಲಾತಿಯನ್ನು ತಡೆಯುವ ಉದ್ದೇಶದಿಂದ ಜಾರಿಗೆ ತರಲಾಗಿದೆ. ಯಾವುದೇ ಜಿಲ್ಲೆಗಳಲ್ಲಿ ಸಾಲಗಾರರ ಕಿರುಕುಳ ಮುಂದುವರಿದಿರುವುದು ಗಮನಕ್ಕೆ ಬಂದರೆ ಆಯಾ ಜಿಲ್ಲೆಯ ಜಿಲ್ಲಾಧಿಕಾರಿ ಹಾಗೂ ಪೊಲೀಸ್ ವರಿಷ್ಠಾಧಿಕಾರಿ ಅವರನ್ನು ನೇರ ಹೊಣೆಗಾರರನ್ನಾಗಿ ಮಾಡಲಾಗುವುದು ಎಂದು ಸಿಎಂ ಸಿದ್ದರಾಮಯ್ಯ ಎಚ್ಚರಿಸಿದರು.

ಫೋರ್ಜರಿ ಆರೋಪ ಮೂವರ ಸದಸ್ಯತ್ವ ರದ್ದು

ಗದಗ: ಗದಗ -ಬೆಟಗೇರಿ ನಗರಸಭೆಗೆ ಸೇರಿರುವ 54 ವಕಾರಸಾಲು ಆಸ್ತಿಯನ್ನು ಅಕ್ರಮವಾಗಿ ಗುತ್ತಿಗೆ ನೀಡಲು ನಕಲಿ ಠರಾವು ಸೃಷ್ಟಿಸಿ ಅದಕ್ಕೆ ಪೌರಾಯುಕ್ತರ ಸಹಿಯನ್ನೂ ಹಾಕಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರು ಬಿಜೆಪಿ ಸದಸ್ಯರ ಸದಸ್ಯತ್ವವನ್ನು ಅನರ್ಹಗೊಳಿಸಿ ಬೆಳಗಾವಿ ಪ್ರಾದೇಶಿಕ ಆಯುಕ್ತರು ಆದೇಶಿಸಿದ್ದಾರೆ.

ನಗರಸಭೆಗೆ ಮೊದಲ ಅವಧಿಯಲ್ಲಿ ಅಧ್ಯಕ್ಷೆಯಾಗಿದ್ದ ಉಷಾ ದಾಸರ್, ಸದಸ್ಯರಾದ ಅನಿಲ್ ಎಂ. ಅಬ್ಬಿಗೇರಿ ಹಾಗೂ ಗುಳ್ಳಪ್ಪ ಎಸ್. ಮುಶಿಗೇರಿ ಸದಸ್ಯತ್ವದಿಂದ ಅನರ್ಹರಾದವರು.

ಪ್ರಕರಣದ ಹಿನ್ನೆಲೆ: ಗದಗ ಬೆಟಗೇರಿ ನಗರಸಭೆಗೆ ಸೇರಿದ ಸಾವಿರಾರು ಕೋಟಿ ಮೌಲ್ಯದ 54 ವಕಾರಸಾಲು ಆಸ್ತಿಯನ್ನು ಐದು ವರ್ಷಗಳ ಗುತ್ತಿಗೆ ನೀಡಲು ಈ ಮೂವರು ಆರೋಪಿಗಳು ನಕಲಿ ಠರಾವು ಸೃಷ್ಟಿಸಿ ಪೌರಾಯುಕ್ತರ ಸಹಿಯನ್ನೂ ಹಾಕಿದ್ದರು.





ಮೈಸೂರಿನ ದಸರಾ ವಸ್ತುಪ್ರದರ್ಶನ ಮೈದಾನದಲ್ಲಿ ಶನಿವಾರ ನಡೆದ ಚಲನಚಿತ್ರ ನಟ ಡಾಲಿ ಧನಂಜಯ– ಡಾ.ಧನ್ಯತಾ ಮದುವೆ ಶಾಸ್ತ್ರ ನೆರವೇರಿತು.

ಕಾಂಗ್ರೆಸ್ ವರಿಷ್ಠರ ಮುಂದೆ ನಿಲುವು ಸ್ಪಷ್ಟಪಡಿಸಿದ್ದೇನೆ, ಬೇರೆಯವರ ಅಭಿಪ್ರಾಯ ಗೊತ್ತಿಲ್ಲ: ಸಚಿವ ರಾಜಣ್ಣ

ಕೆಪಿಸಿಸಿ ಅಧ್ಯಕ್ಷ ಸ್ಥಾನ ಕೊಟ್ಟರೆ ಸಚಿವ ಸ್ಥಾನ ತ್ಯಜಿಸಲು ಸಿದ್ಧ

ತುಮಕೂರು: ರಾಜ್ಯದಲ್ಲಿ ಶೋಷಿತರ ಸಮಾವೇಶ ಮಾಡುವ ಸಂಬಂಧ ಈಗಾಗಲೇ ವರಿಷ್ಠರ ಗಮನಕ್ಕೂ ತರಲಾಗಿದೆ. ಮೈಸೂರು ಭಾಗದ ಬದಲಾಗಿ ಚಿತ್ರದುರ್ಗ,ಹುಬ್ಬಳ್ಳಿ,ದಾವಣಗೆರೆ ಭಾಗದಲ್ಲಿ ಮಾಡುವ ಬಗ್ಗೆ ಚಿಂತನೆ ನಡೆಸುತ್ತಿದ್ದೇವೆ. ಇದರಿಂದ ಎಲ್ಲರೂ ಸಮಾವೇಶಕ್ಕೆ ಬರಲು ಅನುಕೂಲವಾಗಲಿದೆ ಎಂದು ಸಚಿವ ರಾಜಣ್ಣ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಸಂಸತ್ ಅಧಿವೇಶನ ಹಾಗೂ ರಾಜ್ಯದ ಬಜೆಟ್ ಅಧಿವೇಶನದ ಬಳಿಕ ಶೋಷಿತರ ಸಮಾವೇಶ ನಡೆಸುವ ಸಾಧ್ಯತೆ ಇದೆ. ಕಾಂಗ್ರೆಸ್ ವರಿಷ್ಠರ ಒಪ್ಪಿಗೆ ಮೇರೆಗೆ ಈ ಸಮಾವೇಶ ನಡೆಸಲಾಗುವುದು.ಇದು ದಲಿತ ಸಿಎಂಗಾಗಿ ಮಾಡುತ್ತಿರುವ ಸಮಾವೇಶ ಅಲ್ಲ, ಈ ಸಮಾವೇಶ ಪಕ್ಷದ ಪ್ರಾಯೋಜಿತ ವಾಗಿದ್ದು,ಎಐಸಿಸಿ ಅಧ್ಯಕ್ಷರು, ರಾಹುಲ್‌ಗಾಂಧಿ ಮತ್ತು ಕೆಪಿಸಿಸಿ ಅಧ್ಯಕ್ಷರನ್ನು ಆಹ್ವಾನಿಸಲಾಗುವುದು. ಬೇರೆ ಪಕ್ಷದವರಿಗೆ ಆಹ್ವಾನ ಇಲ್ಲ ಎಂದು ಸ್ಪಷ್ಟಪಡಿಸಿದರು.

ಒಬ್ಬರಿಗೆ ಒಂದೇ ಹುದ್ದೆಗೆ ಬದ್ಧ: ಕಾಂಗ್ರೆಸ್ ಪಕ್ಷದಲ್ಲಿ ಒಬ್ಬರಿಗೆ ಒಂದು ಹುದ್ದೆ ಎಂಬ ಸಿದ್ಧಾಂತ ಇದೆ. ಅದಕ್ಕೆ ನಾನು ಬದ್ಧ. ನನಗೆ ಕೆಪಿಸಿಸಿ ಅಧ್ಯಕ್ಷ ಸ್ಥಾನ ನೀಡಿದರೆ,ಮಂತ್ರಿಗಿರಿಯನ್ನು ಬಿಡಲು ಸಿದ್ಧ. ಈ ಮಾತನ್ನು ವರಿಷ್ಠರ ಮುಂದೆಯೂ ಸ್ಪಷ್ಟಪಡಿಸಿದ್ದೇನೆ. ನಾನು ಕಳೆದ ಮೂರು ದಿನ ದೆಹಲಿಯಲ್ಲೇ ಇದ್ದೆ. 2023ರ ಮೇ 18 ರಂದು ಪಕ್ಷದ ಹೈಕಮಾಂಡ್ ಹೊರಡಿಸಿದ್ದ ಸುತ್ತೋಲೆಯಲ್ಲಿಯೇ ಮುಂದಿನ ಲೋಕಸಭಾ ಚುನಾವಣೆವರೆಗೆ ಕೆಪಿಸಿಸಿ ಅಧ್ಯಕ್ಷರ ಮುಂದುವರಿಕೆ ಎಂದು ಉಲ್ಲೇಖಿಸಲಾಗಿದೆ. ಈ ಬಗ್ಗೆ ವರಿಷ್ಠರ ಭೇಟಿ ವೇಳೆ ಗಮನಕ್ಕೆ ತಂದಿದ್ದೇನೆ.ಯಾವ ಲೋಕಸಭಾ ಚುನಾವಣೆ ಎಂಬುದನ್ನು ವರಿಷ್ಠರು ಸ್ಪಷ್ಟಪಡಿಸಬೇಕೆಂದು ಸಹ ಮನವಿ ಮಾಡಿದ್ದಾಗಿ ಕೆ.ಎನ್.ರಾಜಣ್ಣ ತಿಳಿಸಿದರು.

ಪಕ್ಷದ ಆಂತರಿಕ ವಿಷಯಗಳ ಕುರಿತು ಮಾತನಾಡದಂತೆ ಹೈಕಮಾಂಡ್ ಸೂಚನೆ ನೀಡಿದ್ದು, ಕೆಪಿಸಿಸಿ ಅಧ್ಯಕ್ಷರು ಅಥವಾ ಸಿಎಂ ಬದಲಾವಣೆ ಕುರಿತಂತೆ ಸೂಕ್ತ ಸಮಯದಲ್ಲಿ ಎಲ್ಲರೊಂದಿಗೆ ಚರ್ಚಿಸಿ ವರಿಷ್ಠರು ಸೂಕ್ತ ನಿರ್ಧಾರ ಕೈಗೊಳ್ಳಲಿದ್ದಾರೆ. ಸಿಎಂ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅವರು ತಮ್ಮ ಹುದ್ದೆಗಳನ್ನು ಸಮರ್ಥವಾಗಿ ನಿಭಾಯಿಸುತ್ತಿದ್ದಾರೆ. ಸಂಪುಟದ ಪುನಾರಚನೆ ಸೇರಿದಂತೆ ಪಕ್ಷದ ಯಾವುದೇ ನಿರ್ಧಾರ ಹೈಕಮಾಂಡ್‌ಗೆ ಬಿಟ್ಟದ್ದು.
-ಸಲೀಂ ಅಹ್ಮದ್, ವಿಧಾನ ಪರಿಷತ್ ಸದಸ್ಯ

ಮುಖ್ಯಮಂತ್ರಿ ಹುದ್ದೆ ಎರಡೂವರೆ ವರ್ಷಗಳಿಗೆ ಒಪ್ಪಂದ ಆಗಿದೆ ಎಂಬ ಬಗ್ಗೆ ಯಾವ ಪತ್ರದಲ್ಲಿಯೂ ಉಲ್ಲೇಖಿಸಿಲ್ಲ. 5 ವರ್ಷಗಳ ಕಾಲ ಸಿದ್ದರಾಮಯ್ಯನವರೇ ಮುಖ್ಯಮಂತ್ರಿಯಾಗಿ ಮುಂದುವರಿಯುತ್ತಾರೆ. ಈಗಾಗಲೇ ನಮ್ಮ ಪಕ್ಷದ ಹಿರಿಯ ಸಚಿವರಾದ ಡಾ. ಜಿ. ಪರಮೇಶ್ವರ್, ಎಚ್.ಸಿ. ಮಹದೇವಪ್ಪ, ಎಂ.ಬಿ. ಪಾಟೀಲ್ ಅವರು ಸಹ ಅದನ್ನೇ ಹೇಳಿದ್ದಾರೆ. ಹಾಗಾಗಿ ನಾನು ಸಹ ಅವರ ಮಾತನ್ನು ಪುನರುಚ್ಚರಿಸುವೆ.
ಕೆ.ಎನ್.ರಾಜಣ್ಣ, ಸಚಿವ

ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ನನ್ನ ಬೇಡಿಕೆ ಅಲ್ಲ

ಕೋಲಾರ: ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ನನ್ನ ಬೇಡಿಕೆ ಅಲ್ಲ. ಇದು ಸಚಿವ ರಾಜಣ್ಣ ಅವರ ಬೇಡಿಕೆ ಆಗಿದ್ದು ಈ ಕುರಿತು ಅವರನ್ನೇ ಕೇಳಿ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಸ್ಪಷ್ಟವಾಗಿ ಹೇಳಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿ, ನಾನು 2028ಕ್ಕೆ ಮುಖ್ಯಮಂತ್ರಿ ಪದವಿಯ ಆಕಾಂಕ್ಷಿಯಾ ಗಿದ್ದು ಈಗ ಸಿಎಂ ಹುದ್ದೆ ಕೇಳಲ್ಲ. ಕೆಪಿಸಿಸಿ ಅಧ್ಯಕ್ಷರ ಬದಲಾವಣೆಯೂ ನನ್ನ ಬೇಡಿಕೆ ಅಲ್ಲ. ಮತ್ತೊಮ್ಮೆ ಪಕ್ಷ ಸಂಘಟಿಸಿ ಅಧಿಕಾರಕ್ಕೆ ತರುವುದು ನನ್ನ ಗುರಿ ಆಗಿದೆ. ಸಿದ್ದರಾಮಯ್ಯ ಅವರನ್ನು ನಾನು ಮುಖ್ಯಮಂತ್ರಿ ಮಾಡಿಲ್ಲ. ಅವರು ಸಿಎಂ ಆಗಿ ಮುಂದುವರಿಯುವ ವಿಚಾರ ನನ್ನ ವ್ಯಾಪ್ತಿಗೆ ಬರುವುದಿಲ್ಲ. ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ವರಿಷ್ಠರಿಗೆ ಸಂಬಂಧಿಸಿದ್ದು ಎಂದು ತಿಳಿಸಿದ್ದಾರೆ.

ಮಾ.17ಕ್ಕೆ ಜಾತಿ ಗಣತಿ ಬಿಡುಗಡೆ

ಚಾಮರಾಜನಗರದಲ್ಲಿ ಮಾ. 17 ರಂದು ನಡೆಯುವ ಸಚಿವ ಸಂಪುಟದ ಸಭೆಯಲ್ಲಿ ಜಾತಿ ಗಣತಿಯನ್ನು ಬಿಡಗುಡೆ ಮಾಡುವ ಸಂಭವವಿದೆ. ಜಾತಿ ಗಣತಿಯ ಬಗ್ಗೆ ವಿಸ್ತೃತವಾಗಿ ಚರ್ಚೆ ನಡೆಸಿ, ನ್ಯಾ.ನಾಗಮೋಹನ್ ದಾಸ್ ವರದಿಯನ್ನು ಆಧರಿಸಿ, ಯಾರಿಗೂ ಅನ್ಯಾಯವಾಗದ ರೀತಿಯಲ್ಲಿ ಒಳಮೀಸಲಾತಿ ಜಾರಿಗೆ ತರಲಿದ್ದೇವೆ. ಪಕ್ಷದ ಪ್ರಣಾಳಿಕೆಯಲ್ಲಿ ಒಪ್ಪಿಕೊಂಡಿರುವಂತೆ ಒಳ ಮೀಸಲಾತಿ ಜಾರಿಗೆ ತರಲು ಸಿದ್ಧ ಎಂದು ನುಡಿದರು.

ಜಪಾನಿನಲ್ಲಿ ಒಂಟಿತನ ನೀಗಿಸಿಕೊಳ್ಳಲು ಆಲಿಂಗನ ಕೆಫೆಗಳಿಗೆ ಹೋಗಬಹುದು!

ಜಪಾನಿನಲ್ಲಿ ಒಂದು ವಿಚಿತ್ರ ಸೇವೆ ಇದೆ. ಇದಕ್ಕೆ 'ಸೊಯಿನಿಯಾ' ಅಂತ ಕರೆಯುತ್ತಾರೆ. ಇದರ ಅರ್ಥ 'ಆಲಿಂಗನ' ಅಂತ. ಕೆಲವು ಕೆಫೆಗಳಲ್ಲಿ ಗ್ರಾಹಕರಿಗೆ ಆಲಿಂಗನವನ್ನು ಒದಗಿಸಲಾಗುತ್ತದೆ. ಸೊಯಿನಿಯಾ ಕೆಫೆಗಳನ್ನು 'ಒಟ್ಟಿಗೆ ನಿದ್ರೆ ಹಂಚಿಕೊಳ್ಳುವ ಸ್ಥಳ' ಎಂದೂ ಹೇಳಬಹುದು. ಕೆಲವು ಕಡೆ ನಿದ್ರೆ ಮತ್ತು ಆಲಿಂಗನ ಸೇವೆ ನೀಡುವ ವಿಶಿಷ್ಟ ಕೆಫೆಗಳಿವೆ. ಇವನ್ನು 'ಕಡ್ಲಿಂಗ್ ಕೆಫೆ' ಅಥವಾ 'ಸ್ಲೀಪಿಂಗ್ ಕೆಫೆ' ಎಂದೂ ಕರೆಯುತ್ತಾರೆ. ಈ ದಿನಗಳಲ್ಲಿ ಸೊಯಿನಿಯಾ ಕೆಫೆ ಜಪಾನ್ ಯುವಕರಲ್ಲಿ ಹೆಚ್ಚು ಜನಪ್ರಿಯವಾಗಿದೆ. ಏಕೆಂದರೆ ಅವರ ಜೀವನದಲ್ಲಿ ಒಂಟಿತನ ಮತ್ತು ಮಾನಸಿಕ ಒತ್ತಡ ಹೆಚ್ಚಾಗುತ್ತಿದೆ. ಆ ಸೇವೆಯ ಹಿಂದಿನ ಮುಖ್ಯ ಉದ್ದೇಶ ಅಲೆಮಾರಿ ಜೀವನ ನಡೆಸುವವರಿಗೆ ಅಥವಾ ಏಕಾಂಗಿತನ ಅನುಭವಿಸುವವರಿಗೆ ಸಂಗಾತಿಯನ್ನು ಒದಗಿಸುವುದು.

ಅಷ್ಟಕ್ಕೂ ಸೊಯಿನಿಯಾ ಕೆಫೆ ಅಂದರೆ ಏನು?

ಸೊಯಿನಿಯಾ ಕೆಫೆ ಎಂದರೆ ಗ್ರಾಹಕರು ಹಣ ಪಾವತಿಸಿ ಸುಂದರ, ಆಕರ್ಷಕ ಮಹಿಳೆಯರ ಜತೆಗೆ ಆಲಿಂಗನದಲ್ಲಿ ನಿದ್ರಿಸಬಹುದಾದ ಸ್ಥಳ. ಇದರಲ್ಲಿ ಯಾವುದೇ ರೀತಿಯ ಶಾರೀರಿಕ ಸಂಬಂಧ ಇರುವುದಿಲ್ಲ. ಮಹಿಳೆಯರ ಜತೆ ಅನುಚಿತವಾಗಿ

ವರ್ತಿಸುವಂತಿಲ್ಲ. ನೀವು ಬಯಸಿದ ಮಹಿಳೆಯ ಜತೆ ಗೌರವದಿಂದ ಮತ್ತು ಸಭ್ಯವಾಗಿ ವರ್ತಿಸಬೇಕು. ಆ ಸೇವೆಯ ಉದ್ದೇಶ 'ಭಾವನಾತ್ಮಕ ಆರಾಮ ಮತ್ತು ಒಂಟಿತನ ನಿವಾರಣೆ' ಬಯಸುವವರಿಗೆ ಆಲಿಂಗನ ನೀಡುವುದು. ಈ ಕೆಫೆಗಳಲ್ಲಿ ಆಕರ್ಷಕ ಯುವತಿಯರು 'ಸ್ಲೀಪ್ ಕಂಪಾನಿಯನ್‌ಗಳು' ಆಗಿ ಕೆಲಸ ಮಾಡುತ್ತಾರೆ. ಅವರು ಆಲಿಂಗನಕ್ಕೇ ಸಿಗುತ್ತಾರೆಂದು ಅವರ ಜತೆ ಅಸಭ್ಯವಾಗಿ ವರ್ತಿಸದಿರುವುದರಿಂದಲೇ ಈ ಕೆಫೆ ಘನತೆಯನ್ನು ಕಾಪಾಡಿಕೊಂಡಿದೆ. ಇಲ್ಲದಿದ್ದರೆ ಇದು ವೇಶ್ಯಾವಾಟಿಕೆ ಎಂದು ಕರೆಯಿಸಿಕೊಳ್ಳುತ್ತಿತ್ತು.

ಗ್ರಾಹಕರು ಒಂದು ಗಂಟೆ ಅಥವಾ ಹೆಚ್ಚು ಕಾಲ ಬಯಸಿದ ಮಹಿಳೆಯ ಜತೆ ಆಲಿಂಗಿಸಿ ನಿದ್ರಿಸಲು ಬುಕಿಂಗ್ ಮಾಡಬಹುದು. ಆ ಕೆಫೆಗಳಲ್ಲಿ ನೀವು ಬಯಸಿದ ಸುಂದರ ಯುವತಿಯ ಕೈ ಹಿಡಿದು ನಿದ್ರಿಸಬಹುದು, ತಲೆಯ ಮೇಲೆ ನೆತ್ತಿಯ ತುಳಿಯುವ ಸೇವೆ ಮಾಡಿಸಿಕೊಳ್ಳಬಹುದು, ಆಕೆಯಿಂದ ಪೋಲಿ ಮಾತುಗಳನ್ನು ಕೇಳಿಸಿಕೊಳ್ಳಬಹುದು, ಹಿತವಾಗಿ ಮಸಾಜ್ ಮಾಡಿಸಿಕೊಳ್ಳಬಹುದು ಇತ್ಯಾದಿ. ಆಕೆಯ ಜತೆ ಇದ್ದಷ್ಟು ಹೊತ್ತು ಆಕೆ ಉತ್ತಮ ಸಂಗಾತಿಯಾಗಿರುತ್ತಾಳೆ. ಆದರೆ ಆಕೆಯನ್ನು ವೇಶ್ಯೆ ಎಂದು ಭಾವಿಸುವಂತಿಲ್ಲ ಮತ್ತು ಆ ಉದ್ದೇಶಕ್ಕಾಗಿ ಬಳಸಿಕೊಳ್ಳುವಂತಿಲ್ಲ.

ಸೊಯಿನಿಯಾ ಕೆಫೆ ಹುಟ್ಟಿಕೊಳ್ಳಲು ಆಧುನಿಕ ಜೀವನ ಶೈಲಿ, ಒಂಟಿತನ ಮತ್ತು ಮನುಷ್ಯ ಸಂಬಂಧದ ಕೊರತೆ ಕಾರಣ ಎಂದು ಹೇಳಬಹುದು. ಜಪಾನಿನಲ್ಲಿ ಅನೇಕರು ತಮ್ಮ ವಿಲಕ್ಷಣ ಜೀವನ ಶೈಲಿಯಿಂದಾಗಿ ಒಂಟಿತನ ಅನುಭವಿಸುತ್ತಾರೆ. ಜಪಾನ್ ಅತಿ ಕಡಿಮೆ ಜನನ ಪ್ರಮಾಣ ಹೊಂದಿರುವ ರಾಷ್ಟ್ರಗಳಲ್ಲಿ ಒಂದಾಗಿದೆ ಮತ್ತು ಕುಟುಂಬ ಸಂಬಂಧಗಳ ಬಲಹೀನತೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಇಂಥ ಪರಿಸ್ಥಿತಿಯಲ್ಲಿ, ಕೆಲವು ಮಂದಿ ಆಲಿಂಗನದ ಮೂಲಕ ಸಾಂತ್ವನ ಪಡೆಯಲು ಬಯಸುತ್ತಾರೆ.

ಸೊಯಿನಿಯಾ ಕೆಫೆ 2012ರ ಸಮಯದಲ್ಲಿ ಟೋಕಿಯೊ ನಗರದಲ್ಲಿ ಆರಂಭವಾಯಿತು. ಇದರ ಮೂಲ ಉದ್ದೇಶವೇ ಜನರ ಒಂಟಿತನವನ್ನು ಕಡಿಮೆ ಮಾಡುವುದು ಮತ್ತು ದೈನಂದಿನ ಒತ್ತಡಗಳಿಂದ ಅವರಿಗೆ ಆರಾಮ ನೀಡುವುದು. ಜಪಾನಿನಲ್ಲಿ ಈ ರೀತಿಯ ಸೇವೆಗಳ ಅಗತ್ಯವಿರುವುದಕ್ಕೆ ಹಲವು ಪ್ರಮುಖ ಸಾಮಾಜಿಕ ಕಾರಣಗಳಿವೆ. ಜಪಾನ್ ವಿಶ್ವದಲ್ಲಿಯೇ ಹೆಚ್ಚು ಕೆಲಸದ ಹೊರೆ ಹೊತ್ತ ದೇಶಗಳಲ್ಲಿ ಒಂದಾಗಿದೆ. 16-18 ಗಂಟೆಗಳ ಸುದೀರ್ಘ ಕೆಲಸದ ಅವಧಿ, ಕಡಿಮೆ ರಜೆಗಳು ಮತ್ತು ವ್ಯಾಪಕ ಒತ್ತಡದ ಕಾರಣದಿಂದ ಜನರು ನೆಮ್ಮದಿಯ ಕ್ಷಣಗಳನ್ನು ಹುಡುಕುತ್ತಾರೆ. ಈ ಸಂದರ್ಭದಲ್ಲಿ ಸೊಯಿನಿಯಾ ಕೆಫೆ ಅವರನ್ನು ಭಾವನಾತ್ಮಕವಾಗಿ ಮರುಶಕ್ತಿ ಪಡೆಯಲು ಸಹಾಯಮಾಡುತ್ತದೆ.

ಜಪಾನಿನಲ್ಲಿ ಈ ದಿನಗಳಲ್ಲಿ ಅಲ್ಲಿನ ಯುವಜನತೆ ದೀರ್ಘಕಾಲೀನ ಸಂಬಂಧಗಳನ್ನು ಹೊಂದಲು ಕಡಿಮೆ ಆಸಕ್ತಿ ತೋರಿಸುತ್ತಿದ್ದಾರೆ. ಈ ಸಮಯದಲ್ಲಿ, ಸೊಯಿನಿಯಾ ಸೇವೆ ಭಾವನಾತ್ಮಕವಾಗಿ ಆರಾಮ ಮತ್ತು ಬೌದ್ಧಿಕ ನೆಮ್ಮದಿ ನೀಡುತ್ತದೆ. ಜಪಾನಿನಲ್ಲಿ ಜನಸಂಖ್ಯೆ ದಿನದಿಂದ ದಿನಕ್ಕೆ ಕುಸಿಯುತ್ತಿದ್ದು, ಕುಟುಂಬ ವ್ಯವಸ್ಥೆ ದುರ್ಬಲವಾಗುತ್ತಿದೆ. ನಗರದ ಬಹುತೇಕ ಜನರು ತಮ್ಮ ವೃತ್ತಿಜೀವನದ ಒತ್ತಡದಲ್ಲಿ ಒಂಟಿಯಾಗಿ ಬದುಕುತ್ತಿದ್ದಾರೆ. ಸ್ನೇಹಿತರು ಅಥವಾ ಕುಟುಂಬದವರೊಂದಿಗೆ ಸಮಯ ಕಳೆಯುವ ಅವಕಾಶವಿಲ್ಲದ ಕಾರಣ, ಇಂಥ ಸೇವೆಗಳು ಜನಪ್ರಿಯವಾಗುತ್ತಿವೆ.

ಹಾಗಂತ ಇದನ್ನು ಎಲ್ಲರೂ ಒಪ್ಪಿಕೊಂಡಿದ್ದಾರೆ ಎಂದೇನೂ ಇಲ್ಲ. ಇದನ್ನು ವಿರೋಧಿಸುವವರೂ ಇದ್ದಾರೆ. ಇದೊಂದು ಅನೈತಿಕ ವ್ಯವಹಾರ ಮತ್ತು ವೇಶ್ಯಾವಾಟಿಕೆಯನ್ನು ಪ್ರೇರೇಪಿಸುವ ವೃತ್ತಿ ಎಂದೂ ಜರೆದವರಿದ್ದಾರೆ. ಇದು ಕೌಟುಂಬಿಕ ವ್ಯವಸ್ಥೆ ಶಿಥಿಲವಾಗಲು ಕಾರಣವಾಗುತ್ತಿದೆ ಎಂದೂ ಅಭಿಪ್ರಾಯಪಡುವವರಿದ್ದಾರೆ. ಇದು ಭಾವನಾತ್ಮಕ ಒತ್ತಡವನ್ನುತಾತ್ಕಾಲಿಕವಾಗಿ ನಿವಾರಿಸುತ್ತದೆ ಆದರೆ ಶಾಶ್ವತ ಪರಿಹಾರ ನೀಡುವುದಿಲ್ಲ ಎನ್ನುವವರೂ ಇದ್ದಾರೆ. ಆದರೆ ಇದು ಕ್ಯಾಬರೆ ಮತ್ತು ವೇಶ್ಯಾವಾಟಿಕೆ ಕೇಂದ್ರಗಳಂತೆ ವಿಕೃತಗೊಂಡಿಲ್ಲ ಎನ್ನುವುದು ಅಷ್ಟೇ ನಿಜ. ಅದಕ್ಕೆ ಕಾರಣ, ಆ ಕೆಫೆಗಳು ಕಟ್ಟುನಿಟ್ಟಿನ ನಿಯಮಗಳಿಗೆ ಒಳಪಟ್ಟಿರುವುದು.

ಹೀಗಾಗಿ ಇದು ವಿಕೃತಿಯ ಸ್ವರೂಪವನ್ನು ಪಡೆದಿಲ್ಲ. ಆದರೆ ಇದು ಸಂಬಂಧಗಳ ಪ್ರಾಮುಖ್ಯದ ಕೊರತೆಯ ಹೆಗ್ಗುರುತಾಗಿರುವುದು ನಿಜ. ಇದನ್ನು ಭಾವನಾತ್ಮಕ ಬೆಂಬಲ ವ್ಯವಸ್ಥೆಯ ಒಂದು ಭಾಗವಾಗಿ ನೋಡಲಾಗುತ್ತಿದೆ. ಇದು ಒಂಟಿತನ, ಒತ್ತಡ ಮತ್ತು ಕ್ಷಣಿಕ ನೆಮ್ಮದಿ ನೀಡುವ ಒಂದು ಪ್ರಯತ್ನವಷ್ಟೇ. ಹೀಗಾಗಿ ಇಂದಿಗೂ ಈ ಕೆಫೆಗಳು ತಮ್ಮ ಪಾವಿತ್ರ್ಯವನ್ನು ಕಾಪಾಡಿಕೊಂಡಿವೆ.

ಇಂಥದ್ದೊಂದು ಕೆಫೆ ಇದೆ ಎಂಬುದು ಗೊತ್ತಾಗಿದ್ದು ಜಪಾನಿನಿಂದ ವಾಪಸ್ ಆದ ನಂತರವೇ!

ಭಾರತದಲ್ಲೇನಾದರೂ ಈ ಕೆಫೆಗಳು ಜಾರಿಗೆ ಬಂದರೆ ಏನಾಗಬಹುದು? ಊಹಿಸುವುದೂ ಕಷ್ಟ.

ಇನ್ನಷ್ಟು ಕೊಡಬೇಕೆನ್ನುವ ಹಪಾಹಪಿ!

ಜಪಾನಿನಲ್ಲಿ ಒಂದು ವಿಶಿಷ್ಟ ಸಂಪ್ರದಾಯವಿದೆ. ಅದಕ್ಕೆ ಅವರು 'ಓಮೋಟೆನಾಶಿ' ಅಂತಾರೆ. ಹಾಗಂದರೆ, ಒಂದು ಸೇವೆಯನ್ನು ನಿರೀಕ್ಷೆಗಿಂತ ಹೆಚ್ಚು ಉತ್ತಮವಾಗಿ ನೀಡುವುದು ಎಂದರ್ಥ. ಗ್ರಾಹಕರು ಅಪೇಕ್ಷಿಸಿದ್ದಕ್ಕಿಂತ ಹೆಚ್ಚಿನ ಸಂತೃಪ್ತಿಯನ್ನು ನೀಡುವುದು. ಇದನ್ನು ಇನ್ನಷ್ಟು, ಮತ್ತಷ್ಟು ಸತ್ಕಾರ ಮಾಡುವ ಹಪಾಹಪಿ ಗುಣ ಎನ್ನಬಹುದು.

ಉದಾಹರಣೆಗೆ, ಸಾಮಾನ್ಯವಾಗಿ ಊಟವಾದ ಬಳಿಕ ಐಸ್ ಕ್ರೀಮ್ ನೀಡುವುದು ಸಹಜ. ಆದರೆ ಓಮೋಟೆನಾಶಿಯನ್ವಯ ಉಚಿತವಾಗಿ ಮತ್ತೆ ಎರಡು ಬಗೆಯ ಐಸ್ ಕ್ರೀಮ್, ಸಿಹಿ ತಿಂಡಿ, ವೀಳ್ಯ ಮತ್ತು ಕೊನೆಯಲ್ಲಿ ಸಣ್ಣ ಉಡುಗೊರೆ ನೀಡುವುದು. ಗ್ರಾಹಕರು ನಿರೀಕ್ಷಿಸದೇ ಇರುವ ಅಚ್ಚರಿಯನ್ನು ನೀಡುವುದು ಈ ಸಂಸ್ಕೃತಿಯ ಉದ್ದೇಶ.



ಇದೇ ಅಂತರಂಗ ಸುದ್ದಿ

ವಿಶ್ವೇಶ್ವರ ಭಟ್
vbhat@me.com

ಒಮ್ಮೆ ಭಾರತದ ಗ್ರಾಹಕರೊಬ್ಬರು ಹೋಟೆಲಿಗೆ ಹೋಗಿದ್ದರು. ಅವರ ಬಳಿ ಸ್ಥಳೀಯ ಕರೆನ್ಸಿ (ಯೆನ್) ಇರಲಿಲ್ಲ. ತಾವು ಡಾಲರ್ ನೀಡುವುದಾಗಿ ಹೇಳಿದರು. "ಇಲ್ಲ, ನಾವು ಡಾಲರ್ ಸ್ವೀಕರಿಸುವುದಿಲ್ಲ" ಎಂದು ಹೋಟೆಲಿನವ ಹೇಳಿದ. ಅವರು ಅರ್ಧ ಊಟ ಮಾಡಿದ್ದರು. ಫಜೀತಿ ಆಯ್ತಲ್ಲ ಎಂದು ಅವರು ಅಂದುಕೊಂಡು, ಎಟಿಎಂ ಕೇಂದ್ರದಿಂದ ಹಣ ತೆಗೆಯಲು ಅಲ್ಲಿಂದ ಹೊರಡುವವರಿದ್ದರು. ಆಗ ಮ್ಯಾನೇಜರ್ ಬಂದು, "ನೀವು ಮೊದಲು ಊಟಮಾಡಿ. ನಂತರ ಎಟಿಎಂಗೆ ಹೋಗುವಿರಂತೆ" ಎಂದು ಹೇಳಿದ. "ಒಂದು ವೇಳೆ ನಾನು ಎಟಿಎಂಗೆ ಹಣ ತರಲು ಹೋದವನು ವಾಪಸ್ ಬರದಿದ್ದರೆ ಏನು ಮಾಡ್ತೀರಿ?" ಎಂದು ಕೇಳಿದಾಗ, "ಹಾಗೆ ಯಾರೂ ಮಾಡುವುದಿಲ್ಲ. ಅದರಿಂದ ನಮ್ಮ ಗ್ರಾಹಕರಿಗೆ ಸಮಾಧಾನ ಸಿಗುವಂತಿದ್ದರೆ, ಸಿಗಲಿ. ನಮಗೂ ಸಂತೋಷವೇ" ಎಂದು ಹೇಳಿದನಂತೆ.

ಮನೆಗೆ ಬಂದ ಅತಿಥಿಯನ್ನು ಸತ್ಕರಿಸುವುದು, ಹೋಗುವಾಗ ಉಡುಗೊರೆ ನೀಡಿ ಬೀಳ್ಕೊಡುವುದು ಸಾಮಾನ್ಯ. ಆದರೆ ಜಪಾನಿಯರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಅತಿಥಿ ಸತ್ಕಾರ ಮಾಡುತ್ತಾರೆ. ಅದಕ್ಕೆ ಕಾರಣ ಅವರ ಸಂಸ್ಕಾರದಲ್ಲಿ ಬಂದಿರುವ ಓಮೋಟೆನಾಶಿ. ಇದು ಸತ್ಕಾರ ಮತ್ತು ಸೇವಾ ಮನೋಭಾವಕ್ಕೆ ಬರೆಯುವ ವಿಶೇಷ ಭಾಷ್ಯ. ಅತಿಥಿಗಳು ನಿರೀಕ್ಷಿಸದೇ ಇರುವುದನ್ನು ನೀಡುವುದು, ಆ ಮೂಲಕ ಅವರನ್ನು ಸಂಪ್ರೀತಗೊಳಿಸುವುದು ಅವರ ಸಂಪ್ರದಾಯದಲ್ಲಿ ಹಾಸುಹೊಕ್ಕಾಗಿದೆ.

ಕಾಫಿಗೆ ದೈವೀಶಕ್ತಿ ನೀಡಿದವ!

"ನೀವು ಜಪಾನಿನಲ್ಲಿ ಕಾಫಿ ಕುಡಿಯುವಾಗ 'ಡೈಬೊ ಕಟ್ಸುಜಿ' ಎಂಬಾತನ ಹೆಸರನ್ನು ಕೇಳಿರುತ್ತೀರಿ" ಎಂದು ಸ್ನೇಹಿತರೊಬ್ಬರು ಹೇಳಿದರು. ಅದಕ್ಕೆ ನಾನು, "ಇಲ್ಲ, ಕೇಳಿಲ್ಲ. ಏನು ವಿಶೇಷ?"



ಎಂದು ಕೇಳಿದೆ.

"ಅಲ್ಲ ಸ್ವಾಮಿ, ಜಪಾನಿನಲ್ಲಿ ನೀವು ಕಾಫಿ ಕುಡಿದಿರುತ್ತೀರಿ. ಆದರೆ ಆತನ ಹೆಸರನ್ನು ಕೇಳಿಲ್ಲವಾ?" ಎಂದು ಮತ್ತೆ ಕೇಳಿದರು. "ಆತ ಟೋಕಿಯೋದ ಐಕಾನಿಕ್ ಕಾಫಿ ಮಾಸ್ಟರ್. ಕಾಫಿ ತಯಾರಿಸುವ ಶೈಲಿಗೆ, ಹಳೆಯ ಜಪಾನಿನ ತತ್ವಶಾಸ್ತ್ರದ ಸ್ಪರ್ಶ ನೀಡಿದ ಮಾಂತ್ರಿಕ" ಎಂದು ಬಣ್ಣಿಸಿದರು. "ಮೊದಲೇ ಈ ಸಂಗತಿಯನ್ನು ಹೇಳಿದ್ದರೆ, ಆತನ ಬಗ್ಗೆ ಮತ್ತಷ್ಟು ವಿಷಯವನ್ನು ತಿಳಿದುಕೊಳ್ಳುತ್ತಿದ್ದೆ" ಎಂದು ಹೇಳಿದೆ.

ಡೈಬೊ ಕಟ್ಸುಜಿ ಜಪಾನಿನ ಪ್ರಸಿದ್ಧ ಹ್ಯಾಂಡ್-ಡ್ರಿಪ್ ಕಾಫಿ ಮಾಸ್ಟರ್‌ಗಳಲ್ಲಿ ಒಬ್ಬ. ಆತ 'ಡೈಬೊ ಕಾಫಿ' ಎಂಬ ಟೋಕಿಯೊದ ಶ್ರೇಷ್ಠ ಕಾಫಿ ಶಾಪ್ ಅನ್ನು ನಡೆಸುತ್ತಿದ್ದ. ಆ ಕಾಫಿ ಹೌಸ್ ತನ್ನ ಶಾಂತ, ತಪಸ್ಸಿನಂತೆ ಶ್ರದ್ಧೆಯಿಂದ ಕಾಫಿ ತಯಾರಿಸುವ ವಿಧಾನದಿಂದ ಪ್ರಖ್ಯಾತವಾಗಿತ್ತು. ಅದು ಕಾಫಿ ತಯಾರಿಕೆಯಲ್ಲಿ ಟೋಕಿಯೋ ನಗರಕ್ಕೆ ವಿಶೇಷ ಮಹತ್ವ ಮತ್ತು ಸಾಂಸ್ಕೃತಿಕ ಹೆಗ್ಗುರುತನ್ನು ತಂದುಕೊಟ್ಟಿತ್ತು.

1975ರಲ್ಲಿ ಡೈಬೊ ಕಟ್ಸುಜಿ ಟೋಕಿಯೋ ನಗರದಲ್ಲಿ 'ಡೈಬೊ ಕಾಫಿ ಶಾಪ್' ಅನ್ನು ಪ್ರಾರಂಭಿಸಿದ. ಅದು ಟೋಕಿಯೋದ ಐಷಾರಾಮಿ ಪ್ರದೇಶದಲ್ಲಿ 38 ವರ್ಷಗಳ ಕಾಲ ನಡೆದುಕೊಂಡು ಬಂದಿತು. ಡೈಬೊ ಕಟ್ಸುಜಿ ಈ ಜಗತ್ತು ಕಂಡ ಹ್ಯಾಂಡ್-ಡ್ರಿಪ್ (Hand-Drip) ಕಾಫಿ ತಯಾರಿಸುವ ಒಬ್ಬ ಶ್ರೇಷ್ಠ ಪಂಡಿತ. ಪ್ರತಿ ಕಪ್ ಕಾಫಿಯನ್ನು ಸಾಂಪ್ರದಾಯಿಕ ಪದ್ಧತಿಯಲ್ಲಿ ತಯಾರಿಸುತ್ತಿದ್ದ, ಅದನ್ನು ತಪಸ್ಸಿನಂತೆ ನೋಡಿಕೊಳ್ಳುತ್ತಿದ್ದ.

ನನ್ನ ಸ್ನೇಹಿತರು ಆತನನ್ನು ಬಣ್ಣಿಸಿದ ರೀತಿ ನನಗೆ ಇಷ್ಟವಾಯಿತು ಮತ್ತು ಡೈಬೊ ಬಗ್ಗೆ ಮತ್ತಷ್ಟು ಕುತೂಹಲ ಮೂಡಿಸಿತು.

"ಡೈಬೊ ಕಟ್ಸುಜಿಯು ಕಾಫಿ ತಯಾರಿಕೆಯನ್ನು ಶಿಲ್ಪಕಲೆ ಎಂದು ಪರಿಗಣಿಸುತ್ತಿದ್ದ" ಎಂದು ಹೇಳಿದ್ದು ಆತನ ಬಗ್ಗೆ ಮತ್ತಷ್ಟು ಆಸಕ್ತಿ ಮೂಡುವಂತೆ ಮಾಡಿತು. ಆತ ಪ್ರತಿ ಕಪ್ ಕಾಫಿಯನ್ನು ಸಂಪೂರ್ಣ ಶ್ರದ್ಧೆಯಿಂದ ತಯಾರಿಸುತ್ತಿದ್ದ. ಉಳಿತಾಯಕ್ಕಾಗಿ ವೇಗದ ಪ್ರಕ್ರಿಯೆಗಳನ್ನು ಅನುಸರಿಸುವ ಬದಲು, ತಾಳ್ಮೆ, ಕೌಶಲ ಮತ್ತು ಮಾನಸಿಕ ಶಾಂತತೆಯೊಂದಿಗೆ ಕಾಫಿ ಸಿದ್ಧಪಡಿಸುತ್ತಿದ್ದ. ಆತನ ಕಾಫಿ ಶಾಪ್ ಎಲ್ಲ ವರ್ಗದ ಕಾಫಿ ಪ್ರಿಯರಿಗೆ ಶ್ರದ್ಧಾ ಸ್ಥಳವಾಗಿತ್ತು.

ಆತ ಕಾಫಿ ತಯಾರಿಕೆಯನ್ನು ಧ್ಯಾನಕ್ಕೆ ಸಮ ಎಂದು ಹೇಳುತ್ತಿದ್ದ. "ಕಾಫಿ ಪೇಯವಲ್ಲ, ಅದು ಮಾನಸಿಕ ಸ್ಥಿತಿ" ಎಂದು ಹೇಳುತ್ತಿದ್ದ. ಅವಸರದಲ್ಲಿದ್ದವರಿಗೆ ಆತ ಕಾಫಿ ಕೊಡುತ್ತಿರಲಿಲ್ಲ. ಕನಿಷ್ಠ 20 ನಿಮಿಷ ಕಾಯಲು ಸಿದ್ಧರಿದ್ದರೆ ಮಾತ್ರ ಆತ ಕಾಫಿ ತಯಾರಿಸಲು ಮುಂದಾಗುತ್ತಿದ್ದ. ಆತನ ದೃಷ್ಟಿಯಲ್ಲಿ ಕಾಫಿ ತಯಾರಿಕೆ ಗಂಭೀರ ಕಾಯಕವಾಗಿತ್ತು. ಆತನ ಕಾಫಿ ಶಾಪ್ ಒಂದು ಶಾಂತ ಮತ್ತು ಸೂಕ್ಷ್ಮ ಸಂವೇದನೆ ಆವರಿಸಿದ, ವಿಚಿತ್ರ ಗುಂಗು ಹತ್ತಿಸುವ ಜಾಗವಾಗಿತ್ತು. ಯಾರೂ ಅಲ್ಲಿಗೆ ಕಾಫಿ ಕುಡಿಯಲು ಹೋಗುತ್ತಿದ್ದೇವೆ ಎಂದು ಭಾವಿಸುತ್ತಿರಲಿಲ್ಲ. ಒಂದು ವಿಶೇಷ ಅನುಭೂತಿಯನ್ನು ಸವಿಯಲು ಹೋಗುತ್ತಿದ್ದೇವೆ ಎಂದು ತಿಳಿಯುತ್ತಿದ್ದರು. ಕಾಫಿ ಗ್ರಾಹಕರು ಅಚಲವಾಗಿ ನೋಡುತ್ತಾ ಕಾಫಿ ತಯಾರಿಸುವುದನ್ನು ಸಂತಸದಿಂದ ಅನುಭವಿಸುತ್ತಿದ್ದರು. ಆತನ ಶಾಪ್‌ನಲ್ಲಿ ನಿಶ್ಶಬ್ದ ಆವರಿಸಿರುತ್ತಿತ್ತು. ಕಾಫಿಯ ಸುಗಂಧ ಸುತ್ತಲೂ ಹರಡಿ ಮಾದಕ ವಾತಾವರಣ ನಿರ್ಮಾಣವಾಗಿರುತ್ತಿತ್ತು. ಕಾಫಿ ತಯಾರಿಸುವ ಶಬ್ದದ ಹೊರತಾಗಿ ಮತ್ತೇನೂ ಕೇಳಿಸುತ್ತಿರಲಿಲ್ಲ.

ಪ್ರತಿ ಕಾಫಿ ಕಪ್ ಸಿದ್ಧಪಡಿಸಲು ಕಡಿಮೆ ವೇಳೆ ತೆಗೆದುಕೊಳ್ಳುವ ಯಂತ್ರಗಳ ಬದಲು ಆತ ಕೈಯಿಂದ ಕಾಫಿ ತಯಾರಿಸುತ್ತಿದ್ದ. ಪ್ರತಿ ಕಪ್‌ಗಾಗಿ ಕಾಫಿ ಬೀನ್ಸ್ ಅನ್ನು ನಿಖರವಾದ ಅಳತೆಯಂತೆ ಕಬ್ಬಿಣದ ಪಾತ್ರೆಯಲ್ಲಿ ಹುರಿದು, ತಕ್ಷಣವೇ ಗ್ರೈಂಡ್ ಮಾಡಿ, ಬಿಸಿ ನೀರಿನೊಂದಿಗೆ ನಿಧಾನವಾಗಿ ಹದ ಮಾಡಿ ತಯಾರಿಸುತ್ತಿದ್ದ. ಇದರಿಂದ ಕಾಫಿಗೆ ವಿಶಿಷ್ಟವಾದ ಸುವಾಸನೆ ಮತ್ತು ಸಾಂದ್ರತೆ ಬರುತ್ತಿತ್ತು.

ಕಾಫಿ ತಯಾರಿಕೆ ಒಂದು ಮಹಾನ್ ಕಲೆ ಎಂಬುದನ್ನು ಡೈಬೊ ಕಟ್ಸುಜಿ ಮಾರ್ಗದರ್ಶಕ ತತ್ವವನ್ನಾಗಿ ಮಾಡಿಕೊಂಡಿದ್ದ. ಕಾಫಿ ಬಣ್ಣ, ಘಮ ಮತ್ತು ರುಚಿಯ ಉತ್ಕೃಷ್ಟತೆಯನ್ನು ಸಾಧಿಸಲು ಅಪಾರವಾಗಿ ಶ್ರಮಿಸುತ್ತಿದ್ದ. ಕಾಫಿಗಿಂತ ಮಿಗಿಲಾದುದು ಯಾವುದೂ ಇಲ್ಲ ಎಂಬುದು ಆತನ ಅನುಭವವಷ್ಟೇ ಅಲ್ಲ,

ನಂಬಿಕೆಯೂ ಆಗಿತ್ತು. "ಕಾಫಿ ಅಂದ್ರೆ ಜೀವನ ವಿಧಾನ" ಎಂದು ಆತ ಹೇಳುತ್ತಿದ್ದ. "ಕಾಫಿಯಿಲ್ಲದ ದಿನ ಸೂರ್ಯನಿಲ್ಲದ ದಿನದಂತೆ" ಎಂಬುದು ಆತನ ತತ್ವದರ್ಶನವಾಗಿತ್ತು. ಕಾಫಿಯ ಮೂಲಕ ಯಾರ ಜೀವನದಲ್ಲಾದರೂ ಪ್ರವೇಶ ಪಡೆಯಬಹುದು ಎಂಬುದು ಆತನ ಪ್ರತಿಪಾದನೆಯಾಗಿತ್ತು.

ಡೈಬೊ ಕಟ್ಸುಜಿಯಂಥ ವ್ಯಕ್ತಿಗಳ ಶ್ರಮದಿಂದ ಜಪಾನಿನಲ್ಲಿ ಕಾಫಿ ತನ್ನದೇ ಆದ ವಿಶೇಷ ಸ್ಥಾನವನ್ನು ಪಡೆದುಕೊಂಡಿತು. ಇಂದಿಗೂ ಜಪಾನ್‌ನಲ್ಲಿ ಹಲವಾರು ಕಾಫಿ ಅಂಗಡಿಗಳು ಈ ಪರಂಪರೆಯನ್ನು ಅನುಸರಿಸುತ್ತಿವೆ. ಡೈಬೊ ಶೈಲಿ 'ಕಾಫಿ ತಯಾರಿಸುವುದು ಒಂದು ಅಪೂರ್ವ ಕಲೆ' ಎಂಬ ಸಂದೇಶವನ್ನು ಜಪಾನಿನ ಯುವ ಪೀಳಿಗೆಗೆ ಮತ್ತು ಹತ್ತಾರು ತಲೆಮಾರುಗಳಿಗೆ ಸಾರಿತು. 2013ರಲ್ಲಿ ಡೈಬೊ ಕಾಫಿ ಶಾಪ್ ಇದ್ದ ಕಟ್ಟಡವನ್ನು ನೆಲಸಮಗೊಳಿಸಿ, ಹೊಸ ವಾಣಿಜ್ಯ ಸೌಧ ನಿರ್ಮಿಸಲು ನಿರ್ಧರಿಸಿದ್ದರಿಂದ ಅದನ್ನು ಶಾಶ್ವತವಾಗಿ ಮುಚ್ಚಲಾಯಿತು. ಅದರಿಂದಾಗಿ, ಡೈಬೊ ಸಾಂಪ್ರದಾಯಿಕ ಕಾಫಿ ತಯಾರಿಕೆಯೂ ಅಂತ್ಯ ಕಂಡಿತು. ಆದರೆ ಡೈಬೊ ಕಾಫಿ ಪರಂಪರೆ ಚಿರಸ್ಥಾಯಿಯಾಗಿ ಜನಮಾನಸದಲ್ಲಿ ನೆಲೆಯೂರಿತು. ಕೊನೆಯ ದಿನದ ಕಾಫಿಗಾಗಿ ಸಾವಿರಾರು ಜನ ಹಾಜರಿದ್ದರು. ಆದರೆ ಡೈಬೊ ಅಂದು ಸಹ ಅದೇ ಧ್ಯಾನಸ್ಥ ಮನಸ್ಸಿನಲ್ಲಿಯೇ ಕಾಫಿ ತಯಾರಿಸಿ ಗ್ರಾಹಕರಿಗೆ ನೀಡಿದ್ದನ್ನು ಇಂದಿಗೂ ನೆನಪಿಸಿಕೊಳ್ಳುತ್ತಾರೆ. ಆತನಿಂದ ಪ್ರೇರಣೆ ಪಡೆದ ಆತನ ಶಿಷ್ಯರು ಮತ್ತು ಅಭಿಮಾನಿಗಳು ಈಗಲೂ ಶುದ್ಧ, ಶಾಂತ ಮನಸ್ಸಿನಿಂದ ತಯಾರಿಸಿದ ಆ ಕಾಫಿ ತಯಾರಿಕೆಯ ಪರಂಪರೆಯನ್ನು ಮುಂದುವರಿಸುತ್ತಿದ್ದಾರೆ.

ಡೈಬೊ ಕಟ್ಸುಜಿ ಕೇವಲ ಒಬ್ಬ ಕಾಫಿ ತಯಾರಕನಲ್ಲ. ಆತ ಕಾಫಿಗೆ ದೈವೀಶಕ್ತಿಯನ್ನು ತುಂಬಿದ ಪವಾಡ ಪುರುಷ. ಆತನ ತಾತ್ವಿಕ, ಶಾಂತ ಮತ್ತು ಶ್ರದ್ಧೆಯಿಂದ ಕೂಡಿದ ಕಾಫಿ ತಯಾರಿಕೆಯ ವಿಧಾನ ಜಪಾನಿನ ಅಪ್ಪಟ ಕಾಫಿ ಪ್ರೇಮಿಗಳ ಮನಸ್ಸಿನಲ್ಲಿ ಸದಾ ಹಬೆಯಾಡುತ್ತದೆ.

ಲಿಂಕನ್: ಅಮೆರಿಕಾಧ್ಯಕ್ಷರಲ್ಲೇ ಎತ್ತರದ ಆಳು, ಗೌರವದ ಬಾಳು

ಅಬ್ರಹಾಂ ಲಿಂಕನ್ ಬಗ್ಗೆ ನಮಗೆ ಐದನೆಯ ತರಗತಿಯಲ್ಲೊಂದು ಕನ್ನಡ ಪಾಠ ಇತ್ತು. ಕುರುಚಲು ಗಡ್ಡಧಾರಿ ಲಿಂಕನ್ ಮುಖಭಾವದ ರೇಖಾಚಿತ್ರವೊಂದು ಪಾಠದ ಜತೆಗಿತ್ತು. ಪಠ್ಯಪುಸ್ತಕದಲ್ಲಿ ಅಚ್ಚಾಗಿದ್ದ ಆ ಚಿತ್ರ ನನ್ನ ಸ್ಮೃತಿಪಟಲದಲ್ಲೂ ಅಚ್ಚೊತ್ತಿ ನಿಂತಿತ್ತು. ಕನ್ನಡ ಭಾರತಿ ಪುಸ್ತಕದ ಪಿಡಿಎಫ್ ನನ್ನ ಸಂಗ್ರಹದಲ್ಲಿರುವುದರಿಂದ ಮೊನ್ನೆ ಅದನ್ನು ತೆರೆದು ಆ ಪಾಠವನ್ನೊಮ್ಮೆ ಓದಿಕೊಂಡೆ. ಮೊನ್ನೆ ಅಂದರೆ ಬುಧವಾರ ಫೆಬ್ರವರಿ 12. ಅಬ್ರಹಾಂ ಲಿಂಕನ್‌ನ ಜನ್ಮದಿನ. ಮಹಾಪುರುಷನ ಸ್ಮರಣೆಗೆ ಯೋಗ್ಯ ದಿನ. "ಅಮೆರಿಕೆಯ ನಾಲ್ಕು ಜನ ಶ್ರೇಷ್ಠ ಅಧ್ಯಕ್ಷರಲ್ಲಿ ಅಬ್ರಹಾಂ ಲಿಂಕನ್ ಒಬ್ಬನು. ಅಂತಃಕಲಹದಿಂದ ದೇಶವೇ ಒಡೆದುಹೋಗುವ ದುರ್ಧರ ಪ್ರಸಂಗದಲ್ಲಿ 'ನನ್ನ ಪರಮೋಚ್ಚ ಗುರಿ ರಾಷ್ಟ್ರದ ಐಕ್ಯ' ಎಂದು ಸಾರಿ ದೇಶದ ಅಖಂಡತೆಯನ್ನು ಉಳಿಸಿದ ಮಹಾನುಭಾವ ಅಬ್ರಹಾಂ ಲಿಂಕನ್. ಇತರರಿಗೆ ಸ್ವಾತಂತ್ರ್ಯ ನೀಡದವನಿಗೆ ವೈಯಕ್ತಿಕ ಸ್ವಾತಂತ್ರ್ಯದ ಹಕ್ಕಿಲ್ಲ. ಗುಲಾಮಗಿರಿಯು ಎಲ್ಲ ಕಡೆಯಲ್ಲಿಯೂ ಸಂಪೂರ್ಣವಾಗಿ ನಿರ್ನಾಮವಾಗಲೇಬೇಕು ಎಂದು ನೂರು ವರುಷಗಳ ಹಿಂದೆಯೆ ಘೋಷಿಸಿ ಗುಲಾಮರ ಬಂಧವಿಮೋಚನೆಗಾಗಿ ಹೋರಾಡಿದ ಧೀರ ಮಾನವ ಅಬ್ರಹಾಂ ಲಿಂಕನ್..." ಪಾಠದ ಆರಂಭಿಕ ವಾಕ್ಯಗಳನ್ನು ಓದಿದಾಗ, ಗಡ್ಡಧಾರಿ ಲಿಂಕನ್‌ನ ಚಿತ್ರವನ್ನು ನೋಡಿದಾಗ, ಒಂದುರೀತಿಯ ರೋಮಾಂಚನ ವಾಯಿತು. ಐದನೆಯ ತರಗತಿಯಲ್ಲಿದ್ದಾಗ ಓದಿದ್ದ ಪಾಠ, ಕಲಿಸಿದ್ದ ಗುರುಗಳು, ಜತೆಯಲ್ಲಿದ್ದ ಸಹಪಾಠಿಗಳು, ಶಾಲಾದಿನಗಳು, ಆ ಕಾಲದಲ್ಲಿನ ನಮ್ಮ ದಿನಚರಿ... ಎಲ್ಲ ಒಮ್ಮೆ ಕಣ್ಮುಂದೆ ಬಂದುಹೋದುವು.

"ಬಡ ಕುಟುಂಬವೊಂದರಲ್ಲಿ 1809ರ ಫೆಬ್ರವರಿ 12ರಂದು ಲಿಂಕನ್ ಜನನ. ಬಾಲ್ಯದಲ್ಲಿ ಸರಿಯಾದ ಶಿಕ್ಷಣ ದೊರಕಲಿಲ್ಲ. ಶಾಲೆಗೆ ಹೋಗಿ ಕಲಿತದ್ದು ಕೇವಲ ಒಂದು ವರುಷ ಆದರೂ ಸ್ವಂತ ಪರಿಶ್ರಮದಿಂದ ಕಷ್ಟಪಟ್ಟು ಕಲಿತು ವಕೀಲನಾದನು. ಅದಕ್ಕೆ ಮುನ್ನ ಮರ ಕಡಿಯುವ, ತೆಪ್ಪ ದೋಣಿಗಳನ್ನು ನಡೆಸುವ ಕೆಲಸ ಮಾಡಿದನು. ಕೆಲಕಾಲ ಹಳ್ಳಿಯ ಪೋಸ್ಟ್‌ಮಾಸ್ಟರ್ ನೌಕರಿಯನ್ನೂ ಮಾಡಿದನು..." ಮುಂತಾದ ವಿವರಗಳು ಆ ಪಾಠದಲ್ಲಿ ಬರುತ್ತವೆ. ತುಸು ಆಶ್ಚರ್ಯವೆನಿಸುವಂಥ ಒಂದು ಅಂಶವೂ ಇದೆ: ಲಿಂಕನ್ ಒಂಬತ್ತು ವರ್ಷದವನಾಗಿದ್ದಾಗ ಅವನ ತಾಯಿಯು ತೀರಿಕೊಂಡಳು ಎಂಬ ಮಾಹಿತಿಯ ಬಳಿಕ 'ಆದರೆ ಮಲತಾಯಿಯು ಲಿಂಕನ್‌ನನ್ನು ಚೆನ್ನಾಗಿ ನೋಡಿಕೊಂಡಳು. ಯಾವ ತಾಯಿಯಾದರೂ ಹೆಮ್ಮೆ ಪಡುವಂಥ ಮಗ ಲಿಂಕನ್ ಎಂದು ಅವಳು ಅಭಿಮಾನದಿಂದ ಹೇಳಿಕೊಳ್ಳುತ್ತಿದ್ದಳಂತೆ' ಎಂಬ ವಾಕ್ಯ. ಸಾಮಾನ್ಯವಾಗಿ ಮಲತಾಯಿಯೆಂದರೆ ಗೋಳಿನ ಕಥೆಗಳೇ ಇರುವಾಗ ಇಂಥದ್ದು ನಿಜಕ್ಕೂ ಅಪರೂಪ! ಮುಂದುವರಿಯುತ್ತ ಸಂಕ್ಷಿಪ್ತ ರೂಪದಲ್ಲಿ ಲಿಂಕನ್ ಜೀವನಚರಿತ್ರೆ- ಆಗಿನ ರಾಜಕೀಯ ಚರ್ಚೆಗಳಲ್ಲಿ ಲಿಂಕನ್ನನ ವಾದಸರಣಿಯನ್ನು ಮೆಚ್ಚಿದ ಜನ ಆತನನ್ನು ನ್ಯಾಯವಿಧಾಯಕ ಸಭೆಗೆ ಆರಿಸಿದ್ದು, ಮುಂದೆ ಆತ ಅಮೆರಿಕ ಸಂಯುಕ್ತ ಸಂಸ್ಥಾನದ ಕಾಂಗ್ರೆಸ್ಸಿನ ಸದಸ್ಯನಾದದ್ದು, ಗುಲಾಮಗಿರಿ ಪದ್ಧತಿಯನ್ನು ರದ್ದುಗೊಳಿಸುವ ವಿಧೇಯಕವನ್ನು ಮಂಡಿಸಿದ್ದು, ಮೊದಲೊಮ್ಮೆ ಅದು ಮುರಿದು ಬಿದ್ದದ್ದು, 1860ರಲ್ಲಿ ರಿಪಬ್ಲಿಕನ್ ಪಕ್ಷದಿಂದ ಉಮೇದುವಾರನಾಗಿ ಅಧ್ಯಕ್ಷಸ್ಥಾನಕ್ಕೆ ಸ್ಪರ್ಧಿಸಿದ್ದು, ಜಯಭೇರಿ ಬಾರಿಸಿದ್ದು, ಅಮೆರಿಕದ ದಕ್ಷಿಣೋತ್ತರ ಭಾಗಗಳ ನಡುವೆ ಅಂತರ್ಯುದ್ಧ ಆರಂಭವಾಗಿ ಪೌರಸಮರವೇ ಆಗಿ ಉಲ್ಬಣಗೊಂಡಿದ್ದು, ಗೆಟ್ಟಿಸ್‌ಬರ್ಗ್‌ನಲ್ಲಿನ ಲಿಂಕನ್‌ನ ಅತಿಪ್ರಸಿದ್ಧ ಭಾಷಣ, 1864ರಲ್ಲಿ ಎರಡನೆಯ ಬಾರಿ ಅಧ್ಯಕ್ಷನಾಗಿ ಆಯ್ಕೆ, ಆಂತರಿಕ ಯುದ್ಧದ ಕೊನೆ, ತನ್ಮೂಲಕ ಗುಲಾಮಗಿರಿಯ ಅಂತ್ಯ, ವಿಜಯೋತ್ಸವದ ಖುಷಿಯಲ್ಲಿ ನಾಟಕ ವೀಕ್ಷಣೆಗೆಂದು ಲಿಂಕನ್ ಹೋಗಿದ್ದಾಗ ಅಜ್ಞಾತ ವ್ಯಕ್ತಿಯೊಬ್ಬನಿಂದ ಗುಂಡಿಕ್ಕಿ ಕೊಲೆ- ಎಂಬಲ್ಲಿಯವರೆಗೆ ಎಲ್ಲವೂ ಆ ಪಾಠದಲ್ಲಿದೆ. "ಲಿಂಕನ್ನನು ಮಡಿದನು. ಆದರೆ ಅವನ ವಿಚಾರಗಳು ಸಾಯಲಿಲ್ಲ. ಲಿಂಕನ್ ಅಮರನಾದನು." ವಾಕ್ಯಗಳೊಂದಿಗೆ ಪಾಠ ಮುಗಿಯುತ್ತದೆ.

ಐದನೆಯ ತರಗತಿಯಲ್ಲಿ ಅಬ್ರಹಾಂ ಲಿಂಕನ್ ಬಗ್ಗೆ ಓದಿದ್ದು ಗಾಢಪ್ರಭಾವ ಬೀರಿತು ಎನ್ನಬಹುದೋ ಇಲ್ಲವೋ ಗೊತ್ತಿಲ್ಲ, ಆದರೆ ಲಿಂಕನ್ ಅಂದರೆ ಯಾರಿಗೇ ಆದರೂ ಮನಸ್ಸಿನಲ್ಲಿ ಗೌರವಭಾವ ಮೂಡುತ್ತದೆ. ಅಂತೆಯೇ ನನಗೂ. 'ಇಟ್ ಸೋ ಹ್ಯಾಪ್ಪನ್ಡ್' ಎನ್ನುವಂತೆ 25 ವರ್ಷಗಳ ಹಿಂದೆ ನಾನು ಅಮೆರಿಕ ದೇಶಕ್ಕೆ ವಲಸೆ ಬಂದಾಗ ಮೊದಲಿಗೆ ತಳವೂರಿದ್ದು ಶಿಕಾಗೊ ನಗರವಿರುವ ಇಲಿನಾಯ್ ಸಂಸ್ಥಾನದಲ್ಲಿ, ಅದನ್ನು ಲ್ಯಾಂಡ್ ಆಫ್ ಲಿಂಕನ್ ಎಂದು ಕರೆಯುತ್ತಾರೆ- ಅಬ್ರಹಾಂ ಲಿಂಕನ್ ತನ್ನ ಜೀವಿತದ ಬಹಳಷ್ಟು ವರ್ಷಗಳನ್ನು ಇಲಿನಾಯ್ ಸಂಸ್ಥಾನದಲ್ಲಿ ಕಳೆದಿದ್ದರಿಂದ. ಅಲ್ಲಿ ವಾಹನಗಳ ನಂಬರ್‌ಪ್ಲೇಟ್‌ನ ಮೇಲೆಯೂ ಲ್ಯಾಂಡ್ ಆಫ್ ಲಿಂಕನ್ ಎಂದು ಅಚ್ಚಾಗಿದ್ದಿರುತ್ತದೆ. ಲಿಂಕನ್‌ನ ಸಮಾಧಿ ಇರುವುದು ಇಲಿನಾಯ್ ಸಂಸ್ಥಾನದ ಸ್ಪ್ರಿಂಗ್‌ಫೀಲ್ಡ್‌ನಲ್ಲಿ. ಅಮೆರಿಕದಲ್ಲಿ ಚಲಾವಣೆಯ ನಾಣ್ಯಗಳ ಪೈಕಿ ಅತಿಹೆಚ್ಚು ಬಳಕೆಯಾಗುವ ಪೆನ್ನಿ(ಒಂದು ಸೆಂಟ್) ನಾಣ್ಯದ ಮೇಲೆ ಅಬ್ರಹಾಂ ಲಿಂಕನ್‌ನದೇ ಚಿತ್ರವಿರುವುದು; ನೋಟುಗಳ ಪೈಕಿ 5 ಡಾಲರ್‌ಗಳ ನೋಟಿನ ಮೇಲೂ ಅಬ್ರಹಾಂ ಲಿಂಕನ್‌ನ ಚಿತ್ರವಿರುವುದು- ಇದನ್ನೆಲ್ಲ ಈ ದೇಶಕ್ಕೆ ಬಂದ ಮೊದಲಲ್ಲೇ ಗಮನಿಸಿದ್ದೆ, ಲಿಂಕನ್ ಬಗೆಗಿನ ಗೌರವದಿಂದ. ಶಿಕಾಗೊದಿಂದ ಉದ್ಯೋಗ ನಿಮಿತ್ತ ರಾಜಧಾನಿ ವಾಷಿಂಗ್ಟನ್ ಡಿಸಿ ಪ್ರದೇಶಕ್ಕೆ ಬಂದ ನಾನು ಇಲ್ಲಿಯ ಸ್ಮಾರಕಗಳ ಪೈಕಿ ಅತ್ಯಧಿಕ ಬಾರಿ ಭೇಟಿಯಿತ್ತದ್ದು, ಬಂಧುಮಿತ್ರರು ಯಾರೇ ಬಂದರೂ ಅವರಿಗೆ ವಾಷಿಂಗ್ಟನ್ ಡಿಸಿ ದರ್ಶನ ಆರಂಭಿಸುವುದು ಲಿಂಕನ್ ಮೆಮೋರಿಯಲ್‌ನಿಂದಲೇ. ಅಕ್ಕಪಕ್ಕ ಕೈಗಳನ್ನಿಟ್ಟು ಕುರ್ಚಿಯ ಮೇಲೆ ಕುಳಿತುಕೊಂಡ ಭಂಗಿಯಲ್ಲಿರುವ ಲಿಂಕನ್‌ನ ಬೃಹತ್ ಪ್ರತಿಮೆ, ಪ್ರತಿಮೆಯ ದೃಷ್ಟಿಪಾತಳಿಗೆ ಸರಿಯಾಗಿ ಒಂದು ಪ್ರತಿಫಲನ ಕೊಳ, ಅದೇ ಸರಳರೇಖೆಯಲ್ಲಿ ವಾಷಿಂಗ್ಟನ್ ಮಾನ್ಯುಮೆಂಟ್ ಮತ್ತು ಯುಎಸ್ ಕ್ಯಾಪಿಟೋಲ್. ಈ ಮೂರರೊಡನೆ ತ್ರಿಭುಜಾಕೃತಿ ನಿರ್ಮಿಸುವಂತಿರುವ ಶ್ವೇತಭವನ, ಈಗ್ಗೆ ಹತ್ತಿಪ್ಪತ್ತು ವರ್ಷಗಳಿಂದೀಚೆಗೆ ಹೊಸದಾಗಿ ಸೇರಿಕೊಂಡಿರುವ ವರ್ಲ್ಡ್ ವಾರ್ ಮೆಮೋರಿಯಲ್... ಹಿತವಾದ ಬಿಸಿಲಿರುವ ದಿನಗಳಲ್ಲಿ ಇವೆಲ್ಲವನ್ನು ನೋಡುವುದು, ಸುತ್ತ ಓಡಾಡುವುದು ಒಂದು ವಿಶೇಷ ಅನುಭವವೇ. ಆದರೂ ಭಾವುಕತೆಯ ತೀವ್ರ ಅನುಭೂತಿಯಾಗುವುದು ಲಿಂಕನ್‌ನ ಪ್ರತಿಮೆಯೆದುರಿಗೆ ನಿಂತಾಗಲೇ.

ಅಮೆರಿಕದಲ್ಲಿ ಇದುವರೆಗೆ ಆಗಿಹೋದ ಅಧ್ಯಕ್ಷರುಗಳ ಪೈಕಿ ಗ್ರೇಟೆಸ್ಟ್ ಅಂತನಿಸಿಕೊಂಡವನು ಅಬ್ರಹಾಂ ಲಿಂಕನ್. ಜನಸಾಮಾನ್ಯರ ಪ್ರೀತಿಪಾತ್ರನಾಗಿ, ಸರಳ ಪ್ರಾಮಾಣಿಕ ಸ್ವಭಾವದ ನೇತಾರನಾಗಿ, ಸಂದಿಗ್ಧ ಪರಿಸ್ಥಿತಿಯಲ್ಲಿ ದೇಶವನ್ನು ಮುನ್ನಡೆಸಿದ ಮುಂದಾಳುವಾಗಿ, ಮುತ್ಸದ್ದಿಯಾಗಿ, ಲಿಂಕನ್‌ಗೆ ಸಿಕ್ಕಿರುವಷ್ಟು ಜನಮನ್ನಣೆ ಬೇರಾರಿಗೂ ಸಿಕ್ಕಿಲ್ಲ. ಜಾರ್ಜ್ ವಾಷಿಂಗ್ಟನ್‌ನನ್ನು ಮೊತ್ತಮೊದಲ ಅಧ್ಯಕ್ಷನೆಂಬ ಕಾರಣಕ್ಕೆ, ಥಾಮಸ್ ಜೆಫರ್ಸನ್‌ನನ್ನು 'ಡಿಕ್ಲರೇಷನ್ ಆಫ್ ಇಂಡಿಪೆಂಡೆನ್ಸ್' ಬರೆದವನೆಂಬ ಕಾರಣಕ್ಕೆ, ಫ್ರಾಂಕ್ಲಿನ್ ರೂಸ್‌ವೆಲ್ಟ್‌ನನ್ನು ವಾಣಿಜ್ಯಾಭಿವೃದ್ಧಿಯ ಹರಿಕಾರನೆಂಬ ಕಾರಣಕ್ಕೆ ವಿಶೇಷವಾಗಿ ಸ್ಮರಿಸಿ ಗೌರವಿಸಲಾಗುತ್ತದಾದರೂ, ಅಬ್ರಹಾಂ ಲಿಂಕನ್ ಯಾವತ್ತಿಗೂ ಅಗ್ರಮಾನ್ಯ. ಗೆಟ್ಟಿಸ್‌ಬರ್ಗ್‌ನಲ್ಲಿ ಅಬ್ರಹಾಂ ಲಿಂಕನ್ ಮಾಡಿದ್ದ ಭಾಷಣ- ಚಿಕ್ಕದಾದರೂ ಅತ್ಯಂತ ಪರಿಣಾಮಕಾರಿಯೆನಿಸಿದ್ದು- ಈಗಲೂ ಅಮೆರಿಕದ ಇತಿಹಾಸದಲ್ಲೇ ಅತ್ಯುತ್ಕೃಷ್ಟವೆಂದು ಪರಿಗಣನೆಯಾಗುತ್ತದೆ. ಸುಮಾರು 18,000ಕ್ಕೂ ಹೆಚ್ಚು ಪುಸ್ತಕಗಳು ಅಬ್ರಹಾಂ ಲಿಂಕನ್ ಬಗ್ಗೆ ಬರೆದಿರುವಂಥವು ಇದುವರೆಗೆ ಪ್ರಕಟವಾಗಿವೆಯಂತೆ. ಅದು ಅಕ್ಷರಶಃ ಔನ್ನತ್ಯ ಎಂದುಕೊಳ್ಳುವುದಾದರೆ ಭೌತಿಕವಾಗಿಯೂ ಲಿಂಕನ್ ಅತಿ ಎತ್ತರದ ಆಳು! ಭರ್ತಿ ಆರು ಅಡಿ ನಾಲ್ಕು ಇಂಚು ಎತ್ತರವಿದ್ದುದರಿಂದ ಟಾಲೆಸ್ಟ್ ಪ್ರೆಸಿಡೆಂಟ್ ಎಂಬ ಹೆಗ್ಗಳಿಕೆಯೂ ಲಿಂಕನ್‌ಗೇ ಸಲ್ಲುತ್ತದೆ. ಆತನಿಗಿಂತ ಅರ್ಧ ಇಂಚಿನಷ್ಟು ಕಡಿಮೆಯಿದ್ದ ಲಿಂಡನ್ ಬಿ. ಜಾನ್ಸನ್‌ಗೆ ಎರಡನೆಯ ಸ್ಥಾನ. ಕೇವಲ ಐದಡಿ ನಾಲ್ಕಿಂಚು

ತಿಳಿರು ತೋರಣ

ಶ್ರೀವತ್ಸ ಜೋಶಿ
srivathsajoshi@yahoo.com

ಎತ್ತರವಿದ್ದ ಜೇಮ್ಸ್ ಮ್ಯಾಡಿಸನ್ ಅತ್ಯಂತ ಗಿಡ್ಡ ನಿಲುವಿನ ಅಧ್ಯಕ್ಷನಾಗಿದ್ದವನು. ಲಿಂಕನ್‌ನ ನೀಳಕಾಯದಿಂದಾಗಿಯೇ ಇರಬಹುದು ಆತ ಒಬ್ಬ ಅಸಾಧಾರಣ ಕುಸ್ತಿಪಟುವೂ ಆಗಿದ್ದನು. 21ರ ವಯಸ್ಸಿಗೆಲ್ಲ ಕುಸ್ತಿ ಚಾಂಪಿಯನ್‌ಶಿಪ್ ಗಳಿಸಿದ್ದನು. ಕಾನೂನು ಓದುತ್ತಿದ್ದಾಗಲೂ ಹವ್ಯಾಸಕ್ಕೆಂದು ಕುಸ್ತಿಯಾಡುತ್ತಿದ್ದನು. 10-12 ವರ್ಷಗಳ ಅವಧಿಯಲ್ಲಿ 300ಕ್ಕೂ ಹೆಚ್ಚು ಸ್ಪರ್ಧೆಗಳಲ್ಲಿ ವಿಜೇತನಾಗಿದ್ದನು. 1992ರಲ್ಲಿ ಅಬ್ರಹಾಂ ಲಿಂಕನ್‌ನನ್ನು ಮರಣೋತ್ತರವಾಗಿ ಅಮೆರಿಕದ ನ್ಯಾಷನಲ್ ರೆಸ್ಲಿಂಗ್



ಹಾಲ್ ಆಫ್ ಫೇಮ್‌ನಲ್ಲಿ ಸೇರಿಸಿ ಗೌರವಿಸಲಾಗಿತ್ತು. ಲಿಂಕನ್‌ನ ಎತ್ತರವಷ್ಟೇ ಅಲ್ಲ, ಪಾದಗಳ ಗಾತ್ರವೂ ದಢೂತಿಯೇ. ಆತನ ಶೂ ಸೈಜ್ 14 ಇತ್ತೆಂಬುದೂ ಬಹುಚರ್ಚಿತ ಸಂಗತಿ. ಅದರಿಂದಾಗಿ ಕಾಲುಗಳಿಗೆ ಹೊಂದುವ ಪಾದರಕ್ಷೆ ಸಿಗುವುದು ಕಷ್ಟವಾಗುತ್ತಿತ್ತು. ತಪ್ಪು ಸೈಜಿನ ಶೂ ಧರಿಸಿ ಕಾಲಲ್ಲಿ ಗುಳ್ಳೆಯೇಳುತ್ತಿತ್ತು. ಶ್ವೇತಭವನದಲ್ಲಿ ಗಣ್ಯರ ಔತಣಕೂಟ ಸಂದರ್ಭಗಳಲ್ಲಿ ಫಾರ್ಮಲ್ ಶೂಸ್ ಧರಿಸದೆ ಬಾತ್‌ರೂಮ್ ಚಪ್ಪಲ್ ಹಾಕ್ಕೊಂಡು ಓಡಾಡುತ್ತಿದ್ದ ಲಿಂಕನ್‌ನಿಂದಾಗಿ ಅಲ್ಲಿ ಮುಜುಗರ ಪರಿಸ್ಥಿತಿ ಉಂಟಾಗುತ್ತಿತ್ತು. ಕೊನೆಗೂ ನ್ಯೂಯಾರ್ಕ್‌ನ ಡಾ.ಝೆುಕರೀ ಎಂಬಾತ ಲಿಂಕನ್‌ನ ಪಾದಗಳಿಗೆ ಸರಿಹೊಂದುವ ವಿಶೇಷ ಶೂಗಳನ್ನು ನಿರ್ಮಿಸಿ ಒದಗಿಸುತ್ತಿದ್ದನಂತೆ.

ಲಿಂಕನ್‌ನ ಕುರುಚಲು ಗಡ್ಡದ ಬಗ್ಗೆಯೂ ಸ್ವಾರಸ್ಯಕರ ಐತಿಹ್ಯಗಳಿವೆ. ಮೊತ್ತಮೊದಲ ಗಡ್ಡಧಾರಿ ಅಮೆರಿಕಾಧ್ಯಕ್ಷ ಎಂಬ ಖ್ಯಾತಿ ಸಲ್ಲುವುದೂ ಲಿಂಕನ್‌ಗೇ. 1860ರಲ್ಲಿ ಅಧ್ಯಕ್ಷಗಿರಿಗೆ ಸ್ಪರ್ಧಿಸಿದಾಗ ಆಗಿನ್ನೂ ಲಿಂಕನ್ ಗಡ್ಡ ಬಿಟ್ಟಿರಲಿಲ್ಲ. ಚುನಾವಣಾ ಪ್ರಚಾರ ತುರುಸಿನಿಂದ ನಡೆದಿದ್ದಾಗ ನ್ಯೂಯಾರ್ಕ್‌ನ ವೆಸ್ಟ್‌ಫೀಲ್ಡ್ ಎಂಬಲ್ಲಿನ ಚಿಕ್ಕ ಹುಡುಗಿಯೊಬ್ಬಳು, 11 ವರ್ಷ ವಯಸ್ಸಿನ ಗ್ರೇಸ್ ಬೆಡೆಲ್ ಎಂಬಾಕೆ, ಲಿಂಕನ್‌ಗೆ ಒಂದು ಪತ್ರ ಬರೆದಳು: 'ನನಗೆ ನಾಲ್ಕು ಮಂದಿ ಅಣ್ಣಂದಿರು. ಅವರಲ್ಲಿಬ್ಬರು ನಿಮಗೇ ಮತ ಹಾಕುವವರಿದ್ದಾರಂತೆ. ಒಂದುವೇಳೆ ನೀವು ಗಡ್ಡ-ಮೀಸೆ ಬೋಳಿಸದೆ ಹಾಗೆಯೇ ಬಿಟ್ಟರೆ ಇನ್ನೂ ಚಂದ ಕಾಣುತ್ತೀರಿ. ನನ್ನ ಉಳಿದಿಬ್ಬರು ಅಣ್ಣಂದಿರನ್ನೂ ಆಗ ನಿಮಗೆ ಮತ ಹಾಕುವಂತೆ ನಾನು ಪುಸಲಾಯಿಸುತ್ತೇನೆ. ನಾನು ಹೀಗೆ ಬರೆಯುತ್ತಿರುವುದನ್ನು ಉದ್ಧಟತನವೆಂದು ನೀವು ಭಾವಿಸುವುದಿಲ್ಲ ಎಂದುಕೊಂಡಿದ್ದೇನೆ. ಆದರೆ ನನ್ನ ಮನದಾಳದ ಮಾತೇನೆಂದರೆ ನಿಮ್ಮ ಮುಖಕ್ಕೆ ಗಡ್ಡ-ಮೀಸೆ ಖಂಡಿತ ಶೋಭೆ ತರುತ್ತದೆ. ದೇಶದ ಹೆಂಗಳೆಯರೆಲ್ಲ ಇದನ್ನು ಇಷ್ಟಪಡುತ್ತಾರೆ ಮತ್ತು ತಮ್ಮತಮ್ಮ ಗಂಡಂದಿರನ್ನು ನಿಮಗೇ ಮತ ಹಾಕುವಂತೆ ಒತ್ತಾಯಿಸುತ್ತಾರೆ. ನೀವು ರಾಷ್ಟ್ರಾಧ್ಯಕ್ಷರಾಗುವ ಹಾದಿ ಸುಗಮವಾಗುತ್ತದೆ'. ಚಿಕ್ಕ ಹುಡುಗಿಯ ಆ ಪತ್ರವನ್ನೋದಿದ ಲಿಂಕನ್ ಆಕೆಗೆ ಪ್ರಾಮಾಣಿಕವಾಗಿ ಉತ್ತರವನ್ನೂ ಬರೆದಿದ್ದನಂತೆ. 'ಇದುವರೆಗೂ ಗಡ್ಡ ಬೆಳೆಸದ ನಾನು ಈಗ ಚುನಾವಣೆ ಸ್ಟೈಲ್ ಎಂದು ಗಡ್ಡ ಬೆಳೆಸಿದರೆ ಜನ ತಮಾಷೆ ಮಾಡಲಿಕ್ಕಿಲ್ಲವೇ?' ಎಂದು ಹಿಂಜರಿಕೆ ವ್ಯಕ್ತಪಡಿಸಿದ್ದನಂತೆ. ಆ ವರ್ಷ ನವೆಂಬರ್‌ನಲ್ಲಿ ಚುನಾವಣೆ ನಡೆದಾಗ ಲಿಂಕನ್‌ನ ಗಡ್ಡ-ಮೀಸೆ ಬೋಳಿಸಿದ್ದೇ ಇತ್ತು. ಆದರೆ ಆಮೇಲೆ ಏನನ್ನಿಸಿತೋ, ಮುಂದಿನ ಜನವರಿ ತಿಂಗಳ ಹೊತ್ತಿಗೆ ಲಿಂಕನ್ ಗಡ್ಡಧಾರಿಯಾಗಿದ್ದನು! ಫೆಬ್ರವರಿಯಲ್ಲಿ ಒಮ್ಮೆ ನ್ಯೂಯಾರ್ಕ್‌ನ ವೆಸ್ಟ್‌ಫೀಲ್ಡ್‌ನಲ್ಲಿ ಗ್ರೇಸ್ ಬೆಡೆಲ್‌ಳನ್ನು ಮುಖತಃ ಭೇಟಿಯಾದ ಲಿಂಕನ್, ಮಾರ್ಚ್‌ನಲ್ಲಿ ವಾಷಿಂಗ್ಟನ್ ಡಿಸಿ.ಗೆ ಬಂದು ಪ್ರಮಾಣವಚನ ಸ್ವೀಕರಿಸಿದಾಗ ಮೊತ್ತಮೊದಲ ಗಡ್ಡಧಾರಿ ಪ್ರೆಸಿಡೆಂಟ್ ಎನಿಸಿಕೊಂಡನು!

ಗಡ್ಡದಂತೆಯೇ ಲಿಂಕನ್‌ನ ಇನ್ನೊಂದು ಹೆಗ್ಗುರುತು ಆತ ತಲೆಮೇಲೆ ಧರಿಸುತ್ತಿದ್ದ ಸ್ಟವ್‌ಪೈಪ್ ಹ್ಯಾಟ್. ಮೊದಲೇ ಎತ್ತರದ ನಿಲುವಿದ್ದ ಆಸಾಮಿ ಆ ಹ್ಯಾಟ್‌ನಿಂದಾಗಿ ಮತ್ತಷ್ಟು ಎತ್ತರ ಕಾಣುತ್ತಿದ್ದನು. ಗುಂಪಿನಲ್ಲಿ ಎಲ್ಲರಿಗಿಂತ ಪ್ರತ್ಯೇಕವಾಗಿ ಎದ್ದುಕಾಣುವಂತಾಗುತ್ತಿತ್ತು. ಆ ಹ್ಯಾಟ್ ಅನ್ನು ಲಿಂಕನ್ ಕೆಲವು ಚಿಕ್ಕಪುಟ್ಟ ಕಾಗದಗಳ, ಭಾಷಣದ ಚೀಟಿಗಳ, ಖಾಸಗಿ ಪತ್ರಗಳ, ಸರಕಾರಿ ಕಡತ-ದಾಖಲೆಗಳ ಶೇಖರಣೆಗೂ ಬಳಸುತ್ತಿದ್ದನಂತೆ. 1850ರಲ್ಲಿ ಒಮ್ಮೆ ರಿಚರ್ಡ್ ಎಸ್.ಥಾಮಸ್ ಎಂಬ ರಾಜಕಾರಣಿಗೆ ಉತ್ತರ ಬರೆಯುವುದು ಏಕೆ ತಡವಾಯಿತೆಂಬುದಕ್ಕೆ ಲಿಂಕನ್ ಪ್ರಾಮಾಣಿಕವಾಗಿ ಕೊಟ್ಟದ್ದ ಕಾರಣ- "ನಿಮ್ಮ ಪತ್ರವನ್ನು ನನ್ನ ಹಳೆಯ ಹ್ಯಾಟ್‌ನಲ್ಲಿಟ್ಟಿದ್ದೆ. ಮಾರನೆಯ ದಿನವೇ ಹೊಸ ಹ್ಯಾಟ್ ಹಾಕಿಕೊಳ್ಳತೊಡಗಿದೆ, ಹಾಗಾಗಿ ನಿಮ್ಮ ಪತ್ರದ ಬಗ್ಗೆ ಮರೆತೇಹೋಗಿತ್ತು" ಎಂದು! ಲಿಂಕನ್‌ನ ಆ ವಿಶೇಷ ಹ್ಯಾಟ್ ಆತನನ್ನು ಗುರಿಯಾಗಿಟ್ಟುಕೊಂಡಿದ್ದ ಶತ್ರುಗಳಿಗೂ ಅನುಕೂಲಕರವೇ ಆಗಿತ್ತು. ಆಗಸ್ಟ್ 1864ರಲ್ಲಿ ಒಂದು ದಿನ ಲಿಂಕನ್ ಶ್ವೇತಭವನದಿಂದ 3-4 ಮೈಲು ದೂರದಲ್ಲಿದ್ದ ತನ್ನ ಕ್ಯಾಟೇಜ್‌ಗೆ ಕುದುರೆಸವಾರಿ ಹೋಗುತ್ತಿದ್ದಾಗ ಒಬ್ಬ ಅಜ್ಞಾತ ವ್ಯಕ್ತಿ ಲಿಂಕನ್ ಮೇಲೆ ಗುಂಡು ಹಾರಿಸಿದ್ದನು. ಆವತ್ತು ಲಿಂಕನ್ ಎಂದಿನಂತೆಯೇ ಹ್ಯಾಟ್ ಧರಿಸಿದ್ದನಾದ್ದರಿಂದ ಅದೃಷ್ಟವಶಾತ್ ಗುಂಡು ಹ್ಯಾಟ್‌ಗಷ್ಟೇ ತಗುಲಿ ಅದನ್ನುರುಳಿಸಿತು, ಲಿಂಕನ್‌ನ ತಲೆಯನ್ನುಳಿಸಿತು. ಯಾರೋ ಬೇಟೆಗಾರನ ಗುರಿ ತಪ್ಪಿ ತನ್ನ ತಲೆಯತ್ತ ಬಂದಿರಬಹುದೆಂದು ಮೊದಲಿಗೊಮ್ಮೆ ಲಿಂಕನ್ ಆ ಘಟನೆಯನ್ನು ಲಘುವಾಗಿ ಪರಿಗಣಿಸಿದ್ದನಂತೆ. ಆಮೇಲೆ ಅಂಗರಕ್ಷಕ ವಾರ್ಡ್ ಲೇಮನ್‌ನ ಬಳಿ ಘಟನೆಯ ಸೂಕ್ಷ್ಮವನ್ನು ಬಣ್ಣಿಸಿದನಂತೆ. ಗುಂಡು ತಗುಲಿ ತೂತಾಗಿದ್ದ ಹ್ಯಾಟ್ ಅಲ್ಲೇ ಪಕ್ಕ ಬಿದ್ದಿದ್ದು ಸಿಕ್ಕಿತ್ತು. ವಿಪರ್ಯಾಸವೆಂದರೆ ಮರುವರ್ಷ 1865ರ ಏಪ್ರಿಲ್ 14ರಂದು ವಾಷಿಂಗ್ಟನ್ ಡಿಸಿ.ಯ ಫೋರ್ಡ್ ಥಿಯೇಟರ್‌ನಲ್ಲಿ ಲಿಂಕನ್ ನಾಟಕವೀಕ್ಷಣೆಯಲ್ಲಿ ಮಗ್ನನಾಗಿದ್ದಾಗ, ಜಾನ್ ವಿಲ್ಕ್ಸ್ ಬೂತ್ ಎಂಬಾತ ಗುಂಡಿಕ್ಕಿ ಹತ್ಯೆಗೈದಾಗ, ಲಿಂಕನ್‌ನ ಅಂಗರಕ್ಷಕ ಜಾನ್ ಪಾರ್ಕರ್ ಪಕ್ಕದಲ್ಲಿರಲಿಲ್ಲ. ಯಾವಾಗಲೂ ತಲೆಮೇಲೆ ಧರಿಸಿಕೊಂಡಿರುತ್ತಿದ್ದ ಹ್ಯಾಟ್‌ಅನ್ನೂ ಲಿಂಕನ್ ಆವತ್ತು ತಲೆಯಿಂದ ತೆಗೆದು ಪಕ್ಕದಲ್ಲಿಟ್ಟುಕೊಂಡಿದ್ದನಂತೆ!

ಅಬ್ರಹಾಂ ಲಿಂಕನ್‌ಗೆ ಸಾಕುಪ್ರಾಣಿಗಳೆಂದರೆ, ಅದರಲ್ಲೂ ಬೆಕ್ಕುಗಳೆಂದರೆ, ತುಂಬ ಪ್ರೀತಿ. ಶ್ವೇತಭವನದಲ್ಲಿ ಬೆಕ್ಕುಗಳನ್ನು ಸಾಕಿದ ಮೊತ್ತಮೊದಲ ರಾಷ್ಟ್ರಾಧ್ಯಕ್ಷನೆಂಬ ಕೀರ್ತಿಯೂ ಅಬ್ರಹಾಂ ಲಿಂಕನ್‌ನದೇ. ಟ್ಯಾಬಿ ಮತ್ತು ಡಿಕ್ಸೀ ಎಂಬ ಹೆಸರಿನ ಎರಡು ಬೆಕ್ಕುಗಳನ್ನು ಲಿಂಕನ್ ದಂಪತಿಗೆ ಉಡುಗೊರೆಯಾಗಿ ಕೊಟ್ಟಿದ್ದವನು ಆಗಿನ ಸೆಕ್ರೆಟರಿ ಆಫ್ ಸ್ಟೇಟ್ ವಿಲಿಯಮ್ ಸಿವಾರ್ಡ್ ಎಂಬಾತ. ಲಿಂಕನ್‌ನ ಮಾರ್ಜಾಲಪ್ರೇಮ ಎಷ್ಟಿತ್ತೆಂದರೆ ಒಮ್ಮೆ ಸಂದರ್ಶಕರೊಬ್ಬರು ಲಿಂಕನ್‌ನ ಹೆಂಡತಿ ಮೇರಿ ಟಾಡ್‌ರನ್ನು 'ನಿಮ್ಮ ಗಂಡನ ಹವ್ಯಾಸಗಳೇನು?' ಎಂದು ಪ್ರಶ್ನೆ ಕೇಳಿದ್ದಾಗ ಆಕೆ ಒಂದಿನಿತೂ ಹಿಂದೆಮುಂದೆ ಆಲೋಚಿಸದೆ 'ಬೆಕ್ಕುಗಳೇ ಹವ್ಯಾಸ' ಎಂದು ಉತ್ತರಿಸಿದ್ದರಂತೆ. ಅದರಲ್ಲೇನೂ ಉತ್ಪ್ರೇಕ್ಷೆಯಿರಲಿಲ್ಲ. ಏಕೆಂದರೆ ಲಿಂಕನ್ ಕೆಲವೊಮ್ಮೆ ಗಂಟೆಗಟ್ಟಲೆ ಆ ಬೆಕ್ಕುಗಳೊಂದಿಗೆ ಸಂಭಾಷಣೆ ನಡೆಸುತ್ತ ಅವುಗಳೊಂದಿಗೆ ಆಟವಾಡುತ್ತ ಸಮಯ ಕಳೆಯುತ್ತಿದ್ದನಂತೆ. "ನನ್ನ ಈ ಡಿಕ್ಸೀ ಬೆಕ್ಕು ಇದೆಯಲ್ಲ, ಇದು ನನ್ನ ಕ್ಯಾಬಿನೆಟ್‌ನಲ್ಲಿರುವ ಎಲ್ಲರಿಗಿಂತಲೂ ಸ್ಮಾರ್ಟ್ ಆಗಿದೆ!" ಎಂದು ಲಿಂಕನ್ ತನ್ನ ಬೆಕ್ಕು ಡಿಕ್ಸಿಯ ಬಗ್ಗೆ ಅಭಿಮಾನದಿಂದ ಹೇಳಿಕೊಳ್ಳುತ್ತಿದ್ದುದನ್ನು ಅನೇಕರು ಕೇಳಿಸಿಕೊಂಡಿದ್ದಾರೆ. ಟ್ಯಾಬಿಯ ಬಗ್ಗೆಯೂ ಅಷ್ಟೇ ಪ್ರೀತಿ. ಅದು ಡೈನಿಂಗ್ ಟೇಬಲ್ ಮೇಲಕ್ಕೆ ಬಂದು ಆಹಾರ ಸೇವಿಸತೊಡಗಿದರೂ ಅದನ್ನಲ್ಲಿಂದ ಓಡಿಸುವುದೆಲ್ಲ ಇಲ್ಲ, ಬೇಕಿದ್ದರೆ ಗಣ್ಯರಿಗೆ ಏರ್ಪಡಿಸಿದ್ದ ಔತಣಕೂಟವೇ ಇರಲಿ. ಹೆಂಡತಿಯೇ ಛೀ ಎಂದು ಮುಖ ಸಿಂಡರಿಸಿದರೂ ಲಿಂಕನ್ ಬೆಕ್ಕಿನ ಪರವಹಿಸಿ "ಶ್ವೇತಭವನದ ಡೈನಿಂಗ್ ಹಾಲ್‌ನಲ್ಲಿರುವ ಚಿನ್ನದ ಚಮಚಗಳು ಅಧ್ಯಕ್ಷರ ಮರ್ಯಾದೆಗೆ ತಕ್ಕುದಾಗಿ ಇವೆಯಾದರೆ ಬೆಕ್ಕುಗಳ ಮರ್ಯಾದೆಗೂ ಏಕೆ ಕೂಡದು?" ಎನ್ನುತ್ತಿದ್ದನಂತೆ.

ಅಬ್ರಹಾಂ ಲಿಂಕನ್ ಬಗ್ಗೆ ಸಾಮಾನ್ಯವಾಗಿ ಯಾರಿಗೂ ಗೊತ್ತಿರದ ಇನ್ನೊಂದು ವಿಶಿಷ್ಟ ಸಂಗತಿಯೆಂದರೆ ಆತ 'ಪೇಟೆಂಟ್‌ಗೆ ಅರ್ಜಿ ಸಲ್ಲಿಸಿ ಪೇಟೆಂಟ್ ಗಳಿಸಿರುವ ಏಕೈಕ ಅಮೆರಿಕಾಧ್ಯಕ್ಷ' ಎಂಬ ವಿಚಾರ! ದೋಣಿ ಮತ್ತು ತೆಪ್ಪಗಳನ್ನು ನಡೆಸುವುದರಲ್ಲಿ ನಿಷ್ಣಾತನಾಗಿದ್ದ ಲಿಂಕನ್ ರಾಜಕೀಯಕ್ಕೆ ಧುಮುಕುವುದಕ್ಕೆ ಮೊದಲು ಅದನ್ನೇ ಹೊಟ್ಟೆಪಾಡಿಗೆ ಮಾಡಿಕೊಂಡಿದ್ದವನು. ಮಿಸ್ಸಿಸ್ಸಿಪ್ಪಿ ನದಿಯಲ್ಲಿ ಫೆರ್ರಿ ಆಪರೇಟರ್ ಆಗಿ ಕೆಲಸ ಮಾಡಿದ್ದೂ ಇತ್ತು. ದೋಣಿಗಳು ಕೆಲವೊಮ್ಮೆ ನದಿಯ ಜೌಗು ಪ್ರದೇಶದಲ್ಲಿ ಮರಳಿನಲ್ಲಿ ಹೂತುಕೊಳ್ಳುವುದು, ಅಲ್ಲಿಂದ ಎಬ್ಬಿಸಲಿಕ್ಕೆ ಕಷ್ಟಪಡುವುದು ಸಾಮಾನ್ಯವಾಗಿ ಹೋಗಿತ್ತು. ಒಮ್ಮೆಯಂತೂ ಸ್ವತಃ ಲಿಂಕನ್ ನಡೆಸುತ್ತಿದ್ದ ದೋಣಿ ಮರಳಿನಲ್ಲಿ ಹೂತುಹೋಗಿ ತುಂಬ ಕಷ್ಟಪಡಬೇಕಾಯಿತು. ಇದಕ್ಕೆ ಏನಾದರೊಂದು ಉಪಾಯ ಹುಡುಕಬೇಕೆಂದುಕೊಂಡ ಲಿಂಕನ್, ದೋಣಿಯ ಎರಡೂ ಬದಿಗಳಿಗೆ ಏರ್‌ಚೇಂಬರ್(ವಾಯುಕೋಶ)ಗಳನ್ನು ಅಳವಡಿಸಿ ಅವುಗಳ ನೆರವಿನಿಂದ ದೋಣಿಗಳನ್ನು ಮೇಲಕ್ಕೆತ್ತುವುದು ಸುಲಭವೆಂದು ಕಂಡುಕೊಂಡನು. ಸ್ಪ್ರಿಂಗ್‌ಫೀಲ್ಡ್‌ನಲ್ಲಿ ವಾಲ್ಟರ್ ಡೇವಿಸ್ ಎಂಬೊಬ್ಬ ಆರ್ಕಿಟೆಕ್ಟ್‌ನ ನೆರವು ಪಡೆದು ಅದರದೊಂದು ಕಚ್ಚಾ ಮಾದರಿಯನ್ನೂ ಸಿದ್ಧಪಡಿಸಿದನು. ಈ ಸಾಧನವನ್ನು ದೊಡ್ಡ ಪ್ರಮಾಣದಲ್ಲಿ ಉತ್ಪಾದನೆ ಮಾಡಲಿಲ್ಲವಾದರೂ ವಾಷಿಂಗ್ಟನ್ ಡಿಸಿಗೆ ತೆಗೆದುಕೊಂಡು ಬಂದನು. ಪೇಟೆಂಟ್‌ಗೆ ಅರ್ಜಿ ಸಲ್ಲಿಸಿ 1849ರ ಮೇ 22ರಂದು ಪೇಟೆಂಟ್ ಪಡೆದುಕೊಂಡನು.

ಹೀಗೆ ಹಲವು ಪ್ರಥಮಗಳ ಪ್ರೆಸಿಡೆಂಟ್ ಅಬ್ರಹಾಂ ಲಿಂಕನ್ ಜನಾನುರಾಗದಲ್ಲೂ ನಿರಂತರ ಪ್ರಥಮಸ್ಥಾನದಲ್ಲಿ ಇರುವುದು ಸಹಜವೇ. Honest Abe ಎಂಬ ಪ್ರೀತಿಯ ಅಭಿಧಾನವೊಂದೇ ಸಾಕು ಅಮರತ್ವದ ದ್ಯೋತಕವಾಗಿ.

ಉಚಿತಗಳ ಹರಿಕಾರ ಮಫ್ಲರ್‌ವಾಲನ ಮಹಾಪತನ

‘ಇಂಡಿಯಾ ಅಗೇನ್ಸ್ಟ್ ಕರಪ್ಷನ್’ ಆಂದೋಲನವು ಜನಲೋಕಪಾಲ ವಿಧೇಯಕವನ್ನು ಅಂಗೀಕರಿಸುವಂತೆ ಆಗ್ರಹಿಸಿ ಲಕ್ಷಾಂತರ ಜನರನ್ನು ಒಗ್ಗೂಡಿಸಿತ್ತು. ವ್ಯಾಪಕ ಪ್ರತಿಭಟನೆಗಳ ಹೊರತಾಗಿಯೂ ಈ ವಿಧೇಯಕ ಅಂಗೀಕಾರವಾಗಲಿಲ್ಲ. ಆಂದೋಲನದೊಳಗಿದ್ದ ಕೇಜ್ರಿವಾಲ್ ಬಣವು ವ್ಯವಸ್ಥಿತ ಬದಲಾವಣೆಯ ಅಗತ್ಯವನ್ನು ಗುರುತಿಸಿ, ಸಂಘಟನೆಯನ್ನು ರಾಜಕೀಯಕ್ಕೆ ಪರಿವರ್ತಿಸಿಕೊಳ್ಳಲು ಬಯಸಿತು.



ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ
vveditoped@gmail.com

ಈ ಬಾರಿಯ ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಭರ್ಜರಿ ಗೆಲುವು ಸಾಧಿಸಿ, ರಾಷ್ಟ್ರ ರಾಜಧಾನಿಯಲ್ಲಿನ ‘ಆಮ್ ಆದ್ಮಿ’ಯ ದಶಕದ ಆಡಳಿತವನ್ನು ಕೊನೆಗೊಳಿಸಿದೆ. ಮಾಜಿ ಸಿಎಂ ಅರವಿಂದ ಕೇಜ್ರಿವಾಲ್ ಮತ್ತು ಮಾಜಿ ಡಿಸಿಎಂ ಮನೀಶ್ ಸಿಸೋಡಿಯಾ ಸೇರಿದಂತೆ ಆಮ್ ಆದ್ಮಿ ಪಕ್ಷದ (ಆಪ್) ಹಲವು ಪ್ರಮುಖ ನಾಯಕರು ಚುನಾವಣೆಯಲ್ಲಿ ಸೋತಿದ್ದಾರೆ. ಮಹಾರಾಷ್ಟ್ರ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಮೈತ್ರಿಕೂಟವು ಜಯಗಳಿಸಿದ ಮತ್ತು ಬಿಜೆಪಿಯು ಹರಿಯಾಣವನ್ನು ಗೆದ್ದು ರಾಷ್ಟ್ರ ರಾಜಕಾರಣದಲ್ಲಿ ತನ್ನ ಬೇರುಗಳನ್ನು ಗಟ್ಟಿಗೊಳಿಸಿಕೊಂಡ ಕೆಲವೇ ತಿಂಗಳ ನಂತರ ಈ ಬೆಳವಣಿಗೆಯಾಗಿದೆ, ಬಿಜೆಪಿಯ ಪರವಾಗಿ ಮತ್ತೊಂದು ಜನಾದೇಶ ಹೊಮ್ಮಿದೆ. ಲೋಕಸಭಾ ಚುನಾವಣೆಯಲ್ಲಿ ಗಳಿಸಿದ ಶತಕದ ನಂತರ ದೆಹಲಿಯಲ್ಲಿ ತನ್ನ ಪುನರುತ್ಥಾನದ ನಿರೀಕ್ಷೆಯಲ್ಲಿದ್ದ ಕಾಂಗ್ರೆಸ್, ಯಾವುದೇ ಸ್ಥಾನವನ್ನು ಗೆಲ್ಲಲು ವಿಫಲವಾಯಿತು; 1998ರಿಂದ 15 ವರ್ಷಗಳ ಕಾಲ ದೆಹಲಿಯನ್ನು ಆಳಿದ್ದ ಕಾಂಗ್ರೆಸ್, ಹೀಗೆ ಸತತ 3ನೇ ಬಾರಿಯೂ ‘ಶೂನ್ಯ ಸಂಪಾದನೆ’ ಮಾಡಿ ಮುಜುಗರಕ್ಕೀಡಾಯಿತು!

ಚುನಾವಣಾ ಫಲಿತಾಂಶದ ದಿನ ದೆಹಲಿಯಾದ್ಯಂತ ಬಿಜೆಪಿ ಕಾರ್ಯಕರ್ತರು ಸಂಭ್ರಮಾಚರಣೆಯಲ್ಲಿ ತೊಡಗಿದರೆ, ಪ್ರಧಾನಿ ಮೋದಿಯವರು ಪಕ್ಷದ ಕಚೇರಿಯಿಂದ ಬೆಂಬಲಿಗರನ್ನು ಉದ್ದೇಶಿಸಿ ಮಾತನಾಡಿದರು. ‘‘ಸೇವೆ ಸಲ್ಲಿಸಲು ಬಿಜೆಪಿಗೆ ಅವಕಾಶ ನೀಡುವಂತೆ ಆಗ್ರಹಿಸಿ ದೆಹಲಿಯ ಪ್ರತಿಯೊಬ್ಬ ನಿವಾಸಿಗೂ ನಾನು ಪತ್ರ ಬರೆದಿದ್ದೆ. ಇಂದು ನಮ್ಮನ್ನು ನಂಬಿ ಮತನೀಡಿದ್ದಕ್ಕಾಗಿ ದೆಹಲಿಯ ಪ್ರತಿಯೊಂದು ಕುಟುಂಬಕ್ಕೂ ನಾನು ಕೃತಜ್ಞತೆಯಿಂದ ತಲೆಬಾಗುವೆ. ನಮಗೆ ತೆರೆದ ಹೃದಯದಿಂದ ಪ್ರೀತಿಯನ್ನು ನೀಡಿದ್ದೀರಿ, ತ್ವರಿತ ಅಭಿವೃದ್ಧಿಯ ಮೂಲಕ ಅದನ್ನು ಅನೇಕ ಪಟ್ಟು ಹಿಂದಿರುಗಿಸುತ್ತೇವೆ ಎಂದು ನಾನು ನಿಮಗೆ ಭರವಸೆ ನೀಡುತ್ತೇನೆ. ರಾಜಕೀಯದಲ್ಲಿ ಸುಳ್ಳುಗಳು ಮತ್ತು ಮೋಸಕ್ಕೆ ಸ್ಥಳವಿಲ್ಲ ಎಂಬ ಬಲವಾದ ಸಂದೇಶವನ್ನು ದೆಹಲಿಯ ಜನರು ರವಾನಿಸಿದ್ದಾರೆ’’ ಎಂದರು ಮೋದಿ.

ತನ್ನ ಅಸಾಂಪ್ರದಾಯಿಕ ಮತ್ತು ವಿಲಕ್ಷಣ ರಾಜಕೀಯ ನಡೆಯಿಂದ ಒಂದು ರೀತಿಯಲ್ಲಿ ಸಿಂಹಸ್ವಪ್ನವಾಗಿದ್ದ ‘ಆಪ್’ ಅನ್ನು ದೆಹಲಿಯಲ್ಲಿ ಸೋಲಿಸುವುದು ಬಿಜೆಪಿಗರಿಗೆ ಈ ಬಾರಿ ಎಷ್ಟು ಮುಖ್ಯವಾಗಿತ್ತು ಎಂಬುದು ಅವರ ವಿಜಯೋತ್ಸವವನ್ನು ನೋಡಿದರೆ ಅರಿವಾಗುತ್ತದೆ. ಲೋಕಸಮರವನ್ನು ಗೆದ್ದು 3ನೇ ಬಾರಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಾಗಲೂ ಬಿಜೆಪಿ ಇಷ್ಟು ಸಂಭ್ರಮಿಸಿರಲಿಲ್ಲ. ತಮ್ಮ ತಂತ್ರಗಾರಿಕೆಯಿಂದ ಇಡೀ ರಾಷ್ಟ್ರವನ್ನು ವ್ಯಾಪಿಸಿದ್ದ ಮೋದಿ-ಶಾ ಜೋಡಿಯ ನಾಯಕತ್ವದ ಬಿಜೆಪಿಗೆ ದೆಹಲಿ ಮಾತ್ರ ಕಳೆದ ಎರಡೂವರೆ ದಶಕದಿಂದ ಮರೀಚಿಕೆಯಾಗೇ ಉಳಿದಿತ್ತು. ತಮ್ಮ ಕಾರ್ಯಶೈಲಿ ಮತ್ತು ವರ್ಚಸ್ಸಿನಿಂದ ಜಗನ್ನಾಯಕ ಎನಿಸಿಕೊಂಡಿರುವ ಮೋದಿಯವರಿಗೂ ‘ಮಾರು ಗೆದ್ದೆ, ಆದರೆ ಮನೆಯನ್ನು ಗೆಲ್ಲಲಾಗಲಿಲ್ಲವಲ್ಲ’ ಎಂಬಂತಾಗಿತ್ತು. ಅಂತೂ, ದೆಹಲಿಯ ಶಾಹೀನ್‌ಬಾಗ್ ಸತ್ಯಾಗ್ರಹ ಮತ್ತು ಪಂಜಾಬಿನ ರೈತರ ಚಳವಳಿಯ ಕಾಲದಲ್ಲಿ ದೆಹಲಿಯಲ್ಲಿ ಅಧಿಕಾರದಲ್ಲಿದ್ದ ಕೇಜ್ರಿವಾಲ್ ಸರಕಾರದ ಅಸಹಕಾರಕ್ಕೆ ಬಿಜೆಪಿ ಈಗ ತಕ್ಕ ಉತ್ತರ ನೀಡಿದಂತಾಯ್ತು. ಭ್ರಷ್ಟಾಚಾರದ ಆರೋಪದಲ್ಲಿ ಮುಖ್ಯಮಂತ್ರಿಯೊಬ್ಬರನ್ನು ಬಂಧಿಸಿ ಜೈಲಿನಲ್ಲಿ ತಿಂಗಳುಗಟ್ಟಲೆ ಇಟ್ಟಿದ್ದರ ಪರಿಣಾಮ, ಅನುಕಂಪದ ಆಧಾರದಲ್ಲಿ ಜಾರ್ಖಂಡ್‌ನಲ್ಲಾದಂತೆ ಬಿಜೆಪಿಗೆ ತಿರುಗುಬಾಣವಾಗುವ ಸಾಧ್ಯತೆಯಿತ್ತಾದರೂ, ದೆಹಲಿಯ ಮತದಾರ ಈ ಬಾರಿ ಉಚಿತಗಳ ಆಕರ್ಷಣೆಗೆ ಮರುಳಾಗದೇ, ವಿಶ್ವಾಸಾರ್ಹತೆಗೆ ಮಹತ್ವ ನೀಡಿ ಕೇಜ್ರಿವಾಲರನ್ನು ಕೈಬಿಟ್ಟು ಬಿಜೆಪಿಯ ಕೈಹಿಡಿದ.

ಆದಾಯ ತೆರಿಗೆ ಇಲಾಖೆಯಲ್ಲಿ ಡೆಪ್ಯುಟಿ ಕಮಿಷನರ್ ಆಗಿದ್ದ ಕೇಜ್ರಿವಾಲ್ ತಮ್ಮ ಹುದ್ದೆಗೆ ರಾಜೀನಾಮೆ ನೀಡಿ, ಸಾಮಾಜಿಕ ಕಾರ್ಯಕರ್ತ ಅಣ್ಣಾ ಹಜಾರೆಯವರ ಲೋಕಪಾಲ್ ಸತ್ಯಾಗ್ರಹದ ಮೂಲಕ ಸಾರ್ವಜನಿಕ ಜೀವನಕ್ಕೆ ಅಡಿಯಿಟ್ಟಿದ್ದರು. ಯಾವುದೇ ರಾಜಕೀಯ ಹಿನ್ನೆಲೆಯಿಲ್ಲದ ಕೇಜ್ರಿವಾಲ್, ಬಿಜೆಪಿ, ಕಾಂಗ್ರೆಸ್‌ನಂಥ ಪ್ರಬಲ ರಾಷ್ಟ್ರೀಯ ಪಕ್ಷಗಳಿಂದ ಮೊದಲಿನಿಂದಲೂ ಅಂತರ ಕಾಯ್ದುಕೊಂಡು, ಸ್ವತಂತ್ರವಾಗಿ ಪಕ್ಷವನ್ನು ಕಟ್ಟಿ, ಎರಡೆರಡು ರಾಜ್ಯಗಳಲ್ಲಿ ಅಧಿಕಾರದ ಗದ್ದುಗೆಯೇರಿ, ದಿಲ್ಲಿಗರಿಗೆ ಉಚಿತಗಳ ಮೋಡಿ ಮಾಡಿ ಸತತ 10 ವರ್ಷ ಆಡಳಿತ ನಡೆಸಿ ಅಭೇದ್ಯರಾಗಿದ್ದ ಕಥೆ ರೋಚಕವಾಗೇ ಇದೆ.

ಅಣ್ಣಾ ಹಜಾರೆ ನೇತೃತ್ವದ ‘ಇಂಡಿಯಾ ಅಗೇನ್ಸ್ಟ್ ಕರಪ್ಷನ್’ ಆಂದೋಲನವು ಜನಲೋಕಪಾಲ ವಿಧೇಯಕವನ್ನು ಅಂಗೀಕರಿಸುವಂತೆ ಆಗ್ರಹಿಸಿ, 2 ವರ್ಷಗಳಲ್ಲಿ ದೇಶಾದ್ಯಂತ ಲಕ್ಷಾಂತರ ಜನರನ್ನು ಒಗ್ಗೂಡಿಸಿತ್ತು. ವ್ಯಾಪಕ ಪ್ರತಿಭಟನೆಗಳು, ಉಪವಾಸಗಳ ಹೊರತಾಗಿಯೂ ಈ ವಿಧೇಯಕವನ್ನು ಸಂಸತ್ತಿನಲ್ಲಿ ಅಂಗೀಕರಿಸಲಿಲ್ಲ. ಆಂದೋಲನದೊಳಗಿದ್ದ ಕೇಜ್ರಿವಾಲ್ ಬಣವು ವ್ಯವಸ್ಥಿತ ಬದಲಾವಣೆಯ ಅಗತ್ಯವನ್ನು ಗುರುತಿಸಿ, ಸಂಘಟನೆಯನ್ನು ರಾಜಕೀಯಕ್ಕೆ ಪರಿವರ್ತಿಸಿಕೊಳ್ಳಲು ಬಯಸಿತು. ದೇಶವನ್ನು ಭ್ರಷ್ಟಾಚಾರದಿಂದ ಮುಕ್ತಗೊಳಿಸುವ ಏಕೈಕ ಮಾರ್ಗವೆಂದರೆ ರಾಜಕೀಯವನ್ನು ಸೇರುವುದು, ಸರಕಾರವನ್ನು ಪ್ರವೇಶಿಸುವುದು ಮತ್ತು ವ್ಯವಸ್ಥೆಯನ್ನು ಒಳಗಿನಿಂದಲೇ ಸ್ವಚ್ಛಗೊಳಿಸುವುದು ಎಂದು ನಿರ್ಧರಿಸಿತು, ಭ್ರಷ್ಟಾಚಾರ ವಿರೋಧಿ ಪ್ರತಿಭಟನೆಯ ಪಯಣವು ರಾಜಕೀಯ ಕ್ರಾಂತಿಯ ಕಡೆಗೆ ಹೊರಳಿತು. ಪರಿಣಾಮವಾಗಿ 2012ರ ಅಕ್ಟೋಬರ್ 2ರಂದು ‘ಆಮ್ ಆದ್ಮಿ ಪಕ್ಷ’ ಹುಟ್ಟಿಕೊಂಡಿತು. ಹೀಗೆ, ಭ್ರಷ್ಟಾಚಾರದ ವಿರುದ್ಧದ ಹೋರಾಟದ ಉದ್ದೇಶದೊಂದಿಗೆ ರಾಮಲೀಲಾ ಮೈದಾನದಿಂದ ಶುರುವಾಗಿ ದೆಹಲಿಯ ಗದ್ದುಗೆಯನ್ನು ಏರುವವರೆಗೆ ಸಾಗಿದ ಕೇಜ್ರಿವಾಲ್ ಮತ್ತು ಅವರ ಆಮ್ ಆದ್ಮಿ ಪಕ್ಷದ ಪಯಣವು ಐತಿಹಾಸಿಕವೇ ಸರಿ.

ಭಾರತದ ರಾಜಕೀಯದಲ್ಲಿ ಮತದಾರರಿಗೆ ಉಚಿತಗಳ ರುಚಿಯನ್ನು ಮೊದಲಬಾರಿಗೆ ತೋರಿಸಿ ಜನಪ್ರಿಯತೆ ಗಳಿಸಿದ್ದ ‘ಆಪ್’, ದೆಹಲಿ ವಿಧಾನಸಭೆಯ 70 ಸ್ಥಾನಗಳಲ್ಲಿ 28ನ್ನು ಗೆಲ್ಲುವ ಮೂಲಕ ರಾಜಕೀಯ ರಂಗಕ್ಕೆ ಪ್ರಭಾವಶಾಲಿಯಾಗಿಯೇ ಅಡಿಯಿಟ್ಟಿತು. ಈ ಗೆಲುವು ಕಾಂಗ್ರೆಸ್ ಪಕ್ಷವನ್ನು ದುರ್ಬಲಗೊಳಿಸಿತು. ನವದೆಹಲಿ ಕ್ಷೇತ್ರದಿಂದ 3 ಬಾರಿ ಮುಖ್ಯಮಂತ್ರಿಯಾಗಿದ್ದ ಶೀಲಾ ದೀಕ್ಷಿತ್‌ರ ವಿರುದ್ಧ ಕೇಜ್ರಿವಾಲರು ಭರ್ಜರಿ ಅಂತರದಿಂದ ಜಯಗಳಿಸಿದ್ದರು. ದೆಹಲಿ ವಿಧಾನಸಭೆಯಲ್ಲಿ ಅಗತ್ಯ ಸಂಖ್ಯೆಯ ಕೊರತೆಯಿಂದಾಗಿ ಜನಲೋಕಪಾಲ್ ವಿಧೇಯಕವನ್ನು ಅಂಗೀಕರಿಸಲು ವಿಫಲವಾದ ನಂತರ, ‘ಆಪ್’ ಸರಕಾರವು 2014ರ ಫೆಬ್ರವರಿಯಲ್ಲಿ ರಾಜೀನಾಮೆ ನೀಡಿ, ಹೊಸ ಜನಾದೇಶವನ್ನು ಪಡೆಯಲು ನಿರ್ಧರಿಸಿತು. ದೆಹಲಿಯ ಮರುಚುನಾವಣೆಗೂ ಮೊದಲು, 2014ರ ಏಪ್ರಿಲ್-ಮೇ ತಿಂಗಳಲ್ಲಿ ಲೋಕಸಭಾ ಚುನಾವಣೆಯನ್ನು ನಿಗದಿಪಡಿಸಲಾಗಿತ್ತು. ಇದರಲ್ಲಿ 400ಕ್ಕೂ ಹೆಚ್ಚು ಸ್ಥಾನಗಳಲ್ಲಿ ಸ್ಪರ್ಧಿಸಿದ ‘ಆಪ್’, ಪಂಜಾಬಿನಲ್ಲಿ 4 ಸ್ಥಾನಗಳನ್ನು ದಕ್ಕಿಸಿಕೊಳ್ಳುವ ಮೂಲಕ ದೇಶದ ಗಮನ ಸೆಳೆದಿತ್ತು. ಆ ಚುನಾವಣೆಯ ವೇಳೆ ಜನಪ್ರಿಯತೆಯ ಉತ್ತುಂಗದಲ್ಲಿದ್ದ ಕೇಜ್ರಿವಾಲರು, ವಾರಾಣಸಿಯಿಂದ ನರೇಂದ್ರ ಮೋದಿಯವರ ವಿರುದ್ಧ ಸ್ಪರ್ಧಿಸುವ ಸುಳಿವನ್ನೂ ನೀಡಿದ್ದರು. ಆದರೆ, ದೆಹಲಿ ಮತ್ತು ಪಂಜಾಬ್‌ನಲ್ಲಿನ ತನ್ನ ಯಶಸ್ಸನ್ನು ರಾಷ್ಟ್ರೀಯ ಮಟ್ಟಕ್ಕೆ ವಿಸ್ತರಿಸುವಲ್ಲಿ ‘ಆಪ್’ ಸಫಲವಾಗಲಿಲ್ಲ. ಮುಂದೆ, 2019ರ ಸಾರ್ವತ್ರಿಕ ಚುನಾವಣೆಯಲ್ಲಿ ‘ಆಪ್’ ಹಿನ್ನಡೆಯನ್ನು ಅನುಭವಿಸಿತು; ವಾಯವ್ಯ ಮತ್ತು ದಕ್ಷಿಣ ದೆಹಲಿಯನ್ನು ಹೊರತುಪಡಿಸಿ ದೆಹಲಿಯ ಹೆಚ್ಚಿನ ಕ್ಷೇತ್ರಗಳಲ್ಲಿ 3ನೇ ಸ್ಥಾನಕ್ಕೆ ಕುಸಿಯಿತು.

2015ರ ದೆಹಲಿ ವಿಧಾನಸಭಾ ಚುನಾವಣೆಯಲ್ಲಿ, 70 ಸ್ಥಾನಗಳ ಪೈಕಿ 67ನ್ನು ಗೆದ್ದು ಭಾರಿ ಬಹುಮತವನ್ನು ಪಡೆಯುವ ಮೂಲಕ ಮಹತ್ವದ ಮೈಲುಗಲ್ಲನ್ನು ಸಾಧಿಸಿದ್ದ ‘ಆಪ್’, 2020ರ ಚುನಾವಣೆಯಲ್ಲಿ 62 ಸ್ಥಾನಗಳೊಂದಿಗೆ ಅಧಿಕಾರವನ್ನು ಉಳಿಸಿಕೊಂಡಿತು. ಮೊಹಲ್ಲಾ ಕ್ಲಿನಿಕ್‌ಗಳು, 200 ಯುನಿಟ್‌ಗಳವರೆಗೆ ಉಚಿತ ವಿದ್ಯುತ್, ಉಚಿತ ನೀರು ಮತ್ತು ಮಹಿಳೆಯರಿಗೆ ಉಚಿತ ಬಸ್ ಪ್ರಯಾಣದಂಥ ಭರವಸೆಗಳನ್ನು ನೀಡಿದ ‘ಆಪ್’, ವಿವಿಧ ಸಾಮಾಜಿಕ ಸ್ತರದ ಜನರಿಗೆ ಗಮನಾರ್ಹ ಪ್ರಯೋಜನವನ್ನೇ ನೀಡಿತೆನ್ನಬೇಕು. ಮಾತ್ರವಲ್ಲದೆ, ‘ಆಪ್’ನ ತೆರಿಗೆ ಸಂಗ್ರಹ ಸುಧಾರಣೆಯು ಕಳೆದ 7 ವರ್ಷಗಳಲ್ಲಿ ಹೊಸ ತೆರಿಗೆಗಳನ್ನು ಪರಿಚಯಿಸದೆ, ದೆಹಲಿ ಸರಕಾರದ ಆದಾಯವನ್ನು ದ್ವಿಗುಣಗೊಳಿಸುವಲ್ಲಿ ಯಶಸ್ವಿಯಾಗಿತ್ತು. ಒಟ್ಟಾರೆಯಾಗಿ, ಪರಿಣಾಮಕಾರಿ ಆಡಳಿತ ಮತ್ತು ತಳಮಟ್ಟದ ಬೆಂಬಲದಿಂದ ನಿರೂಪಿಸಲ್ಪಟ್ಟ ಪಕ್ಷದ ಆಡಳಿತ ವಿಧಾನವು, ಅದರ ಖ್ಯಾತಿಯನ್ನು ಗಟ್ಟಿಗೊಳಿಸಿತು, ವ್ಯಾಪಕ ಆಕರ್ಷಣೆಯನ್ನು ಮತ್ತಷ್ಟು ವಿಸ್ತರಿಸಿತು.

2021ರಲ್ಲಿ ದೆಹಲಿಯ ಗಡಿಯಲ್ಲಿ ರೈತರ ಬೃಹತ್ ಪ್ರತಿಭಟನೆಗಳಾದಾಗ ‘ಆಪ್’ ರೈತರಿಗೆ ಬೆಂಬಲ ನೀಡಿತು. ಇದು 2022ರ ಸಂದರ್ಭದಲ್ಲಿ ‘ಆಪ್’ನ ಭವಿಷ್ಯವನ್ನು ಪರೋಕ್ಷವಾಗಿ ಉಜ್ವಲವಾಗಿಸಿತು. ಇದರಿಂದಾಗಿ, 2022ರ ಪಂಜಾಬ್ ವಿಧಾನಸಭಾ ಚುನಾವಣೆಯಲ್ಲಿ ‘ಆಪ್’ ಜನಪ್ರಿಯತೆ ಉತ್ತುಂಗಕ್ಕೇರಿ 92 ಸ್ಥಾನಗಳೊಂದಿಗೆ ಭರ್ಜರಿ ಗೆಲುವು ಗಳಿಸಿ ಅಧಿಕಾರ ವಹಿಸಿಕೊಂಡಿತು. 2022ರ ವಿಧಾನಸಭಾ ಚುನಾವಣೆಯ ನಂತರ ಗುಜರಾತ್ ರಾಜಕೀಯದಲ್ಲಿ ‘ಆಪ್’ ತೃತೀಯ ರಂಗವಾಗಿ ಹೊರಹೊಮ್ಮಿತು. ಶೇ.12.92ರಷ್ಟು ಮತಗಳು ಮತ್ತು 5 ಸ್ಥಾನಗಳನ್ನು ಪಡೆದ ‘ಆಪ್’ ಗುಜರಾತ್ ರಾಜಕೀಯಕ್ಕೆ ಪ್ರವೇಶಿಸಿದ್ದು ಮಹತ್ವದ ಮೈಲುಗಲ್ಲಾಯಿತು. ಅಂತೆಯೇ, ಗೋವಾದಲ್ಲಿ ಶೇ.6ರಷ್ಟು ಮತ ಹಂಚಿಕೆಯೊಂದಿಗೆ 2 ಸ್ಥಾನಗಳನ್ನು ಗೆದ್ದಿತು. ಕನಿಷ್ಠ 4 ರಾಜ್ಯಗಳಲ್ಲಿ ಶೇ.6ಕ್ಕಿಂತ ಹೆಚ್ಚು ಮತಗಳನ್ನು ಗಳಿಸಿದ್ದರಿಂದ ‘ಆಪ್’ಗೆ ರಾಷ್ಟ್ರೀಯ ಸ್ಥಾನಮಾನವೂ ದಕ್ಕಿತು. ದೆಹಲಿ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ‘ಆಪ್’ ಪ್ರಾಮುಖ್ಯವನ್ನು ಪಡೆಯುತ್ತಿರುವುದರಿಂದ, ಹರಿಯಾಣವು ಮುಂದಿನ ಪಂಜಾಬ್ ಆಗಲಿದೆಯೇ ಎಂಬ ಪ್ರಶ್ನೆ ಕೂಡ ಎದ್ದಿತು.

ದೆಹಲಿ ಮುನಿಸಿಪಲ್ ಕಾರ್ಪೊರೇಷನ್‌ಗೆ 2022ರಲ್ಲಿ ನಡೆದ ಚುನಾವಣೆಯಲ್ಲಿ, ಬಿಜೆಪಿಯ 15 ವರ್ಷಗಳ ಭದ್ರಕೋಟೆಯನ್ನು ಮುರಿಯುವಲ್ಲಿ ‘ಆಪ್’ ಯಶಸ್ವಿಯಾಯಿತು. 2017ರಲ್ಲಿ 49 ಸ್ಥಾನಗಳನ್ನು ಗೆದ್ದಿದ್ದ ‘ಆಪ್’, 2022ರ ಚುನಾವಣೆಯಲ್ಲಿ 134 ಸ್ಥಾನಗಳಿಗೆ ಭಾರಿ ಜಿಗಿತವನ್ನು ಕಂಡಿತು. ಕೇಂದ್ರ ಸಚಿವರನ್ನೊಳಗೊಂಡ ಬಿಜೆಪಿಯ ತೀವ್ರ ಪ್ರಚಾರ ಪ್ರಯತ್ನಗಳ ಹೊರತಾಗಿಯೂ, ಭ್ರಷ್ಟಾಚಾರದ ಆರೋಪ ಮತ್ತು ಡಿಸಿಎಂ ಮೇಲಿನ ಸಿಬಿಐ ದಾಳಿಗಳ ನಡುವೆಯೂ ‘ಆಪ್’ ಗೆಲುವು ಎಲ್ಲರ ಹುಬ್ಬೇರುವಂತೆ ಮಾಡಿತ್ತು. ಕೇವಲ ಒಂದು ದಶಕದಷ್ಟು ಹಳೆಯ ಪಕ್ಷಕ್ಕೆ ಹೀಗೆ ದಕ್ಕಿದ ಗೆಲುವುಗಳು, ಬೆಳೆಯುತ್ತಿರುವ ಅದರ ಪ್ರಭಾವವನ್ನು ಒತ್ತಿಹೇಳಿದವು. 2021ರ ಚಂಡೀಗಢ ಮುನಿಸಿಪಲ್ ಕಾರ್ಪೊರೇಷನ್ ಚುನಾವಣೆಯಲ್ಲೂ ‘ಆಪ್’ ಮೊದಲ ಬಾರಿಗೆ ಸ್ಪರ್ಧಿಸಿ 14 ಸ್ಥಾನಗಳನ್ನು ಗಳಿಸಿ, 35 ಸ್ಥಾನಗಳ ಕಾರ್ಪೊರೇಷನ್‌ನಲ್ಲಿ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿತು.

ಆದರೆ, ಅತಿಯಾದ ಆತ್ಮವಿಶ್ವಾಸ ಮತ್ತು ಅಧಿಕಾರದ ಮದದಿಂದಾಗಿ ಭ್ರಷ್ಟಾಚಾರದ ಸುಳಿಗೆ ಸಿಲುಕಿ ನಲುಗಿದ ಸರಕಾರ, ಆಡಳಿತಾರೂಢ ಮುಖ್ಯಮಂತ್ರಿಯ ಬಂಧನಕ್ಕೆ ಸಾಕ್ಷಿಯಾಗುವಂತಾಯಿತು; ಭಾರತದ ಸ್ವಾತಂತ್ರ್ಯಾನಂತರ ಮೊದಲ ಬಾರಿಗೆ ಹಾಲಿ ಮುಖ್ಯಮಂತ್ರಿಯೊಬ್ಬರು ಬಂಧನಕ್ಕೊಳಗಾಗುವ ಕುಖ್ಯಾತಿಗೂ ಕಾರಣವಾಗಿ ಅಂತಿಮವಾಗಿ ದೆಹಲಿಯ ಮತದಾರರ ವಿಶ್ವಾಸವನ್ನು ಅದು ಕಳೆದುಕೊಳ್ಳುವಂತಾಯಿತು. ದೆಹಲಿಯಲ್ಲಿ ಸತತ 10 ವರ್ಷಗಳ ದರ್ಬಾರ್ ನಡೆಸಿದ್ದ ‘ಆಪ್’ ಸರಕಾರ, ಸಹಜವಾಗಿ ರೂಪುಗೊಂಡಿದ್ದ ಆಡಳಿತ-ವಿರೋಧಿ ಅಲೆ, ನಾಯಕರುಗಳ ಅಹಂಕಾರದ ಮಾತುಗಳು, ಸರಕಾರದಲ್ಲಿನ ವ್ಯಾಪಕ ಭ್ರಷ್ಟಾಚಾರ ಮತ್ತಿತರ ಅನೇಕ ವೈರುದ್ಧ್ಯಗಳ ನಡುವೆಯೂ 44 ಪ್ರತಿಶತದಷ್ಟು ಮತಗಳಿಸಿ (ಗೆದ್ದ ಬಿಜೆಪಿಗಿಂತ ಕೇವಲ 3.5 ಪ್ರತಿಶತ ಕಡಿಮೆ), 22 ಸ್ಥಾನಗಳನ್ನು ಉಳಿಸಿಕೊಂಡಿದೆ. ಅಂದರೆ, ದೆಹಲಿಯಲ್ಲಿ ‘ಆಪ್’ ತನ್ನ ರಾಜಕೀಯ ಅಸ್ತಿತ್ವವನ್ನು ಇನ್ನೂ ಉಳಿಸಿಕೊಂಡಿದೆ ಎಂದರ್ಥ. ಅಂಕಿ-ಅಂಶಗಳ ಪ್ರಕಾರ, ಕೇಜ್ರಿವಾಲ್ ಈ ಚುನಾವಣೆಯನ್ನು ‘ಇಂಡಿಯ’ ಒಕ್ಕೂಟದ ಜತೆಗೂಡಿ ಎದುರಿಸಿದ್ದಿದ್ದರೆ, ಈ ಬಾರಿಯೂ ಗದ್ದುಗೆ ಏರಬಹುದಿತ್ತು ಎಂಬ ಸಂಗತಿಯನ್ನು ಗಮನಿಸಬೇಕಿದೆ. ‘ಈ ಸೋಲಿನೊಂದಿಗೆ ಕೇಜ್ರಿವಾಲರ ಮತ್ತು ಆಮ್ ಆದ್ಮಿ ಪಕ್ಷದ ಕಥೆ ಇನ್ನು ಮುಗಿದಂತೆಯೇ’ ಎಂದು ಬೀಗುತ್ತಿರುವ ಬಿಜೆಪಿಗರು, ‘ದೆಹಲಿಯಲ್ಲಿ ಆಪ್ ಸೋತಿದ್ದು ನಿಜವಾದರೂ, ಸತ್ತಿಲ್ಲ’ ಎಂಬುದನ್ನು ಮರೆಯದಿದ್ದರೆ ಒಳಿತು.

(ಲೇಖಕರು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)

ಬಬ್ಬೂರ್‌ಕಮ್ಮೆಗೆ ಬದುಕೋದ್ ಗೊತ್ತು ರೀ…!

ರಸದೌತಣ
ಯಗಟಿ ರಘು ನಾಡಿಗ್
naadigru@gmail.com

- ಪ್ಲೀಸ್ ಕಮ್ ಇನ್… ಟೇಕ್ ಯುವರ್ ಸೀಟ್..

– ಥ್ಯಾಂಕ್ಯೂ ವೆರಿ ಮಚ್ ಸರ್.

- ಅಂದ್ಹಾಗೆ, ನಿಮ್ ಹೆಸರು ಏನಂದ್ರೀ?

– ಸಂಪತ್‌ಕುಮಾರ್ ಸರ್. ಡಿಗ್ರಿ ಓದಿದ್ದು ಬೆಂಗಳೂರು ಬಸವನಗುಡಿಯ ನ್ಯಾಷನಲ್ ಕಾಲೇಜಿನಲ್ಲಿ..

- ಸರಿ ಸರಿ. ಹೋಗೀ ಹೋಗೀ ಈ ಕೆಲಸಕ್ಕೆ ನೀವ್ಯಾಕ್ರೀ ಅಪ್ಲೈ ಮಾಡ್ಕೊಂಡ್ರೀ?

– ಇದೇನ್ ಸರ್ ಹೀಗೆ ಕೇಳ್ತಾ ಇದ್ದೀರಾ? ಡಿಗ್ರಿ ಪಾಸು ಮಾಡಿದ್ದೀನಿ, ಕೆಲಸ ಮಾಡೋ ಹುಮ್ಮಸ್ಸಿದೆ ಶ್ರದ್ಧೆಯಿದೆ. ಕಾರ್ಯನಿಮಿತ್ತ ಭೇಟಿಮಾಡಬೇಕಾಗುವವರ ಜತೆ ಚೆನ್ನಾಗಿ ವ್ಯವಹರಿಸಬಲ್ಲೆ ಸರ್..

- ಆದ್ರೂ, ಸಂಪತ್‌ಕುಮಾರ್, ಈ ಕೆಲಸ ನಿಮಗೆ ಬೇಡ ಕಣ್ರೀ. ನಿಮಗೆ ಆಗಿಬರೋಲ್ಲ..

– ಆಗಿಬರೋಲ್ಲ ಅಂದ್ರೆ, ಏನರ್ಥ ಸರ್? ನನ್ನಲ್ಲಿ ಏನು ಕೊರತೆಯಿದೆ ಹೇಳಿ? ಕನ್ನಡ-ಇಂಗ್ಲಿಷ್ ಎರಡರಲ್ಲೂ ಸ್ಪಷ್ಟವಾಗಿ ಮಾತಾಡ್ತೀನಿ, ನೋಡೋಕ್ಕೂ ಲಕ್ಷಣವಾಗಿದ್ದೀನಿ ಅಂದುಕೊಂಡಿದ್ದೀನಿ. ಇಷ್ಟೆಲ್ಲಾ ಇರೋವಾಗ ನಾನ್ಯಾಕೆ ಈ ‘ಮೆಡಿಕಲ್ ರೆಪ್ರೆಸೆಂಟೇಟಿವ್’ ಕೆಲಸ ಮಾಡಬಾರದು? ಅದನ್ನಾದ್ರೂ ಹೇಳಿ ಸರ್…

- ನೋಡಿದ್ರಾ, ನೋಡಿದ್ರಾ…. ನಿಮ್ಮ ಮಾತಲ್ಲೇ ಉತ್ತರವೂ ಇದೆಯಲ್ಲಪ್ಪಾ. ಈ ಮೆಡಿಕಲ್ ರೆಪ್ರೆಸೆಂಟೇಟಿವ್ ಕೆಲಸಕ್ಕೆ ಬೇಕಿರೋ ಅರ್ಹತೆಯೆಲ್ಲಾ ನಿಮ್ಮಲ್ಲಿವೆ, ಇಲ್ಲಾಂತ ನಾನು ಹೇಳ್ತಿಲ್ಲ. ಆದ್ರೆ ನಂಗನ್ಸುತ್ತೆ, ನೀವು ಇದನ್ನೂ ಮೀರಿದ ಮತ್ತಾವುದೋ ಕ್ಷೇತ್ರಕ್ಕೆ ಮೀಸಲಾದೋರು ಅಂತ. ನೋಡೋಕ್ಕೂ ಒಳ್ಳೆ ಟೊಮೆಟೋ ಹಣ್ಣಿನ ಥರ ಕೆಂಪುಕೆಂಪಗೆ ಇದ್ದೀರಿ. ನಿಮ್ಮ ಕನ್ನಡದಲ್ಲಿ ಭಾಷಾಶುದ್ಧತೆ-ಭಾವಶುದ್ಧತೆ ಎದ್ದು ಕಾಣುತ್ವೆ. ಸಾಕಷ್ಟು ‘ಯಂಗ್’ ಆಗಿದ್ದೀರಿ? ನೀವ್ಯಾಕೆ ‘ಫಿಲ್ಮ್ ಫೀಲ್ಡ್’ನಲ್ಲಿ ಪ್ರಯತ್ನ ಮಾಡಬಾರದು? ಅಲ್ಲಿ ನೀವು ತುಂಬಾ ಯಶಸ್ವಿಯಾಗ್ತೀರಿ ಅಂತ ನನ್ನ ಒಳಮನಸ್ಸು ಹೇಳ್ತಾ ಇದೆಯಪ್ಪಾ… ಹೋಗಿ ಬನ್ನಿ, ಮೆಡಿಕಲ್ ರೆಪ್ರೆಸೆಂಟೇಟಿವ್ ಆಗಿ ಬ್ಯಾಗು ಹೊತ್ಕೊಂಡು ನೀವು ಊರೂರು ತಿರುಗೋದು ಬೇಡ… ಕಲಾಶಾರದೆ ನಿಮ್ಮನ್ನ ಕೈಬೀಸಿ ಕರೀತಾ ಇದ್ದಾಳೆ ಅನ್ಸುತ್ತೆ…

– ಸರಿ ಬಿಡಿ ಸರ್… ಅದ್ಯಾಕೆ ಎಲ್ರೂ ನಂಗೆ ‘ಫಿಲ್ಮ್ ಆಕ್ಟರ್ ಆಗು’ ಅಂತಾನೇ ಹೇಳ್ತಾರೋ…?!

• • •

ಇದು, ಡಿಗ್ರಿ ಮುಗಿಸಿ ಉದ್ಯೋಗಕ್ಕೆಂದು ಇಂಟರ್‌ವ್ಯೂಗಳಲ್ಲಿ ಪಾಲ್ಗೊಳ್ಳುತ್ತಿದ್ದ ಸಂಪತ್‌ಕುಮಾರ್ ಎಂಬ ಚಿಗುರುಮೀಸೆಯ ಚೆಲುವನ ಇಂಟ್ರೊಡಕ್ಷನ್. ‘ಮೆಡಿಕಲ್ ರೆಪ್ರೆಸೆಂಟೇಟಿವ್ ಆಗಬೇಕೆಂಬ ನನ್ನ ಬಯಕೆಗೆ ಈ ಸಂದರ್ಶಕರು ತಣ್ಣೀರೆರಚಿಬಿಟ್ರಲ್ಲಾ’ ಎಂದೇ ಭುಸುಗುಡುತ್ತಿದ್ದ ಆತ ಕೊನೆಗೂ ಚಲನಚಿತ್ರಗಳಲ್ಲೇ ಮಿಂಚುವಂತಾಯಿತು. ಅದಕ್ಕೆ ತಕ್ಕಂತೆ, ಮೊದಲ ಚಿತ್ರದಲ್ಲೇ ಹೀರೋ ಆಗಿ ನಟಿಸುವ ಅವಕಾಶವೂ ಸಿಕ್ಕಿಬಿಟ್ಟಾಗ ಸಂಪತ್‌ನನ್ನು ಯಥೋಚಿತವಾಗಿ ಕಡೆದು ನಿಲ್ಲಿಸಿದ್ದು ಪುಟ್ಟಣ್ಣ ಕಣಗಾಲ್ ಎಂಬ ಅದ್ಭುತ ಶಿಲ್ಪಿ.

ಹಾಗೆ ನೋಡಿದರೆ, ನಿರ್ದೇಶಕ ಎಸ್.ವಿ.ರಾಜೇಂದ್ರಸಿಂಗ್ ಬಾಬುರ ತಂದೆ ಶಂಕರ್‌ಸಿಂಗ್ ನಿರ್ದೇಶಿಸಿದ ‘ಶಿವಶರಣೆ ನಂಬಿಯಕ್ಕ’ ಚಿತ್ರದಲ್ಲಿ (1955) ಬಾಲನಟನಾಗಿ ಕಾಣಿಸಿಕೊಂಡಿದ್ದ ಸಂಪತ್‌ಕುಮಾರ್, ಮುಂದೆ ‘ಕೋಕಿಲವಾಣಿ’ ಚಿತ್ರದಲ್ಲೂ (1956) ನಂತರ ಎಸ್.ಎಲ್.ಭೈರಪ್ಪನವರ ಕಾದಂಬರಿ ಆಧರಿತ ‘ವಂಶವೃಕ್ಷ’ ಚಿತ್ರದ ಸಣ್ಣ ಪಾತ್ರದಲ್ಲೂ ಕಾಣಿಸಿಕೊಂಡಿದ್ದುಂಟು. ಆದರೆ, ನಾಯಕನಾಗಿ ಬಣ್ಣ ಹಚ್ಚುವ ಅವಕಾಶ ಒದಗಿದ್ದು ‘ನಾಗರಹಾವು’ ಚಿತ್ರದಿಂದ. ಈ ಚಿತ್ರ ಸೆಟ್ಟೇರುವುದಕ್ಕೂ ಮೊದಲು ಸಾಕಷ್ಟು ಹುಡುಗರನ್ನು ಸಂದರ್ಶಿಸಿ ನಿರಾಕರಿಸಿದ್ದ ಪುಟ್ಟಣ್ಣನವರಿಗೆ ಸಂಪತ್‌ಕುಮಾರನಲ್ಲಿ ಅವರ ಕಲ್ಪನೆಯ ‘ರಾಮಾಚಾರಿ’ ಕಂಡಿದ್ದ. ಆತನ ಆಯ್ಕೆಯೂ ಆಗಿ ಚಿತ್ರದ ಚಿತ್ರೀಕರಣ ಶುರುವಾಯಿತು. ಸಿನಿಮಾ ಸೆಟ್‌ನ ಮೂಲೆಯಲ್ಲೆಲ್ಲೋ ಸಂಪತ್ ನಿಂತಿದ್ದ. ಮತ್ತೊಂದು ಮೂಲೆಯಲ್ಲಿದ್ದ ಪುಟ್ಟಣ್ಣನವರು ಅವನೆಡೆಗೆ ತಿರುಗಿ, ‘‘ಲೋ ವಿಷ್ಣುವರ್ಧನಾ, ಬಾರಯ್ಯಾ ಇಲ್ಲಿ..’’ ಎಂದು ಕರೆದರು. ಸಂಪತ್ ಅಕ್ಕಪಕ್ಕದಲ್ಲಿ ಒಮ್ಮೆ ನೋಡಿದ, ಯಾರೂ ಇರಲಿಲ್ಲ. ಇದ್ದುದು ಅವನೊಬ್ಬನೇ. ಅವನ ಅಯೋಮಯ ಮುಖವನ್ನು ಕಂಡ ಪುಟ್ಟಣ್ಣನವರೇ ಅವನಿದ್ದಲ್ಲಿಗೆ ತೆರಳಿ, ‘‘ನಿನಗೆ ವಿಷ್ಣುವರ್ಧನ ಎಂದು ಮರುನಾಮಕರಣ ಮಾಡಿರುವೆ. ಆ ಹೊಯ್ಸಳ ಸಾಮ್ರಾಟ ವಿಷ್ಣುವರ್ಧನನಂತೆಯೇ ನೀನೂ ಜನಾನುರಾಗಿ ಆಗಬೇಕು’’ ಎಂದು ಹೇಳಿ ತಲೆಯ ಮೇಲೆ ಕೈಯಿಟ್ಟು ಹರಸಿದರು. ಮುಂದಿನದೆಲ್ಲಾ ಇತಿಹಾಸ…

ಹೀಗೆ ‘ನಾಗರಹಾವು’ ಎಂಬ ನಿಲ್ದಾಣದಿಂದ ಶುರುವಾದ ವಿಷ್ಣುವರ್ಧನ್‌ರವರ ಸಿನಿರೈಲು ಪಯಣವು ‘ಆಪ್ತರಕ್ಷಕ’ ಎಂಬ ಜಂಕ್ಷನ್ ಸಿಗುವವರೆಗೂ ಮಾರ್ಗಮಧ್ಯದಲ್ಲಿ ಸಿಕ್ಕ ನಿಲ್ದಾಣಗಳು, ಲೆವೆಲ್ ಕ್ರಾಸಿಂಗ್‌ಗಳು, ಒದಗಿದ ಸಿಗ್ನಲ್ ಸಮಸ್ಯೆಗಳು ಒಂದೆರಡಲ್ಲ, ಒಂದೆರಡು ಬಗೆಯವಲ್ಲ. ನಮ್ಮಂಥ ಅಭಿಮಾನಿಗಳಿಗೆ ಚಿತ್ರನಟರನ್ನು ಸುತ್ತುವರಿದಿರುವ ಪ್ರಭಾವಳಿ, ಅವರಿಗೆ ದಕ್ಕಿರುವ ಹಣ-ಹೆಸರು-ಯಶಸ್ಸು ಮಾತ್ರವೇ ಕಾಣುತ್ತವೆ. ಆದರೆ ಅವರ ಒಳತೋಟಿಗಳು ಸುಲಭಗ್ರಹಿಕೆಗೆ ದಕ್ಕುವಂತಿರುವುದಿಲ್ಲ ಅಥವಾ ‘ನನ್ನ ನೋವು ನಿಮಗ್ಯಾಕೆ? ನಲಿವನ್ನಷ್ಟೇ ನಿಮಗೆ ಹಂಚುವೆ’ ಎಂಬ ಇಂಥವರ ಸಹೃದಯಿ ಭಾವವೇ ಅಂಥ ಒಳತೋಟಿಯನ್ನು ಮರೆಮಾಚಿರುತ್ತದೆ. ವಿಷ್ಣುವರ್ಧನ್ ಕೂಡ ಇಂಥ ಹತ್ತಾರು ನೋವಿನ, ಹೊರಗೆಲ್ಲೂ ಹೇಳಿಕೊಳ್ಳಲಾಗದ ಸಂಕಟಗಳ ಫಲಾನುಭವಿಯಾಗಿದ್ದರು. ‘ನಾಗರಹಾವು’ ಚಿತ್ರದ ಭರ್ಜರಿ ಯಶಸ್ಸಿನ ನಂತರ ‘ಸೀತೆಯಲ್ಲ ಸಾವಿತ್ರಿ’, ‘ಮನೆ ಬೆಳಗಿದ ಸೊಸೆ’ಯಂಥ ಒಂದಿಷ್ಟು ಚಿತ್ರಗಳು ಸಿಕ್ಕಿದ್ದೇನೋ ಹೌದು. ಆದರೆ ‘ಗಂಧದ ಗುಡಿ’ ಚಿತ್ರೀಕರಣದಲ್ಲಾದ ಒಂದು ಕಹಿಘಟನೆಯು ಒಂದಿಷ್ಟು ತಪ್ಪುಗ್ರಹಿಕೆಗಳಿಗೆ ಆಸ್ಪದ ನೀಡಿ, ವಿಷ್ಣು ತಮ್ಮದಲ್ಲದ ತಪ್ಪಿಗೆ ನೋವುಣ್ಣಬೇಕಾಗಿ ಬಂತು, ಅಪಪ್ರಚಾರಕ್ಕೆ ಕೊರಳೊಡ್ಡಬೇಕಾಯಿತು. ತಾವು ಮೆಚ್ಚಿದ ಹುಡುಗಿ, ಸಹ ಕಲಾವಿದೆ ಭಾರತಿಯವರನ್ನು ವಿಷ್ಣು ಮದುವೆಯಾಗುವ ಸಂದರ್ಭದಲ್ಲೂ ತಲ್ಲಣ ಬೆನ್ನು ಬಿಡಲಿಲ್ಲ. ಬೆಂಗಳೂರಿನ ಜಯನಗರ ಬಡಾವಣೆಯ ಕುಚಲಾಂಬಾ ಕಲ್ಯಾಣ ಮಂಟಪದಲ್ಲಿ ಅವರ ವಿವಾಹ ಸಮಾರಂಭ ನೆರವೇರುವಾಗ ಅಕ್ಷರಶಃ ಪೊಲೀಸ್ ಬಂದೋಬಸ್ತ್ ಮಾಡಬೇಕಾಗಿ ಬಂದಿತ್ತು.

ಹೇಳಿಕೊಳ್ಳಲಾಗದ ಭಯ, ಅಭದ್ರತೆ ಇವೆಲ್ಲಾ ಸುತ್ತುವರಿದಾಗ ವಿಷ್ಣುವರ್ಧನ್ ಮದ್ರಾಸ್‌ನಲ್ಲಿ ಮನೆ ಮಾಡಬೇಕಾಗಿ ಬಂತು. ಇದರ ಜತೆಗೆ ಇನ್ನೂ ಒಂದಷ್ಟು ಕಾರಣಗಳೂ, ಕಾಣದ ಕೈಗಳ ಸಂಚುಗಳೂ ಸೇರಿಕೊಂಡು ವಿಷ್ಣು ಅವಕಾಶಗಳ ಕೊರತೆಯನ್ನು ಎದುರಿಸಬೇಕಾಗಿ ಬಂತು. ಈ ಘಟ್ಟದಲ್ಲಿ, ಚಿತ್ರರಂಗಕ್ಕೆ ಗುಡ್‌ಬೈ ಹೇಳಿ, ಟ್ಯಾಕ್ಸಿ ಓಡಿಸಿಕೊಂಡು ಬದುಕು ಸಾಗಿಸುವುದಕ್ಕೂ ವಿಷ್ಣು ನಿರ್ಧರಿಸಿದ್ದುಂಟು. ಆದರೆ ಇಂಥ ಒಂದೊಂದು ಹಂತದಲ್ಲೂ ಪತಿಯಲ್ಲಿ ಧೈರ್ಯ-ಸ್ಥೈರ್ಯ ತುಂಬಿ ಒತ್ತಾಸೆಯಾಗಿ ನಿಂತವರು ಪತ್ನಿ ಭಾರತಿಯವರು. ನಂತರ ದೇವರು ಕಣ್ಣು ಬಿಟ್ಟ, ಒಂದೊಂದಾಗಿ ಅವಕಾಶಗಳು ಸಿಗಲಾರಂಭಿಸಿದವು. ಆದರೆ ‘ಕಾಣದ ಕೈಗಳ’ ಕಿರುಕುಳ ಮಾತ್ರ ನಿಲ್ಲಲಿಲ್ಲ. ಒಂದು ಉದಾಹರಣೆ ನೀಡುವುದಾದರೆ, ಬೆಂಗಳೂರಿನ ಕಲ್ಪನಾ ಚಿತ್ರಮಂದಿರದಲ್ಲಿ ಯಶಸ್ವಿ ಪ್ರದರ್ಶನ ಕಾಣುತ್ತಿದ್ದು ಶತದಿನೋತ್ಸವದತ್ತ ಮುನ್ನುಗ್ಗುತ್ತಿದ್ದ ಅವರ ‘ಸುಪ್ರಭಾತ’ ಚಿತ್ರವನ್ನು 99 ದಿನಗಳಿಗೇ ತೆಗೆಯುವಂಥ ಪ್ರಸಂಗ ಎದುರಾದಾಗ, ವಿಷ್ಣು ಮೌನವಾಗಿ ರೋದಿಸಿದ್ದುಂಟು, ಅಭಿಮಾನಿಗಳು ಕೂಡ ಈ ನೋವಲ್ಲಿ ಭಾಗಿಯಾಗಿದ್ದುಂಟು. ಒಂದು ಹಂತದಲ್ಲಂತೂ ವಿಷ್ಣು, ‘‘ಪರಿಸ್ಥಿತಿ ಹೀಗೇ ಮುಂದುವರಿದರೆ ನನ್ನ ಅಭಿಮಾನಿಗಳು ‘ರುದ್ರ’, ‘ದೇವಾ’, ‘ದಾದಾ’ಗಳಾಗಿ ಬೀದಿಗಿಳಿಯಬೇಕಾಗುತ್ತದೆ’’ ಎಂದು ಸಮಾರಂಭವೊಂದರಲ್ಲಿ ಸಂಕಟವನ್ನು ತೋಡಿಕೊಂಡಿದ್ದೂ ಉಂಟು. 1984ರಲ್ಲಿ ‘ಬಂಧನ’ ಚಿತ್ರ ಬಿಡುಗಡೆಯಾಗಿದ್ದೇ ಆಗಿದ್ದು ‘ತಿರುವಿನ ಘಟ್ಟ’ ಲಭಿಸಿ, ಅಭಿಮಾನಿಗಳ ಅಭಿಮಾನದ ಹೊನಲಲ್ಲಿ ತೇಲಿಬಿಟ್ಟರು ವಿಷ್ಣು.

ಕ್ರಮೇಣ ಅವರಲ್ಲಿ ಕಾಣಿಸಿಕೊಂಡಿದ್ದು ಆಧ್ಯಾತ್ಮಿಕ ಒಲವು. ಅದಕ್ಕೆ ಕಾರಣವಾಗಿದ್ದು ಖ್ಯಾತ ವಿದ್ವಾಂಸ ಡಾ.ಬನ್ನಂಜೆ ಗೋವಿಂದಾಚಾರ್ಯರ ಒಡನಾಟ. ‘ಭಗವಾನ್ ವಿಷ್ಣು ಸಹಸ್ರನಾಮ’ದ ಕುರಿತಾಗಿ ಆಚಾರ್ಯರು ನೀಡಿದ್ದ ಪ್ರವಚನ ಸರಣಿಯ ಕ್ಯಾಸೆಟ್‌ಗೆ ಕಿವಿಯಾದ ವಿಷ್ಣು, ಬನ್ನಂಜೆಯವರನ್ನು ತಮ್ಮ ಆಧ್ಯಾತ್ಮಿಕ ಗುರುವಾಗಿ ಸ್ವೀಕರಿಸಿದರು, ಅವರ ಸಾಂಗತ್ಯದಲ್ಲಿ ಮತ್ತೊಮ್ಮೆ ಮಗುವೇ ಆಗಿಬಿಟ್ಟರು (‘ವಿಷ್ಣು ತಾವಿರುವ ಕ್ಷೇತ್ರವಲ್ಲದೆ, ಅಧ್ಯಾತ್ಮದಲ್ಲೂ ಔನ್ನತ್ಯವನ್ನು ಸಾಧಿಸಿದರೆ ಅದೇನೂ ಅಚ್ಚರಿಯಲ್ಲ’ ಎಂದು ಬನ್ನಂಜೆಯವರೂ ಒಂದೆಡೆ ಹೇಳಿದ್ದುಂಟು!). ರಾಮಾಚಾರಿಯ ಕಂಗಳಲ್ಲಿದ್ದ ‘ಕಿಡಿ’ ಈಗ ‘ನಂದಾದೀಪದ ಕಾಂತಿ’ಯಂತೆ ಬದಲಾಗಿತ್ತು. ಸಡಿಲ ಜುಬ್ಬಾ-ಪೈಜಾಮು, ಶಿರಡಿ ಶ್ರೀ ಸಾಯಿಬಾಬಾರಂತೆ ತಲೆಯ ಮೇಲೊಂದು ವಸ್ತ್ರ ವಿಷ್ಣುರವರ ವೇಷಭೂಷಣಗಳಾದವು. ಶಿರಡಿ ಬಾಬಾರ ಪಾತ್ರದಲ್ಲಿ ಕಾಣಿಸಿಕೊಳ್ಳುವ ಹಂಬಲ ಹೆಚ್ಚಾಗಿ, ಚಿತ್ರದ ಸ್ಕ್ರಿಪ್ಟ್ ಸಜ್ಜುಗೊಳಿಸಿಕೊಳ್ಳುವಂತೆ ನಿರ್ದೇಶಕ ಎಸ್.ನಾರಾಯಣ್‌ರಿಗೆ ವಿಷ್ಣು ಸೂಚಿಸಿದ್ದೂ ಆಗಿತ್ತು. ಆದರೆ ದುರದೃಷ್ಟವಶಾತ್ ಆ ಚಿತ್ರ ಸೆಟ್ಟೇರಲಿಲ್ಲ. ‘ಒಂದು ಕೈಯಲ್ಲಿ ಕೊಟ್ಟಿದ್ದು ಮತ್ತೊಂದಕ್ಕೆ ಗೊತ್ತಾಗಬಾರದು’ ಎಂಬ ಧ್ಯೇಯಕ್ಕೆ ಕಟ್ಟುಬಿದ್ದು ಸಾಕಷ್ಟು ಸಮಾಜಸೇವಾ ಚಟುವಟಿಕೆಗಳನ್ನು ಸದ್ದಿಲ್ಲದೆ ನಡೆಸಿದರು ವಿಷ್ಣು. ಬ್ರಾಹ್ಮಣರಲ್ಲಿ ಸ್ಮಾರ್ತರು, ವೈಷ್ಣವರು, ಮಾಧ್ವರು ಎಂಬ ಸ್ಥೂಲ ವಿಂಗಡಣೆ ಇರುವಂತೆ, ಹವ್ಯಕ, ಮುಲಕನಾಡು, ಬಡಗನಾಡು, ಬಬ್ಬೂರ್‌ಕಮ್ಮೆ ಎಂಬ ಉಪಪಂಗಡಗಳೂ ಇವೆ. ಈ ಪೈಕಿ ಬಬ್ಬೂರ್‌ಕಮ್ಮೆಯಾಗಿದ್ದ ವಿಷ್ಣು, ಸಮುದಾಯದ ಹಿತರಕ್ಷಣೆಯ ನೆಲೆಯಲ್ಲಿ ಸಾಕಷ್ಟು ನೆರವಾದರು. ‘ವಿಷ್ಣುವರ್ಧನ್ ಚಾರಿಟಬಲ್ ಟ್ರಸ್ಟ್’ ವತಿಯಿಂದ ಪ್ರತಿಭಾವಂತ ಬಡವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳ ವಿತರಣೆಯಾಯಿತು. ಚಿತ್ರರಂಗದ ಸಾಕಷ್ಟು ಕುಟುಂಬಗಳು ‘ವಿಷ್ಣುಛಾಯೆ’ಯ ತಂಪಿನಲ್ಲಿ ಬದುಕು ಕಂಡುಕೊಂಡವು. ಹೀಗೆ, ಒಂದು ಕಾಲಕ್ಕೆ ಮೆಡಿಕಲ್ ರೆಪ್ರೆಸೆಂಟೇಟಿವ್ ಆಗಹೊರಟು, ಬಲ್ಲವರ ಬುದ್ಧಿಮಾತಿಗೆ ಬಾಗಿ ಮಾರ್ಗಬದಲಿಸಿ ಅನನ್ಯ ಸಾಧನೆಗಳನ್ನು ಮೆರೆದ ಈ ‘ಚಿತ್ರತಾರೆ’, 2009ರ ಡಿಸೆಂಬರ್ 30ರಂದು ಅಭಿಮಾನಿಗಳನ್ನು ಅಗಲಿ ಬಾನಿನಲ್ಲಿ ‘ಧ್ರುವತಾರೆ’ಯಾಯಿತು…

• • •

ಒಂದೊಮ್ಮೆ ವಿಷ್ಣುವರ್ಧನ್ ತಮ್ಮ ಬಯಕೆಯಂತೆಯೇ ಮೆಡಿಕಲ್ ರೆಪ್ರೆಸೆಂಟೇಟಿವ್ ಆಗಿದ್ದಿದ್ದರೆ ಏನಾಗುತ್ತಿತ್ತು? ಶುರುವಿನಲ್ಲಿ ಒಂದು ಪ್ರದೇಶದ ವ್ಯಾಪ್ತಿಗಷ್ಟೇ ಸೀಮಿತರಾಗಿರುತ್ತಿದ್ದ ಅವರು ಕ್ರಮೇಣ ನಾಲ್ಕಾರು ಜಿಲ್ಲೆಗಳ ಏರಿಯಾ ಮ್ಯಾನೇಜರ್ ಆಗುತ್ತಿದ್ದರೇನೋ. 10-15 ವರ್ಷ ಕಳೆಯುವ ಹೊತ್ತಿಗೆ ತಾವಿದ್ದ ಫಾರ್ಮಾಸ್ಯೂಟಿಕಲ್ ಕಂಪನಿಯ ಕರ್ನಾಟಕ ವಲಯದ ರೀಜನಲ್ ಮ್ಯಾನೇಜರ್ ಆಗಿ, ನಂತರ ದಕ್ಷಿಣ ಭಾರತದ ಡಿವಿಜನಲ್ ಮ್ಯಾನೇಜರ್ ಆಗಿ ತಮ್ಮಡಿಯಲ್ಲಿನ ವಿವಿಧ ಸ್ತರದ ಸಿಬ್ಬಂದಿಗೆ ಮಾರ್ಗದರ್ಶಿಯಾಗಿ, ಕೊನೆಗೊಮ್ಮೆ ನಿವೃತ್ತರಾಗುತ್ತಿದ್ದರೇನೋ. ಇವೆಲ್ಲಾ ‘ರೆ’ ಪ್ರಪಂಚದ ಮಾತುಗಳಾದವು. ಹೋಲಿಕೆಯ ದೃಷ್ಟಿಯಲ್ಲಿ ಮೆಡಿಕಲ್ ರೆಪ್ರೆಸೆಂಟೇಟಿವ್ ಕೆಲಸವು ಕೆಳಗಿನದ್ದು ಎಂದೇನಲ್ಲ. ಆದರೆ, ‘ಸಂಪತ್‌ಕುಮಾರ್’ ಹೆಸರಲ್ಲಿ ಅವರು ಇಂಟರ್‌ವ್ಯೂಗೆ ಹೋದಾಗ ಸಂದರ್ಶಿಸಿದವರು ಈ ಹುಡುಗನ ಕಣ್ಣಲ್ಲಿ ಅದೇನೋ ಕಿಚ್ಚನ್ನೂ, ಮುಖದಲ್ಲಿ ಕಾಂತಿಯನ್ನೂ, ಹಿತಮಿತವಾದ ಏರಿಳಿತದಿಂದ ಕೂಡಿದ ಮಾತುಗಳನ್ನು ಒಪ್ಪಿಸುವಲ್ಲಿ ಇದ್ದ ಅಮಿತ ಶ್ರದ್ಧೆಯನ್ನೂ ಕಂಡು ‘‘ಈ ಹುಡುಗ ಮೆಡಿಕಲ್ ರೆಪ್ರೆಸೆಂಟೇಟಿವ್ ಕೆಲಸಕ್ಕೇನೋ ಲಾಯಖ್ಖಾಗಿದ್ದಾನೆ; ಆದರೆ ಈತನಲ್ಲಿ ಈ ಕೆಲಸಕ್ಕೂ ಮೀರಿದ ಮತ್ತೇನೋ ‘ಪ್ರತಿಭಾಜ್ವಾಲೆ’ಯಿದೆ. ನಮ್ಮ ಫೀಲ್ಡಿಗೆ ಹಾಕಿಕೊಂಡು ಅದನ್ನು ನಂದಿಸೋದು ಬೇಡ’’ ಎಂದು ಭಾವಿಸಿ ಬುದ್ಧಿಮಾತು ಹೇಳಿ ಕಳಿಸಿದರು ಎನಿಸುತ್ತದೆ. ಅದರಿಂದಾಗಿ ಕನ್ನಡ ಚಿತ್ರರಂಗಕ್ಕೆ ಒಂದು ಆಸ್ತಿಯೂ ಸಿಕ್ಕಿತು, ಗಮನಾರ್ಹ ಸಾಧನೆಯೂ ಆಯಿತೆನ್ನಿ. ಆದರೆ ಮಾರ್ಗಮಧ್ಯದ ಸಂಕಷ್ಟಗಳಿದ್ದವಲ್ಲಾ ಅಂಥ ಒಂದೊಂದು ತಲ್ಲಣದ ಸಂದರ್ಭದಲ್ಲೂ ಹಿತೈಷಿಗಳು, ‘‘ಏನ್ ವಿಷ್ಣು ಹೀಗಾಗಿ ಹೋಯ್ತು, ಮುಂದೇನು ಮಾಡ್ತೀಯಪ್ಪಾ?’’ ಎಂದು ಕೇಳಿದಾಗೆಲ್ಲಾ, ‘ವಿಷ್ಣು ದಾದಾ’ ಆತ್ಮವಿಶ್ವಾಸದಲ್ಲಿ ಹೇಳುತ್ತಿದ್ದ ಮಾತೇ ಇವತ್ತಿನ ಬರಹದ ಶೀರ್ಷಿಕೆ! ರಾಮಾಚಾರಿಯ ಛಲ ಅಂದ್ರೆ ಇದೇ ಇರಬಹುದಾ?!!

ಬಂಡೆಗಲ್ಲು ಅಪ್ಪಳಿಸಿದರೂ ಬದುಕುತ್ತೇನೆ ಎಂಬ ಅಂಥ ಆತ್ಮವಿಶ್ವಾಸವೇ ನಮಗೆ ಮೇಲ್ಪಂಕ್ತಿಯಾಗಲಿ…

ಟೈರ್ಡ್ ಆಗಿಲ್ಲ, ರಿಟೈರ್ ಹೆಂಗೆ ಆಗ್ಲಿ?

ಸಿನಿಗನ್ನಡ

ತುಂಟರಗಾಳಿ
ಹರಿ ಪರಾಕ್
vveditoped@gmail.com

ಸಾವು ಅಂದ್ರೆ ಅದು ಜೀವನದ ಅಂತ್ಯ ಮತ್ತು ತುಂಬಾ ಗಂಭೀರವಾದ ವಿಷಯ. ಆದರೆ ಕೆಲವರಿಗೆ ಮಾತ್ರ ಅದು, ‘ಇದು ನನಗೇ ಮೊದಲು ಗೊತ್ತಾಯಿತು’ ಅಂತ ಹೇಳಿಕೊಳ್ಳುವ ನ್ಯೂಸ್ ಐಟಂ. ಇದು ಸೆಲೆಬ್ರಿಟಿಗಳನ್ನಂತೂ ಇನ್ನಿಲ್ಲದಂತೆ ಕಾಡುತ್ತದೆ. ಹಾಗಾಗಿ ನಮ್ಮ ದೇಶದಲ್ಲಿ ಹಲವಾರು ಸೆಲೆಬ್ರಿಟಿಗಳು ಅದರಲ್ಲೂ ಸಿನಿಮಾ ನಟ-ನಟಿಯರು, ಕ್ರೀಡಾಪಟುಗಳು ನಿಜವಾಗ್ಲೂ ಸಾಯೋಕೆ ಮುಂಚೆಯೇ ಅದೆಷ್ಟು ಬಾರಿ ಸತ್ತಿರುತ್ತಾರೋ ಗೊತ್ತಿಲ್ಲ. ಇತ್ತೀಚೆಗೆ ನಟ ಶರತ್ ಬಾಬು, ಜಿಂಬಾಬ್ವೆ ಕ್ರಿಕೆಟ್ ಆಟಗಾರ ಹೀತ್ ಸ್ಟ್ರೀಕ್ ಕೂಡಾ ಸಾಯುವ 2 ವಾರ ಮುಂಚೆಯೇ ಸತ್ತು ಹೋಗಿದ್ದರು. ನಮ್ಮ ಕನ್ನಡದ ನಟ ಅಂಬರೀಷ್, ದೊಡ್ಡಣ್ಣ ಅವರನ್ನು ಈ ಸುಡುಗಾಡು ಟ್ರೆಂಡ್ ಹಲವಾರು ಬಾರಿ ಕಾಡಿದ್ದಿದೆ. ಹಾಗಂತ ಇದನ್ನು ನ್ಯೂಸ್ ಚಾನೆಲ್‌ಗಳು ಮಾಡುತ್ತಿವೆ ಎಂದುಕೊಳ್ಳಬೇಡಿ. ಇದು ಸೋಷಿಯಲ್ ಮೀಡಿಯಾಗಳಲ್ಲಿ ಆಕ್ಟಿವ್ ಆಗಿರುವವರು ಮಾಡುವ ಕೆಲಸ ಮತ್ತು ಇದಕ್ಕೆ ಚಿತ್ರರಂಗದ ದೊಡ್ಡ ಸೆಲೆಬ್ರಿಟಿಗಳೂ ಹೊರತಾಗಿಲ್ಲ ಅನ್ನೋದು ವಿಷಾದ. ಎಲ್ಲರಿಗೂ ನಾವೇ ಮೊದಲು ಸಾವಿನ ಸುದ್ದಿ ಕೊಟ್ಟೆವು ಎನ್ನುವ ಸಂಭ್ರಮದಲ್ಲಿ ‘ಆರ್ ಐಪಿ’ ಅಂತ ಪೋಸ್ಟ್ ಹಾಕಿ ನಿಟ್ಟುಸಿರುಬಿಡುವ ಈ ಮಹಾನುಭಾವರು ‘ಸ್ಯಾಂಡಲ್‌ವುಡ್ ಕ್ವೀನ್ ನಟಿ ರಮ್ಯಾ ಹೃದಯಾಘಾತದಿಂದ ನಿಧನ’ ಅಂತಲೂ ಪೋಸ್ಟ್‌ಗಳನ್ನು ಹಾಕಿಕೊಂಡಿದ್ದರು. ಹೃದಯಾಘಾತ ಕಾಮನ್ ಆಗಿರುವ ಈ ಸಂದರ್ಭದಲ್ಲಿ ಎಷ್ಟೋ ಜನ ಅದನ್ನು ನಂಬಿಯೂ ಬಿಟ್ಟಿದ್ದರು. ಆದರೆ ಅಸಲಿಗೆ ಸತ್ತಿದ್ದು ಚಿಕ್ಕಪುಟ್ಟ ಪಾತ್ರ ಮಾಡುತ್ತಿದ್ದ ರಮ್ಯಾ ಎಂಬ ಇನ್ನೊಬ್ಬ ನಟಿ. ಒಟ್ಟಿನಲ್ಲಿ ಇನ್ನೊಬ್ಬರ ಸಾವು ಕೂಡಾ ನಮ್ಮ ಸಾವಿನಷ್ಟೇ ಗಂಭೀರ ವಿಷಯ ಅನ್ನೋದು ಅರಿವಾಗುವವರೆಗೂ ಇಂಥ ಅವಘಡಗಳು ನಡೆಯುತ್ತಲೇ ಇರುತ್ತವೆ ಅನ್ನೋದು ವಿಷಾದಕರ.

ಲೂಸ್ ಟಾಕ್

ಸಿದ್ದರಾಮಯ್ಯ

- **ಏನ್ ಸರ್, ಸದ್ಯಕ್ಕೆ ರಾಜಕೀಯದಿಂದ ನಿವೃತ್ತಿ ಆಗಲ್ಲ ಅಂತ ಹೇಳಿದ್ದೀರಲ್ಲ?**

– ನಾನಿನ್ನೂ ಟೈರ್ಡ್ ಆಗಿಲ್ಲ ಕಣಪ್ಪಾ, ರಿಟೈರ್ ಹೆಂಗೆ ಆಗ್ಲಿ?

- **ಆದ್ರೂ ಮುಂದಿನ ಎಲೆಕ್ಷನ್‌ಗೂ ನಿಂತ್ಕೋತೀನಿ ಅಂತ ಹೇಳಿದ್ದೀರ?**

– ಕೂತು ತಿನ್ನುವವನಿಗೆ ಕುಡಿಕೆ ಹಣ ಸಾಕಾಗಲ್ಲ ಅಂತ ಮಾತು ಕೇಳಿಲ್ವಾ? ಅದಕ್ಕೆ ಎಲೆಕ್ಷನ್ನಿಗೆ ನಿಂತ್ಕೋತೀನಿ ಅಂತ ಹೇಳಿದೆ.

- **ಆದರೆ ನಿಮ್ಮ ನಂತರ ‘ನಾನೇ ಮುಖ್ಯಮಂತ್ರಿ’ ಅಂತ ಸರತಿಯಲ್ಲಿರೋ ಅನೇಕರಿಗೆ ಇದರಿಂದ ಬೇಸರ ಆಗಿರಬೇಕಲ್ವಾ?**

– ಅವರು ‘ಸರತಿ’ಯಲ್ಲಿ ಇರೋರಲ್ಲ, ‘ನಾನೂ ಮುಖ್ಯಮಂತ್ರಿ ಕ್ಯಾಂಡಿಡೇಟ್’ ಅನ್ನೋ ‘ಸ್ವರತಿ’ಯಲ್ಲಿರೋರು.

- **ಅದೂ ಸರಿ, ಆದ್ರೆ ನಿಮ್ಮ ಈ ನಿರ್ಧಾರಕ್ಕೆ ಏನು ಕಾರಣ?**

– ನಾನು ಹಿಂದುಳಿದವರ ನಾಯಕ. ಆದರೆ ಅಧಿಕಾರ ಹಿಡಿಯೋ ವಿಷಯದಲ್ಲಿ ಹಿಂದುಳಿಯಲ್ಲ ಅಂತ ತೋರಿಸಬೇಕಿತ್ತು. ಅದಕ್ಕೇ ಈ ನಿರ್ಧಾರ.

- **ನಿಮ್ಮ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಕುಂಭಮೇಳಕ್ಕೆ ಹೋಗಿ ಗಂಗೆಯಲ್ಲಿ ಮುಳುಗಿ ಬಂದ್ರು, ನೀವ್ ಯಾಕೆ ಹೋಗಲಿಲ್ಲ? ಅಟ್ ಲೀಸ್ಟ್ ‘ಮುಡಾ’ ಕಳಂಕ ತೊಳೆದು ಹೋಗ್ತಾ ಇತ್ತೇನೋ?**

– ಅಯ್ಯೋ, ಗಂಗೆಯಲ್ಲಿ ಅದೆಷ್ಟೋ ಜನ ಮುಳುಗಿ ತಮ್ಮ ಪಾಪ ತೊಳ್ಕೊಂಡಿದ್ದಾರೆ. ನಾನು ಹೋಗಿ ಮುಳುಗಿದಾಗ ನನ್ನ ಪಾಪ ತೊಳೆಯೋದು ಬಿಟ್ಟು ಅವರ ಪಾಪ ನಂಗೆ ಹತ್ಕೊಂಡ್ ಬಿಟ್ರೆ? ಅಂತ ಭಯ ಆಯ್ತು. ಅದಕ್ಕೇ ಯಾಕೆ ರಿಸ್ಕು ಅಂತ ಸುಮ್ನೆ ಆದೆ.

(ಕಾಲ್ಪನಿಕ ಸಂದರ್ಶನ)

ನೆಟ್ ಪಿಕ್ಸ್

ಬಲ್ವಿಂದರ್ ಸಿಂಗ್ ಖೇಮು ಯಾವತ್ತೂ ಫೈವ್ ಸ್ಟಾರ್ ಹೋಟೆಲ್‌ಗಳ ಮುಖ ನೋಡಿದವನಲ್ಲ. ಒಂದು ಲಕ್ಕಿ ಡ್ರಾನಲ್ಲಿ ಅವನಿಗೆ ನಗರದ ಅತಿ ಪ್ರತಿಷ್ಠಿತ ಫೈವ್ ಸ್ಟಾರ್ ಹೋಟೆಲ್‌ನಲ್ಲಿ ಒಂದು ದಿನ ಕಳೆಯುವ ಉಚಿತ ಬಹುಮಾನ ಸಿಕ್ಕಿತು. ಫುಲ್ ಖುಷಿಯಾದ ಬಲ್ವಿಂದರ್ ಸಿಂಗ್ ಖೇಮು, ತನ್ನ ಹೆಂಡತಿ ಊರಿಗೆ ಹೋದ ದಿನ ಆ ಫೈವ್ ಸ್ಟಾರ್ ಹೋಟೆಲ್‌ನಲ್ಲಿ ಉಳಿದುಕೊಳ್ಳೋದು ಅಂತ ತೀರ್ಮಾನಿಸಿದ. ಅವತ್ತು ಬೆಳಗ್ಗೆ ಹೋಟೆಲಿಗೆ ಹೋಗಿ, ಚೆಕ್-ಇನ್ ಆಗಿ, ರೂಮ್‌ನಲ್ಲಿ ಸ್ನಾನ, ಊಟ ಮಾಡಿ ಕಿಟಕಿಯಿಂದ ಹೊರಗೆ ನೋಡಿದವನಿಗೆ ಸ್ವಿಮ್ಮಿಂಗ್ ಪೂಲ್ ಕಾಣಿಸಿತು. ಸರಿ ಅಂತ ಅಲ್ಲಿಂದ ಸೀದಾ ಪೂಲ್ ಬಳಿಗೆ ಬಂದು ಅಲ್ಲಿ ಪೂಲ್ ಪಕ್ಕದಲ್ಲಿ ಹಾಕಿದ್ದ ಉದ್ದನೆಯ ಬೆಂಚ್ ಮೇಲೆ ಮಲಗಿಕೊಂಡ. ಆಗ ಅಲ್ಲಿಗೆ ಬಂದ ಒಬ್ಬ ಫಾರಿನರ್ ಇವನನ್ನು ನೋಡಿ, ‘‘ಹಾಯ್, ಆರ್ ಯೂ ರಿಲ್ಯಾಕ್ಸಿಂಗ್?’’ ಅಂತ ಕೇಳಿದ. ಇಂಗ್ಲಿಷ್ ಸರಿಯಾಗಿ ಬಾರದ ಬಲ್ವಿಂದರ್ ಸಿಂಗ್ ಖೇಮು, ‘‘ನೋ, ಐ ಆಮ್ ಬಲ್ವಿಂದರ್ ಸಿಂಗ್’’ ಅಂದ. ಅದಕ್ಕೆ ಆ ವಿದೇಶಿಗ ‘‘ಫನ್ನಿ ಗೈ’’ ಅಂತ ನಕ್ಕು ಹೊರಟ. ಆದ್ರೆ ಬಲ್ವಿಂದರ್ ಸಿಂಗ್ ಖೇಮುಗೆ ಅವನು ಯಾಕೆ ನಕ್ಕ ಅನ್ನೋದು ಅರ್ಥ ಆಗಲಿಲ್ಲ. ಅದೇ ಗೊಂದಲದಲ್ಲಿ ಅಲ್ಲಿಂದ ಎದ್ದು ಹೊರಟ, ಅಲ್ಲಿ ಸ್ವಲ್ಪ ಮುಂದೆ ಇನ್ನೊಬ್ಬ ಫಾರಿನರ್ ಅವನಂತೆಯೇ ಪೂಲ್ ಪಕ್ಕದ ಬೆಂಚ್‌ನಲ್ಲಿ ಮಲಗಿದ್ದ. ಅವನನ್ನು ನೋಡಿದ ಖೇಮು ‘‘ಆರ್ ಯೂ ರಿಲ್ಯಾಕ್ಸಿಂಗ್?’’ ಅಂತ ಕೇಳಿದ. ಅದಕ್ಕೆ ಆತ ‘‘ಎಸ್’’ ಅಂದ. ಇದ್ದಕ್ಕಿದ್ದಂತೆ ರಾಂಗ್ ಆದ ಖೇಮು ಹೇಳಿದ ‘‘ಅಯ್ಯೋ ಮಂಗ್ ನನ್ಮಗನೇ, ನೀನ್ ಇಲ್ ಮಲ್ಕೊಂಡಿದ್ದೀಯಾ, ಅಲ್ಲಿ ನಿನ್ ಹುಡುಕ್ಕೊಂಡ್ ಯಾರೋ ಬಂದಿದ್ರು’’.

ಲೈನ್ ಮ್ಯಾನ್

- **ಖಾರ ಸಂಸಾರ**

– ‘ರೀ, ಸೊಳ್ಳೆ ಕಚ್ತಾ ಇದೆ, ಆವಾಗಿಂದ ಇಲ್ಲೇ ಹಾರಾಡ್ತಿದೆ, ಸ್ವಲ್ಪ ನೋಡ್ರಿ, ಎದ್ದು’

– ‘ಯಾಕೆ? ನಾನೇನ್ ಎಂದೂ ಸೊಳ್ಳೆ ನೋಡಿಲ್ವಾ?’

- **ಇಬ್ಬನಿ ಬಿದ್ದ ಕಾರಣಕ್ಕೆ ಕ್ರಿಕೆಟ್ ಮ್ಯಾಚ್ ಸೋತ ಕ್ಯಾಪ್ಟನ್ ಏನು ಹೇಳ್ತಾನೆ?**

– We couldn't win due to dew

- **ಸಣ್ಣ ಮಕ್ಕಳೂ ಕೋಡಿಂಗ್ ಕಲಿಯುತ್ತಿರೋ ಈ ಸಮಯದಲ್ಲಿ ಅತಿಬುದ್ಧಿವಂತರಂತೆ ಮಾತಾಡೋರನ್ನ ಏನಂತ ಬಯ್ತಾರೆ?**

– ನಿಂಗೇನ್ ಎರಡ್ ಕೋಡಿದೆಯಾ?

- **ಭಾರತದಲ್ಲೇ ನಾವೇ ತಯಾರಿಸಿದ ಆಪ್‌ಗಳನ್ನ ಏನೆನ್ನಬಹುದು?**

– ಅಪ್ ನೇ ಆಪ್

- **ಬಹಳ ವರ್ಷಗಳವರೆಗೆ ರಸ್ತೆಯಲ್ಲಿ ಓಡಾಡಿ ಸವೆದು ಹೋಗಿರುವ ಕಾರಿನ ಟೈರ್**

– ಟೈರ್ಡ್

- **ಹೆಂಗಸರು ವಟ ವಟ ಅಂತ ಮಾತಾಡೋ ಜಾಗ**

– ವಠಾರ

- **ಹಾಕಿಕೊಳ್ಳಲು ಕಷ್ಟ ಆಗುವ ಟೈಟ್ ಫಿಟ್ಟಿಂಗ್ ಇರೋ ಬಟ್ಟೆ**

– ಹಾರ್ಡ್‌ವೇರ್

- **ಒಬ್ಬ ಶಿಲ್ಪಿಗೆ ಚಾಲೆಂಜ್ ಮಾಡೋದ್ ಹೆಂಗೆ?**

– ನಿನ್ ಕೈಲಿ ಏನ್ ಕೆತ್ಕೊಳ್ಳೋಕಾಗುತ್ತೋ.. ಕೆತ್ಕೋ..!

- **ನಿಂತ್ಕೊಳ್ಳೋಕೂ ಆಗದಷ್ಟು ಕುಡಿದು ತೂರಾಡುತ್ತಿರುವವನದ್ದು**

– ಸ್ಟ್ಯಾಂಡ್ ಅಪ್ ಕಾಮಿಡಿ

- **ಯಾರಿಗೆ ಯಾವ ಡಿಷ್ ಇಷ್ಟ?**

ಪ್ಲಂಬರ್– ನಲ್ಲಿ ಮೂಳೆ
ಕಾರ್ಪೆಂಟರ್– ಗ್ರಿಲ್ ಚಿಕನ್

- **ಚಳಿಗಾಲದಲ್ಲಿ ತಿನ್ನೋಕಾಗದ ಚಿಕನ್ ಡಿಷ್**

– ‘ಚಿಲ್ಲಿ’ ಚಿಕನ್

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue: 33

ಸಮಾಚಾರ ಸಣ್ಣದಲ್ಲ

ಸಿಬಿಎಸ್‌ಇ 10-12ನೇ ತರಗತಿ ಪರೀಕ್ಷೆ ಆರಂಭ

ದೆಹಲಿ: ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ (ಸಿಬಿಎಸ್‌ಇ) ಪಠ್ಯಕ್ರಮದಡಿ 10 ಮತ್ತು 12ನೇ ತರಗತಿ ವಿದ್ಯಾರ್ಥಿಗಳಿಗೆ ದೇಶಾದ್ಯಂತ 7800 ಕೇಂದ್ರಗಳಲ್ಲಿ ಶನಿವಾರ ಬೋರ್ಡ್ ಪರೀಕ್ಷೆ ಆರಂಭಗೊಂಡಿದೆ. 10ನೇ ತರಗತಿಯ 24 ಲಕ್ಷ ಮತ್ತು 12ನೇ ತರಗತಿಯ 18 ಲಕ್ಷ (ಒಟ್ಟು 42 ಲಕ್ಷ) ವಿದ್ಯಾರ್ಥಿಗಳು ಪರೀಕ್ಷೆ ಬರೆಯುತ್ತಿದ್ದಾರೆ. 10ನೇ ತರಗತಿ ಪರೀಕ್ಷೆಗಳು ಮಾ.18ರಂದು ಹಾಗೂ 12ನೇ ತರಗತಿ ಪರೀಕ್ಷೆಗಳು ಏ.4ರಂದು ಕೊನೆಗೊಳ್ಳಲಿವೆ. 10ನೇ ತರಗತಿಗೆ 84 ವಿಷಯಗಳಲ್ಲಿ, 12ನೇ ತರಗತಿಗೆ 120 ವಿಷಯಗಳಲ್ಲಿ ಪರೀಕ್ಷೆ ನಡೆಯಲಿವೆ.

ರ‍್ಯಾಗಿಂಗ್: ಪ್ರಾಂಶುಪಾಲೆ, ಅ.ಪ್ರೊಫೆಸರ್ ಅಮಾನತು

ಕೊಟ್ಟಾಯಂ: ಕೇರಳದ ಕೊಟ್ಟಾಯಂನಲ್ಲಿನ ನರ್ಸಿಂಗ್ ಕಾಲೇಜಿನಲ್ಲಿ ಕಿರಿಯ ವಿದ್ಯಾರ್ಥಿಗಳನ್ನು ಬಹಳ ಕ್ರೂರವಾಗಿ ರ‍್ಯಾಗಿಂಗ್ ಮಾಡಿದ ಪ್ರಕರಣದಲ್ಲಿ ಸರಕಾರಿ ಕಾಲೇಜಿನ ಪ್ರಾಂಶುಪಾಲ ಮತ್ತು ಸಹಾಯಕ ಪ್ರಾಧ್ಯಾಪಕರನ್ನು ಅಮಾನತು ಮಾಡಲಾಗಿದೆ. ಅಂತಿಮ ವರ್ಷದ ಐವರು ವಿದ್ಯಾರ್ಥಿಗಳು ಪ್ರಥಮ ವರ್ಷದ ವಿದ್ಯಾರ್ಥಿಗಳನ್ನು ನಗ್ನಗೊಳಿಸಿ, ಮರ್ಮಾಂಗಕ್ಕೆ ಕಬ್ಬಿಣದ ಡಂಬಲ್‌ಗಳನ್ನು ತೂಗು ಹಾಕಿ, ಕಂಪಾಸ್‌ನ ಮೊನುಚಾದ ತುದಿಗಳಿಂದ ಮೈ ಮೇಲೆಲ್ಲಾ ಚುಚ್ಚಿ ಹಿಂಸಾಪ್ರವೃತ್ತಿ ಮೆರೆಯುತ್ತಿರುವುದು ತಿಳಿದಿದ್ದರೂ ರ‍್ಯಾಗಿಂಗ್ ತಡೆಯದೇ ನಿರ್ಲಕ್ಷ್ಯ ವಹಿಸಿದ ಆರೋಪದಡಿ ಇಬ್ಬರನ್ನು ಶಿಕ್ಷಣ ಇಲಾಖೆ ಅಮಾನತುಗೊಳಿಸಿದೆ. ಪ್ರಾಂಶುಪಾಲರಾದ ಸುಲೇಖಾ ಮತ್ತು ಸಹಾಯಕ ಪ್ರಾಧ್ಯಾಪಕ ಜಾರ್ಜ್ ಅಜೀಶ್ ಅಮಾನತುಗೊಂಡವರು.

ಉಗ್ರ ನಂಟು: ಕಾಶ್ಮೀರದ ಸರಕಾರಿ ನೌಕರರ ವಜಾ

ಶ್ರೀನಗರ: ಭಯೋತ್ಪಾದಕರ ಜತೆ ಸಂಪರ್ಕ ಹೊಂದಿದ್ದ ಆರೋಪದಡಿ ಸದ್ಯ ಜೈಲಿನಲ್ಲಿರುವ ಪೊಲೀಸ್ ಸಿಬ್ಬಂದಿ ಸೇರಿದಂತೆ ಜಮ್ಮು-ಕಾಶ್ಮೀರದ ಮೂವರು ಸರಕಾರಿ ನೌಕರರನ್ನು ಸೇವೆಯಿಂದಲೇ ವಜಾಗೊಳಿಸಿ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಶನಿವಾರ ಆದೇಶ ಹೊರಡಿಸಿದ್ದಾರೆ. ಪೊಲೀಸ್ ಕಾನ್‌ಸ್ಟೆಬಲ್ ಫಿರ್ದೌಸ್ ಅಹ್ಮದ್ ಭಟ್, ಶಾಲಾ ಶಿಕ್ಷಕ ಮೊಹಮ್ಮದ್ ಅಶ್ರಫ್ ಭಟ್ ಮತ್ತು ಅರಣ್ಯ ಇಲಾಖೆಯ ಆರ್ಡರ್ಲಿ ನಿಸಾರ್ ಅಹ್ಮದ್ ಖಾನ್ ವಜಾಗೊಂಡ ನೌಕರರು. ಕಾನೂನು ಜಾರಿ ಮತ್ತು ಗುಪ್ತಚರ ಸಂಸ್ಥೆಗಳ ತನಿಖಾ ವರದಿ ನಂತರ ಲೆಫ್ಟಿನೆಂಟ್ ಗವರ್ನರ್ ಅವರು ಸಂವಿಧಾನದ 311 (2) (ಸಿ) ವಿಧಿ ಅನ್ವಯ ಮೂರೂ ನೌಕರರನ್ನು ವಜಾಗೊಳಿಸಿದ್ದಾರೆ. ಕೆಲ ವರ್ಷಗಳಲ್ಲಿ ಜಮ್ಮು-ಕಾಶ್ಮೀರದಲ್ಲಿ ಉಗ್ರರ ಜತೆಗಿನ ಸಂಪರ್ಕ ಕಾರಣ 70ಕ್ಕೂ ಹೆಚ್ಚು ಸರಕಾರಿ ನೌಕರರನ್ನು ವಜಾಗೊಳಿಸಲಾಗಿದೆ.

ಲವ್‌ಜಿಹಾದ್, ಮತಾಂತರ ವಿರುದ್ಧ ಮಹಾ ಕಾಯಿದೆ?

ಮುಂಬೈ: ಲವ್ ಜಿಹಾದ್ ಮತ್ತು ಬಲವಂತ ಮತಾಂತರ ವಿರುದ್ಧ ಕಾನೂನು ಕ್ರಮಕ್ಕೆ ಮಹಾರಾಷ್ಟ್ರ ಸರಕಾರ ಮುಂದಾಗಿದೆ.



ಲವ್ ಜಿಹಾದ್ ಮತ್ತು ಬಲವಂತದ ಮತಾಂತರ ತಡೆಗಾಗಿ ಹೊಸ ಕಾಯಿದೆ ರಚನೆಗೆ ಸರಕಾರ ಏಳು ಸದಸ್ಯರ ಸಮಿತಿ ರಚಿಸಿದೆ. ಮಹಾರಾಷ್ಟ್ರ ಪೊಲೀಸ್ ಮಹಾ ನಿರ್ದೇಶಕ(ಡಿಜಿಪಿ) ಸಮಿತಿಯ ಅಧ್ಯಕ್ಷರಾಗಿದ್ದಾರೆ. ಮಹಿಳಾ-ಮಕ್ಕಳ ಕಲ್ಯಾಣ ಇಲಾಖೆ, ಅಲ್ಪಸಂಖ್ಯಾತರ ಇಲಾಖೆ, ಕಾನೂನು-ನ್ಯಾಯಾಂಗ ಇಲಾಖೆ, ಸಾಮಾಜಿಕ ನ್ಯಾಯ ಇಲಾಖೆ ಮತ್ತು ವಿಶೇಷ ಸಹಾಯಕರ ಇಲಾಖೆ ಕಾರ್ಯದರ್ಶಿಗಳು ಮತ್ತು ಗೃಹ ಇಲಾಖೆಯ ಉಪ ಕಾರ್ಯದರ್ಶಿ ಸಮಿತಿ ಸದಸ್ಯರಾಗಿದ್ದಾರೆ. ಲವ್ ಜಿಹಾದ್, ಬಲವಂತ ಮತಾಂತರ ಘಟನೆಗಳನ್ನು ಎದುರಿಸಲು ಯಾವ ಕ್ರಮಗಳನ್ನು ತೆಗೆದುಕೊಳ್ಳಬಹುದು ಎಂಬುದನ್ನು ಸಮಿತಿ ಅಧ್ಯಯನ ನಡೆಸಿ ತಿಳಿಸಲಿದೆ. ಇತರೆ ರಾಜ್ಯಗಳಲ್ಲಿ ಸಂಬಂಧಿಸಿದ ಕಾನೂನುಗಳನ್ನೂ ಸಮಿತಿ ಅಧ್ಯಯನ ಮಾಡಲಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಕುಂಭಮೇಳ ಮಾರ್ಗ ಅಪಘಾತ: 10 ಸಾವು

ಪ್ರಯಾಗ್‌ರಾಜ್: ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ನಡೆದಿರುವ ಮಹಾ ಕುಂಭಮೇಳಕ್ಕೆ ಭಕ್ತರನ್ನು ಕರೆದೊಯ್ಯುತ್ತಿದ್ದ ಬೊಲೆರೊ ವಾಹನ ಮತ್ತು ಬಸ್ ನಡುವೆ ಮಿರ್ಜಾಪುರ-ಪ್ರಯಾಗರಾಜ್ ಹೆದ್ದಾರಿಯಲ್ಲಿ ಮುಖಾಮುಖಿ ಡಿಕ್ಕಿಯಾಗಿದ್ದು, ಬೊಲೆರೊದಲ್ಲಿದ್ದ 10 ಭಕ್ತರು ಸಾವಿಗೀಡಾಗಿದ್ದಾರೆ. ಬಸ್‌ನಲ್ಲಿದ್ದ 19 ಪ್ರಯಾಣಿಕರು ಗಾಯಗೊಂಡಿದ್ದಾರೆ. ಮೃತರೆಲ್ಲರು ಛತ್ತೀಸ್‌ಗಢದ ಕೊರ್ಬಾ ಜಿಲ್ಲೆಯವರು.

{ ಎಚ್.ಡಿ.ಕುಮಾರಸ್ವಾಮಿ } ಉಕ್ಕು ಸಚಿವ

ಉಕ್ಕು ಮತ್ತು ಅಲ್ಯುಮಿನಿಯಂ ಸಾಮಗ್ರಿಗಳ ಮೇಲೆ ಶೇ.25ರಷ್ಟು ಆಮದು ಸುಂಕ ವಿಧಿಸುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನಿರ್ಧಾರ ಮಾ.12ರಿಂದ ಜಾರಿಗೆ ಬರಲಿದ್ದು, ಭಾರತದ ಮೇಲೆ ನೇರವಾಗಿ ಪರಿಣಾಮ ಬೀರದು. ಸುಂಕ ಏರಿಕೆಯಿಂದಾಗುವ ಋಣಾತ್ಮಕ ಪರಿಣಾಮಗಳಿಂದ ದೇಶದ ಉಕ್ಕು ಉತ್ಪಾದಕರನ್ನು ರಕ್ಷಿಸಲು ಕೇಂದ್ರ ಸರಕಾರ ರಕ್ಷಣಾತ್ಮಕ ಕ್ರಮಗಳನ್ನು ಕೈಗೊಳ್ಳಲಿದೆ.

ಕುಂಭಮೇಳ ಅವಧಿ ವಿಸ್ತರಣೆ ಇಲ್ಲ: ಪ್ರಯಾಗ್‌ರಾಜ್ ಜಿಲ್ಲಾಧಿಕಾರಿ ಸ್ಪಷ್ಟನೆ
ದೇಶದ ಜನರ ಸಂತೋಷ-ಸಮೃದ್ಧಿಗಾಗಿ ಪ್ರಾರ್ಥಿಸಿದ ಸ್ಪೀಕರ್ ಓಂ ಬಿರ್ಲಾ

ನಿಗದಿಯಂತೆ ಮಹಾ ಶಿವರಾತ್ರಿಗೆ ಮಹಾ ಕುಂಭಮೇಳ ಸಮಾರೋಪ

ಪ್ರಯಾಗ್‌ರಾಜ್: ಅದಾಗಲೇ 50 ಕೋಟಿಗೂ ಅಧಿಕ ಭಕ್ತರನ್ನು ಸೆಳೆದಿರುವ ಉತ್ತರ ಪ್ರದೇಶದಲ್ಲಿನ ಪ್ರಯಾಗ್‌ರಾಜ್‌ನಲ್ಲಿ ನಡೆದಿರುವ ಮಹಾ ಕುಂಭ ಮೇಳ ನಿಗದಿಯಂತೆಯೇ ಫೆ.26ರ ಮಹಾ ಶಿವರಾತ್ರಿ ದಿನ ಸಮಾರೋಪಗೊಳ್ಳಲಿದೆ ಎಂದು ಪ್ರಯಾಗ್‌ರಾಜ್ ಜಿಲ್ಲಾಧಿಕಾರಿ ರವೀಂದ್ರ ಕುಮಾರ್ ಮಂಧಾದ್ ಶನಿವಾರ ಸ್ಪಷ್ಟಪಡಿಸಿದ್ದಾರೆ.

144 ವರ್ಷಗಳಿಗೊಮ್ಮೆ ಆಚರಣೆಗೊಳ್ಳುವ ಮಹಾ ಕುಂಭಮೇಳದಲ್ಲಿ ಭಾಗಿಯಾಗಬೇಕೆಂದು ಹಾಗೂ ಗಂಗಾ-ಯಮುನಾ-ಸರಸ್ವತಿ ನದಿಗಳ ಸಂಗಮ ಸ್ಥಳದಲ್ಲಿ ಪುಣ್ಯ ಸ್ನಾನ ಮಾಡಬೇಕೆಂದು ದೇಶ-ವಿದೇಶದಿಂದ ಕೋಟ್ಯಂತರ ಭಕ್ತರು ಪ್ರಯಾಗ್‌ರಾಜ್‌ನತ್ತ ಧಾವಿಸುತ್ತಲೇ ಇದ್ದಾರೆ. ಹಾಗಾಗಿ ಮಹಾ ಕುಂಭಮೇಳದ ಅವಧಿ ವಿಸ್ತರಣೆ ಆಗಲಿದೆ ಎಂಬ ವದಂತಿಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿವೆ. ಹಾಗಾಗಿಯೇ ಪ್ರಯಾಗ್‌ರಾಜ್ ಜಿಲ್ಲಾಧಿಕಾರಿ ಈ ವಿಚಾರದಲ್ಲಿ ಶನಿವಾರ ಸ್ಪಷ್ಟನೆ ನೀಡಿದ್ದಾರೆ.

ಜಾಲತಾಣದಲ್ಲಿ ಹರಿದಾಡುತ್ತಿರುವುದೆಲ್ಲವೂ ಸುಳ್ಳು ಸುದ್ದಿಗಳಾಗಿವೆ. ಸಮಾಜ ವಿರೋಧಿಗಳು, ಕಿಡಿಗೇಡಿಗಳು ವದಂತಿ ಹರಡುತ್ತಿದ್ದಾರೆ. ಆ ಸುದ್ದಿಗಳನ್ನು ಜನರು ನಂಬಬಾರದು. ಯಾವುದೇ ಕಾರಣಕ್ಕೂ ಮಹಾ ಕುಂಭ ಮೇಳದ ಅವಧಿಯನ್ನು ವಿಸ್ತರಣೆ ಮಾಡುವುದಿಲ್ಲ. ನಿಗದಿಯಂತೆಯೇ ಫೆ.26ಕ್ಕೆ ಕೊನೆಗೊಳ್ಳಲಿದೆ. ಈ ವಿಚಾರವಾಗಿ ಹಿಂದೆಯೂ ಮಾತನಾಡಿರುವೆ, ಈಗಲೂ ಹೇಳುತ್ತಿರುವೆ. ಮಹಾ ಕುಂಭಮೇಳ ಅವಧಿ ವಿಸ್ತರಣೆ ಇಲ್ಲ ಎಂದು ರವೀಂದ್ರ ಕುಮಾರ್ ಸುದ್ದಿಗಾರರಿಗೆ ಸ್ಪಷ್ಟಪಡಿಸಿದರು.

ಲೋಕಸಭೆ ಸ್ಪೀಕರ್ ಓಂ ಬಿರ್ಲಾ, ಪ್ರಯಾಗ್‌ರಾಜ್‌ನ ತ್ರಿವೇಣಿ ಸಂಗಮದಲ್ಲಿ ಶನಿವಾರ ಪವಿತ್ರಾ ಸ್ನಾನ ಮಾಡಿ ಪತ್ನಿ ಸಮೇತ ಪ್ರಾರ್ಥನೆ ಸಲ್ಲಿಸಿದರು.

50 ಕೋಟಿಗೂ ಅಧಿಕ ಭಕ್ತರು

ಜ.13ರಂದು ಸಂಕ್ರಾಂತಿ ಹಬ್ಬಕ್ಕೆ ಮುನ್ನಾದಿನ ಆರಂಭಗೊಂಡ ಮಹಾ ಕುಂಭಮೇಳ ಒಟ್ಟು 45 ದಿನಗಳಿಗೆ ನಿಗದಿಯಾಗಿದೆ. ಕುಂಭಮೇಳದ 33ನೇ ದಿನವಾದ ಫೆ.14ರ ಸಂಜೆ 6ರ ವೇಳೆಗೆ ಒಟ್ಟು 50 ಕೋಟಿಗೂ ಅಧಿಕ ದೇಶ-ವಿದೇಶದ ಭಕ್ತರು ಭೇಟಿ ನೀಡಿ, ತ್ರಿವೇಣಿ ಸಂಗಮ ಸ್ಥಳದಲ್ಲಿ ಪವಿತ್ರ ಸ್ನಾನ ಕೈಗೊಂಡು ಪುನೀತ ಭಾವ ಅನುಭವಿಸಿದ್ದಾರೆ. ಶುಕ್ರವಾರ ಒಂದೇ ದಿನ 92 ಲಕ್ಷ ಭಕ್ತರಿಂದ ತ್ರಿವೇಣಿ ಸಂಗಮದಲ್ಲಿ ಪುಣ್ಯಸ್ನಾನವಾಗಿದೆ ಎಂದು ಉತ್ತರ ಪ್ರದೇಶ ಸರಕಾರ ಶನಿವಾರ ಅಂಕಿ ಅಂಶ ಪ್ರಕಟಿಸಿದೆ.

ಪವಿತ್ರ ಸ್ನಾನ ಮಾಡಿದ ಸ್ಪೀಕರ್ ಓಂ ಬಿರ್ಲಾ

ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು ಪತ್ನಿ ಸಮೇತ ಪ್ರಯಾಗ್‌ರಾಜ್‌ನಲ್ಲಿನ ಮಹಾ ಕುಂಭ ಮೇಳಕ್ಕೆ ಶನಿವಾರ ಭೇಟಿ ನೀಡಿ, ತ್ರಿವೇಣಿ ಸಂಗಮದಲ್ಲಿ ಪವಿತ್ರ ಸ್ನಾನ ಮಾಡಿ, ದೇಶದ ಸಂತೋಷ ಮತ್ತು ಸಮೃದ್ಧಿಗಾಗಿ ಪ್ರಾರ್ಥಿಸಿದರು.

ಮಹಾ ಕುಂಭಮೇಳ-ತ್ರಿವೇಣಿ ಸಂಗಮದಲ್ಲಿನ ಈ ಪವಿತ್ರ ಸ್ನಾನ ಎಂಬುದು ಭಾರತದ ಆಧ್ಯಾತ್ಮಿಕ ನಂಬಿಕೆ ಮತ್ತು ಪ್ರಾಚೀನ ಸಂಸ್ಕೃತಿಯ ಸಂಕೇತ, ಧಾರ್ಮಿಕ ಪರಂಪರೆಯ ಆಚರಣೆ ಎಂದು ಬಣ್ಣಿಸಿದರು. ಗಂಗಾ-ಯಮುನಾ-ಸರಸ್ವತಿ ಮಾತೆಯರ ಆಶೀರ್ವಾದ ಕೋರಿದರು. ಗಂಗಾ ಮಾತೆಯ ಕೃಪೆ ಎಲ್ಲರ ಮೇಲೆ ಸದಾ ಇರಲಿ. ದೇಶದಲ್ಲಿನ ಪ್ರತಿಯೊಬ್ಬರ ಜೀವನವು ಸಂತೋಷದಿಂದ ತುಂಬಿರಲಿ ಎಂದು ಪ್ರಾರ್ಥಿಸಿದರು. ಮಹಾಕುಂಭ ಮೇಳವು ಆಂತರಿಕ ಶಕ್ತಿ ಮತ್ತು ಪ್ರಜ್ಞೆಯನ್ನು ಜಾಗೃತಗೊಳಿಸುವುದಾಗಿದೆ. ಆತ್ಮ ಮತ್ತು ಮನಸ್ಸನ್ನು ಶುದ್ಧೀಕರಿಸುತ್ತದೆ.

ನಂಬಿಕೆಯೇ ಜೀವನದ ಅತ್ಯಂತ ದೊಡ್ಡ ಶಕ್ತಿ. ಈ ಮೇಳ ರಾಜಕೀಯ ಮೀರಿ ಸಾಮಾಜಿಕ ಮತ್ತು ಆಧ್ಯಾತ್ಮಿಕ ಸಾಮರಸ್ಯಕ್ಕೆ ಅವಕಾಶವಾಗಿದೆ ಎಂದು ನುಡಿದರು.

ಮಹಾಕುಂಭಮೇಳ ವಿಸ್ತರಿಸಿ: ಅಖಿಲೇಶ್

ಲಖನೌ: ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಮಹಾ ಕುಂಭಮೇಳದ ಅವಧಿಯನ್ನು ಇನ್ನಷ್ಟು ಸಮಯ ವಿಸ್ತರಿಸುವಂತೆ ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಶನಿವಾರ ಅಚ್ಚರಿ ದಾಯಕ ಮನವಿ ಮಾಡಿದ್ದಾರೆ. ಲಖನೌನಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅಖಿಲೇಶ್ ಯಾದವ್, ಮಹಾ ಕುಂಭಮೇಳದಲ್ಲಿ ಕೋಟ್ಯಂತರ ಜನ ಭಾಗವಹಿಸಿದ್ದರು. ಪ್ರಯಾಗ್‌ರಾಜ್ ರಸ್ತೆಗಳಲ್ಲಿ ಇನ್ನೂ ಲಕ್ಷಾಂತರ ಭಕ್ತರು ಉಳಿದುಕೊಂಡಿದ್ದು, ಅವರೂ ಕುಂಭಮೇಳದಲ್ಲಿ ಪಾಲ್ಗೊಳ್ಳಬೇಕಿದೆ. ಜಾಲತಾಣಗಳಲ್ಲಿನ ವಿಡಿಯೊಗಳ ಪ್ರಕಾರ ದೇಶದ ವಿವಿಧೆಡೆಯಿಂದ ರೈಲುಗಳಲ್ಲಿ ಭಕ್ತರ ದಂಡು ಬರುತ್ತಲೇ ಇದೆ. ಅದಕ್ಕಾಗಿ ಮಹಾ ಕುಂಭ ಮೇಳದ ಅವಧಿಯನ್ನು ಇನ್ನಷ್ಟು ಕಾಲ ವಿಸ್ತರಿಸಬೇಕು ಎಂದಿದ್ದಾರೆ. ಈ ಹಿಂದಿನ ವರ್ಷಗಳಲ್ಲಿ ಕುಂಭ ಮತ್ತು ಕುಂಭಮೇಳ 75 ದಿನಗಳ ಕಾಲ ನಡೆದಿತ್ತು. ಈ ಬಾರಿ ಅವಧಿ ಕಡಿಮೆಯಾಗಿದೆ ಎಂದು ವಿವರಿಸಿದ್ದಾರೆ.

ಪ್ರಯಾಗ್‌ರಾಜ್ ಅತಿ ಜನಬಾಹುಳ್ಯದ ನಗರ

ಪ್ರಯಾಗ್‌ರಾಜ್: ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ಜ.13ರಂದು ಆರಂಭಗೊಂಡ ಮಹಾ ಕುಂಭ ಮೇಳದಲ್ಲಿ ಈವರೆಗೆ 50 ಕೋಟಿಗೂ ಹೆಚ್ಚು ಜನರು ಭಾಗಿಯಾಗಿದ್ದು, ಗಂಗಾ-ಯಮುನಾ- ಸರಸ್ವತಿ ನದಿಗಳ ಪವಿತ್ರ ತ್ರಿವೇಣಿ ಸಂಗಮ ಸ್ಥಳದಲ್ಲಿ ಪುಣ್ಯ ಸ್ನಾನ ಮಾಡಿದ್ದಾರೆ. ಮಹಾಕುಂಭ ಮೇಳ ದಲ್ಲಿ ಮೊದಲ ಮೂರು ಅಮೃತ ಸ್ನಾನ ದಿನಗಳಲ್ಲಿ ಮತ್ತು ಇತ್ತೀಚಿನ ಮಾಘ ಪೂರ್ಣಿಮೆ ದಿನದಂದು ಪ್ರಯಾಗ್‌ರಾಜ್‌ನ ಮಹಾಕುಂಭ ನಗರ ಭಾರಿ ಜನಸಂದಣಿಗೆ ಸಾಕ್ಷಿಯಾಗಿದೆ. ಕೋಟ್ಯಂತರ ಸಂಖ್ಯೆಯ ಭಕ್ತರ ಆಗಮನದಿಂದ ಪ್ರಯಾಗ್‌ರಾಜ್ ನಗರ ಅತ್ಯಧಿಕ ಜನಬಾಹುಳ್ಯದ ನಗರವೆನಿಸಿಕೊಳ್ಳುವಂತೆ ಆಗಿದೆ. ಕಳೆದ ಐದು ವಾರಗಳಲ್ಲಿ ಪ್ರಯಾಗ್‌ರಾಜ್ ನಗರಕ್ಕೆ ಬಂದ ಭಕ್ತರ ಸಂಖ್ಯೆ ಅಮೆರಿಕದ ಜನಸಂಖ್ಯೆಗಿಂತ ಅಧಿಕ ಪ್ರಮಾಣದ್ದಾಗಿದೆ. ಮಹಾ ಕುಂಭಮೇಳ-2025ರ ರೀತಿಯ ಬೃಹತ್ ಕಾರ್ಯಕ್ರಮ ಜಗತ್ತಿನಲ್ಲಿ ಈ ವರೆಗೆ ನಡೆದಿಲ್ಲ.

ನ್ಯಾಯಾಂಗಕ್ಕೆ ಸೌಕರ್ಯ ಕರ್ನಾಟಕ ಉತ್ತಮ: ಓಕಾ

ಮುಂಬೈ: ರಾಜ್ಯದಲ್ಲಿನ ನ್ಯಾಯಾಂಗ ವ್ಯವಸ್ಥೆಗೆ ಮೂಲ ಸೌಕರ್ಯ ಒದಗಿಸುವುದರಲ್ಲಿ ಮಹಾರಾಷ್ಟ್ರಕ್ಕೆ ಹೋಲಿಸಿದಲ್ಲಿ ಕರ್ನಾಟಕವೇ ಮುಂದೆ ಇದೆ ಎಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಅಭಯ್ ಎಸ್. ಓಕಾ ಶ್ಲಾಘಿಸಿದ್ದಾರೆ. ಮುಂಬೈನಲ್ಲಿ ಶನಿವಾರ ಸ್ಮರಣಾರ್ಥ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ನ್ಯಾಯಮೂರ್ತಿ, ಮಹಾರಾಷ್ಟ್ರದಲ್ಲಿನ ನ್ಯಾಯಾಂಗ ವ್ಯವಸ್ಥೆಯು ಮೂಲ ಸೌಕರ್ಯಗಳಲ್ಲಿ ತೀವ್ರ ಕೊರತೆ ಅನುಭವಿಸುತ್ತಿದೆ ಎಂದು ಬೊಟ್ಟು ಮಾಡಿ ಹೇಳಿದರು.

ಸುಪ್ರೀಂ ಕೋರ್ಟ್‌ಗೆ ತೆರಳುವ ಮುನ್ನ ನ್ಯಾ.ಓಕಾ ಅವರು ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿದ್ದರು. ಅದಕ್ಕೂ ಮೊದಲು ಮಹಾರಾಷ್ಟ್ರದಲ್ಲೂ ಸೇವೆ ಸಲ್ಲಿಸಿದ್ದರು. ರಾಜ್ಯದ ನ್ಯಾಯಾಂಗ ವ್ಯವಸ್ಥೆಗೆ ಮೂಲ ಸೌಕರ್ಯ ಪಡೆಯಬೇಕೆಂದರೆ ಮಹಾರಾಷ್ಟ್ರದಲ್ಲಿ ಬಹಳ ಕಷ್ಟಪಡಬೇಕು. ಪುಣೆಯ ಸಿವಿಲ್ ಕೋರ್ಟ್ ಸಂಕೀರ್ಣದಲ್ಲಿ ನ್ಯಾಯಾಧೀಶರುಗಳಿಗೆ ಪ್ರತ್ಯೇಕ ಕೊಠಡಿ ವ್ಯವಸ್ಥೆಯೂ ಇಲ್ಲ. ಆದರೆ, ಕರ್ನಾಟಕದಲ್ಲಿನ ಪರಿಸ್ಥಿತಿ ಭಿನ್ನವಾಗಿದೆ. ಹೈಕೋರ್ಟ್‌ನ ಕಲಬುರಗಿ ಪೀಠದ ಕಟ್ಟಡ ಪಂಚತಾರಾ ಹೋಟೆಲ್‌ಗೆ ಸಮನಾಗಿದೆ ಎಂದು ನೆರೆಹೊರೆಯ ಎರಡೂ ರಾಜ್ಯಗಳಲ್ಲಿನ ವ್ಯವಸ್ಥೆಯನ್ನು ತುಲನೆ ಮಾಡಿ ಮಾತನಾಡಿದರು.

ಮುನ್ನಾರ್: ಕಾಡಾನೆ ದಾಳಿಯಿಂದ ಪಾರು!

ಮುನ್ನಾರ್: ಕೇರಳದ ಮುನ್ನಾರ್‌ನಲ್ಲಿ ಕಾಡಾನೆಯೊಂದು ರಸ್ತೆ ದಾಟುತ್ತಿದ್ದಾಗ ಅದೇ ಮಾರ್ಗದಲ್ಲಿ ಬಂದ ಪ್ರವಾಸಿಗರ ಕಾರನ್ನು ಕಂಡು ಸಿಟಿಗೆದ್ದು ದಾಳಿ ಮಾಡಿದೆ. ಮುನ್ನಾರ್-ದೇವಿಕುಳಂ ರಸ್ತೆಯಲ್ಲಿ ಎದುರಾದ ಕಾರನ್ನು ಕಾಡಾನೆ ತಲೆಕೆಳಗು ಮಾಡಿದೆ. ಕಾರಿನಲ್ಲಿದ್ದ ನಾಲ್ವರು ಪ್ರಯಾಣಿಕರು ಮತ್ತು ಚಾಲಕ ಕಡೆಕ್ಷಣದಲ್ಲಿ ಕಾರಿನಿಂದ ಹೊರಬಂದು ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎಂದು ಸ್ಥಳೀಯರು ತಿಳಿಸಿದ್ದಾರೆ.

ಈ ಸಂದರ್ಭದ ದೃಶ್ಯಗಳು ಸ್ಥಳೀಯ ಮೊಬೈಲ್ ಕ್ಯಾಮೆರಾದಲ್ಲಿ ಸೆರೆಯಾಗಿ ಬಳಿಕ ವೈರಲ್ ಆಗಿವೆ. ಪ್ರವಾಸಿಗರು ಮುನ್ನಾರ್‌ನಿಂದ ತೇಕಡಿಗೆ ಪ್ರಯಾಣಿಸುತ್ತಿದ್ದರು, ಕಾಡಾನೆ ದಾಳಿಯಿಂದ ಸ್ವಲ್ಪದರಲ್ಲಿ ಪಾರಾದ ಪ್ರಯಾಣಿಕರು ಮತ್ತು ಚಾಲಕ ಕಾರಿನಿಂದ ದೂರ ನಿಂತು ಭಯದಿಂದ ನಡುಗುತ್ತಿರುವ ದೃಶ್ಯಗಳೂ ವೈರಲ್ ಆಗಿವೆ.

ಅಮೆರಿಕದ ಎಫ್-35ನಿಂದ ಭಾರತದ ವಾಯುಪಡೆ ಬಲಿಷ್ಠ

ದೇಶದ ಎಡ-ಬಲದಲ್ಲಷ್ಟೇ ಅಲ್ಲ, ಎಡಭುಜದ ಕೆಳಗೂ ಶತೃದೇಶಗಳು ಸೃಷ್ಟಿ ಆಗಿರುವುದರಿಂದ ಭಾರತ ತನ್ನ ಸೇನಾಪಡೆಗಳ ಸಾಮರ್ಥ್ಯವನ್ನು ಮತ್ತಷ್ಟು ಹಿಗ್ಗಿಸಿಕೊಳ್ಳಲು ಮನಸ್ಸು ಮಾಡಿದೆ. ಅದರ ಭಾಗವಾಗಿಯೇ ವಾಯುಪಡೆಗೆ ಹೆಚ್ಚಿನ ಸಾಮರ್ಥ್ಯ ಇರುವಂತೆ ಗಮನ ಕೇಂದ್ರೀ ಕರಿಸಿದೆ. ಅದಾಗಲೇ ಪರಮಾಣು ಬಾಂಬ್‌ಗಳನ್ನೂ ಹೊತ್ತೊಯ್ಯಬಲ್ಲ ಸಾಮರ್ಥ್ಯವಿರುವ ಫ್ರಾನ್ಸ್‌ನ ಅತ್ಯಾಧುನಿಕ ರಫೇಲ್ ಯುದ್ಧವಿಮಾನಗಳಿಂದ ಬಲಿಷ್ಠ ವಾಯುಪಡೆ ಎನಿಸಿಕೊಂಡಿರುವ 'ಐಎಎಫ್'ಗೆ ಅಮೆರಿಕದಲ್ಲಿ ತಯಾರಾಗುವ ಅತ್ಯಂತ ಶಕ್ತಿಶಾಲಿ ಯುದ್ಧ ವಿಮಾನ ಫೈಟರ್ ಜೆಟ್ ಎಫ್-35 ಸದ್ಯದಲ್ಲೇ ಸೇರ್ಪಡೆ ಆಗಲಿದೆ. ಭಾರತಕ್ಕೆ ಎಫ್-22 ಕೊಡುವುದಾಗಿ ಹೇಳಿದ್ದ ಅಮೆರಿಕ ಈಗ ಮನಸ್ಸು ಬದಲಿಸಿ ಎಫ್-35 ಕೊಡಲು ಒಪ್ಪಿದೆ. ಭಾರತಕ್ಕೆ ಎಫ್-35 ಫೈಟರ್ ಜೆಟ್‌ಗಳನ್ನು ಕೊಡಲು ಡೊನಾಲ್ಡ್ ಟ್ರಂಪ್ ಒಪ್ಪಿದ್ದಾರೆ. ಇನ್ನೊಂದೆಡೆ, ರಷ್ಯಾದಿಂದ ಎಸ್‌ಯು-57 ಕೂಡಾ ಬಂದು ಸೇರಲಿದೆ. ಚೀನಾ, ರಷ್ಯಾದ ಸ್ಟೀಲ್ತ್ ಫೈಟರ್ ವಿಮಾನಗಳಿಗಿಂತ ಅಮೆರಿಕದ ಎಫ್-35 ಅತ್ಯಧಿಕ ಶಕ್ತಿಶಾಲಿ ಎಂಬುದು ಗಮನಾರ್ಹ.

ಕರಾರುವಾಕ್ ದಾಳಿಕೋರ

- ನ್ಯೂಕ್ಲಿಯರ್ ಬಾಂಬ್ ಹೊತ್ತೊಯ್ಯಬಲ್ಲ 5ನೇ ಪೀಳಿಗೆಯ ವಿಶ್ವದ ಏಕೈಕ ಫೈಟರ್ ಜೆಟ್.
- ಇಸ್ರೇಲ್ ಎಫ್-35 ವಿಮಾನವನ್ನು ಹಲವಾರು ಬಾರಿ ಯಶಸ್ವಿಯಾಗಿ ಉಪಯೋಗಿಸಿದೆ.
- ಕಂಪ್ಯೂಟರ್ ನಿಯಂತ್ರಣ ವ್ಯವಸ್ಥೆಯ ಎಫ್-35ನಿಂದ ಕರಾರುವಾಕ್ ದಾಳಿ ಸಂಯೋಜನೆ.
- ಅಮೆರಿಕದ ಎಫ್-35 ವಿಮಾನ 'ಫ್ಲೈಯಿಂಗ್ ಕಂಪ್ಯೂಟರ್' ಎಂದೇ ಹೆಸರುವಾಸಿ.

ಮೂರು ಬಗೆಯ ಯುದ್ಧ ವಿಮಾನ

- ಅಮೆರಿಕದ ಬಲಿಷ್ಠ ಯುದ್ಧ ವಿಮಾನಗಳ ಸರಣಿ ಎಫ್-35ರಲ್ಲಿ ಹಲವು ಬಗೆ
- ಲಾಕ್‌ಹೀಡ್ ಮಾರ್ಟಿನ್ ಎಫ್-35 ಲೈಟನಿಂಗ್-2
- ಎಫ್-35 ಎ ಲೈಟನಿಂಗ್ -2 ಏರ್‌ಫೋರ್ಸ್
- ಎಫ್-35 ಬಿ ವರ್ಲ್ಡ್ ಮೋಸ್ಟ್ ಮಾಡರ್ನ್-ಇನ್‌ಸೇನ್ ಸ್ಟೀಲ್ತ್ ಜೆಟ್ ಫೈಟರ್
- ಎಫ್-35ಸಿ ಫೈಟರ್ ಜೆಟ್.

- ಯುಎಸ್ ಲಾಕ್‌ಹೀಡ್ ಮಾರ್ಟಿನ್ ಎಫ್-35 ಲೈಟನಿಂಗ್-2 ಯುದ್ಧ ವಿಮಾನ.
- ಈ ಸಿಂಗಲ್ ಎಂಜಿನ್, ಸಿಂಗಲ್ ಸೀಟರ್ ಯುದ್ಧ ವಿಮಾನ 2006ರಲ್ಲಿ ಅಮೆರಿಕ ವಾಯುಪಡೆಗೆ ಸೇರ್ಪಡೆ.
- ಅತಿವೇಗವಾಗಿ ಹಾರಬಲ್ಲ ಸೂಪರ್‌ಸಾನಿಕ್ ಸ್ಟೀಲ್ತ್ ಸ್ಟ್ರೈಕ್ ಫೈಟರ್ ಜೆಟ್.
- ದೇಶದ ಆಗಸದ ಕಾವಲಿಗೂ ಸೈ, ಯುದ್ಧದಲ್ಲಿ ಗುಡಿಯಿಟ್ಟು ಬಾಂಬ್ ದಾಳಿಗೂ ಸೈ.
- ಅತ್ಯಾಧುನಿಕ ಎಲೆಕ್ಟ್ರಾನಿಕ್ ಉಪಕರಣಗಳನ್ನು ಒಳಗೊಂಡ ಬಲು ಶಕ್ತಿಶಾಲಿ ಯುದ್ಧ ವಿಮಾನ
- ಎಫ್-35 ಫೈಟರ್ ಜೆಟ್ ಸರಣಿಯಲ್ಲಿ ಆರಂಭಿಕ ಹಂತದ ಯುದ್ಧ ವಿಮಾನ
- ಸದ್ಯ ಅಮೆರಿಕ, ನ್ಯಾಟೊ ಸದಸ್ಯ ದೇಶಗಳು, ಆಸ್ಟ್ರೇಲಿಯ ವಾಯುಪಡೆಯಲ್ಲಿ ಬಳಕೆ.

ಎಫ್-35 ವಿಶೇಷ



- ಅಮೆರಿಕದ ಲಾಕ್‌ಹೀಡ್ ಮಾರ್ಟಿನ್ ಎನ್ನುವ ಕಂಪನಿ ತಯಾರಿಕೆ.
- ವಿಶ್ವದಲ್ಲೇ ಶ್ರೇಷ್ಠ 5ನೇ ತಲೆಮಾರಿನ ಯುದ್ಧ ವಿಮಾನ.
- ಇಂಥ ಫೈಟರ್ ಜೆಟ್ ಅಮೆರಿಕ ಬಿಟ್ಟರೆ ಚೀನಾ, ರಷ್ಯಾದಲ್ಲಿ ತಯಾರಿ.
- ಚೀನಾ ಬಳಿ ಚೆಂಗ್ಡು ಜೆ-20, ರಷ್ಯಾ ಬಳಿ ಸುಖೋಯ್ ಎಸ್‌ಯು-57.

ಎಫ್-35 ಅದ್ವಿತೀಯ

- ಜೆ-20 ಮತ್ತು ಎಸ್‌ಯು-57 ಉತ್ತಮ ಡಿಸೈನ್ ಹೊಂದಿದ 5ನೇ ಪೀಳಿಗೆ ಯುದ್ಧವಿಮಾನಗಳೆ.
- ಆದರೆ, ವಿಶ್ವದ ರಕ್ಷಣಾ ವಿಭಾಗ ತಜ್ಞರ ಪ್ರಕಾರ, ಇವರೆಗೂ ತಾಂತ್ರಿಕವಾಗಿ ಎಫ್-35ಗೆ ಸಮನಲ್ಲ.
- ಕೆಲವು ಯುದ್ಧಗಳಲ್ಲಿ ರಷ್ಯಾದ ಎಸ್‌ಯು-57 ಫೈಟರ್ ಜೆಟ್ ಬಳಕೆಯಾಗಿದ್ದು, ಹಿನ್ನಡೆ ಕಂಡಿದೆ.
- ಚೀನಾದ ಜೆ-20 ಫೈಟರ್ ಜೆಟ್ ಯುದ್ಧದಲ್ಲಿ ಭಾಗಿಯಾಗಿ ಸಾಮರ್ಥ್ಯ ತೋರಿಲ್ಲ.
- ಅಮೆರಿಕದ ಎಫ್-35 ಅನೇಕ ನೈಜ ಯುದ್ಧಗಳಲ್ಲಿ ಬಳಕೆಯಾಗಿ ಸಾಮರ್ಥ್ಯ ತೋರಿದೆ.

ಬಲು ದುಬಾರಿ

- 2024ರ ಜುಲೈನಲ್ಲಿ ಎಫ್-35ಎ ಯುದ್ಧ ವಿಮಾನದ ಬೆಲೆ 8.25 ಕೋಟಿ ಡಾಲರ್. ಎಫ್-35ಬಿ ಫೈಟರ್ ಜೆಟ್ ಬೆಲೆ 10.90 ಕೋಟಿ ಡಾಲರ್, ಎಫ್-35ಸಿ ಬೆಲೆ 10.21 ಕೋಟಿ ಡಾಲರ್.

ಕಾಶ್ಮೀರಕ್ಕೆ ಸೂಕ್ತ ವೇಳೆ ರಾಜ್ಯ ಸ್ಥಾನ: ರಿಜಿಜು

ಶ್ರೀನಗರ: ಜಮ್ಮು-ಕಾಶ್ಮೀರಕ್ಕೆ ಸೂಕ್ತ ಸಮಯದಲ್ಲಿ ರಾಜ್ಯ ಸ್ಥಾನಮಾನ ಮರುಸ್ಥಾಪಿಸಲಾಗುವುದು ಎಂದು ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಸ್ಪಷ್ಟಪಡಿಸಿದ್ದಾರೆ. ರಾಜ್ಯ ಸ್ಥಾನದ ಮರುಸ್ಥಾಪನೆ ದಿನಾಂಕ ಹೇಳಲು ಸಾಧ್ಯವಿಲ್ಲ ಎಂದು ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಶನಿವಾರ ಶ್ರೀನಗರದಲ್ಲಿ ಸುದ್ದಿಗಾರರಿಗೆ ತಿಳಿಸಿದ್ದಾರೆ. ರಾಜ್ಯದ ಸ್ಥಾನಮಾನ ಮರುಸ್ಥಾಪನೆ ಬಳಿಕ ಅಧಿಕಾರಗಳು ಮತ್ತು ಇಲಾಖೆಗಳ ಕಾರ್ಯಗಳನ್ನು ಸ್ಪಷ್ಟವಾಗಿ ಗುರುತಿಸಲಾಗುವುದು ಎಂದು ಪ್ರಧಾನಿ ಮತ್ತು ಗೃಹ ಸಚಿವರು ಹಿಂದೆಯೇ ಸ್ಪಷ್ಟವಾಗಿ ಹೇಳಿದ್ದಾರೆ. ತಮ್ಮ ಈಗಿನ ಭೇಟಿ ಕೇಂದ್ರ ಬಜೆಟ್‌ಗೆ ಸಂಬಂಧಿಸಿದ್ದಾಗಿದೆ. ಈಗ ಉಳಿದ ವಿಚಾರಗಳ ಕುರಿತು ಪ್ರತಿಕ್ರಿಯಿಸಲು ಬಯಸುವುದಿಲ್ಲ ಎಂದಿದ್ದಾರೆ. ಎನ್‌ಡಿಎ ಭಾಗವಾಗಿರುವ ಆಂಧ್ರಪ್ರದೇಶ ಸಿಎಂ ಚಂದ್ರಬಾಬು ನಾಯ್ಡು ಮತ್ತು ಬಿಹಾರ ಸಿಎಂ ನಿತೀಶ್ ಕುಮಾರ್ ವಕ್ಫ್ ತಿದ್ದುಪಡಿ ವಿಧೇಯಕವನ್ನು ಬೆಂಬಲಿಸುವರೇ? ಎಂಬ ಸುದ್ದಿಗಾರರ ಪ್ರಶ್ನೆಗೆ, ಹಲವು ಮುಸ್ಲಿಂ ಸಂಸದರು ಸಹ ಖಾಸಗಿಯಾಗಿ ವಿಧೇಯಕವನ್ನು ಬೆಂಬಲಿಸಿ ಮಾತನಾಡಿದ್ದಾರೆ, ಇನ್ನು ಹಲವರು ಬೆಂಬಲ ವ್ಯಕ್ತಪಡಿಸಿದ್ದಾರೆ. ಮುಖ್ಯವಾಗಿ ಮುಸ್ಲಿಂ ಮಹಿಳೆಯರು ವಿಧೇಯಕವನ್ನು ಸ್ವಾಗತಿಸಿದ್ದಾರೆ ಎಂದು ರಿಜಿಜು ಉತ್ತರಿಸಿದರು.

ಮಹಾ ಸಹಕಾರಿ ಬ್ಯಾಂಕ್ 122 ಕೋಟಿ ರು. ಅಕ್ರಮ

ಮುಂಬೈ: ಮಹಾರಾಷ್ಟ್ರದ ಸಹಕಾರಿ ಕ್ಷೇತ್ರದ ನ್ಯೂ ಇಂಡಿಯಾ ಬ್ಯಾಂಕ್‌ನಲ್ಲಿ ನಡೆದಿರುವ 122 ಕೋಟಿ ಹಣ ದುರುಪಯೋಗ ಆರೋಪ ಸಂಬಂಧ ಜನರಲ್ ಮ್ಯಾನೇಜರ್ ಮತ್ತು ಮುಖ್ಯ ಅಕೌಂಟೆಂಟ್ ಹಾಗೂ ಆತನ ಸಹಚರನ ವಿರುದ್ಧ ಮುಂಬೈ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ವಿಸ್ತೃತ ತನಿಖೆಗಾಗಿ ಪ್ರಕರಣವನ್ನು ಆರ್ಥಿಕ ಅಪರಾಧಗಳ ವಿಭಾಗಕ್ಕೆ ವರ್ಗಾಯಿಸಲಾಗಿದೆ.

ವಂಚನೆ ಪ್ರಕರಣ ಬಯಲಾದ ಬಳಿಕ, ನ್ಯೂ ಇಂಡಿಯಾ ಕೋಆಪರೇಟಿವ್ ಬ್ಯಾಂಕ್ ಯಾವುದೇ ಹೊಸ ವಹಿವಾಟು ನಡೆಸದಂತೆ, ಹಣ ಹಿಂಪಡೆಯದಂತೆ ನಿರ್ಬಂಧಿಸಿ ಭಾರತೀಯ ರಿಸರ್ವ್ ಬ್ಯಾಂಕ್(ಆರ್‌ಬಿಐ) ಶುಕ್ರವಾರ ಆದೇಶ ಹೊರಡಿಸಿದೆ.

ವಂಚನೆ ಸಂಬಂಧ ಬ್ಯಾಂಕ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ದೇವರ್ಷಿ ಘೋಷ್ ಸೆಂಟ್ರಲ್ ಮುಂಬೈನ ದಾದರ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ದೂರು ಆಧರಿಸಿ ಬ್ಯಾಂಕ್‌ನ ಜನರಲ್ ಮ್ಯಾನೇಜರ್ ಮತ್ತು ಮುಖ್ಯ ಅಕೌಂಟೆಂಟ್ ಹಿತೇಶ್ ಮೆಹ್ತಾ ಸಹಚರರ ಜತೆಗೂಡಿ ಸಂಚು ರೂಪಿಸಿ ಪ್ರಭಾದೇವಿ ಎಂಬವರು ಹಾಗೂ ಗೊರೆಗಾಂವ್ ಶಾಖೆಯ ತಿಜೋರಿಯಲ್ಲಿದ್ದ ನಗದು ಲಾಕರ್‌ನಿಂದ 122 ಕೋಟಿ ರು.ಗಳನ್ನು ಹೊರತೆಗೆದು ದುರ್ಬಳಕೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೋದಿಗೆ ವಿದೇಶಿ ಮಾಧ್ಯಮ ಪ್ರಶಂಸೆ

ವಾಷಿಂಗ್ಟನ್: ಪ್ರಧಾನಿ ನರೇಂದ್ರ ಮೋದಿ ಅವರು ಅಮೆರಿಕ ಪ್ರವಾಸ ಮುಗಿಸಿ ಭಾರತಕ್ಕೆ ವಾಪಸಾಗಿದ್ದಾರೆ. ಆದರೆ, ಅಮೆರಿಕ ಪ್ರವಾಸ ಕಾಲದಲ್ಲಿ ಅಧ್ಯಕ್ಷ ಡೊನಾಲ್ಡ್ ಸ್ಥಾನ ಜತೆ ಪ್ರಧಾನಿ ಮೋದಿ ಅವರು ನಡೆಸಿದ ದ್ವಿಪಕ್ಷೀಯ ಸಭೆ, ವಾಣಿಜ್ಯ-ವ್ಯಾಪಾರ ಒಪ್ಪಂದಗಳು, ರಾಜತಾಂತ್ರಿಕ ವಿಚಾರಗಳ ವಿನಿಮಯ, ಭಾರತಕ್ಕೆ ಬೇಕಾಗಿದ್ದ ಉಗ್ರ ತಹಾವುರ್ ರಾಣಾ ಗಡೀಪಾರು ಮೊದಲಾದ ವಿಚಾರಗಳಲ್ಲಿ ಕೈಗೊಂಡ ನಿರ್ಧಾರಗಳನ್ನು ವಿದೇಶಿ ಮಾಧ್ಯಮಗಳು ಬಹುವಾಗಿ ಪ್ರಶಂಸಿಸಿವೆ. ಕಠಿಣ ನಿಲುವು, ಒರಟು ವ್ಯವಹಾರ ಶೈಲಿಯ ಪಕ್ಕಾ ವ್ಯವಹಾರಸ್ಥ ಡೊನಾಲ್ಡ್ ಟ್ರಂಪ್ ಅವರಿಂದಲೇ ಪ್ರಧಾನಿ ಮೋದಿ ವ್ಯವಹಾರಿಕ ವಿಚಾರಗಳಲ್ಲಿನ ಸಂವಾದ, ಚೌಕಾಶಿ ವಿಚಾರವಾಗಿ ಪ್ರಶಂಸೆಗೆ ಒಳಗಾಗಿರುವುದು ವಿದೇಶಿ ಮಾಧ್ಯಮಗಳಲ್ಲಿ ಪ್ರಧಾನವಾಗಿ ವರದಿಯಾಗಿದೆ. ಮೋದಿ ಅವರ ರಾಜತಾಂತ್ರಿಕ ಚಾಣಾಕ್ಷತೆ, ಸೂಕ್ಷ್ಮತೆ, ವಿವೇಚನೆ, ಕೌಶಲ, ಸಂವಹನ ರೀತಿ ಕಂಡು ವಿದೇಶಿ ಮಾಧ್ಯಮಗಳು ಅವರನ್ನು ಹಾಡಿಹೊಗಳಿವೆ. ಪ್ರಧಾನಿ ಮೋದಿ ಅವರು ಶುಕ್ರವಾರ ಶ್ವೇತಭವನದಲ್ಲಿ ಡೊನಾಲ್ಡ್ ಟ್ರಂಪ್ ಅವರನ್ನು ಭೇಟಿಯಾಗಿ ರಾತ್ರಿ ವಿಶೇಷ ಭೋಜನ ಕೂಟದಲ್ಲೂ ಭಾಗಿಯಾದರು. ಎಲ್ಲಾ ಸಂದರ್ಭಗಳಲ್ಲಿ ಭಾರತಕ್ಕೆ ಅನುಕೂಲವಾಗುವ ರೀತಿ ಟ್ರಂಪ್ ಅವರ ನಿರ್ಧಾರಗಳು ರೂಪುಗೊಳ್ಳುವಂತೆ ಮಾಡಿದರು. 2030ರ ವೇಳೆಗೆ ಉಭಯ ದೇಶಗಳ ನಡುವಿನ ವ್ಯಾಪಾರ-ವಿನಿಮಯ ವಹಿವಾಟನ್ನು 500 ಶತಕೋಟಿ ಡಾಲರ್‌ಗಳಿಗೆ ವಿಸ್ತರಿಸುವ ಗುರಿ ಇಟ್ಟುಕೊಂಡಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ.

9740 ಕೋ.ಡಾಲರ್‌ಗೆ ಓಪನ್ ಎಐ ಖರೀದಿ?

ಸ್ಯಾನ್‌ಫ್ರಾನ್ಸಿಸ್ಕೊ: ಟೆಸ್ಲಾ ಎಲೆಕ್ಟ್ರಿಕ್ ಕಾರು ತಯಾರಿಕೆಯಿಂದ ಶುರುವಾದ ವಿಶ್ವದ ಅತಿಸಿರಿವಂತ ಉದ್ಯಮಿ ಎಲಾನ್ ಮಸ್ಕ್ ಅವರ ಉದ್ಯಮ ಪಯಣ, ಟ್ವಿಟರ್ ಕಂಪನಿ ಖರೀದಿಸಿ 'ಎಕ್ಸ್' ಎಂದು ಹೆಸರು ಬದಲಾವಣೆ, 'ಸ್ಪೇಸ್ ಎಕ್ಸ್' ಮೂಲಕ ಬಾಹ್ಯಾಕಾಶಕ್ಕೆ ರಾಕೆಟ್ ಉಡ್ಡಯನ ಕಂಪನಿ ಆರಂಭ ಎಂದು ವಿಸ್ತಾರಗೊಳ್ಳುತ್ತಲೇ ಇದೆ. ಈಗ ಕೃತಕ ಬುದ್ಧಿಮತ್ತೆ (ಎಐ) ಉದ್ಯಮದಲ್ಲಿ ದಾಪುಗಾಲಿಡಲು ಸಿದ್ಧರಾಗಿರುವ ಎಲಾನ್ ಮಸ್ಕ್, ಅದಾಗಲೇ ಈ ಕ್ಷೇತ್ರದಲ್ಲಿ ಹೆಸರು ಮಾಡಿರುವ 'ಓಪನ್ ಎಐ' ಕಂಪನಿಯನ್ನು 9740 ಕೋಟಿ ಅಮೆರಿಕನ್ ಡಾಲರ್(8,44,166 ಕೋಟಿ ರು.)ಗಳಿಗೆ ಖರೀದಿಸಲು ಇಚ್ಛಿಸಿದ್ದಾರೆ. ಆದರೆ, ಮಸ್ಕ್ ಮುಂದಿಟ್ಟ ಖರೀದಿ ಪ್ರಸ್ತಾಪವನ್ನು ಓಪನ್ ಎಐ ಕಂಪನಿಯ ಆಡಳಿತ ಮಂಡಳಿ ಸ್ಪಷ್ಟವಾಗಿ ತಿರಸ್ಕರಿಸಿದೆ. 'ಓಪನ್ ಎಐ' ಮಾರಾಟಕ್ಕಿಲ್ಲ. ಯಾವುದೇ ಕಾರಣಕ್ಕೂ ಕಂಪನಿಯನ್ನು ಮಾರಾಟ ಮಾಡುವುದಿಲ್ಲ. ಎಐ ಕ್ಷೇತ್ರದಲ್ಲಿನ ಸ್ಪರ್ಧೆಗೆ ಅಡ್ಡಿಪಡಿಸುವ ಮಸ್ಕ್ ಅವರ ಪ್ರಯತ್ನವನ್ನು ಓಪನ್ ಎಐ ಕಂಪನಿ ತಿರಸ್ಕರಿಸಿದೆ ಎಂದು ಕಂಪನಿಯ ಆಡಳಿತ ಮಂಡಳಿಯ ಅಧ್ಯಕ್ಷ ಬ್ರೆಟ್ ಟೇಲರ್ ಅಧಿಕೃತ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಅಲ್ಲದೇ, ಎಲಾನ್ ಮಸ್ಕ್ ಅವರ ಪ್ರಸ್ತಾವನೆಯಲ್ಲಿ ಉತ್ತಮ ಹಿತಾಸಕ್ತಿಗಳಿಲ್ಲ ಎಂದೂ ಮಸ್ಕ್ ಅವರ ವಕೀಲರಿಗೆ ಬರೆದ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಫೆಬ್ರವರಿ 19 ರಿಂದ 21ರವರೆಗೆ ಮೂರು ದಿನಗಳ ಸಮ್ಮೇಳನ

ಚಿಕ್ಕಬಳ್ಳಾಪುರ : ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯಿಂದ ಫೆಬ್ರವರಿ 19 ರಿಂದ 21 ರ ವರೆಗೆ ಮೂರು ದಿನಗಳ ರಾಷ್ಟ್ರೀಯ ಸಮ್ಮೇಳನ ಆಯೋಜಿಸಲಾಗುತ್ತಿದ್ದು ಪ್ರತಿಷ್ಠಿತ ಸಂಸ್ಥೆಗಳ ಹೆಸರಾಂತ ವಿಜ್ಞಾನಿಗಳು ತಾಂತ್ರಿಕ ಉಪನ್ಯಾಸಗಳನ್ನು ನೀಡಲಿದ್ದಾರೆ. ಈ ಸಮ್ಮೇಳನದಲ್ಲಿ ಸ್ನಾತಕೋತ್ತರ ವಿಜ್ಞಾನ ವಿದ್ಯಾರ್ಥಿಗಳು, ಸಂಶೋಧನಾ ವಿದ್ಯಾರ್ಥಿಗಳು, ಪ್ರಾಧ್ಯಾಪಕರು, ಯುವ ವಿಜ್ಞಾನಿಗಳು, ಶೈಕ್ಷಣಿಕ ತಜ್ಞರು, ಯುವ ಉದ್ಯಮದಾರರು ಭಾಗವಹಿಸಬಹುದಾಗಿದ್ದು, ಆಯ್ಕೆಯಾದ ಪ್ರಬಂಧಗಳಿಗೆ ನಗದು ಬಹುಮಾನವನ್ನು ನೀಡಲಾಗುವುದು. ಆಸಕ್ತ ಪ್ರತಿನಿಧಿಗಳು ಫೆಬ್ರವರಿ 17 ರ ಒಳಗಾಗಿ ಆನ್‌ಲೈನ್ ಮೂಲಕ ನೋಂದಾಯಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಅಕಾಡೆಮಿಯ ಅಧಿಕಾರಿಗಳನ್ನು (ಮೊ: 9845258894) ಸಂಪರ್ಕಿಸಬಹುದು ಎಂದು ಅಕಾಡೆಮಿ ಸಿಇಒ ಡಾ. ಎ. ಎಂ. ರಮೇಶ್ ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈಜುವಾಗ ನೀರಿನಲ್ಲಿ ಮುಳುಗಿ ಸಾವು

ಚಾಮರಾಜನಗರ: ಕೊಳ್ಳೇಗಾಲ ತಾಲೂಕಿನ ದಾಸನಪುರ ಗ್ರಾಮದ ಕಾವೇರಿ ನದಿಯಲ್ಲಿ ತೀರ್ಥ ಸ್ನಾನ ಮಾಡಲು ಹೋದ ನಟ ಡಾ. ರಾಜಕುಮಾರ್ ಅವರ ಅಪ್ಪಟ ಅಭಿಮಾನಿಯೊಬ್ಬ ನದಿಯಲ್ಲಿ ಈಜುತ್ತಿರುವಾಗಲೇ ಶನಿವಾರ ಮೃತಪಟ್ಟಿದ್ದಾರೆ. ನಗರದ ಹಳೇ ಅಗ್ರಹಾರದ ವಿನಾಯಕ ಗುಡಿ ಬೀದಿಯ ನಿವಾಸಿ ಎನ್.ನಾಗರಾಜನ್ (78) ಮೃತ ದುರ್ದೈವಿ. ಕಳೆದ ಎರಡು ದಿನಗಳಿಂದಲೂ ಸಹ ನಗರದಲ್ಲಿ ಲಕ್ಷ್ಮೀನಾರಾಯಣ ಸ್ವಾಮಿ ಬ್ರಹ್ಮ ರಥೋತ್ಸವ ವಿಜೃಂಭಣೆಯಿಂದ ನಡೆದಿತು. ಮೂರನೇ ದಿನವಾದ ಶನಿವಾರ ಕಾವೇರಿ ನದಿಯಲ್ಲಿ ತೀರ್ಥಸ್ನಾನಕ್ಕೆ ತೆರಳಿದಾಗ ನಾಗರಾಜನ್ ನದಿಯಲ್ಲಿ ಈಜಲು ಹೋಗಿ ಒಂದು ದಡದಿಂದ ಇನ್ನೊಂದು ದಡದವರೆಗೆ ಈಜುತ್ತಾ ಇದ್ದರು. ಈ ಸಂದರ್ಭದಲ್ಲಿ ಆಕಸ್ಮಿಕವಾಗಿ ಸಾವನ್ನಪ್ಪಿದ್ದಾರೆ. ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಫೆ.20ರಂದು ಸಂತಕವಿ ಸರ್ವಜ್ಞ ಜಯಂತಿ

ಚಿಕ್ಕಬಳ್ಳಾಪುರ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಚಿಕ್ಕಬಳ್ಳಾಪುರ ಇವರ ಸಂಯುಕ್ತಾಶ್ರಯದಲ್ಲಿ ಸಂತಕವಿ ಸರ್ವಜ್ಞ ಜಯಂತಿಯನ್ನು ಫೆಬ್ರವರಿ 20 ರಂದು ಬೆಳಿಗ್ಗೆ 11 ಗಂಟೆಗೆ ನಗರದ ಕುಂಭೇಶ್ವರ ಸ್ವಾಮಿ ದೇವಾಲಯದಲ್ಲಿ ಆಯೋಜಿಸಲಾಗಿದೆ. ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್ ಉದ್ಘಾಟನೆ ನೆರವೇರಿಸಲಿದ್ದಾರೆ. ಅಧ್ಯಕ್ಷತೆಯನ್ನು ಚಿಕ್ಕಬಳ್ಳಾಪುರ ಶಾಸಕರಾದ ಪಿ.ಇ ಪ್ರದೀಪ್ ಈಶ್ವರ್ ವಹಿಸಲಿದ್ದಾರೆ. ರೇವಾ ವಿಶ್ವವಿದ್ಯಾಲಯ ಪ್ರಾಧ್ಯಾಪಕ ಡಾ. ಸತ್ಯಪ್ರಕಾಶ್ ಬೈರಾಪುರ ಉಪನ್ಯಾಸ ನೀಡಲಿದ್ದಾರೆ.

ಅಧ್ಯಯನ ಕಮ್ಮಟಕ್ಕೆ ಅರ್ಜಿಗಳ ಆಹ್ವಾನ

ಚಿಕ್ಕಬಳ್ಳಾಪುರ: ತತ್ವಪದ ಸಾಹಿತ್ಯ, ಭಕ್ತಿ ಸಾಹಿತ್ಯ, ಕೀರ್ತನಾ ಸಾಹಿತ್ಯ ಕುರಿತಂತೆ ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರ, ಕೆ. ಎಸ್. ಮುದ್ದಪ್ಪ ಸ್ಮಾರಕ ಟ್ರಸ್ಟ್-ಕೃಷ್ಣಾಪುರದೊಡ್ಡಿ ಇವರ ಸಹಯೋಗದಲ್ಲಿ ಯುವ ಸಂಶೋಧನಾರ್ಥಿಗಳಿಗೆ 2025ರ ಮಾರ್ಚ್ 10 ಮತ್ತು 11 ರಂದು ಮುದುವ್ವಶ್ರೀ ದಿಬ್ಬ, ಕೆರೆಮೇಗಳದೊಡ್ಡಿ, ರಾಮನಗರ ತಾಲೂಕು ಮತ್ತು ಜಿಲ್ಲೆ ಇಲ್ಲಿ ಅಧ್ಯಯನ ಕಮ್ಮಟ ನಡೆಸಲು ಉದ್ದೇಶಿಸಿದ್ದು, ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು ಫೆಬ್ರವರಿ 24 ರೊಳಗೆ ಅರ್ಜಿ ಸಲ್ಲಿಸಬಹುದು ಎಂದು ಅಧ್ಯಯನ ಕೇಂದ್ರದ ಸದಸ್ಯ ಕಾರ್ಯದರ್ಶಿ ಎನ್. ಕರಿಯಪ್ಪ ತಿಳಿಸಿದ್ದಾರೆ.

ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಚಿಕ್ಕಬಳ್ಳಾಪುರ: ಮೆಟ್ರಿಕ್-ನಂತರದ ಕೋರ್ಸುಗಳ ಒಬಿಸಿ ವಿದ್ಯಾರ್ಥಿಗಳು ಬಿಸಿಎಂ ಇಲಾಖೆಯಿಂದ ನೀಡಲಾಗುತ್ತಿರುವ ಶುಲ್ಕ ಮರುಪಾವತಿ ಕಾರ್ಯಕ್ರಮದ ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದ್ದು,ಅವಧಿಯನ್ನು ಮಾರ್ಚ್ 10 ರವರೆಗೆ ವಿಸ್ತರಿಲಾಗಿದೆ.ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕಾದ ವೆಬ್‌ಸೈಟ್ ವಿಳಾಸ ಪೋಸ್ಟ್ ಮೆಟ್ರಿಕ್ ವೆಬ್‌ಸೈಟ್ ಕಾರ್ಯಕ್ರಮದ ವಿವರ, ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳು ಹಾಗೂ ವಿದ್ಯಾರ್ಥಿವೇತನಕ್ಕೆ ಸಂಬಂಧಿಸಿದ ಮಾಹಿತಿಗಾಗಿ ಸಹಾಯವಾಣಿ ಸಂಖ್ಯೆ 8050770005 ಸಂಪರ್ಕಿಸಬಹುದು.

{ಕೆ.ಎನ್.ರಾಜಣ್ಣ } ಸಚಿವ

ಮುಖ್ಯಮಂತ್ರಿ ಹುದ್ದೆ ಎರಡೂವರೆ ವರ್ಷಗಳಿಗೆ ಒಪ್ಪಂದ ಆಗಿದೆ ಎಂಬ ಬಗ್ಗೆ ಯಾವ ಪತ್ರದಲ್ಲಿಯೂ ಉಲ್ಲೇಖಿಸಿಲ್ಲ. 5 ವರ್ಷಗಳ ಕಾಲ ಸಿದ್ದರಾಮಯ್ಯನವರೇ ಮುಖ್ಯಮಂತ್ರಿಯಾಗಿ ಮುಂದುವರಿಯುತ್ತಾರೆ. ಈಗಾಗಲೇ ನಮ್ಮ ಪಕ್ಷದ ಹಿರಿಯ ಸಚಿವರಾದ ಡಾ. ಜಿ. ಪರಮೇಶ್ವರ್, ಎಚ್.ಸಿ. ಮಹದೇವಪ್ಪ, ಎಂ.ಬಿ. ಪಾಟೀಲ್ ಅವರು ಸಹ ಅದನ್ನೇ ಹೇಳಿದ್ದಾರೆ. ಹಾಗಾಗಿ ನಾನು ಅವರ ಮಾತನ್ನು ಪುನರುಚ್ಚರಿಸುವೆ.

ಬೆಂಗಳೂರಿನ 'ವಿಧಾನಸೌಧ ಚಲೋ' | ಎಂಎಲ್ಸಿ ಕೆ. ವಿವೇಕಾನಂದ ಎಚ್ಚರಿಕೆ

ಮಂಡ್ಯ ವಿವಿ ವಿಲೀನಕ್ಕೆ ವಿರೋಧ

ಮಂಡ್ಯ: ಮಂಡ್ಯ ಜಿಲ್ಲೆಯ ಜನರ ಬಹುದಿನಗಳ ಕನಸಾದ ಮಂಡ್ಯ ವಿಶ್ವವಿದ್ಯಾನಿಲಯವನ್ನು ರಾಜ್ಯ ಸರಕಾರ ಮೈಸೂರು ವಿವಿಯೊಂದಿಗೆ ವಿಲೀನಗೊಳಿಸಲು ಮುಂದಾದರೆ ನಗರದ ಜಿಲ್ಲಾಧಿಕಾರಿ ಕಚೇರಿಯಿಂದ ಬೆಂಗಳೂರಿನ ವಿಧಾನಸೌಧದವರೆಗೆ ಪ್ರತಿಭಟನಾ ರ‍್ಯಾಲಿ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ಎಚ್ಚರಿಸಿದರು.

ಶನಿವಾರ ನಗರದ ಮಂಡ್ಯ ವಿವಿಯ ಆಡಳಿತ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಂಡ್ಯ ವಿಶ್ವವಿದ್ಯಾನಿಲಯ ಜಿಲ್ಲೆಯ ಜನರ ಬಹುದಿನದ ಕನಸಾಗಿದೆ. ಸುಮಾರು 40 ಕಿಲೋ ಮೀಟರ್‌ನಿಂದ ರೈತರ ಮಕ್ಕಳು ಕಾಲೇಜಿಗೆ ಬರುತ್ತಿದ್ದಾರೆ. 2019ರಲ್ಲಿ ವಿವಿ ಆರಂಭವಾದಾಗ 2 ಸಾವಿರ ವಿದ್ಯಾರ್ಥಿಗಳು ಸೇರ್ಪಡೆಯಾಗಿದ್ದರು. ಈಗ ಕೇವಲ 6 ವರ್ಷದಲ್ಲಿ ನಾಲ್ಕೂವರೆ ಸಾವಿರ ವಿದ್ಯಾರ್ಥಿಗಳು ಸೇರ್ಪಡೆಗೊಂಡಿದ್ದಾರೆ. ಇಂತಹ ವಿವಿ ಮುಚ್ಚುವುದು ಅಥವಾ ವಿಲೀನ ಮಾಡುವುದೆಂದರೆ ಹೇಗೆ ಎಂದು ಪ್ರಶ್ನಿಸಿದರು.

> **ಮಂಡ್ಯ ವಿವಿ ಮುಚ್ಚಿದರೆ ನಮ್ಮ ಉಗ್ರ ಹೋರಾಟ**
>
> **ರಾಜಕೀಯವನ್ನು ಬದಿಗಿಟ್ಟು ಓದುವ ಮಕ್ಕಳಿಗೆ ಅವಕಾಶ ಕೊಡುವ ಶಿಕ್ಷಣ ಸಂಸ್ಥೆಗಳನ್ನು ಉಳಿಸಬೇಕಾಗಿದೆ. ಇಲ್ಲಿ ವಿದೇಶಿ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಡಿಸಿಎಂ ಡಿಕೆಶಿ ಮತ್ತು ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್ ಸಹ ಈ ಬಗ್ಗೆ ಗಮನ ಹರಿಸಬೇಕು. ಈ ವಿವಿಯನ್ನು ಮುಚ್ಚುತ್ತೇವೆಂದರೆ ನಾವು ಉಗ್ರ ಹೋರಾಟ ಮಾಡಬೇಕಾಗುತ್ತದೆ ಎಂದು ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ಎಚ್ಚರಿಸಿದರು.**

ಸರಕಾರ ಈ ವಿವಿಯನ್ನು ಉಳಿಸಿಕೊಡಬೇಕು. ಮಂಡ್ಯ ಜಿಲ್ಲೆಯ ಗ್ರಾಮೀಣ ಪ್ರದೇಶ ಮತ್ತು ರೈತರು ಮಕ್ಕಳು, 40 ಕಿ.ಮೀ. ವ್ಯಾಪ್ತಿಯಿಂದ ಇಲ್ಲಿಗೆ ಬರುತ್ತಾರೆ. ಈ ಸಂಸ್ಥೆಯು ಉಳಿಯಬೇಕು. ಖಾಸಗಿ ಸಂಸ್ಥೆ, ಖಾಸಗಿ ಯೂನಿವರ್ಸಿಟಿಗಳನ್ನು ಸರಕಾರಗಳು ಹಲವೆಡೆ ಮಂಜೂರು ಮಾಡಿದ್ದಾರೆ. ಮಂಡ್ಯ, ಮೈಸೂರಲ್ಲಿ 2 ವಿವಿಗಳನ್ನು ಹೊಸದಾಗಿ ಆರಂಭಿಸಲು ಅವಕಾಶ ನೀಡಿರುವ ಸರಕಾರ ಅವುಗಳನ್ನು ಬೇಕಾದರೆ ನಿಲ್ಲಿಸಿ, ಮಂಡ್ಯ ವಿವಿಗೆ ಅನುಮತಿ ಕೊಡಲಿ ಎಂದರು.

ಮಾಜಿ ಸಚಿವ ಕೆ.ವಿ.ಶಂಕರಗೌಡರು ಶ್ರಮಪಟ್ಟು ಈ ಕಾಲೇಜನ್ನು ತಂದಿದ್ದಾರೆ. 29 ಎಕರೆಯಲ್ಲಿರುವ ಯೂನಿವರ್ಸಿಟಿಗೆ ತೂಬಿನಕೆರೆ ಬಳಿ 99 ಎಕರೆ ಜಾಗವಿದೆ. ಆ ಜಾಗವನ್ನು 1 ಎಕರೆಗೆ 1 ರೂ.ನಂತೆ ರೈತರು ಆಗಿನ ಕಾಲದಲ್ಲಿ ದಾನ ಮಾಡಿದ್ದಾರೆ. ಯಾರೂ ಅನುದಾನ ಕೇಳಿಲ್ಲ, ಸ್ವಯಂಪ್ರೇರಿತವಾಗಂತೂ ಅನುದಾನ ನೀಡಿಲ್ಲ. ಈಗ ವಿವಿಯನ್ನು ಮುಚ್ಚುತ್ತೇವೆಂಬುದು ಎಷ್ಟು ಸರಿ ಎಂದು ಪ್ರಶ್ನಿಸಿದರು.

ವಿವಿ ವಿಚಾರದಲ್ಲಿ ನೀವು ಹೊಂದಿರುವ ನಿಲುವನ್ನು ಶೀಘ್ರದಲ್ಲೇ ವಾಪಸ್ ಪಡೆಯಿರಿ. ತಮಿಳುನಾಡಿನಲ್ಲಿ ಜಿಲ್ಲೆಗೊಂದು ವಿವಿ ಇದೆ. ಪಕ್ಕದ ರಾಜ್ಯದಲ್ಲಿ ಹೀಗಿರುವಾಗ ನಮ್ಮ ರಾಜ್ಯದ 9 ವಿವಿಗಳನ್ನು ಮುಚ್ಚುವುದಾದರೆ ಮಕ್ಕಳ ಸ್ಥಿತಿ ಏನಾಗಬಹುದು? ಇಲ್ಲಿ ಎರಡು ಕಾನ್ವೋಕೇಷನ್‌ಗಳನ್ನು ಈಗಾಗಲೇ ನೀಡಲಾಗಿದೆ. ಎಂಬಿಎ, ಎಂಸಿಎ ಹೊಸ ಕೋರ್ಸ್ ತೆರೆಯಲಾಗಿದೆ. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ತವರು ಜಿಲ್ಲೆ ರಾಮನಗರಕ್ಕೆ ಐಐಟಿ, ಮೆಡಿಕಲ್ ಕಾಲೇಜು, ರಾಜೀವ್‌ಗಾಂಧಿ ವಿವಿ ಬೇಕು ಎನ್ನುತ್ತಾರೆ. ಆದರೆ ಅವರ ಪಕ್ಕದ ಜಿಲ್ಲೆ ಮಂಡ್ಯಗೆ ಮಂಜೂರಾಗಿರುವ ವಿವಿ ಮುಚ್ಚುತ್ತೇನೆಂದು ಹೇಳುತ್ತಿರುವುದು ಒಳ್ಳೆಯ ಬೆಳವಣಿಗೆ ಅಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಆರೋಗ್ಯದ ಕಾಳಜಿ ವಹಿಸಿ

ಚನ್ನಪಟ್ಟಣ ತಾಲೂಕಿನ ಮೈಲನಾಯಕನ ಹೊಸಹಳ್ಳಿ ಶಾಲೆಯಲ್ಲಿ ಉಚಿತ ಶಿಬಿರ ಹಮ್ಮಿಕೊಳ್ಳಲಾಗಿತ್ತು.

ಚನ್ನಪಟ್ಟಣ: ಗ್ರಾಮೀಣ ಭಾಗದ ಜನತೆ ಒತ್ತಡದ ಕೆಲಸಗಳ ನಡುವೆ ಆರೋಗ್ಯದ ಬಗ್ಗೆಯೂ ಕಾಳಜಿ ವಹಿಸಬೇಕು ಎಂದು ಕಾಂಗ್ರೆಸ್ ಮುಖಂಡ ಕರುಣ್ ಆನಂದ್ ಹೇಳಿದರು.

ತಾಲೂಕಿನ ಮೈಲನಾಯಕನಹೊಸಹಳ್ಳಿ ಗ್ರಾಮ ದ ಶಾಲೆಯಲ್ಲಿ ಸಮೃದ್ಧಿ ಪೀಪಲ್ಸ್ ಸರ್ವಿಸ್ ಟ್ರಸ್ಟ್, ಅಕ್ಷಯ ಪಬ್ಲಿಕ್ ಸ್ಕೂಲ್, ಎಂ.ಎಸ್. ರಾಮಯ್ಯ ವೈದ್ಯಕೀಯ ಕಾಲೇಜು ಸಹಯೋಗದಲ್ಲಿ ಹಮ್ಮಿ ಕೊಳ್ಳಲಾಗಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರ ಉದ್ಘಾಟಿಸಿ ಮಾತನಾಡಿದರು. ಗ್ರಾಮೀಣ ಜನತೆ ತಮ್ಮ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸುವುದಿಲ್ಲ, ಇದರಿಂದಾಗಿ ದೀರ್ಘ ಕಾಲ ಕಾಡುವ ಸಕ್ಕರೆ ಕಾಯಿಲೆ, ರಕ್ತದೊತ್ತಡ ದಂತಹ ಕಾಯಿಲೆಗಳು ಉಲ್ಬಣಗೊಂಡು ಹೆಚ್ಚಿನ ಸಮಸ್ಯೆ ಆಗುತ್ತವೆ.

ಕಾಲಕಾಲಕ್ಕೆ ಆರೋಗ್ಯ ತಪಾಸಣೆ ಮಾಡಿಸಿಕೊಂಡು ಚಿಕಿತ್ಸೆ ಪಡೆಯಬೇಕು ಎಂದರು. ಶಿಬಿರದಲ್ಲಿ ತಜ್ಞ ವೈದ್ಯರಿಂದ ಸುಮಾರು 500ಕ್ಕೂ ಹೆಚ್ಚು ಮಂದಿ ಭಾಗವಹಿಸಿ ಪ್ರಯೋಜನ ಪಡೆದರು. ಸಮೃದ್ಧಿ ಪೀಪಲ್ಸ್ ಸರ್ವಿಸ್ ಟ್ರಸ್ಟ್‌ನ ರವಿಕುಮಾರ್, ವೈದ್ಯ ರಾದ ಡಾ. ಕಾವ್ಯ, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಸದಸ್ಯ ಮೈಲನಾಯಕನಹಳ್ಳಿ ರಮೇಶ್, ಎಂ.ಎಸ್. ರಾಮಯ್ಯ ಆಸ್ಪತ್ರೆ ವೈದ್ಯರು ಹಲವರಿದ್ದರು.

ಮೈಸೂರಿನ ವಿದ್ಯಾವರ್ಧಕ ಪಾಲಿಟೆಕ್ನಿಕ್ ಕಾಲೇಜಿನ ಕೆ.ರಾಮಕೃಷ್ಣಪ್ಪ ಸಭಾಂಗಣದಲ್ಲಿಎನ್‌ಎಸ್‌ಎಸ್ ಘಟಕದ ವತಿಯಿಂದ ಜಯದೇವ ಹೃದ್ರೋಗ ಆಸ್ಪತ್ರೆ ಹಾಗೂ ಇನ್ನರ್‌ವ್ಹೀಲ್‌ಕ್ಲಬ್ ಸಹಯೋಗದೊಂದಿಗೆ ರಕ್ತದಾನ ಶಿಬಿರ ನಡೆಯಿತು. ವಿದ್ಯಾವರ್ಧಕ ಸಂಘದ ಗೌ.ಕಾರ್ಯದರ್ಶಿ ಪಿ. ವಿಶ್ವನಾಥ್ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅಥಿತಿಗಳಾಗಿ ರಕ್ತನಿಧಿ ಅಧಿಕಾರಿ ಡಾ.ರಶ್ಮಿ, ಇನ್ನರ್‌ವ್ಹೀಲ್ ಕ್ಲಬ್ ಅಧ್ಯಕ್ಷೆ ಶಶಿಕಲಾ ಸುರೇಶ್, ಕಾರ್ಯದರ್ಶಿ ಭವಾನಿ ಚಂದ್ರ, ಖಜಾಂಚಿ ರಾಜೇಶ್ವರಿ ನಟರಾಜ್ ಭಾಗವಹಿಸಿದ್ದರು. ಕಾಲೇಜಿನ ಪ್ರಾಂಶುಪಾಲರಾದ ಡಾ.ಕೃಷ್ಣ, ಶಿಬಿರದ ಸಂಚಾಲಕ ರಾಕೇಶ್ ಬಾಬು ಡಿ.ಸಿ. ಉಪಸ್ಥಿತರಿದ್ದರು.

ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಚಿಕ್ಕಬಳ್ಳಾಪುರ : ಪ್ರವಾಸೋದ್ಯಮ ಇಲಾಖೆ ವತಿಯಿಂದ ಎಸ್.ಸ್.ಎಸ್.ಪಿ/ಟಿ.ಎಸ್.ಪಿ ಯೋಜನೆ ಆಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಣ್ಣ ಉದ್ಯಮಿದಾರರಿಗೆ ಒಂದು ತಿಂಗಳ ಕೌಶಲ್ಯಾಭಿವೃದ್ಧಿ ತರಬೇತಿಯನ್ನು ನೀಡುವುದು. ಮೊಬೈಲ್ ಕ್ಯಾಂಟೀನ್ ನಡೆಸಲು ಸಹಾಯಧನ ನೀಡಲು ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಕೆ ಅವಧಿಯನ್ನು ಫೆಬ್ರವರಿ 24 ರ ವರೆಗೆ ವಿಸ್ತರಿಸಲಾಗಿದೆ. ತರಬೇತಿ ಹಾಗೂ ಸಹಾಯಧನಕ್ಕಾಗಿ ಪರಿಶಿಷ್ಟ ಜಾತಿಗೆ ಸೇರಿದ 7ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿದ 5 ಮಂದಿಗೆ ಅವಕಾಶ.ಆಸಕ್ತರು ಸಹಾಯಕ ನಿರ್ದೇಶಕರ ಕಚೇರಿ, ಪ್ರವಾಸೋದ್ಯಮ ಇಲಾಖೆ, ಚಿಕ್ಕವಳ್ಳಾಪುರ ಇಲ್ಲಿ ಅರ್ಜಿಗಳನ್ನು ಪಡೆದು ಅಗತ್ಯ ದಾಖಲಾತಿಳೊಂದಿಗೆ ಸಲ್ಲಿಸಬಹುದಾಗಿದೆ. ಮಾಹಿತಿಗೆ ದೂ.ಸಂ 08156-277041 ಸಂಪರ್ಕಿಸಬಹುದು.

ಗ್ರಾಮಾಧಿಕಾರಿಗಳ ಧರಣಿ, ವಿದ್ಯಾರ್ಥಿಗಳಿಗೆ ತೊಂದರೆ

ತಿ.ನರಸೀಪುರ: ಗ್ರಾಮಾಡಳಿತ ಅಧಿಕಾರಿಗಳು ನಡೆಸುತ್ತಿರುವ ಅನಿರ್ದಿಷ್ಟಾವಧಿ ಮುಷ್ಕರವನ್ನು ಹಿಂಪಡೆಯುವುದಿಲ್ಲ ಎಂದು ತಾ. ಗ್ರಾಮ ಆಡಳಿತ ಅಧಿಕಾರಿ ಸಂಘದ ಅಧ್ಯಕ್ಷ ಎಂ.ಎಸ್.ಆನಂದ್ ಅವರು ಹೇಳಿದರು.

ಪಟ್ಟಣದ ಮಿನಿ ವಿಧಾನಸೌಧ ಮುಂದೆ ನಡೆದ ಮುಷ್ಕರ ಉದ್ದೇಶಿಸಿ ಅವರು ಮಾತನಾಡಿದರು. ಗ್ರಾಮೀಣ ಮಟ್ಟದಲ್ಲಿ ಕಾರ್ಯನಿರ್ವಹಿಸಲು ಸೌಕರ್ಯಗಳನ್ನು ಒದಗಿಸಬೇಕು. ಅಂತರ್ ಜಿಲ್ಲೆ ವರ್ಗಾವಣೆಯಲ್ಲಿ 16ಎ ನಿಯಮವನ್ನು ಪಾಲನೆ ಮಾಡಬೇಕು. ನಮ್ಮ ಬೇಡಿಕೆ ಈಡೇರಿಸದಿದ್ದರೆ ನಮ್ಮ ಧರಣಿ ಮುಂದುವರೆಸಲಾಗುವುದು ಎಂದರು. ಗ್ರಾಮ ಆಡಳಿತ ಅಧಿಕಾರಿಗಳ ಪ್ರತಿಭಟನೆಗೆ ದಲಿತ ಸಂಘರ್ಷ ಸಮಿತಿ ಹಾಗೂ ರೈತ ಸಂಘಟನೆಗಳು ಮತ್ತು ಜಿಲ್ಲಾ ನಾಗರಿಕ ವೇದಿಕೆ ಸಂಘಟನೆಗಳು ಬೆಂಬಲ ಸೂಚಿಸಿದವು.

ಜಿಲ್ಲಾ ನಾಗರೀಕ ವೇದಿಕೆಯ ಕರೋಹಟ್ಟಿ ಪ್ರಭುಸ್ವಾಮಿ ಮಾತನಾಡಿ, ಗ್ರಾಮ ಆಡಳಿತ ಅಧಿಕಾರಿಗಳ ಪ್ರತಿಭಟನೆಯಿಂದ ಗ್ರಾಮೀಣ ಪ್ರದೇಶದಲ್ಲಿ ವಿದ್ಯಾರ್ಥಿಗಳು ಸಾಕಷ್ಟು ತೊಂದರೆ ಅನುಭವಿಸುತ್ತಿದ್ದು, ಪಿಯುಸಿ ಮತ್ತು ಸಿಇಟಿ ಪರೀಕ್ಷೆಗಳಿಗೆ ಅಗತ್ಯ ದಾಖಲಾತಿಗಳನ್ನು ಸಲ್ಲಿಸಲು ಸಾಧ್ಯವಾಗುತ್ತಿಲ್ಲ. ಕಂದಾಯ ಇಲಾಖೆಯಿಂದ ಹಲವಾರು ದೃಢೀಕೃತ ಪ್ರಮಾಣ ಪತ್ರಗಳನ್ನು ಪಡೆಯಲು ಸಾಕಷ್ಟು ತೊಂದರೆಯಾಗುತ್ತಿದೆ ಎಂದರು. ರೈತ ಮುಖಂಡ ಬನ್ನೂರು ನಾರಾ ಯಣ, ಕರೋಹಟ್ಟಿ ಕುಮಾರಸ್ವಾಮಿ, ಕಳ್ಳಿಪುರ ಮಹದೇವಸ್ವಾಮಿ, ಓಂಕಾರ ಮೂರ್ತಿ, ಕೆ. ಎಂ. ಶಾಂತರಾಜು, ಮಲ್ಲಿಕಾರ್ಜುನಸ್ವಾಮಿ, ಎಂ.ಸಿದ್ದರಾಜು, ಹಲವಾರ ಗುರುಸ್ವಾಮಿ ಇದ್ದರು.



ಜಿಲ್ಲೆಯ ಎರಡು ದೇವಾಲಯ | ಭಕ್ತರಲ್ಲಿ ಕಾತುರ

ಶಿವರಾತ್ರಿಗೆ ಸೂರ್ಯರಶ್ಮಿ ಸ್ಪರ್ಶ !

ರಂಗನಾಥ ಕೆ.ಹೊನ್ನಮರಡಿ ತುಮಕೂರು

ಶಿವರಾತ್ರಿ ಹಾಗೂ ಮಾರನೇ ದಿನ ಜಿಲ್ಲೆಯ ಎರಡು ಐತಿಹಾಸಿಕ ಪುರಾತನ ದೇವಾಲಯಗಳಲ್ಲಿ ಸೂರ್ಯನ ಕಿರಣ ಶಿವನ ಲಿಂಗವನ್ನು ಸ್ಪರ್ಶಿಸುವ ಅಭೂತಪೂರ್ವ ಪ್ರಸಂಗ ನಡೆಯಲಿದೆ.

ನಗರದ ಚಿಕ್ಕಪೇಟೆಯ ಸಾವಿರಕ್ಕೂ ಅಧಿಕ ವರ್ಷ ಪುರಾತನವಾದ ಪಾರ್ವತಿ ಸಮೇತ ಶ್ರೀ ಪ್ರಸನ್ನ ಗಂಗಾಧರೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಶಿವರಾತ್ರಿಯ ದಿನದಂದು ಸೂರ್ಯರಶ್ಮಿ ಲಿಂಗವನ್ನು ಸ್ಪರ್ಶಿಸಲಿದೆ. ಈ ಪ್ರಸಂಗವನ್ನು ಕಣ್ತುಂಬಿಕೊಳ್ಳಲು ಭಕ್ತರು ಕಾತರದಿಂದ ಕಾಯುತ್ತಾರೆ. ರಾಜ್ಯದ ವಿವಿಧ ಭಾಗಗಳಿಂದ ಪ್ರತಿ ವರ್ಷ ಅಧಿಕ ಸಂಖ್ಯೆಯಲ್ಲಿ ಭಕ್ತರು ಆಗಮಿಸುತ್ತಾರೆ.

ಲಿಂಗ ಸ್ಪರ್ಶ : ಶಿವರಾತ್ರಿಯ ಮಾರನೇ ದಿನ ತಾಲೂಕಿನ ಹಿರೇತೊಟ್ಲುಕೆರೆಯ 350 ವರ್ಷ ಪುರಾತನವಾದ ನೊಳಂಬ ಅರಸರು ಪ್ರತಿಷ್ಠಾಪಿಸಿರುವ ಸೋಮೇಶ್ವರ ದೇವಾಲಯದಲ್ಲಿ ಸೂರ್ಯನ ಕಿರಣ ಲಿಂಗವನ್ನು ಸ್ಪರ್ಶಿಸುತ್ತದೆ. ಭಕ್ತರು ತಮ್ಮ ಇಷ್ಟಾರ್ಥ ನೆರವೇರಲು ಈ ದಿನದಂದು ದೇವರಲ್ಲಿ ಪ್ರಾರ್ಥಿಸುವ ಮೂಲಕ ಸೂರ್ಯನ ಕಿರಣ ಲಿಂಗವನ್ನು ಸ್ಪರ್ಶಿಸುವುದನ್ನು ಕಂಡು ಕಣ್ತುಂಬಿಕೊಳ್ಳಲಿದ್ದಾರೆ. ವರ್ಷಕ್ಕೊಮ್ಮೆ ಈ ವಿಸ್ಮಯ ಜರುಗುತ್ತದೆ. ಸೂರ್ಯರಶ್ಮಿ ಸ್ಪರ್ಶಿಸುವ ಸುಸಂದರ್ಭದಲ್ಲಿ ದೇವಾಲಯಗಳಲ್ಲಿ ವಿಶೇಷ ಪೂಜಾ ಕೈಂಕರ್ಯಗಳನ್ನು ಏರ್ಪಡಿಸಲಾಗುತ್ತದೆ.

> **ಶಿವರಾತ್ರಿ ಮರುದಿನ ಶ್ರೀ ಸೋಮೇಶ್ವರನ ಮೇಲೆ ಸೂರ್ಯರಶ್ಮಿ ಸ್ಪರ್ಶಿಸುವ ವಿಸ್ಮಯ ಕಣ್ತುಂಬಿಕೊಳ್ಳಲು ರಾಜ್ಯದ ವಿವಿಧ ಮೂಲೆಗಳಿಂದ ಭಕ್ತರು ಆಗಮಿಸಿ ಪುನೀತರಾಗುತ್ತಾರೆ. ಪ್ರತಿ ವರ್ಷ ಭಕ್ತರ ಸಂಖ್ಯೆ ಹೆಚ್ಚುತ್ತಿದೆ.**
>
> **- ಚಂದ್ರಶೇಖರ್ ಆರಾಧ್ಯ,ಅರ್ಚಕರು, ಶ್ರೀಸೋಮೇಶ್ವರ ದೇವಸ್ಥಾನ**

ನಿವೇಶನ ಫಲಾನುಭವಿಗಳಿಗೆ ಹಕ್ಕು ಪತ್ರ ವಿತರಣೆ

ಖಾಲಿ ನಿವೇಶನಗಳನ್ನು ಕಳೆದಕೊಂಡ ಫಲಾನುಭವಿಗಳಿಗೆ ಶಾಸಕ ಎಸ್ ಎನ್ ಸುಬ್ಬಾರೆಡ್ಡಿ ಹಕ್ಕು ಪತ್ರಗಳನ್ನು ವಿತರಿಸಿದರು .

ಗುಡಿಬಂಡೆ : ಪಟ್ಟಣದ ಮುಖ್ಯ ರಸ್ತೆ ಅಗಲೀಕರಣ ವೇಳೆ ಮನೆ ಮತ್ತು ಖಾಲಿ ನಿವೇಶನಗಳನ್ನು ಕಳೆದಕೊಂಡ ಫಲಾನುಭವಿಗಳಿಗೆ ಶಾಸಕ ಎಸ್.ಎನ್.ಸುಬ್ಬಾರೆಡ್ಡಿಯವರು ಹಕ್ಕು ಪತ್ರಗಳನ್ನು ವಿತರಣೆ ಮಾಡಿದರು.

ನಗರದ ಆಶ್ರಯ ಬಡಾವಣೆಯಲ್ಲಿ ತಾಲೂಕು ಆಡಳಿತ ಹಾಗೂ ಪೌರಾಡಳಿತ ಇಲಾಖೆ, ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಮುಖ್ಯರಸ್ತೆ ಅಗಲೀಕರಣ ಸಂದರ್ಭದಲ್ಲಿ ಮನೆ ನಿವೇಶನ ಕಳೆದುಕೊಂಡಿರುವ ಫಲಾನುಭವಿಗಳಿಗೆ ನಗರ ಆಶ್ರಯ ಯೋಜನೆಯಡಿ ಉಚಿತ ನಿವೇಶನಗಳ ಹಕ್ಕುಪತ್ರ ವಿತರಣಾ ಸಮಾರಂಭದಲ್ಲಿ ಮಾತನಾಡಿದರು.

ರಸ್ತೆ ಅಗಲೀಕರಣವಾಗಿ ಸರಿಸುಮಾರು 10 ವರ್ಷಗಳು ಕಳೆಯುತ್ತಿದ್ದೇವೆ, ಈಗಾಗಲೇ ನಿವೇಶನಗಳನ್ನು ಕೊಡಬೇಕಾಗಿತ್ತು. ತಡವಾದರೂ ಕ್ರಮಬದ್ಧವಾಗಿ ಹಕ್ಕುಪತ್ರಗಳನ್ನು ವಿತರಿಸಲು ಕ್ರಮವಹಿಸಿದ್ದು ಈಗ 40 ಜನ ಫಲಾನುಭವಿಗಳಿಗೆ ಹಕ್ಕು ಪತ್ರಗಳನ್ನು ವಿತರಿಸುತ್ತಿದ್ದೇವೆ ಎಂದರು.

20-30 ಅಳತೆಯ ಖಾಲಿ ನಿವೇಶನಗಳನ್ನು ಹಂಚಿಕೆ ಮಾಡಿದ್ದು ಸುಮಾರು 350ಕ್ಕೂ ಹೆಚ್ಚು ಜನ ಮನೆ ನಿವೇಶನಗಳನ್ನು ಕಳೆದುಕೊಂಡಿದ್ದಾರೆ. ಇವರೆಲ್ಲರಿಗೂ ಆರು ತಿಂಗಳ ಒಳಗೆ ನಿವೇಶನಗಳನ್ನು ಕೊಟ್ಟು ತೀರುತ್ತೇನೆ. ಯಾರೂ ಮಾರಿಕೊಳ್ಳುವಂತಹ ಕೆಲಸ ಮಾಡಬೇಡಿ ಎಂದು ಮನವಿ ಮಾಡಿಕೊಂಡರು .

ಈ ಸಂದರ್ಭದಲ್ಲಿ ಇಒ ನಾಗಮಣಿ, ಆರಕ್ಷಕ ವೃತ್ತ ನಿರೀಕ್ಷಕ ನಯಾಜ್ ಬೇಗ್, ಪಟ್ಟಣ ಪಂಚಾಯಿತ್ತಿ ಅಧ್ಯಕ್ಷ ವಿಕಾಸ್ , ಉಪಾಧ್ಯಕ್ಷ ಗಂಗರಾಜು , ಸದಸ್ಯರಾದ ರಾಜೇಶ್ , ಅನುಷಾ, ಬಷೀರ್ ಅಹ್ಮದ್ , ಬಷೀರಾ ರೀಜ್ವಾನ್ , ಇಸ್ಮಾಯಿಲ್ ಅಜಾದ್ , ವೀಣಾ ನಿತಿನ್, ನಗೀನಾ ತಾಜ್ , ಮಂಜುಳ ಕೆ ಎನ್ , ನಾಮ ನಿರ್ದೇಶಿತ ಸದಸ್ಯರಾದ ಅಂಬರೀಶ್, ಬಾಲಾಜಿ, ಆದಿನಾರಾಯಣ, ಮಂಜುನಾಥ್ ಬಿ, ನಾಗರಾಜ್, ಫಯಾಜ್, ಪಟ್ಟಣ ಪಂಚಾಯಿತ್ತಿ ಮುಖ್ಯಾಧಿಕಾರಿ ಸಭಾ ಶರೀನಾ, ಮುಖಂಡರಾದ ರಘುನಾಥ್ ರೆಡ್ಡಿ , ಕೆಡಿಪಿ ಸದಸ್ಯ ಹೆಚ್ ಪಿ ಲಕ್ಷ್ಮೀನಾರಾಯಣ, ಸೇರಿದ್ದಂತೆ ಇನ್ನಿತರರು ಉಪಸ್ಥಿತರಿದ್ದರು .

ಮದ್ದೂರು ಎಳನೀರು ವ್ಯಾಪಾರ | ಮುಖ್ಯ ದ್ವಾರಕ್ಕೆ ಬೀಗ ಜಡಿದು ಆಕ್ರೋಶ

ಎಪಿಎಂಸಿ ವರ್ತಕರ ಪ್ರತಿಭಟನೆ

ಮದ್ದೂರು: ಎಪಿಎಂಸಿ ಕಾಯಿದೆಯನ್ನು ಉಲ್ಲಂಘಿಸಿ ಕೆಲ ವರ್ತಕರು ಮಾರುಕಟ್ಟೆ ಆವರಣದಿಂದ ಸುತ್ತಮುತ್ತ ಎಳನೀರು ವ್ಯಾಪಾರ ವಹಿವಾಟು ನಡೆಸುತ್ತಿರುವ ಕ್ರಮ ಖಂಡಿಸಿ ಮದ್ದೂರು ಎಪಿಎಂಸಿ ವರ್ತಕರು ಆಡಳಿತ ಕಚೇರಿ ಮತ್ತು ಮುಖ್ಯ ದ್ವಾರಕ್ಕೆ ಬೀಗ ಜಡಿದು ಪ್ರತಿಭಟನೆ ನಡೆಸಿದರು.

ಪಟ್ಟಣದ ಎ.ಪಿ.ಎಂ.ಸಿ ಆಡಳಿತ ಕಚೇರಿ ಬಳಿ ಆಗಮಿಸಿದ ವರ್ತಕರು, ಹಮಾಲಿಗಳು, ವ್ಯಾಪಾರಸ್ಥರು, ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿ ತಮ್ಮ ಆಕ್ರೋಶ ವ್ಯಕ್ತಪಡಿಸಿದರಲ್ಲದೆ ಕೂಡಲೇ ಕ್ರಮ ವಹಿಸುವಂತೆ ಒತ್ತಾಯಿಸಿದರು. ಮಂಡ್ಯ ತಾಲೂಕಿನ ಎ.ಪಿ.ಎಂ.ಸಿ ಎಳನೀರು ಮಾರುಕಟ್ಟೆಯಲ್ಲಿನ ಕೆಲ ವರ್ತಕರು ವಿವಿಧ ಗ್ರಾಮಗಳಲ್ಲಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಲಾರಿಗಳನ್ನು ನಿಲ್ಲಿಸಿ ಅಲ್ಲಿಯೇ ವ್ಯಾಪಾರ ವಹಿವಾಟು ನಡೆಸುತ್ತಿರುವ ಕ್ರಮವನ್ನು ಖಂಡಿಸಿದರು.

ಮಂಡ್ಯ ತಾಲೂಕಿಗಷ್ಟೇ ಅಧಿಕಾರಿಗಳು ಅನುಮತಿ ನೀಡಿದ್ದು ಇತರೆ ತಾಲೂಕುಗಳಲ್ಲೂ ಎಳನೀರು ವ್ಯಾಪಾರ ವಹಿವಾಟು ನಡೆಸಲು ಅನುಮತಿ ನೀಡುವಂತೆ ಮಂಡ್ಯ ತಾಲೂಕಿಗೆ ಒಂದು ಕಾನೂನು, ಮದ್ದೂರು ತಾಲೂಕಿಗೆ ಒಂದು ಕಾನೂನೇ ಎಂದು ಕಿಡಿಕಾರಿದ ಪ್ರತಿಭಟನೆಕಾರರು ತಮಗೂ ಅವಕಾಶ ಕಲ್ಪಿಸಿದಲ್ಲಿ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವ್ಯಾಪಾರ ವಹಿವಾಟು ನಡೆಸುವುದಾಗಿ ತಿಳಿಸಿದರು. ಬೇರೆಡೆ ಎಳನೀರು ವ್ಯಾಪಾರ ಮಾಡುತ್ತಿರುವುದರಿಂದ ರೈತರು ಮಾರುಕಟ್ಟೆಗಳಿಗೆ ಆಗಮಿಸದೆ ರಸ್ತೆ ಬದಿ ವರ್ತಕರಿಗೆ ಎಳನೀರು ಮಾರಾಟ ಮಾಡುತ್ತಿದ್ದು ಇದರಿಂದಾಗಿ ಮದ್ದೂರು ಎಳನೀರು ಮಾರುಕಟ್ಟೆಗೆ ಆಗಮಿಸದೆ ಲಾರಿ ಲೋಡ್‌ಗಳು ವಾರಗಟ್ಟಲೆ ಕಾಯಬೇಕಾದ ಅನಿವಾರ್ಯತೆ ಉಂಟಾಗಿದೆ ಎಂದು ಆರೋಪಿಸಿದರು.

ಮದ್ದೂರು ಎಪಿಎಂಸಿ ವರ್ತಕರು ಬೀಗ ಜಡಿದು ಪ್ರತಿಭಟನೆ ನಡೆಸಿದರು.

ಸ್ಥಳಕ್ಕಾಗಮಿಸಿದ ಎ.ಪಿ.ಎಂ.ಸಿ ಮಾರುಕಟ್ಟೆ ಜಿಲ್ಲಾ ಉಪನಿರ್ದೇಶಕಿ ರೇವತಿಬಾಯಿ, ಜಿಲ್ಲಾಧಿಕಾರಿಗಳು ಅನುಮತಿ ನೀಡಿರುವ ಬಗ್ಗೆ ತಮಗೆ ಮಾಹಿತಿ ಇಲ್ಲವಾಗಿದ್ದು ಸ್ಥಳೀಯ ಅಧಿಕಾರಿಗಳೊಟ್ಟಿಗೆ ಚರ್ಚಿಸಿ ಕ್ರಮ ವಹಿಸುವ ಭರವಸೆ ನೀಡಿದ ಬಳಿಕ ಪ್ರತಿಭಟನೆ ಹಿಂಪಡೆದರು.

ಪ್ರತಿಭಟನೆ ವೇಳೆ ಎ.ಪಿ.ಎಂ.ಸಿ ವರ್ತಕರ ಸಂಘದ ಉಪಾಧ್ಯಕ್ಷ ಉಮೇಶ್, ಕಾರ್ಯದರ್ಶಿ ರಾಜು, ಮುಖಂಡರಾದ ಎಸ್.ಶಿವರಾಜು, ಹೊನ್ನೇಶ್, ಶಿವಣ್ಣ, ಯೋಗೇಶ್, ಬಾಬು, ಸುನೀಲ್‌ಕುಮಾರ್, ಸತೀಶ್, ಇಂದುಕುಮಾರ್, ಪ್ರಕಾಶ್, ವಿನೋದ್‌ರಾಜ್, ಸಂದೀಪ್, ಅರುಣ್ ಕುಮಾರ್, ಮನು, ಸಿದ್ದರಾಜು, ಹಳ್ಳೀಕೆರೆ, ಪ್ರಸನ್ನ, ಪ್ರದೀಪ್, ರವಿ ಇತರರು ನೇತೃತ್ವ ವಹಿಸಿದರು.

ಮಠಗಳ ಸೇವೆಯ ಸಾಧನೆ ಅನನ್ಯ

ಹುಣಸೂರು: ನಾಡಿನೆಲ್ಲಡೆ ಅಕ್ಷರ,ಆರೋಗ್ಯ, ಅನ್ನ ದಾಸೋಹದ ಮೂಲಕ ವೀರಶೈವ ಮಠಗಳು ಕೆಲಸ ಮಾಡುತ್ತಿರುವುದು ಹೆಮ್ಮೆಯ ವಿಷಯವೆಂದು ಕೇಂದ್ರ ಕೈಗಾರಿಕಾ ಸಚಿವ ಎಚ್.ಡಿ. ಕುಮಾರಸ್ವಾಮಿ ತಿಳಿಸಿ ದರು. ತಾಲೊಕಿನ ಗಾವಡಗೆರೆ ಗುರುಲಿಂಗ ಜಂಗಮ ಮಠದ ಪೀಠಾಧ್ಯಕ್ಷ ಶ್ರೀ ನಟರಾಜ ಸ್ವಾಮಿಗಳ 50ನೇ ವರ್ಷದ ಚರ ಪಟ್ಟಾಧಿಕಾರದ ಸುವರ್ಣ ಮಹೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದರು. ನಾಡಿನಲ್ಲಿ ಉತ್ತ ಮ ಬದುಕಿನ ಸಹಬಾಳ್ವೆಗೆ ತಾಳ್ಮೆ, ಸಹನೆ, ಸಂಸ್ಕೃತಿಗೆ ಒತ್ತು ನೀಡುತ್ತಿರುವ ಮಠಗಳು ಸಮಾಜದ ಆರ್ಥಿಕ ಭದ್ರತೆಗೆ ಕೊಂಡಿಯಾಗಿವೆ. ನಮ್ಮ ಸನಾತನ ಧರ್ಮದ ಉಳಿವಿನಲ್ಲಿ ಮಾನ್ಯ ಮಠಗಳ ಪಾತ್ರ ದೊಡ್ಡದಿದ್ದು, ನಮ್ಮ ದೇಶದ ಸಂಸ್ಕೃತಿ ಬೆಳಸುವಲ್ಲಿ ನಮ್ಮ ಸುತ್ತಲಿನ ಮಠಗಳು ಜನತೆಗೆ ಆಶ್ರಯವಾಗಿ ನಿಂತಿವೆ ಎಂದರು. ಶಾಸಕ ಜಿ.ಡಿ.ಹರೀಶ್ ಗೌಡ ಮಾತನಾಡಿ, ಸಾವಿರಾರು ಮಕ್ಕಳಿಗೆ ಅಕ್ಷರ, ಅನ್ನ ನೀಡಿ ತಾಲೂಕಿಗೆ ಮಾದರಿಯಾಗಿ ಐದು ದಶಕಗಳ ಕಾಲ ಸುಧೀರ್ಘ ಸೇವೆ ಮಾಡುತ್ತಿರುವ ನಟರಾಜ ಸ್ವಾಮಿಗಳ ಸೇವೆ ಅನನ್ಯವೆಂದು ನೆನೆದರು. ಗುರುಲಿಂಗ ಮಠದ ಶ್ರೀ ನಟರಾಜ ಸ್ವಾಮಿ 50ನೇ ವರ್ಷದ ಚರ ಪಟ್ಟಾಧಿಕಾರ ಸ್ವೀಕರಿಸಿ ಮಾತನಾಡಿ, ಕಾರ್ಯಕ್ರಮ ಯಶಸ್ವಿಗೊಳಿಸಿದ ಎಲ್ಲರಿಗೂ ಧನ್ಯವಾದ ಎಂದು ತಿಳಿಸಿದರು. ಸುತ್ತೂರು ಮಠದ ಶ್ರೀಶಿವದೇಶಿಕೇಂದ್ರ, ಸ್ವಾಮಿ, ತುಮಕೂರು ಮಠದ ಶ್ರೀಸಿದ್ದಲಿಂಗಸ್ವಾಮಿ, ಬೇಬಿ ಮಠದ ಸ್ವಾಮಿ, ಮಾಜಿ ಸಚಿವ ಎಚ್.ವಿಶ್ವನಾಥ್, ಮಾಜಿ ಶಾಸಕ ಕೆ.ಮಹದೇವ್, ಇದ್ದರು.

ನಾಡು ನುಡಿ ರಕ್ಷಣೆ ಕನ್ನಡಿಗರ ಹೊಣೆ

ಶಿಡ್ಲಘಟ್ಟ: ನಾಡು ನುಡಿ ರಕ್ಷಣೆಗೆ ಮುಂದಾಗುವುದು ಪ್ರತಿಯೊಬ್ಬ ಸ್ವಾಭಿಮಾನಿ ಕನ್ನಡಿಗರ ಹೊಣೆ ಎಂದು ಕಾಂಗ್ರೆಸ್ ಮುಖಂಡ ಪುಟ್ಟು ಆಂಜಿನಪ್ಪ ತಿಳಿಸಿದರು.

ನಗರದ ಮಯೂರ ವೃತ್ತದಲ್ಲಿ ಶನಿವಾರ ಪುಟ್ಟು ಆಂಜಿನಪ್ಪ ಗೆಳೆಯರ ಸಮ್ಮುಖದಲ್ಲಿ ಏರ್ಪಡಿಸಿದ್ದ ಕಾರ್ಯಕ್ರ ಮದಲ್ಲಿ 10ನೇ ತಾಲೂಕು ಸಾಹಿತ್ಯ ಸಮ್ಮೇಳನಾಧ್ಯಕ್ಷ ರೂಪಸಿ ರಮೇಶ್ ಅವರಿಗೆ ಅಭಿನಂದಿಸಿ ಮಾತನಾಡಿದರು.

ರಸಋಷಿ ಕುವೆಂಪು ಹೇಳಿರುವಂತೆ ನಾಡಿನಲ್ಲಿನ ಕನ್ನಡಿಗರು ಎಲ್ಲೇ ಇದ್ದರೂ, ಹೇಗೆ ಇದ್ದರೂ ಎಂದೆಂದಿಗೂ ನಮ್ಮ ಹೃದಯ ಕನ್ನಡತನದಿಂದ ಕೂಡಿರಬೇಕು.ಕನ್ನಡಾಭಿಮಾನ ಒಂದಿದ್ದರೆ ನಾಡ ಭಾಷೆ ಶತಮಾನಗಳ ಕಾಲ ಅಚ್ಚಳಿಯದೆ ಉಳಿಯಲು ಸಾಧ್ಯ ಎಂದರು. ಕನ್ನಡ ಸಾಹಿತ್ಯ ಪರಿಷತ್ತು ಕನ್ನಡಿಗರು ಮೆಚ್ಚುವಂತಹ ಕೆಲಸ ಮಾಡಿರುವುದನ್ನು ನಾವೆಲ್ಲಾ ಕಂಡಿ ದ್ದೇವೆ. ತಾಲೂಕು ಸಾಹಿತ್ಯ ಸಮ್ಮೇಳನಕ್ಕೆ ಸಹೃದಯರು, ಹಿರಿಯ ಪತ್ರಕರ್ತರು, ಚಿಂತಕರು, ಶಿಕ್ಷಣ ಪ್ರೇಮಿಗಳು ಆದ ರೂಪಸಿ ರಮೇಶ್ ಅವರನ್ನು ಆಯ್ಕೆ ಮಾಡಿ ಅವರ ಸಾರಥ್ಯದಲ್ಲಿ 10ನೇ ಸಾಹಿತ್ಯ ಸಮ್ಮೇಳನ ಮಾಡಿರುವುದು ಹೆಮ್ಮೆಯ ಸಂಗತಿ ಎಂದರು. ಕಾರ್ಯ ಕ್ರಮಕ್ಕೆ ಬಂದು ಅಭಿನಂದಿಸುವ ಕೆಲಸ ಮಾಡಬೇಕಿತ್ತು. ಅನಿವಾರ್ಯ ಕಾರಣಗಳಿಂದ ಬರಲಾ ಗಲಿಲ್ಲ. ಗೆಳೆಯರು ಹಿತೈಷಿಗಳ ಸಮ್ಮುಖ ದಲ್ಲಿ ಸನ್ಮಾನಿಸುತ್ತಿದ್ದೇನೆ ಎಂದರು.

ಇಂದಿನ ನವ ಮಾಧ್ಯಮಗಳ ಯುಗದಲ್ಲಿ ಅನ್ಯ ಭಾಷೆಗಳನ್ನು ಕಲಿಯುವ ಅನಿವಾರ್ಯತೆ ಇದ್ದರೂ ಸಹ ಕನ್ನಡ ಕಡೆಗಣಿಸಬಾರದು. ಮೊಬೈಲ್ ಲೋಕದ ಬೆಳವಣಿಗೆ ಓದು ಮತ್ತು ಬರಹದ ಸಂಸ್ಕೃತಿಯನ್ನು ನಾಶ ಮಾಡುತ್ತಿದ್ದು ಇದು ಪರೋಕ್ಷವಾಗಿ ಭಾಷೆಯ ಬೆಳವಣಿಗೆ ಬಳಕೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ. ಏನೇ ಆದರೂ ನಾವೆಲ್ಲರೂ ಕನ್ನಡ ಮಾತನಾಡುವ ಮೂಲಕ ಕನ್ನಡ ಭಾಷೆ ಉಳಿಸಿ ಬೆಳೆಸಬೇಕಾಗಿದೆ ಎಂದರು. ಕಸಾಪವತಿಯಿಂದ ಪುಟ್ಟು ಆಂಜಿನಪ್ಪ ಸನ್ಮಾನಿಸಲಾಯಿತು. ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷ ರೂಪಿಸಿ ರಮೇಶ್, ಕಸಾಪ ಅಧ್ಯಕ್ಷ ಪಟೇಲ್ ನಾರಾಯಣಸ್ವಾಮಿ, ಟಿ. ಟಿ .ನರಸಿಂಹಪ್ಪ ,ಚಿಂತಡಪಿ ಮಾರುತಿ, ರಾಜ ಕುಮಾರ್, ದಾಮೋದರ್, ಸಾಧಿಕ್ ಪಾಷ, ರಾಮಾಂಜಿ, ಮುರಳಿ, ದೇವರಾಜ್, ದರ್ಶನ್, ರಾಕೇಶ್, ರವಿಚಂದ್ರ, ವೆಂಕಟೇಶ್ ಇದ್ದರು.

ಐಟಿ ಪಾರ್ಕ್‌ಗೆ ಶಾಸಕ ಸ್ವರೂಪ್‌ರಿಂದ ಮನವಿ

ಹಾಸನ: ಕೇಂದ್ರ ಕೈಗಾರಿಕಾ ಸಚಿವ ಎಚ್.ಡಿ.ಕುಮಾರಸ್ವಾಮಿ ನಿರ್ಮಾಣ ಹಂತದಲ್ಲಿರುವ ಹಾಸನ ವಿಮಾನ ನಿಲ್ದಾಣಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ವೇಳೆ ಕಾಮಗಾರಿ ಪ್ರಗತಿ ಬಗ್ಗೆ ಏರ್‌ಪೋರ್ಟ್ ಪ್ರಾಧಿಕಾರದ ಅಧಿಕಾರಿಗಳು ಹಾಗೂ ಜಿಲ್ಲಾಧಿಕಾರಿ ಅವರಿಂದ ಮಾಹಿತಿ ಪಡೆದು ಕೊಂಡರು. ಈ ವೇಳೆ ಸ್ಥಳೀಯ ಶಾಸಕ ಎಚ್.ಪಿ.ಸ್ವರೂಪ್ ಪ್ರಕಾಶ್, ಜಿಲ್ಲೆಗೆ ಐಟಿ ಪಾರ್ಕ್ ಅಗತ್ಯವಿದ್ದು, ನಿರ್ಮಾಣ ಮಾಡುವಂತೆ ಕೇಂದ್ರ ಸಚಿವರಿಗೆ ಮನವಿ ಸಲ್ಲಿಸಿದರು.ಬೆಂಗಳೂರು-ಮಂಗಳೂರು ನಡುವೆ ಸಮಾನಾಂತರವಾಗಿ ಹಾಸನ, ಅಪಾರ ಉದ್ಯೋಗಾವಕಾಶ ಸೃಷ್ಟಿ ಮಾಡಬಲ್ಲ ಸಾಮರ್ಥ್ಯ ಇರುವ ಜಿಲ್ಲೆಯಾಗಿದೆ. ಜಿಲ್ಲೆಯಲ್ಲಿ 6ಕ್ಕೂ ಹೆಚ್ಚು ಇಂಜಿನಿಯರಿಂಗ್ ಕಾಲೇಜುಗಳು, 11 ಡಿಪ್ಲೊಮಾ ಕಾಲೇಜುಗಳಿವೆ. ನೆರೆಯ ಚಿಕ್ಕಮಗಳೂರು ಜಿಲ್ಲೆಯಲ್ಲಿ ಎಂಜಿನಿಯರಿಂಗ್ ಕಾಲೇಜು ಗಳಿವೆ. ಪ್ರತಿ ವರ್ಷ ಹೊರಬರುವ ತಾಂತ್ರಿಕ ಪದವೀಧರರು ಬೆಂಗಳೂರು, ಮುಂಬೈ ಸೇರಿದಂತೆ ದೂರದ ಮಹಾನಗ ರಗಳಿಗೆ ಕೆಲಸ ಅರಸಿ ಹೋಗಬೇಕಾದ ಅನಿವಾರ್ಯತೆ ಇದೆ.ಇದರಿಂದ ಜಿಲ್ಲೆ ಕೃಷಿ ಮತ್ತು ಆರ್ಥಿಕತೆಯ ಮೇಲೂ ಪರಿ ಣಾಮ ಬೀರುತ್ತಿದೆ. ಅದಕ್ಕಾಗಿ ಜಿಲ್ಲೆಯಲ್ಲಿ ಐಟಿ ಪಾರ್ಕ್ ನಿರ್ಮಾಣದ ಅಗತ್ಯವಿದೆ ಎಂದು ಶಾಸಕರು ಮನವಿ ಮಾಡಿದ್ದಾರೆ. ಹೂಡಿಕೆದಾರರಿಗೂ ಪ್ರಶಸ್ತ ತಾಣವಾಗಿದೆ. ಐಟಿ ಪಾರ್ಕ್‌ನಿಂದ ಸಾವಿರಾರು ಜನರಿಗೆ ಉದ್ಯೋಗ ಸಿಗಲಿದೆ.

ಸಮಾಚಾರ ಸಣ್ಣದಲ್ಲ

ಫ್ರೀ ಸ್ಟೈಲ್ ಚೆಸ್: ಗುಕೇಶ್ ಹೊರಕ್ಕೆ

ಹ್ಯಾಂಬರ್ಗ್: ಫ್ರಿಸ್ಟೈಲ್ ಗ್ರ್ಯಾಂಡ್‌ಸ್ಲಾಮ್ ಟೂರ್ ಚೆಸ್ ಟೂರ್ನಿಯಲ್ಲಿ ಒಂದೇ ಒಂದು ಗೆಲುವು ಕಾಣದೇ, ವಿಶ್ವ ಚಾಂಪಿಯನ್ ಭಾರತದ ಡಿ. ಗುಕೇಶ್ ಅಭಿಯಾನ ಕೊನೆಗೊಳಿಸಿದ್ದಾರೆ. ಈಗಾಗಲೇ ಟೂರ್ನಿಯಿಂದ ಹೊರಬಿದ್ದಿರುವ ಗುಕೇಶ್, ಏಳನೇ ಸ್ಥಾನಕ್ಕಾಗಿ ನಡೆದ ಎರಡನೇ ಪ್ಲೇ-ಆಫ್ ಪಂದ್ಯದಲ್ಲಿ ಇರಾನ್ ಮೂಲದ ಫ್ರಾನ್ಸ್‌ನ ಗ್ರ್ಯಾಂಡ್ ಮಾಸ್ಟರ್ ಅಲಿರೆಜಾ ಫಿರೋಜಾ ವಿರುದ್ಧ ಸೋಲನುಭವಿಸಿದರು. ಮೊದಲ ದಿನ ಡ್ರಾ ಸಾಧಿಸಿದ್ದ ಗುಕೇಶ್, ಬಿಳಿಕಾಯಿಗಳೊಂದಿಗೆ ಗೆಲುವು ಸಾಧಿಸುವ ಅವಕಾಶ ಹೊಂದಿದ್ದರು. ಆದರೆ 30 ನಡೆಗಳ ಅಂತಿಮ ವೇಳೆ ಸೋಲೊಪ್ಪಿಕೊಂಡರು. ಫ್ರಿಸ್ಟೈಲ್ ಸ್ಲಾಮ್ ಟೂರ್ ಸ್ಟೇಜ್-1 ಫೈನಲ್ಸ್‌ನಲ್ಲಿ ಜರ್ಮನಿಯ ವಿನ್ಸೆಂಟ್ ಕೀಮರ್ ಚಾಂಪಿಯನ್ ಎನಿಸಿಕೊಂಡಿದ್ದಾರೆ.

ಗುಲ್ವೀರ್ ಸಿಂಗ್ ದಾಖಲೆ

ದೆಹಲಿ: ಹಾಂಗ್‌ಝೌ ಏಷ್ಯನ್ ಕ್ರೀಡೆಗಳ ಕಂಚಿನ ಪದಕ ವಿಜೇತ ಗುಲ್ವೀರ್ ಸಿಂಗ್ ಅವರು ಬೋಸ್ಟನ್‌ನಲ್ಲಿ ನಡೆದ ಬಿಯು ಡೇವಿಡ್ ಹೆಮರಿ ವೆಲೆಂಟೈನ್ ಇನ್ವಿಟೇಷನಲ್ ಕೂಟದಲ್ಲಿ 3000 ಮೀ. ಒಳಾಂಗಣ ರೇಸ್‌ನಲ್ಲಿ 16 ವರ್ಷದ ಹಳೆಯ ರಾಷ್ಟ್ರೀಯ ದಾಖಲೆ ಮುರಿದಿದ್ದಾರೆ. ಆ ಮೂಲಕ ಹಾಲಿ ಋತುವನ್ನು ಉತ್ತಮವಾಗಿ ಆರಂಭಿಸಿದ್ದಾರೆ. ಸೇನಾಪಡೆಯಲ್ಲಿರುವ 26 ವರ್ಷ ವಯಸ್ಸಿನ ಗುಲ್ವೀರ್ ಅವರು ಈ ದೂರವನ್ನು 7 ನಿ.38 ಸೆಕೆಂಡ್‌ಗಳಲ್ಲಿ ಪೂರೈಸಿದ್ದಾರೆ. ಈ ಹಿಂದಿನ ದಾಖಲೆಯನ್ನು ಸುರೇಂದರ್ ಸಿಂಗ್ ಅವರು 2008ರಲ್ಲಿ ಮಾಡಿದ್ದರು. ಸುರೇಂದರ್ ಪ್ರಸ್ತುತ ಕೋಚ್ ಆಗಿದ್ದಾರೆ. ಈ ದಾಖಲೆಯಿಂದ ಉತ್ತೇಜಿತರಾಗಿರುವ ಗುಲ್ವೀರ್ ಅವರು ಈ ವರ್ಷ ನಡೆಯಲಿರುವ ವಿಶ್ವ ಅಥ್ಲೇಟಿಕ್ಸ್ ಚಾಂಪಿಯನ್‌ಷಿಪ್‌ನ ಪುರುಷರ 10,000 ಮೀ. ಓಟದಲ್ಲಿ ಅರ್ಹತೆ ಪಡೆಯುವ ಕಡೆ ಚಿತ್ತ ಹರಿಸಿದ್ದಾರೆ.

ಶೂಟಿಂಗ್ ಕೋಚ್‌ಗಳಾಗಿ ರಾಣಾ, ಜಿತು ನೇಮಕ

ದೆಹಲಿ: ಭಾರತದ ಶೂಟಿಂಗ್ ದಿಗ್ಗಜರಾದ ಜಸ್ಪಾಲ್ ರಾಣಾ ಮತ್ತು ಜಿತು ರಾಯ್ ಶೂಟಿಂಗ್‌ಗೆ ಮರಳಿದ್ದು, ರಾಷ್ಟ್ರೀಯ ಫೆಡರೇಶನ್ ಕೋಚ್‌ಗಳನ್ನಾಗಿ ನೇಮಕ ಮಾಡಿದೆ. ಶನಿವಾರ ರಾಷ್ಟ್ರೀಯ ರೈಫಲ್ ಅಸೋಸಿಯೇಷನ್ ಆಫ್ ಇಂಡಿಯಾ (ಎನ್‌ಆರ್‌ಎಐ) ರಾಷ್ಟ್ರೀಯ ತಂಡಕ್ಕೆ ಹಲವಾರು ಮಾಜಿ ಶೂಟರ್‌ಗಳಿಗೆ ಮಂಡಳಿಯ ಸಭೆಯಲ್ಲಿ ಜವಾಬ್ದಾರಿಯನ್ನು ನೀಡಿತು. ಜಸ್ಪಾಲ್ ರಾಣಾ ಅವರನ್ನು 25 ಮೀಟರ್ ವಿಭಾಗಕ್ಕೆ ಮತ್ತು ಜಿತು ರಾಯ್ ಅವರನ್ನು ಏರ್ ಪಿಸ್ತೂಲ್ (10 ಮೀ) ವಿಭಾಗಕ್ಕೆ ಕೋಚ್‌ಗಳಾಗಿ ಆಯ್ಕೆಯಾಗಿದ್ದಾರೆ. ದ್ರೋಣಾಚಾರ್ಯ ಪುರಸ್ಕೃತ ದೀಪಾಲಿ ದೇಶಪಾಂಡೆ ರೈಫಲ್ ವಿಭಾಗಕ್ಕೆ ಮುಖ್ಯ ಕೋಚ್ ಆಗಿ ನೇಮಕಗೊಂಡರು.

ಮೂರು ವಾರಗಳ ಚಾಂಪಿಯನ್ಸ್ ಟ್ರೋಫಿ | ರೋಹಿತ್ ಪಡೆಗೆ ಫೆ.20ರಂದು ಬಾಂಗ್ಲಾ ಎದುರಾಳಿ

ಟೀಂ ಇಂಡಿಯಾ ಚಿತ್ತ: ಚಾಂಪಿಯನ್ಸ್ ಆಗುವತ್ತ



ಮುಂಬಯಿ: ಐಸಿಸಿ ಚಾಂಪಿಯನ್ಸ್ ಟ್ರೋಫಿಯ ಪಂದ್ಯವನ್ನಾಡಲು ರೋಹಿತ್ ಶರ್ಮಾ ಸಾರಥ್ಯದ ಭಾರತ ಕ್ರಿಕೆಟ್ ತಂಡವು ಶನಿವಾರ ಮುಂಬೈನ ಛತ್ರಪತಿ ಶಿವಾಜಿ ವಿಮಾನ ನಿಲ್ದಾಣದಿಂದ ದುಬೈಗೆ ಪ್ರಯಾಣ ಬೆಳೆಸಿದೆ. ಬಿಸಿಸಿಐ ನೂತನ ನಿಯಮದಂತೆ 45 ದಿನಗಳಿಗಿಂತ ಕಡಿಮೆ ಅವಧಿಯ ಪ್ರವಾಸಗಳಿಗೆ ಆಟಗಾರರು ತಮ್ಮ ಕುಟುಂಬಗಳನ್ನು ಜತೆಯಲ್ಲಿ ಕೊಂಡೊಯ್ಯಲು ಅನುಮತಿ ಇಲ್ಲ, ಹೀಗಾಗಿ ಆಟಗಾರರು ಮಾತ್ರ ದುಬೈಗೆ ಪ್ರಯಾಣಿಸಲಿದ್ದಾರೆ ಎನ್ನಲಾಗಿದೆ. ಚಾಂಪಿಯನ್ಸ್ ಟ್ರೋಫಿ ಟೂರ್ನಿಯು ಮೂರು ವಾರಗಳ ಕಾಲ ನಡೆಯಲಿದೆ.

ಆಸ್ಟ್ರೇಲಿಯಾ ಪ್ರವಾಸದ ಬಾರ್ಡರ್-ಗವಾಸ್ಕರ್ ಟೆಸ್ಟ್ ಸರಣಿಯಲ್ಲಿ ಭಾರತ ತಂಡವು 3-1 ಅಂತರದ ಸೋಲು ಕಂಡಿತ್ತು. ಆ ಸೋಲಿನ ಬಳಿಕ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಯು ಆಟಗಾರಿಗೆ ಕೆಲ ಕಡಿವಾಣ ಹಾಕಿತ್ತು. ಆಟಗಾರರ ಕಿಟ್ 150 ಕಿಲೋಗಿಂತ ಹೆಚ್ಚಿದ್ದರೆ ಅದಕ್ಕೆ ಆಟಗಾರನೇ ಹಣ ಪಾವತಿಸಬೇಕು. 45ಕ್ಕೂ ಅಧಿಕ ದಿನಗಳ ಕಾಲ ವಿದೇಶಿ ಕ್ರಿಕೆಟ್ ಪ್ರವಾಸದಲ್ಲಿದ್ದರೆ ಮಾತ್ರ ಕುಟುಂಬ ಸದಸ್ಯರು ಗರಿಷ್ಠ 2 ವಾರಗಳ ಕಾಲ ಅವರ ಜತೆಗಿರಬಹುದು. ಆದರೆ ಎಲ್ಲಾ ಆಟಗಾರು ಜತೆಯಾಗಿ ಪ್ರಯಾಣ ಬೆಳೆಸಬೇಕು. ಸೂಕ್ತ ಕಾರಣಗಳಿಲ್ಲದೇ ಯಾರೂ ಕೂಡ ಪ್ರತ್ಯೇಕ ವಿಮಾನ, ಕಾರು ಬಳಸಬಾರದೆಂಬ ನಿಯಮವನ್ನೂ ಜಾರಿಗೊಳಿಸಿದೆ, ಹೀಗಾಗಿ ಚಾಂಪಿಯನ್ಸ್ ಟ್ರೋಫಿಗೆ ಆಯ್ಕೆಯಾದ ಎಲ್ಲ ಭಾರತೀಯ ಆಟಗಾರರು ಮತ್ತು ಸಿಬ್ಬಂದಿ ಜತೆಯಾಗಿ ಪ್ರಯಾಣಿಸಿದ್ದಾರೆ.

ಅಭ್ಯಾಸ ಪಂದ್ಯವಿಲ್ಲ: ಭಾರತ ತಂಡ ಈ ಬಾರಿ ಟೂರ್ನಿಗೂ ಮುನ್ನ ಯಾವುದೇ ಅಭ್ಯಾಸ ಪಂದ್ಯವನ್ನು ಆಡುವುದಿಲ್ಲ. ಸಾಮಾನ್ಯವಾಗಿ ಐಸಿಸಿ ಟೂರ್ನಿಗೆ ಮುನ್ನ ಎಲ್ಲಾ ತಂಡಗಳೂ ಅಭ್ಯಾಸ ಪಂದ್ಯ ಆಡುತ್ತದೆ, ಆದರೆ ನಿರಂತರ ಕ್ರಿಕೆಟ್‌ನಿಂದಾಗಿ ಈ ಬಾರಿ ಭಾರತಕ್ಕೆ ಯಾವುದೇ ಅಭ್ಯಾಸ ಪಂದ್ಯ ನಿಗದಿಯಾಗಿಲ್ಲ. ಫೆ.20ಕ್ಕೆ ಬಾಂಗ್ಲಾದೇಶ ವಿರುದ್ಧ ರೋಹಿತ್ ಪಡೆ ತನ್ನ ಮೊದಲ ಪಂದ್ಯವಾಡಲಿದೆ. ಫೆ.23ಕ್ಕೆ ಪಾಕಿಸ್ತಾನ, ಮಾ.2ಕ್ಕೆ ನ್ಯೂಜಿಲೆಂಡ್ ವಿರುದ್ಧ ಟೀಂ ಇಂಡಿಯಾ ಸೆಣಸಾಡಲಿದೆ.

ಬೆನ್ನುನೋವಿನ ಸಮಸ್ಯೆಯಿಂದ ಸಂಪೂರ್ಣ ಚೇತರಿಕೆ ಕಾಣದಿರುವ ಯಾರ್ಕರ್ ಸ್ಪೆಷಲಿಸ್ಟ್ ಜಸ್ಪ್ರೀತ್ ಬುಮ್ರಾ, ಐಸಿಸಿ ಚಾಂಪಿಯನ್ಸ್ ಟ್ರೋಫಿ ಪಂದ್ಯಾವಳಿಯಿಂದ ಹೊರಬಿದ್ದಿರುವುದು ಭಾರತ ತಂಡಕ್ಕೆ ದೊಡ್ಡ ಹಿನ್ನಡೆಯಾಗಿದೆ. ಬುಮ್ರಾ ಬದಲಿಗೆ ಯುವ ವೇಗಿ ಹರ್ಷಿತ್ ರಾಣಾ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಇದೇ ವೇಳೆ ಎಡಗೈ ಆರಂಭಿಕ ಆಟಗಾರ ಯಶಸ್ವಿ ಜೈಸ್ವಾಲ್‌ರನ್ನು ತಂಡದಿಂದ ಕೈಬಿಡಲಾಗಿದ್ದು, ಅವರ ಬದಲಿಗೆ 5ನೇ ಸ್ಪಿನ್ನರ್ ಆಗಿ ವರುಣ್ ಚಕ್ರವರ್ತಿಗೆ ಭಾರತ ತಂಡದಲ್ಲಿ ಸ್ಥಾನವನ್ನು ಕಲ್ಪಿಸಲಾಗಿದೆ.

ಚಾಂಪಿಯನ್ಸ್ ಟ್ರೋಫಿ: ಭಾರತ ತಂಡ

ರೋಹಿತ್ ಶರ್ಮಾ (ನಾಯಕ), ಶುಭಮಾನ್ ಗಿಲ್ (ಉಪನಾಯಕ), ವಿರಾಟ್ ಕೊಹ್ಲಿ, ಶ್ರೇಯಸ್ ಅಯ್ಯರ್, ಕೆ.ಎಲ್ ರಾಹುಲ್ (ಕೀಪರ್), ರಿಷಭ್ ಪಂತ್ (ಕೀಪರ್), ಹಾರ್ದಿಕ್ ಪಾಂಡ್ಯ, ಅಕ್ಷರ್ ಪಟೇಲ್, ವಾಷಿಂಗ್ಟನ್ ಸುಂದರ್, ಕುಲದೀಪ್ ಯಾದವ್, ರವೀಂದ್ರ ಜಡೇಜಾ, ವರುಣ್ ಚಕ್ರವರ್ತಿ, ಹರ್ಷಿತ್ ರಾಣಾ, ಮೊಹಮದ್ ಶಮಿ, ಅರ್ಷದೀಪ್ ಸಿಂಗ್.

ಮಹಿಳಾ ಪ್ರೀಮಿಯರ್ ಲೀಗ್‌ನ 2ನೇ ಪಂದ್ಯ

ಡೆಲ್ಲಿ ಕ್ಯಾಪಿಟಲ್ಸ್‌ಗೆ ಗೆಲುವು

ವಡೋದರ: ಶನಿವಾರ ಇಲ್ಲಿ ನಡೆದ ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್) ಪಂದ್ಯದಲ್ಲಿ ಒಂದು ಬಾರಿಯ ಚಾಂಪಿಯನ್ ಮುಂಬೈ ಇಂಡಿಯನ್ಸ್ ತಂಡವನ್ನು ಡೆಲ್ಲಿ ಕ್ಯಾಪಿಟಲ್ಸ್ ತಂಡವು ಎರಡು ವಿಕೆಟ್‌ಗಳಿಂದ ಮಣಿಸಿ ಟೂರ್ನಿಯಲ್ಲಿ ತನ್ನ ಶುಭಾರಂಭ ಮಾಡಿತು. ಪಂದ್ಯದಲ್ಲಿ ಟಾಸ್ ಗೆದ್ದ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಟಾಸ್ ಗೆದ್ದು ಫೀಲ್ಡಿಂಗ್ ಆಯ್ದುಕೊಂಡು, ಮುಂಬೈ ತಂಡಕ್ಕೆ ಬ್ಯಾಟಿಂಗ್ ಅವಕಾಶವನ್ನು ನೀಡಿತು. ಆದರೆ ಮುಂಬೈ ತಂಡದ ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳು ರನ್ ಗಳಿಸುವಲ್ಲಿ ವಿಫಲರಾಗಿ, ಒಬ್ಬರ ಹಿಂದೆ ಒಬ್ಬರಂತೆ ಪವಿಲಿಯನ್ ಪೆರೆಡ್ ನಡೆಸಿ ತಂಡಕ್ಕೆ ಆಘಾತ ನೀಡಿದರು.

ಶನಿವಾರ ನಡೆದ ಪಂದ್ಯದ ಮೂರನೇ ಬಾಲ್‌ನಲ್ಲೇ ಮುಂಬೈನ ಆರಂಭಿಕ ಆಟಗಾರ್ತಿ ಹೀಲಿ ಮ್ಯಾಥ್ಯೂಸ್ ಯಾವುದೇ ರನ್ ಗಳಿಸದೆ ದೆಹಲಿಯ ಶಿಕಾ ಕೌರ್‌ಗೆ ವಿಕೆಟ್ ಒಪ್ಪಿಸಿದರು. ಆರಂಭಿಕ ಆಟಗಾರ್ತಿ ಯಾಸ್ತಿಕಾ ಭಾಟಿಯಾ ಕೇವಲ 11 ರನ್ ಗಳಿಸಿ ಶಿಕಾ ಪಾಂಡೆಗೆ ವಿಕೆಟ್ ಒಪ್ಪಿಸಿದರು. ಆ ನಂತರ ಒಗ್ಗೂಡಿದ ಹಮನ್‌ದೀಪ್ ಕೌರ್ ಮತ್ತು ಸ್ಕಿವರ್ ಬ್ರಂಟ್ ಜೋಡಿ ಉತ್ತಮ ಜತೆಯಾಟವನ್ನು ನೀಡಿ ಕ್ರೀಡಾಂಗಣದಲ್ಲಿ ನೆರೆದಿದ್ದ ಪ್ರೇಕ್ಷಕರನ್ನು ರಂಜಿಸಿದರು. ಆ ಮೂಲಕ ಮುಂಬೈ ತಂಡವು 10 ಓವರ್ ಗಳಲ್ಲಿ ನೂರು ರನ್‌ಗಳ ಗಡಿ ದಾಟಿತು. ತಂಡದ ಮೊತ್ತ 105 ತಲುಪಿದಾಗ ಹಮನ್ ದೀಪ್ ಕೌರ್ ತಮ್ಮ ವಿಕೆಟ್ ಅನ್ನು ಅನ್ನಾಬೆಲ್ ಅವರಿಗೆ ಒಪ್ಪಿಸಿದರು. ಸ್ಕಿವರ್ ಬ್ರಂಟ್ 59 ಬಾಲ್‌ಗಳಲ್ಲಿ 80 ರನ್ ಗಳಿಸಿದರು. ಆದರೆ ಆ ನಂತರ ಕ್ರೀಸ್‌ಗೆ ಬಂದ ಮುಂಬೈ ತಂಡದ ಯಾವ ಬ್ಯಾಟರ್‌ಗಳೂ ಕೂಡಾ ಎರಡಂಕೆಯ ಸ್ಕೋರ್ ತಲುಪುವಲ್ಲಿ ವಿಫಲರಾದರು. ಮುಂಬೈ ತಂಡವು 19.1 ಓವರ್‌ಗಳಲ್ಲಿ 164 ರನ್ ಗಳಿಗೆ ಆಲೌಟ್ ಆಯಿತು.

ಡೆಲ್ಲಿ ತಂಡದ ಪರವಾಗಿ 3.1 ಓವರ್‌ಗಳಲ್ಲಿ 34 ರನ್ ನೀಡಿ 3 ವಿಕೆಟ್ ಪಡೆದ ಅನ್ನಾಬೆಲ್ ಯಶಸ್ವಿ ಬೌಲರ್ ಎನಿಸಿದರು. ಶಿಖಾ ಪಾಂಡೆ 14 ನೀಡಿ 2 ವಿಕೆಟ್ ಪಡೆದರು. ಆ್ಯಲಿಸ್ ಕ್ಯಾಪ್ಸೆ, ಮಿನ್ನು ಮಣಿ ತಲಾ ಒಂದೊಂದು ವಿಕೆಟ್ ಪಡೆದರು. 165 ರನ್‌ಗಳ ಗುರಿ ಬೆಂಬತ್ತಿದ ಡೆಲ್ಲಿ ಕ್ಯಾಪಿಟಲ್ಸ್ ತಂಡವು 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 165 ರನ್ ಗಳಿಸಿ ಗೆಲುವಿನ ನಗೆ ಬೀರಿತು.

ಫೆಬ್ರವರಿ 22ರಿಂದ ಮಾಸ್ಟರ್ಸ್ ಲೀಗ್

ದೆಹಲಿ: ಫೆಬ್ರವರಿ 22ರಿಂದ ಆರಂಭವಾಗಲಿರುವ ಮಾಜಿ ಕ್ರಿಕೆಟರುಗಳ ಇಂಟರ್‌ನ್ಯಾಷನಲ್ ಮಾಸ್ಟರ್ಸ್ ಲೀಗ್‌ಗೆ ಭಾರತ ತಂಡವನ್ನು ಘೋಷಿಸಲಾಗಿದೆ. ಇಂಡಿಯಾ ಮಾಸ್ಟರ್ಸ್ ಹೆಸರಿನಲ್ಲಿ ಕಣಕ್ಕಿಳಿಯಲಿರುವ 15 ಸದಸ್ಯರ ಈ ತಂಡವನ್ನು ಸಚಿನ್ ತೆಂಡೂಲ್ಕರ್ ಮುನ್ನಡೆಸಲಿದ್ದಾರೆ.

ತಂಡದಲ್ಲಿ ಸಚಿನ್ ತೆಂಡೂಲ್ಕರ್ ಅಲ್ಲದೆ ಸ್ಟಾರ್ ಆಟಗಾರರಾಗಿ ಯುವರಾಜ್ ಸಿಂಗ್, ಇರ್ಫಾನ್ ಪಠಾಣ್, ಸುರೇಶ್ ರೈನಾ, ಯೂಸುಫ್ ಪಠಾಣ್, ಅಂಬಾಟಿ ರಾಯುಡು ಸೇರಿದಂತೆ ಅನೇಕ ಆಟಗಾರರಿದ್ದಾರೆ. ಕನ್ನಡಿಗರಾದ ವಿನಯ್ ಕುಮಾರ್ ಹಾಗೂ ಅಭಿಮನ್ಯು ಮಿಥುನ್ ಸಹ ಇಂಡಿಯಾ ಮಾಸ್ಟರ್ಸ್ ತಂಡದಲ್ಲಿ ಕಾಣಿಸಿಕೊಂಡಿದ್ದಾರೆ. ಇವರೊಂದಿಗೆ ಧವಳ್ ಕುಲಕರ್ಣಿ, ರಾಹುಲ್ ಶರ್ಮಾ, ಶಹಬಾಝ್ ನದೀಮ್ ಕೂಡ ಇದ್ದಾರೆ.

ಕಣಕ್ಕಿಳಿಯಲಿರುವ ತಂಡಗಳು: ಇಂಡಿಯಾ ಮಾಸ್ಟರ್ಸ್, ಶ್ರೀಲಂಕಾ ಮಾಸ್ಟರ್ಸ್, ವೆಸ್ಟ್ ಇಂಡೀಸ್ ಮಾಸ್ಟರ್ಸ್, ಆಸ್ಟ್ರೇಲಿಯಾ ಮಾಸ್ಟರ್ಸ್, ಸೌತ್ ಆಫ್ರಿಕಾ ಮಾಸ್ಟರ್ಸ್ ಮತ್ತು ಇಂಗ್ಲೆಂಡ್ ಮಾಸ್ಟರ್ಸ್.

ಮಾಸ್ಟರ್ಸ್ ಲೀಗ್: ಭಾರತ ತಂಡ: ಸಚಿನ್ ತೆಂಡೂಲ್ಕರ್ (ನಾಯಕ), ಯುವರಾಜ್ ಸಿಂಗ್, ಸುರೇಶ್ ರೈನಾ, ಅಂಬಾಟಿ ರಾಯುಡು, ಯೂಸುಫ್ ಪಠಾಣ್, ಇರ್ಫಾನ್ ಪಠಾಣ್, ಸ್ಟುವರ್ಟ್ ಬಿನ್ನಿ, ಧವಳ್ ಕುಲಕರ್ಣಿ, ವಿನಯ್ ಕುಮಾರ್, ಶಹಬಾಝ್ ನದೀಮ್, ರಾಹುಲ್ ಶರ್ಮಾ, ಗುರುಕೀರತ್ ಸಿಂಗ್ ಮಾನ್, ಅಭಿಮನ್ಯು ಮಿಥುನ್, ಪವನ್ ನೇಗಿ, ನಮನ್ ಓಜಾ.

ಅಂತಾರಾಷ್ಟ್ರೀಯ ಸಮ್ಮೇಳನಕ್ಕೆ ಥ್ರೋಬಾಲ್ ಒಕ್ಕೂಟ

ಬೆಂಗಳೂರು: ಆಫ್ರಿಕಾದ ಡಾಕರ್‌ನಲ್ಲಿ ಫೆ. 17ರಿಂದ 21ರ ವರೆಗೆ ಆಯೋಜನೆಗೊಂಡಿರುವ ಕ್ರೀಡಾ ಸಮಾವೇಶದಲ್ಲಿ ಅಂತಾರಾಷ್ಟ್ರೀಯ ಥ್ರೋಬಾಲ್ ಒಕ್ಕೂಟದ ಪದಾಧಿಕಾರಿಗಳು ಭಾಗವಹಿಸಲಿದ್ದಾರೆ.

ಅಂತಾರಾಷ್ಟ್ರೀಯ ಒಲಿಂಪಿಕ್ ಸಮಿತಿಯು ಈ ಸಮಾವೇಶವನ್ನು ಆಯೋಜಿಸಿದ್ದು, ಸಮಿತಿಯ ಪ್ರಮುಖರಾದ ಡೈಮಿಲ್ ಫಯೆ ಅವರು ಥ್ರೋಬಾಲ್ ಒಕ್ಕೂಟಕ್ಕೆ ಅಧಿಕೃತ ಆಹ್ವಾನ ನೀಡಿದ್ದಾರೆ. ಆಫ್ರಿಕಾ ಅಂತಾರಾಷ್ಟ್ರೀಯ ಕ್ರೀಡಾ ಸಮಾವೇಶದ 11ನೇ ಆವೃತ್ತಿ ಮತ್ತು ಆಫ್ರಿಕಾ ಫುಟ್ ಗೋಲ್‌ನ 3ನೇ ಆವೃತ್ತಿ ಇದಾಗಿದೆ. ಈ ಸಮಾವೇಶದಲ್ಲಿ, ಥ್ರೋಬಾಲ್ ಒಕ್ಕೂಟದ ಪದಾಧಿಕಾರಿಗಳು ಪ್ರದರ್ಶನಕಾರರಾಗಿ ಪಾಲ್ಗೊಂಡು ಥ್ರೋಬಾಲ್ ಆಟದ ಮಹತ್ವದ ಕುರಿತು ಅರಿವು ಮೂಡಿಸಲಿದ್ದಾರೆ. ಅಂತಾರಾಷ್ಟ್ರೀಯ ಥ್ರೋಬಾಲ್ ಒಕ್ಕೂಟದ ಕೇಂದ್ರ ಕಚೇರಿಯು ಬೆಂಗಳೂರಿನಲ್ಲೇ ಇದ್ದು, ಸಹಾಯಕ ಕಾರ್ಯದರ್ಶಿ ಸಂಪೂರ್ಣಾ ಹೆಗಡೆ, ಕ್ರೀಡಾ ಅಭಿವೃದ್ಧಿ ಸಮಿತಿಯ ಅಧ್ಯಕ್ಷ ಸಂತೋಷ್ ಡಿ, ಥ್ರೋಬಾಲ್ ಆಟಗಾರ ಮತ್ತು ಕೋಚ್ ವಿಷ್ಣು ಕಿಶೋರ್ ಕಂಚಿ ಹಾಗೂ ಮಾಧ್ಯಮ ಸಲಹೆಗಾರ ವಿವೇಕ ಹೆಗಡೆ ಸಮಾವೇಶದಲ್ಲಿ ಪಾಲ್ಗೊಳ್ಳಲಿದ್ದಾರೆ.

ಡಾಕರ್‌ನಲ್ಲಿ 2026ರಲ್ಲಿ ನಡೆಯಲಿರುವ ಯೂಥ್ ಒಲಿಂಪಿಕ್-2026ರಲ್ಲಿ ಥ್ರೋಬಾಲ್‌ನ ಮಹತ್ವ ಸಾರುವ ಒಂದು ಪ್ರದರ್ಶನ ಏರ್ಪಡಿಸುವ ಕುರಿತು ಒಲಿಂಪಿಕ್ ಸಮಿತಿಯ ಪದಾಧಿಕಾರಿಗಳೊಂದಿಗೆ ಚರ್ಚೆ ನಡೆಸುವ ಉದ್ದೇಶವನ್ನೂ ಒಕ್ಕೂಟ ಹೊಂದಿದೆ.

ತ್ರಿಕೋನ ಸರಣಿ ಫೈನಲ್ ಪಂದ್ಯ | ಕಿವೀಸ್‌ಗೆ 5 ವಿಕೆಟ್‌ಗಳ ಗೆಲುವು

ಪಾಕ್ ವಿರುದ್ಧ ನ್ಯೂಜಿಲೆಂಡ್‌ಗೆ ಜಯ

ಕರಾಚಿ: ಪಾಕಿಸ್ತಾನದಲ್ಲಿ ನಡೆದ ತ್ರಿಕೋನ ಏಕದಿನ ಸರಣಿಯ ಫೈನಲ್ ಪಂದ್ಯದಲ್ಲಿ ನ್ಯೂಜಿಲೆಂಡ್ ತಂಡವು ಭರ್ಜರಿ ಜಯ ಸಾಧಿಸಿದೆ. ಕರಾಚಿಯ ನ್ಯಾಷನಲ್ ಕ್ರಿಕೆಟ್ ಸ್ಟೇಡಿಯಂನಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಪಾಕಿಸ್ತಾನ ತಂಡವು ಬ್ಯಾಟಿಂಗ್ ಆಯ್ದುಕೊಂಡಿತು. ಆದರೆ ಕಿವೀಸ್ ಬೌಲರ್‌ಗಳ ಕರಾರುವಾಕ್ ದಾಳಿ ಮುಂದೆ ಪಾಕ್ ಬ್ಯಾಟರ್‌ಗಳು ರನ್ ಗಳಿಸಲು ಪರದಾಡಿದರು. ಹಾಗಾಗಿ 54 ರನ್ ಕಲೆ ಹಾಕುವಷ್ಟರಲ್ಲಿ ಫಖರ್ ಝಮಾನ್ (10), ಬಾಬರ್ ಆಝಂ (29) ಹಾಗೂ ಸೌದ್ ಶಕೀಲ್ (8) ಪೆವಿಲಿಯನ್‌ಗೆ ಮರಳಿದರು.

ಈ ಹಂತದಲ್ಲಿ ಮೊಹಮ್ಮದ್ ರಿಝ್ವಾನ್ (46) ಹಾಗೂ ಸಲ್ಮಾನ್ ಅಘಾ (45) ಉತ್ತಮ ಜೊತೆಯಾಟ ಆಡುವ ಮೂಲಕ ತಂಡದ ಮೊತ್ತವನ್ನು 150 ರನ್‌ಗಳ ಗಡಿ ದಾಟಿಸಿದರು. ಪಾಕ್ ತಂಡ 49.3 ಓವರ್‌ಗಳಲ್ಲಿ 242 ರನ್‌ಗಳಿಗೆ ಆಲೌಟ್ ಆಯಿತು. ನ್ಯೂಜಿಲೆಂಡ್ ಪರ ವಿಲಿಯಂ ಒರೋಕ್ 4 ವಿಕೆಟ್ ಪಡೆದರೆ, ಮಿಚೆಲ್ ಸ್ಯಾಂಟ್ನರ್ ಹಾಗೂ ಮೈಕೆಲ್ ಬ್ರೇಸ್‌ವೆಲ್ ತಲಾ 2 ವಿಕೆಟ್ ಪಡೆದು ಮಿಂಚಿದರು.

243 ರನ್‌ಗಳ ಗುರಿ: 50 ಓವರ್‌ಗಳಲ್ಲಿ 243 ರನ್‌ಗಳ ಸುಲಭ ಗುರಿ ಪಡೆದ ನ್ಯೂಜಿಲೆಂಡ್ ತಂಡಕ್ಕೆ ಡೆವೊನ್ ಕಾನ್ವೆ (48) ಉತ್ತಮ ಆರಂಭ ಒದಗಿಸಿದರು. ಮೂರನೇ ಕ್ರಮಾಂಕದಲ್ಲಿ ಕಣಕ್ಕಿಳಿದ ಕೇನ್ ವಿಲಿಯಮ್ಸನ್ 34 ರನ್ ಬಾರಿಸಿದರೆ, ನಾಲ್ಕನೇ ಕ್ರಮಾಂಕದಲ್ಲಿ ಬ್ಯಾಟ್ ಬೀಸಿದ ಡೇರಿಲ್ ಮಿಚೆಲ್ 58 ಎಸೆತಗಳಲ್ಲಿ 57 ರನ್ ಚಚ್ಚಿದರು.

ಈ ಮೂಲಕ ನ್ಯೂಜಿಲೆಂಡ್ ತಂಡವು 45.2 ಓವರ್‌ಗಳಲ್ಲಿ 243 ರನ್ ಗಳಿಸಿ 5 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ. ಫೆಬ್ರವರಿ 19ರಿಂದ ಶುರುವಾಗಲಿರುವ ಚಾಂಪಿಯನ್ಸ್ ಟ್ರೋಫಿಯ ಮೊದಲ ಪಂದ್ಯದಲ್ಲಿ ಪಾಕಿಸ್ತಾನ ಮತ್ತು ನ್ಯೂಜಿಲೆಂಡ್ ತಂಡಗಳು ಮುಖಾಮುಖಿಯಾಗಲಿದೆ. ಇದೀಗ ಪ್ರಮುಖ ಟೂರ್ನಿಗೂ ಮುನ್ನ ಪಾಕ್ ತಂಡವನ್ನು ಬಗ್ಗುಬಡಿಯುವಲ್ಲಿ ಕಿವೀಸ್ ಪಡೆ ಯಶಸ್ವಿಯಾಗಿದೆ.

ವಿಟಾಕೀಸ್

ಜಸ್ಟ್ ಮ್ಯಾರೀಡ್‌ನ ಪ್ರೇಮಗೀತೆ

ಖ್ಯಾತ ಸಂಗೀತ ನಿರ್ದೇಶಕ ಅಜನೀಶ್ ಲೋಕನಾಥ್ ನಿರ್ಮಾಣದತ್ತಲೂ ಒಲವು ತಾಳಿದ್ದು ಜಸ್ಟ್ ಮ್ಯಾರೀಡ್ ಚಿತ್ರವನ್ನು ನಿರ್ಮಿಸಿದ್ದಾರೆ. ಚಿತ್ರೀಕರಣ ಮುಗಿಸಿರುವ ಜಸ್ಟ್ ಮ್ಯಾರೀಡ್ ಹಾಡುಗಳ ಮೂಲಕ ಗಮನಸೆಳೆಯುತ್ತಿದೆ. ಸದ್ಯ ಇದು ಮೊದಲನೇ ಸ್ವಾಗತನಾ.. ಎಂಬ ಹಾಡು ಬಿಡುಗಡೆಯಾಗಿದ್ದು, ಅಶ್ವಿನಿ ಪುನೀತ್ ರಾಜ್‌ಕುಮಾರ್ ಹಾಡು ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು. ಕೆ.ಕಲ್ಯಾಣ್ ಸಾಹಿತ್ಯದ ಈ ಹಾಡಿಗೆ ಜಸ್ಕರಣ್ ಸಿಂಗ್ ದನಿಯಾಗಿದ್ದಾರೆ. ಅಜನೀಶ್ ಲೋಕನಾಥ್ ಸಂಗೀತ ಸಂಯೋಜಿಸಿರುವ ಈ ಹಾಡು ಕೇಳಲು ಮಧುರವಾಗಿದೆ.

ಸಿ.ಆರ್.ಬಾಬಿ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿರುವ ಈ ಚಿತ್ರವನ್ನು ಅಜನೀಶ್ ಲೋಕನಾಥ್ ಹಾಗೂ ಸಿ.ಆರ್.ಬಾಬಿ ನಿರ್ಮಿಸಿದ್ದಾರೆ. ಶೈನ್ ಶೆಟ್ಟಿ ನಾಯಕನಾಗಿ ನಟಿಸಿದ್ದು, ಅಂಕಿತಾ ಅಮರ್ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ದೇವರಾಜ್, ಅಚ್ಯುತಕುಮಾರ್, ಮಾಳವಿಕಾ ಅವಿನಾಶ್, ಅನೂಪ್ ಭಂಡಾರಿ, ಶ್ರುತಿ ಹರಿಹರನ್, ಶ್ರುತಿ ಕೃಷ್ಣ, ಸಾಕ್ಷಿ ಅಗರವಾಲ್, ಶ್ರೀಮಾನ್, ರವಿಶಂಕರ್ ಗೌಡ, ರವಿ ಭಟ್, ವಾಣಿ ಹರಿಕೃಷ್ಣ, ಸಂಗೀತ ಅನಿಲ್, ಕುಮುದಾ, ಜಯರಾಮ್, ವೇದಿಕಾ ಕಾರ್ಕಳ್ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ.

ಈ ಹಾಡಿನ ಚಿತ್ರೀಕರಣ ಬೆಂಗಳೂರಿನಲ್ಲೇ ನಡೆದಿದೆ. ನಾನೇ ಈ ಹಾಡಿಗೆ ನೃತ್ಯ ನಿರ್ದೇಶನ ಮಾಡಿದ್ದೇನೆ. ಹಾಡು ಅಧಿಕ ಸಂಖ್ಯೆಯಲ್ಲಿ ವೀಕ್ಷಣೆಯಾಗುತ್ತಿದ್ದು, ಮೆಚ್ಚುಗೆಯ ಮಹಾಪೂರವೇ ಹರಿದು ಬರುತ್ತಿದೆ. ಜಸ್ಟ್ ಮ್ಯಾರೀಡ್ ಆದವರಿಗಂತೂ ನಮ್ಮ ಚಿತ್ರ ಬಹಳ ಹತ್ತಿರವಾಗಲಿದೆ. ಚಿತ್ರತಂಡದ ಸಹಕಾರದಿಂದ ಒಂದೊಳ್ಳೆ ಪ್ರೇಮಕಥೆ ತೆರೆಗೆ ಬರಲು ಸಿದ್ದವಾಗಿದೆ. ಎಂದು ನಿರ್ದೇಶಕಿ ಸಿ.ಆರ್.ಬಾಬಿ ಹೇಳಿದರು.

ಪಿ.ಜಿ.ಛಾಯಾಗ್ರಹಣ, ಶ್ರೀಕಾಂತ್ ಮತ್ತು ಅಶಿಕ್ ಕುಸುಗೊಳ್ಳಿ ಸಂಕಲನ, ಅಮರ್ ಕಲಾ ನಿರ್ದೇಶನ, ವಿಕ್ರಮ್ ಮೋರ್ ಸಾಹಸ ನಿರ್ದೇಶನ ಹಾಗೂ ಬಾಬಾ ಭಾಸ್ಕರ್, ಶಾಂತಿ ಅರವಿಂದ್ ನೃತ್ಯ ನಿರ್ದೇಶನವಿದೆ. ಕೆ.ಕಲ್ಯಾಣ್, ಪ್ರಮೋದ್ ಮರವಂತೆ ಮತ್ತು ಧನಂಜಯ್ ಹಾಡುಗಳಿಗೆ ಸಾಹಿತ್ಯ ಬರೆದಿದ್ದಾರೆ.



ಕೆಡಿ ಜತೆಯಾದ ಶಿವಣ್ಣ

ಅನಾರೋಗ್ಯದಿಂದ ಬಳಲುತ್ತಿದ್ದ ಹ್ಯಾಟ್ರಿಕ್ ಹೀರೊ ಶಿವರಾಜ್ ಕುಮಾರ್, ಅಮೇರಿಕಾಗೆ ತೆರಳಿ ಚಿಕಿತ್ಸೆ ಪಡೆದು ಬಂದಿದ್ದಾರೆ. ಈಗ ಶಿವಣ್ಣ ಮತ್ತೆ ನಟನೆಗೆ ಮರಳಿದ್ದಾರೆ. ಹೌದು, ಶಿವರಾಜ್ ಕುಮಾರ್ ಸಾಲು ಸಾಲು ಸಿನಿಮಾಗಳಲ್ಲಿ ನಟಿಸಲಿದ್ದಾರೆ. ಅದರಲ್ಲಿ ಸದ್ಯ ಕೆಡಿ ಚಿತ್ರದಲ್ಲಿ ಬಣ್ಣಹಚ್ಚುತ್ತಿದ್ದಾರೆ. ಜೋಗಿ ಪ್ರೇಮ್ ನಿರ್ದೇಶನದ ಕೆಡಿ ಚಿತ್ರದಲ್ಲಿ ಶಿವಣ್ಣ ವಿಶೇಷ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಕೆಡಿ ಭೂಗತ ಲೋಕದ ಕಥೆಯ ಸಿನಿಮಾವಾಗಿದ್ದು, ಧ್ರುವ ಸರ್ಜಾ ನಾಯಕನಾಗಿ ನಟಿಸುತ್ತಿದ್ದಾರೆ. ಈಗ ಶಿವಣ್ಣ ಕೂಡ ಚಿತ್ರದಲ್ಲಿ ಅಭಿನಯಿಸುತ್ತಿರುವುದರಿಂದ ಅವರ ಪಾತ್ರ ಏನು ಎಂಬ ಕುತೂಹಲವೂ ಇದೆ. ಶಿವಣ್ಣ ಇಲ್ಲಿಯೂ ಡಾನ್ ಪಾತ್ರದಲ್ಲಿ ಮಚ್ಚು ಹಿಡಿದು ಅಬ್ಬರಿಸಲಿದ್ದಾರಾ ಎಂಬ ಕಾತರತೆಯೂ ಕಾಡುತ್ತಿದೆ. ಶಿವಣ್ಣ ಹಾಗೂ ಪ್ರೇಮ್ ಕಾಂಬಿನೇಷನ್‌ನಲ್ಲಿ ಬಂದ ಜೋಗಿ ಚಿತ್ರದಲ್ಲಿನ ಪಾತ್ರ ಇಲ್ಲಿಯೂ ಬರಬಹುದೇ ಎಂಬ ಕ್ಯೂರಿಯಾಸಿಟಿಯೂ ಇದೆ.

ಕೆಡಿ ಚಿತ್ರದಲ್ಲಿ ರಮೇಶ್ ಅರವಿಂದ್, ರವಿಚಂದ್ರನ್, ಶಿಲ್ಪಾ ಶೆಟ್ಟಿ ಸೇರಿದಂತೆ ದೊಡ್ಡ ತಾರಾಬಳಗವೇ ಇದೆ. ಬಾಲಿವುಡ್ ಖಳನಾಯಕ್ ಸಂಜಯ್ ದತ್ ಕೆಡಿ ಎದಿರು ಖಳನಾಗಿ ಅಬ್ಬರಿಸಲಿದ್ದಾರೆ. ಯುಗಾಧಿಯ ಹೊತ್ತಿಗೆ ಕೆಡಿ ತೆರೆಯಲ್ಲಿ ಅಬ್ಬರಿಸಲಿದ್ದಾರೆ, ರೀಷ್ಮಾ ನಾಣಯ್ಯ ನಾಯಕಿಯಾಗಿ ಬಣ್ಣಹಚ್ಚಿದ್ದು ವಿಭಿನ್ನ ಲುಕ್‌ನಲ್ಲಿ ಕಂಗೊಳಿಸಲಿದ್ದಾರೆ. ಇದು ಹೈಬಜೆಟ್ ಸಿನಿಮಾವಾಗಿದ್ದು ಕೆವಿಎನ್ ಪ್ರೊಡಕ್ಷನ್‌ನಲ್ಲಿ ನಿರ್ಮಾಣವಾಗಿದೆ.



ಸೆಟ್ಟೇರಲು ಸಿದ್ಧವಾದ ಕಾಗೆ ಬಂಗಾರ

ದೊಡ್ಮನೆ ಮೊಮ್ಮಗ ವಿನಯ್ ರಾಜ್‌ಕುಮಾರ್, ಎಕ್ಕ ಚಿತ್ರದಲ್ಲಿ ಬ್ಯುಸಿಯಾಗಿದ್ದಾರೆ. ರೋಹಿತ್ ಪದಕಿ ನಿರ್ದೇಶನದಲ್ಲಿ ಸಿದ್ಧವಾಗುತ್ತಿರುವ ಎಕ್ಕ ಸಿನಿಮಾದಲ್ಲಿ ವಿನಯ್ ರಗಡ್ ಆಗಿ ಮಿಂಚಲಿದ್ದಾರೆ. ಈ ಚಿತ್ರದ ಚಿತ್ರೀಕರಣವೂ ಭರದಿಂದ ಸಾಗಿದೆ. ಈ ನಡುವೆಯೇ ಯುವ ಅಭಿಮಾನಿಗಳಿಗೆ ಮತ್ತೊಂದು ಸಿಹಿ ಸುದ್ದಿ ಸಿಕ್ಕಿದೆ. ಸ್ಯಾಂಡಲ್‌ವುಡ್‌ನಲ್ಲಿ ಸುಕ್ಕಾ ಸೂರಿ ಎಂತಲೇ ಪ್ರಸಿದ್ಧಿ ಪಡೆದಿರುವ ಸೂರಿ ನಿರ್ದೇಶನದಲ್ಲಿ ಸೆಟ್ಟೇರಲಿರುವ ಕಾಗೆ ಬಂಗಾರ ಚಿತ್ರದಲ್ಲಿಯೂ ಯುವ ನಾಯಕನಾಗಿ ನಟಿಸಲಿದ್ದಾರೆ. ಹೌದು, ಸೂರಿ ನಿರ್ದೇಶನದಲ್ಲಿ ಕಾಗೆ ಬಂಗಾರ ಚಿತ್ರವೂ ಈ ಹಿಂದೆಯೇ ಸೆಟ್ಟೇರಬೇಕಿತ್ತು. ಆದರೆ ಕಾರಣಾಂತರಗಳಿಂದ ಸಿನಿಮಾ ಮುಂದಕ್ಕೆ ಹೋಗಿತ್ತು. ಈಗ ಸಿನಿಮಾ ಆರಂಭದ ಮುನ್ಸೂಚನೆಗಳು ಸಿಕ್ಕಿವೆ. ಇದು ಹೈಬಜೆಟ್ ಸಿನಿಮಾವಾಗಿದ್ದು ಜಯಣ್ಣ ಫಿಲಂಸ್‌ನಲ್ಲಿ ನಿರ್ಮಾಣವಾಗಲಿದೆ.

ಸಾಮಾನ್ಯವಾಗಿ ಸೂರಿ ಸಿನಿಮಾಗಳು ರಾ ಸ್ಟೈಲ್ ನಲ್ಲಿಯೇ ಇರಲಿವೆ. ಅಂತೆಯೇ ಈ ಸಿನಿಮಾವೂ ಕೂಡ ರಿಯಾಲಿಸ್ಟಿಕ್ ಆಗಿರಲಿದ್ದು, ಯುವರಾಜ್ ಕುಮಾರ್ ರಗಡ್ ಲುಕ್‌ನಲ್ಲಿ ಮಿಂಚಲಿದ್ದಾರೆ. ವಿಶೇಷ ಎಂದರೆ ದುನಿಯಾ ವಿಜಯ್ ಪುತ್ರಿ ರಿತನ್ಯಾ, ಯುವರಾಜ್‌ಗೆ ನಾಯಕಿಯಾಗಿ ಬಣ್ಣಹಚ್ಚಲಿದ್ದಾರೆ. ರಿತನ್ಯಾ, ಲ್ಯಾಂಡ್‌ಲಾರ್ಡ್ ಸಿನಿಮಾದಲ್ಲಿ ನಟಿಸುತ್ತಿದ್ದಾರೆ. ಈಗ ಕಾಗೆ ಬಂಗಾರ ಚಿತ್ರದ ಮೂಲಕ ನಾಯಕಿಯಾಗಿ ಚಂದನವನಕ್ಕೆ ಪರಿಚಿತರಾಗಲಿದ್ದಾರೆ.

ಯುದ್ಧಕಾಂಡ ತಂಡಕ್ಕೆ ವಹಾಬ್

ದಶಕಗಳ ಹಿಂದೆ ರವಿಚಂದ್ರನ್ ಅಭಿನಯದ ಯುದ್ಧಕಾಂಡ ಸಿನಿಮಾ ತೆರೆಗೆ ಬಂದು ಭರ್ಜರಿ ಯಶಸ್ಸು ಕಂಡಿತ್ತು. ಕೋರ್ಟ್ ಡ್ರಾಮಾ ಜಾನರ್‌ನ ಈ ಚಿತ್ರದಲ್ಲಿ ರವಿಮಾಮ ವಕೀಲರಾಗಿ ಅಬ್ಬರಿಸಿದ್ದರು. ಇಲ್ಲಿ ತಾಯಿ ಸೆಂಟಿಮೆಂಟ್ ಚಿತ್ರದ ಪ್ರಮುಖ ಹೈಲೈಟ್ ಆಗಿತ್ತು. ಈಗ ಯುದ್ಧಕಾಂಡ ಶೀರ್ಷಿಕೆಯಲ್ಲಿ ಮತ್ತೊಂದು ಸಿನಿಮಾ ಮೂಡಿಬರುತ್ತಿದೆ. ಹೊಸ ಸಿನಿಮಾದಲ್ಲಿ ಅಜಯ್ ರಾವ್ ನಾಯಕನಾಗಿ ನಟಿಸಿದ್ದು, ಲಾಯರ್ ಪಾತ್ರದಲ್ಲಿ ಮಿಂಚಲು ಸಿದ್ಧವಾಗಿದ್ದಾರೆ. ಇಲ್ಲಿಯೂ ಕೂಡ ತಾಯಿ ಸೆಂಟಿಮೆಂಟ್ ಬೆರೆತಿದೆ. ಅದರ ಜತೆಗೆ ಯುವತಿಯೊಬ್ಬಳ ಕೊಲೆಯ ಸುತ್ತ ಚಿತ್ರದ ಕಥೆ ಸಾಗುತ್ತದೆ. ಆಕೆಯ ಕುಟುಂಬಕ್ಕೆ ನ್ಯಾಯ ಕೊಡಿಸಲು ನಡೆಯುವ ನ್ಯಾಯಾಂಗ ಹೋರಾಟದ ಕಥೆಯೂ ಇಲ್ಲಿದೆ.

ಆರಂಭದಿಂದಲೂ ಕುತೂಹಲ ಮೂಡಿಸಿರುವ ಈ ಚಿತ್ರತಂಡಕ್ಕೆ ಈಗ ಮಲೆಯಾಳಂ ಖ್ಯಾತ ಗಾಯಕ ಹೇಷಮ್ ಅಬ್ದುಲ್ ವಹಾಬ್ ಸೇರಿದ್ದು, ಚಿತ್ರದ ಟೈಟಲ್ ಸಾಂಗ್‌ಗೆ ದನಿಯಾಗಿದ್ದಾರೆ. ಮಲೆಯಾಳಂನಲ್ಲಿ ಹಲವು ಸಿನಿಮಾಗಳ ಹಾಡಿಗೆ ದನಿಯಾಗಿ ಪ್ರಸಿದ್ಧಿ ಪಡೆದಿರುವ ವಹಾಬ್ ಈ ಚಿತ್ರದ ಮೂಲಕ ಕನ್ನಡ ಚಿತ್ರರಂಗಕ್ಕೂ ಎಂಟ್ರಿಯಾಗಿದ್ದಾರೆ.



ಈ ಹಿಂದೆ ಕಟಿಂಗ್ ಶಾಪ್ ಎಂಬ ವಿಭಿನ್ನ ಸಿನಿಮಾವನ್ನು ನಿರ್ದೇಶಿಸಿ ಸೈಎನಿಸಿಕೊಂಡಿರುವ ನಿರ್ದೇಶಕ ಪವನ್ ಭಟ್ ಈ ಚಿತ್ರಕ್ಕೂ ಆ್ಯಕ್ಷನ್ ಕಟ್ ಹೇಳಿದ್ದಾರೆ. ಅಜಯ್ ಪ್ರೊಡಕ್ಷನ್‌ನಲ್ಲಿ ಚಿತ್ರ ನಿರ್ಮಾಣವಾಗುತ್ತಿದ್ದು, ಅಜಯ್ ರಾವ್ ಅವರೇ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ. ಈಗಾಗಲೇ ಚಿತ್ರೀಕರಣ ಮುಗಿಸಿರುವ ಯುದ್ಧಕಾಂಡ ಅಕ್ಟೋಬರ್ ಹೊತ್ತಿಗೆ ತೆರೆಗೆ ಬರುವ ಸಾಧ್ಯತೆ ಇದೆ.

ವಿರಾಮ

ಓದುವ ಲೋಕಕ್ಕೆ ಓದುವ ನಿಲ್ದಾಣ

ಪಂಚ ಶಂಕರನಾರಾಯಣ ಪರಿಕ್ರಮ

ಒಂದೇ ದಿನದಲ್ಲಿ 35 ಕಿ.ಮೀ. ನಡಿಗೆ!

ಉತ್ತರ ಭಾರತದ ಕೆಲವು ಕಡೆ, ಮಹಾರಾಷ್ಟ್ರ, ಆಂಧ್ರ ಪ್ರದೇಶಗಳಲ್ಲಿ ಪರಿಕ್ರಮದ ಮೂಲಕ ಹಲವು ದೇಗುಲಗಳಿಗೆ, ಪುಣ್ಯ ಸ್ಥಳಗಳಿಗೆ ಭೇಟಿ ಕೊಡುವ ಪದ್ಧತಿ ಇಂದಿಗೂ ಚಾಲ್ತಿಯಲ್ಲಿದೆ. ನಮ್ಮ ರಾಜ್ಯದಲ್ಲೂ ಹಿಂದೆ ಅಂತಹ ಪರಿಕ್ರಮಗಳು ಇದ್ದವು; ಇಪ್ಪತ್ತನೆಯ ಶತಮಾನದಲ್ಲಿ, ನಮ್ಮ ದೇಶಕ್ಕೆ ಸ್ವಾತಂತ್ರ್ಯ ದೊರಕಿದ ನಂತರ, ಹಳ್ಳಿಹಳ್ಳಿಗಳಲ್ಲಿ ಶಾಲೆಗಳು ಆರಂಭಗೊಂಡ ನಂತರ, ಅಂತಹ ಪರಿಕ್ರಮ ಮಾರ್ಗಗಳು ಮಸುಕಾದವು; ವಿದ್ಯೆ ಕಲಿತ ಹಲವರಿಗೆ ಅಂತಹ 'ಕಾಡು ದಾರಿಯ ಚಾರಣ'ದಲ್ಲಿ ಆಸಕ್ತಿ ಕುಂದಿತು. ಐದು ದೇಗುಲಗಳನ್ನು ಒಂದೇ ದಿನದಲ್ಲಿ ಸಂದರ್ಶಿಸುವ, ಸುಮಾರು 35 ಕಿ.ಮೀ. ದೂರದ ಒಂದು ಪರಿಕ್ರಮ ಮಾರ್ಗವು ಸುಮಾರು 1970ರ ದಶಕದ ತನಕವೂ ಚಾಲ್ತಿಯಲ್ಲಿತ್ತು ಎಂದು ತಿಳಿದ ಉತ್ಸಾಹಿಯೊಬ್ಬರು, ಅದೇ ದಾರಿಯಲ್ಲಿ ನಡೆದು ನೋಡುವ ಹುಮ್ಮಸ್ಸಿನಿಂದ ಈ ವರ್ಷ ಒಂದು ಮುಂಜಾನೆ ಹೊರಟರು. ಆದರೆ, ಕಾಲ್ದಾರಿಗಳು ಕಣ್ಮರೆಯಾಗಿದ್ದವು, ದಾರಿಗಡ್ಡಲಾಗಿ ಹಲವು ಕಡೆ ಬೇಲಿಗಳೆದ್ದಿದ್ದವು; ನದಿಗಡ್ಡಲಾಗಿ ಡ್ಯಾಂ ನಿರ್ಮಾಣಗೊಂಡು, ದಾರಿಗಳನ್ನು ಮುಳುಗಿಸಿದ್ದವು. ಹಳ್ಳಿಯ ಮೂಲಕ ಸಾಗುವ ದಾರಿಯ ಮಾರ್ಗದರ್ಶನ ಕೇಳಿದರೆ, ಹಳ್ಳಿಯ ಜನರು ಅಚ್ಚರಿ ಪಟ್ಟು, ಈಗ ಅಂತಹ ದಾರಿಗಳಿಲ್ಲ, ಆಟೋರಿಕ್ಷಾ ಹತ್ತಿ ಸಾಗಿ ಎಂಬ ಮಾರ್ಗದರ್ಶನ ನೀಡುತ್ತಿದ್ದರು. ಕೊನೆಗೂ ಐದು ದೇಗುಲಗಳಿಗೆ ಕಾಲ್ನಡಿಗೆಯಲ್ಲೇ ನಡೆದು ಸಾಗಿದ ಅನುಭವ ಅಪೂರ್ವ, ಅನನ್ಯ ಎನಿಸಿತು. ಅಂತಹದೊಂದು ಅನುಭವ ಇಲ್ಲಿದೆ. ನಿಮ್ಮ ಪ್ರತಿಕ್ರಿಯೆಗೆ ಸ್ವಾಗತ.

» ದೇವು ಹನೆಹಳ್ಳಿ, ಬಂಡೀಮಠ

ಬಲು ಹಿಂದೆ, ಅಂದರೆ ಅರ್ಧ ಶತಮಾನದ ಹಿಂದೆಯೇ, ನಮ್ಮ ಕುಂದಾಪುರ ಪ್ರದೇಶದಲ್ಲಿ ನಿಂತು ಹೋದ ಒಂದು ತೀರ್ಥಯಾತ್ರೆಯೆಂದರೆ 'ಪಂಚ ಶಂಕರನಾರಾಯಣ ಪರಿಕ್ರಮ'. ಐದು ಶಂಕರ ನಾರಾಯಣ ದೇವಾಲಯಗಳನ್ನು (ಕರಾವಳಿಯಲ್ಲಿ ಒಟ್ಟು ಮೂವತ್ತಕ್ಕೂ ಅಧಿಕ ಶಂಕರನಾರಾಯಣ ದೇವಾಲಯಗಳಿವೆ) ಸೂರ್ಯೋದಯದಿಂದ ಸೂರ್ಯಾಸ್ತದೊಳಗೆ ಸಂದರ್ಶಿಸುವುದೇ ಪಂಚ ಶಂಕರ ನಾರಾಯಣ ದರ್ಶನ. ಅದನ್ನು ಶಿವರಾತ್ರಿಯ ದಿನದಂದು ನಡೆಸುವುದು ವಾಡಿಕೆ. ಮಾಸ ಶಿವರಾತ್ರಿಯ ದಿನದಂದು ಮಾಡುವ ರೂಢಿ ಕೂಡ ಇತ್ತಂತೆ. ಅವರು ಸಂದರ್ಶಿಸುತ್ತಿದ್ದ ಐದು ಶಂಕರ ನಾರಾಯಣ ದೇಗುಲಗಳೆಂದರೆ ಕ್ರೋಢ ಶಂಕರ ನಾರಾಯಣ (ಈಗಿನ ಶಂಕರನಾರಾಯಣ ಗ್ರಾಮ), ಹೊಳೆ ಶಂಕರನಾರಾಯಣ, ಮಾಂಡವಿ ಶಂಕರನಾರಾಯಣ, ಬೆಳ್ವೆ ಶಂಕರನಾರಾಯಣ (ಬೆಳ್ವೆ ಗ್ರಾಮದ ಬಳಿ ಇದೆ) ಮತ್ತು ಆವರ್ಸೆ ನೂಜಿ ಶಂಕರನಾರಾಯಣ.

ಕುಂದಾಪುರ ತಾಲೂಕಿನ ಶಂಕರನಾರಾಯಣದ ಕ್ರೋಢ ಶಂಕರನಾರಾಯಣ ದೇವಸ್ಥಾನದಲ್ಲಿ ಮುಂಜಾನೆಯ ಪೂಜೆ ನೋಡಿ ಹೊರಟರೆ ರಾತ್ರಿ ಪೂಜೆ ಆವರ್ಸೆಯಲ್ಲಿ. ಹೆಚ್ಚುಕಡಿಮೆ 33-34 ಕಿಲೋಮೀಟರ್‌ಗಳ ನಡಿಗೆ. ಪರಿಕ್ರಮ ಪೂರ್ತಿಯಾಗಬೇಕಾದರೆ ಪುನಃ ಕ್ರೋಢ ಶಂಕರ ನಾರಾಯಣಕ್ಕೆ ಬರಬೇಕಲ್ಲವೇ? ಶಿವರಾತ್ರಿಯ ದಿನವಾದುದರಿಂದ ಜಾಗರಣೆಗೆ ನಿಲ್ಲಲು ಆವರ್ಸೆ ಅನುಕೂಲ. ಇನ್ನೊಂದು ಮುಖ್ಯ ವಿಚಾರವೆಂದರೆ ರಾತ್ರಿ ಪೂಜೆ ಮುಗಿಸಿ ಹುಲಿ, ಚಿರತೆ, ಕಾಡುಕೋಣ, ಕಾಳಿಂಗ, ಕನ್ನಡಿಹಾವುಗಳಿಂದ ತುಂಬಿದ ನಾಗರ್ತಿ ಕಾನನ್ನು ಹಾದು, ಹಾಲಾಡಿ ತಲುಪಿ, ದೋಣಿ ದಾಟಿ ಶಂಕರನಾರಾಯಣ ತಲುಪುವುದು ಕಷ್ಟ. ಆದುದರಿಂದ ರಾತ್ರಿ ಆವರ್ಸೆ ಗ್ರಾಮದ ಶಂಕರನಾರಾಯಣ ದೇಗುಲದಲ್ಲಿ ತಂಗುವುದು.

ಈಗ ವಾಹನದ ಅನುಕೂಲ ಇರುವ ಕಾಲವಲ್ಲವೇ? ಭಕ್ತಿಯ ಜತೆಗೆ ಉತ್ಸಾಹ, ಅನುಕೂಲ ಇರುವ ನೂರಾರು ಜನರು ಕಾರು, ಬೈಕ್, ವ್ಯಾನ್ ಹತ್ತಿ ಬುರ್ರನೆ ಹೋಗುತ್ತಾರೆ. ಹೊರಟ ದೇವಸ್ಥಾನಕ್ಕೆ ಪುನಃ ಬಂದು ಸಮಾಪನ ಮಾಡುವ ಕ್ರಮ ತಂದಿದ್ದಾರೆ. ದೇವಸ್ಥಾನಗಳು ಕೂಡ ಆಧುನಿಕವಾಗಿ ಬದಲಾಗಿವೆ. ಆವರ್ಸೆ ಶಂಕರನಾರಾಯಣ ದೇವಸ್ಥಾನ ಜೀರ್ಣೋದ್ಧಾರವಾಗಿದೆ. ಮಾಂಡವಿ ಮತ್ತು ಹೊಳೆ ಶಂಕರನಾರಾಯಣ ದೇವಸ್ಥಾನಗಳು ಭಕ್ತರ ಕೊಡುಗೆಯಿಂದ ಅಭೂತಪೂರ್ವ ರೂಪಾಂತರ ಹೊಂದಿವೆ. ಆ ಕಾಡಿನ ಮಧ್ಯೆ ಅದು ಔಚಿತ್ಯಪೂರ್ಣವೇ ಎಂಬ ಪ್ರಶ್ನೆ ಬಿಟ್ಟರೆ, ಮಾಂಡವಿ ಶಂಕರನಾರಾಯಣ ದೇವಸ್ಥಾನವನ್ನು ವಾಸ್ತುಶಿಲ್ಪ ಮತ್ತು ಸೌಂದರ್ಯದ ದೃಷ್ಟಿಯಿಂದ ಮೆಚ್ಚಬಹುದು.

ವ್ಯಾಪಾರೀ ಮಾರ್ಗಗಳೇ?

ಪಂಚ ಶಂಕರನಾರಾಯಣ ದರ್ಶನಕ್ಕೆ ಬಳಸುತ್ತಿದ್ದ ದಾರಿಗಳು, ಮೂಲದಲ್ಲಿ ಅವು ವ್ಯಾಪಾರೀ ಮಾರ್ಗಗಳಾಗಿದ್ದವು. ವಾರಾಹಿ ನದಿಯ ಸೌಡ ಕಡವಿನಿಂದ ಇಂದಿನ ಶಂಕರನಾರಾಯಣ ಮತ್ತು ಸಿದ್ದಾಪುರ ಪೇಟೆಗಳನ್ನು (ಸರಿಸುಮಾರಾಗಿ) ಹಾದು ಹೊಳೆ ಶಂಕರನಾರಾಯಣ ದೇವಾಲಯ ಇರುವಲ್ಲಿ ವಾರಾಹಿ ನದಿಯನ್ನು ದಾಟಿ, ಇಂದಿನ ಹಂಚಿಕಟ್ಟೆಗೆ (ಹಂಚಿಕಟ್ಟೆ ಶಬ್ದ ಗಮನಿಸಿ) ಬಂದು ಕೊಕ್ಕೋಡು ಇತ್ಯಾದಿ ಹಳ್ಳಿಗಳನ್ನು ಹಾದು, ಕೆಳಸುಂಕ ಸೇರಿ, ಸಹ್ಯಾದ್ರಿಯ ಮಲೆಪರ್ವತವನ್ನೇರಿ ಮೇಲ್ಸುಂಕ ತಲುಪಿ ಮಲೆನಾಡು, ಮತ್ತೆ ಬಯಲುಸೀಮೆ ಸೇರುವುದು. ಇದಕ್ಕೆ ಪೂರಕವಾಗಿ ಬಾರಕೂರು, ಧ್ವಜಪುರ (ಕೋಟೇಶ್ವರ), ಬಿದ್ಕಲ್ಕಟ್ಟೆ, ಹಾಲಾಡಿ, ಬರದ್ಕಲ್, ಬಾಕುಡಿ ಮೂಲಕ ಅಮಾಸೆಬೈಲ್ ಸೇರುವ ಇನ್ನೊಂದು ಹಾದಿ. ಇದು ಮುಖ್ಯವಾಗಿ

ಕ್ರೋಢ ಶಂಕರನಾರಾಯಣ. ಇಲ್ಲಿಂದಲೇ ಪರಿಕ್ರಮ ಆರಂಭ.

ಜನ ಮತ್ತು ಸೈನಿಕರ ದಾರಿಯಾಗಿತ್ತು.

ಎರಡನೆಯ ದಾರಿಯು, ಸೀತಾನದಿಯ ಕೊಕ್ಕರ್ಣೆ ಕಡವಿನಿಂದಾರಂಭಿಸಿ ಮೂಲಕ ಬೆಳ್ವೆ ಮೂಲಕ ಹೆಂಗೊಳ್ಳಿ, ನರಸೀಪುರ ಹಾದು ಮಾಂಡವಿ ಶಂಕನಾರಾಯಣ ಸೇರುತ್ತದೆ. ಅಲ್ಲಿಂದ ಕೆಳಸುಂಕ. ಈ ಬೆಳ್ವೆ ಕೊಕ್ಕರ್ಣೆಯ ಆಸುಪಾಸಿನಲ್ಲಿರುವುದೇ ಸೂರ್ಗೋಳಿ. ಕುಂದಾಪುರ ಸರಹದ್ದಿನ ಜನಪದ ಕತೆಗಳಲ್ಲಿ, ಪುರಾಣಗಳಲ್ಲಿ ದಾರಿಹೋಕರನ್ನು, ವರ್ತಕರನ್ನು ದರೋಡೆ ಮಾಡುವುದನ್ನು ಕೇಳಿದ್ದೇವೆ ಅಲ್ಲವೇ? ಸೂರ್ಗೋಳಿ ಅಂತು ಎಂಬ ದರೋಡೆಕೋರನು ಕರಾವಳಿಯ ರಾಬಿನ್ ಹುಡ್ ಆಗಿ ಚರಿತ್ರೆಗೆ ಸಂದ ಕಥನವಿದೆ. ಇದಕ್ಕೆ ಈ ದಾರಿಗಳೇ ಕಾರಣ! ಈ ವ್ಯಾಪಾರೀ ತಂಗುದಾಣಗಳೇ ಭಕ್ತಿಯ ಕೇಂದ್ರಗಳಾಗಿ ಮಾರ್ಪಟ್ಟವು. ವ್ಯಾಪಾರಿಗಳ ಸಾರ್ಥದ ಜತೆಯಲ್ಲಿಯೇ ಬ್ರಾಹ್ಮಣರ ವಲಸೆ ಮತ್ತು ದೇವಸ್ಥಾನಗಳ ನಿರ್ಮಾಣ ಸಾಗಿರಬೇಕು. ಅದು ಮಲೆನಾಡಿನಲ್ಲಿ ಕರಾವಳಿಯ ಬ್ರಾಹ್ಮಣರು ಪೂಜೆಯ ಉದ್ದೇಶದಿಂದ ವ್ಯಾಪಕವಾಗಿ ಸೇರಿ ಕೊಂಡ ಕಾಲ. ಸಹ್ಯಾದ್ರಿಯ ಮೂಗಿನ ಕೆಳಗೆ ಗೊಂಡಾರಣ್ಯದಲ್ಲಿ ಬದುಕುತ್ತಿದ್ದ ಪ್ರತಿ ಕುಟುಂಬಕ್ಕೂ ಅವರವರ ಜಾತಿಗೆ ಹೊಂದಿಕೊಂಡು ಘಟ್ಟದ ಮೇಲೆ ಅಡುಗೆ, ಪೂಜೆ, ಪೌರೋಹಿತ್ಯ, ಅಡಿಕೆ ತೋಟದ ಉಸ್ತುವಾರಿ, ಅಲ್ಲೇ ಕೆಲಸ, ಕೃಷಿಕಾರ್ಯ ಇತ್ಯಾದಿಯೆಂದು ಸಂಪರ್ಕ, ತಿರುಗಾಟ ಇತ್ತು.

ಇನ್ನೊಂದು ಹಾದಿ ಕೊಲ್ಲೂರಿನ ಸಮೀಪದ ಹಳ್ಳಿಬೇರು. ಇಲ್ಲಿ ಇರುವ 10-15 ಮನೆಗಳು 'ಜೋಗಿ ಕುಡುಬಿ' ಸಮುದಾಯದವರದ್ದು. ಇವರು ಜನಿವಾರಧಾರಿಗಳು. ಇಲ್ಲಿನ ವಿಸ್ಮಯ ಹುಟ್ಟಿಸುವಷ್ಟು ಸುಲಭಕ್ರಮ್ಯ ಘಾಟಿದಾರಿ, ಸಹ್ಯಾದ್ರಿಯ ಬೇರಾವ ಭಾಗದಲ್ಲಿಯೂ ಇರಲಿಕ್ಕಿಲ್ಲ. ಹಳ್ಳಿಬೇರು, ಮರಾಠಿ - ಬ್ಯಾಕೋಡು ತುಮರಿ ಮೂಲಕ ವಿಜಯನಗರದ ಸೈನ್ಯವು ಘಾಟಿ ಇಳಿದು ಕೊಲ್ಲೂರು ಸೇರಿರಬೇಕು. ವಿಜಯನಗರ ಸಾಮ್ರಾಜ್ಯದ ಅತ್ಯಂತ ಪ್ರಾಚೀನವಾದ ಒಂದು ಶಾಸನ ಸಿಗುವುದು ಕೊಲ್ಲೂರಿನಲ್ಲಿ.

ಶಿವರಾತ್ರಿಗೆ ಮುಂಚಿತ ಚಾರಣ

ಪಂಚ ಶಂಕರನಾರಾಯಣ ದರ್ಶನಕ್ಕೆ 9.2.2025 ರಂದು, ಅಂದರೆ ಶಿವರಾತ್ರಿಗೆ ಇನ್ನೇನು ಕೆಲವೇ ವಾರಗಳಿರುವಾಗ ಹೊರಟಾಗ, ಎಲ್ಲವೂ ನಾನು ಅಂದುಕೊಂಡಂತೆಯೇ ನಡೆಯಿತು. ಅಂದರೆ ಬದಲಾದ ಸನ್ನಿವೇಶ. ಹಳ್ಳಿಯ ಯಾವ ಕಾಲ್ದಾರಿಗಳೂ ಉಳಿದಿಲ್ಲ. ನಡೆಯುವ ಇನ್ನೊಬ್ಬ ಮನುಷ್ಯ ಇದಿರಾಗುವುದಿಲ್ಲ. ಹಿಂದಿನ ಪದ್ಧತಿಯಂತೆ, ಅಪರಿಚಿತರ ಮನೆಯ ಮುಂದೆ ನೀರಿಗಾಗಿ ನಿಲ್ಲುವಂತಿಲ್ಲ. ತಡವಾದರೆ, ಅಗತ್ಯವಾದರೆ ಯಾವುದೋ ದೇವಸ್ಥಾನದ ಅಥವಾ ಯಾರದೋ ಮನೆಯ ಜಗುಲಿಯಲ್ಲಿ ಮಲಗಿ ಬೆಳಿಗ್ಗೆ ಹೊರಡುವಂತಿಲ್ಲ ಇತ್ಯಾದಿ. ವೈಯಕ್ತಿಕವಾಗಿ ಹೇಳಬೇಕೆಂದರೆ, ನನಗೆ ಸ್ಫೂರ್ತಿ (ಮೋಟಿವೇಶನ್) ಇಲ್ಲ; ಅಂದರೆ ನಾನು ಭಕ್ತನ ದೃಷ್ಟಿಯಲ್ಲಿ ನಡೆಯಲು ಹೊರಟಿದ್ದಲ್ಲ. ಪರಿಸರದ ಸೌಂದರ್ಯೋಪಾಸನೆ ಎನ್ನಲು ಅಲ್ಲಿ ಸೌಂದರ್ಯವೇ ಉಳಿದಿಲ್ಲ.

ಈಗ ನಡೆಯಲು ಹೊರಟರೆ, ಹಿಂದಿನವರಿಗಿಂತ ನನಗೆ ಜಾಸ್ತಿ ನಡೆಯಬೇಕು ಎಂಬ ಎಚ್ಚರವಿತ್ತು. ಎಲ್ಲಾ ಕಾಲ್ದಾರಿಗಳು ಮಾಯವಾಗಿವೆ; ಕೆಲವು ರಸ್ತೆಗಳಾಗಿ ಬದಲಾಗಿವೆ. ಕಾಲ್ದಾರಿಯಲ್ಲಿ ನಡೆಯಲು ಅಸಾಧ್ಯ; ಮೊದಲಿಂದ ಕೊನೆಯ ತನಕ ವಾಹನಗಳು ವೇಗವಾಗಿ ಓಡಾಡುವ ರಸ್ತೆಗಳೇ ಗತಿ. ಅತ್ಯಂತ ಎಚ್ಚರ ಬೇಕು. ನಾನು ಸಮಯ ಉಳಿಸಬೇಕು. ದೇವಸ್ಥಾನ ನೋಡಿದರೆ ಸಾಕು. ಒಳಗೆ ಹೋಗಬೇಕಾದರೆ ಹೋಗಬಹುದು ಅಥವಾ ಬೇಡ. ಸ್ನಾನ ಮಾಡಿದರೆ ಸಮಯ ನಷ್ಟವಾಗುತ್ತದೆ ಎಂಬ ಯೋಚನೆಯಿಂದ ನಡೆಯಲು ಆರಂಭಿಸಿದೆ.

ಬೆಳಿಗ್ಗೆ 6.35ಕ್ಕೆ ಶಂಕರನಾರಾಯಣ ಬಸ್ ನಿಲ್ದಾಣದಲ್ಲಿ ಇಳಿದು ದೂರದಿಂದಲೇ ದೇವಸ್ಥಾನವನ್ನು ನೋಡಿ ಸಿದ್ಧಾಪುರದತ್ತ ನಡೆಯಲಾರಂಭಿಸಿದೆ. ಇದರಲ್ಲಿ ಶಂಕರನಾರಾಯಣದಿಂದ ಸಿದ್ಧಾಪುರದವರೆಗಿನ ರಸ್ತೆ ಮಾರ್ಗವೊಂದನ್ನುಳಿದು, ಈ ದಿನ ನಡೆಯಲಿರುವ ಉಳಿದ ಎಲ್ಲಾ ದಾರಿಗಳನ್ನು ನಾನು 1975-76ರಿಂದ ಮೊದಲ್ಗೊಂಡು ಬಿಡಿಬಿಡಿಯಾಗಿ, ಆಗಾಗ ನಡೆದೋ, ಬೈಸಿಕಲ್ ತುಳಿದೋ ಕ್ರಮಿಸಿದ ದಾರಿಗಳೇ. ಅವುಗಳ ರೂಪಾಂತರವನ್ನು ಕಂಡವನೇ. ಇಂದು ಕಂಡದ್ದು ಮಾತ್ರ ಭಯಾನಕ.

ದೀರ್ಘ ನೀರಿನ ದಾರಿ

ಸಿದ್ಧಾಪುರದಲ್ಲಿ ತಿಂಡಿ ತಿಂದು ಹೊಳೆ ಶಂಕರನಾರಾಯಣದತ್ತ ನಡೆದೆ. ದೇವಸ್ಥಾನ ಶ್ರೀಮಂತವಾಗಿ ಬದಲಾಗಿದೆ. ಅರ್ಚಕರು ಸಿಕ್ಕಿದರು. ಐತಿಹ್ಯದ ಪ್ರಕಾರ ದೇವರ ಮೂಲ ಲಿಂಗವಿರುವುದು ಹೊಳೆಯಲ್ಲಿ. ಮೊದಲಾದರೆ ಅಲ್ಲಿಯೇ ಹೊಳೆ ದಾಟಿ, ಹಂಚಿಕಟ್ಟೆ ತಲುಪಿ ಅಂದರೆ ನೇರವಾಗಿ ದಕ್ಷಿಣ ದಿಕ್ಕಿನಲ್ಲಿ ಆರೆಂಟು ಕಿಲೋ ಮೀಟರ್ ನಡೆದರೆ ಮಾಂಡವಿ ಶಂಕರ ನಾರಾಯಣ ಸಿಗುತ್ತದೆ.

ಆದರೆ ಈಗ ಅದು ಸಾಧ್ಯವಿಲ್ಲ. ವಾರಾಹಿ ಯೋಜನೆಯ ಡ್ಯಾಮ್‌ನಿಂದ ನೀರು ಏರಿದೆ; ಅಲ್ಲೆಲ್ಲಾ ನೂರಾರು ಕಾಲುವೆಗಳಿವೆ, ಅಕ್ವಾಡಕ್ಟ್‌ಗಳಿವೆ; ಡ್ಯಾಮಿನ ಕೆಳಗೂ ನದಿಯನ್ನು ಇಳಿದು ದಾಟುವಂತಿಲ್ಲ. ಆದುದರಿಂದ ನಾವು ಸಿದ್ಧಾಪುರಕ್ಕೆ ಹಿಂದಿರುಗಿ ಬರಲೇಬೇಕು. ಅಂದರೆ 14-15 ಕಿಲೋಮೀಟರ್ ಹೆಚ್ಚುವರಿ. ಬೇರೆ ನಿರ್ವಾಹ ಇಲ್ಲ; ನಡೆದೆ. ಬಿಸಿಲೆಂದರೆ ಬಿಸಿಲು. ಮಧ್ಯಾಹ್ನ ಸರಿಯಾಗಿ ಒಂದು ಗಂಟೆಗೆ ಅಮಾಸೆಬೈಲ್ ತಲುಪಿದೆ.

ಬಿಸಿಲಲ್ಲಿ ನಡೆಯುವುದು ಸಹಜವೂ ಅಲ್ಲ, ಸಾಹಸವೂ ಅಲ್ಲ. ಅದು ಒಳಿತೂ ಅಲ್ಲ. ನಾನು ನನ್ನ ದೇಹವನ್ನು ಮತ್ತು ಮನಸ್ಸನ್ನು ಮೊದಲಿನಿಂದಲೂ ಟೊಪ್ಪಿ ಮತ್ತು ಕೊಡೆ ಕೂಡಾ ಹಿಡಿಯದೆ ಬಿಸಿಲಿಗೆ ಒಗ್ಗಿಸಿಕೊಂಡಿದ್ದೆ. (ಆದರೆ ಕಳೆದ ತಿಂಗಳ ಒಂದು ಇಂತದೇ ದೀರ್ಘ ನಡಿಗೆಗೆ ಮತ್ತು ಇಂದಿನದಕ್ಕೆ ಮೊದಲ ಬಾರಿಗೆ ಟೊಪ್ಪಿ ಧರಿಸಿದೆ. ಪ್ರಯೋಜನ ಕಂಡೆ.) ಈಗೀಗ ಅದು ಕಷ್ಟವಾಗುತ್ತಿದೆ. ವಯಸ್ಸು ಒಂದು ಕಾರಣವಾದರೆ, ಇನ್ನೊಂದು ಬದಲಾದ ಹವಾಮಾನ. ಅರಣ್ಯ ಮತ್ತು ಮರಗಳ ನಾಶದಿಂದ ಕರಾವಳಿಯ ಬಿಸಿಲು, ಗಾಳಿ, ಉಷ್ಣತೆ, ತೇವಾಂಶ ಎಲ್ಲವೂ ಬದಲಾಗಿವೆ. ಹಿಂದಿನವರಿಗೆ ಈ ಕಷ್ಟವಿರಲಿಲ್ಲ. ಕಾಲ್ದಾರಿಯಾದ ಕಾರಣ ನೆರಳು ತಪ್ಪುತ್ತಿರಲಿಲ್ಲ. ಆದರೂ ಬಿಳಿಯ ಬಣ್ಣದ ಬಟ್ಟೆಯೊಂದನ್ನು ತಲೆಯ ಮೇಲೆ ಹಾಕಿಕೊಳ್ಳುತ್ತಿದ್ದರು. ಮರದ ಕೆಳಗೆ ಕುಳಿತುಕೊಳ್ಳುತ್ತಿದ್ದರು. ನನಗೆ ಅಂತಹ ಅವಕಾಶ ಕಡಿಮೆ. ಏಕೆಂದರೆ ರಸ್ತೆಯ ಇಕ್ಕೆಲಗಳೆಂದರೆ ತ್ಯಾಜ್ಯ, ಕೊಳಕು ವಸ್ತುಗಳ ತಿಪ್ಪೆಯಾಗಿಬಿಟ್ಟಿವೆ. ಅರಣ್ಯ ಅಥವಾ ಗ್ರಾಮೀಣ ಪ್ರದೇಶದ ರಸ್ತೆಗಳೆಂದರೆ, ವಾಹನದಲ್ಲಿ ಬಂದು ಯಾರು ಎಲ್ಲಿಂದ ಬೇಕಾದರೂ ಬಂದು ಕಸ ಬಿಸಾಡಿ ಹೋಗಬಹುದಾದ ಮುಕ್ತ ಜಾಗಗಳು.

ಭಾನುವಾರವಾದುದರಿಂದ ಅಮಾಸೆಬೈಲ್ ಪೇಟೆಯೆಲ್ಲ ಖಾಲಿಖಾಲಿ. ಇದು ಕರಾವಳಿಯಲ್ಲಿ ಒಂದು ಹೊಸ ಬೆಳವಣಿಗೆ. ಯಾವ ಹೋಟೆಲ್



ಹೊಳೆ ಶಂಕರನಾರಾಯಣ.

ಕೂಡಾ ತೆರೆದಿರಲಿಲ್ಲ. ಪುಣ್ಯಕ್ಕೆ ಒಂದು ಅಂಗಡಿಯಲ್ಲಿ ರಾಗಿ ಬಿಸ್ಕಿಟ್ ಸಿಕ್ಕಿತು. ಮತ್ತೊಂದು ಅಂಗಡಿಯಲ್ಲಿ ನಂದಿನಿ ಸುವಾಸಿತ ಹಾಲು ಸಿಕ್ಕಿತು. ಅದನ್ನು ಅಲ್ಲಿ ಮೊದಲ ಬಾರಿ ಕುಡಿದೆ! ಮಗದೊಂದು ಅಂಗಡಿಯಲ್ಲಿ ಬಾಳೆಹಣ್ಣು ಸಿಕ್ಕಿತು. ಒಂದು ಬಾಟಲಿ ನೀರು ಖರೀದಿಸಬೇಕಾಯಿತು.

ಅಲ್ಲಿಂದ ಜೆಡ್ಡಿಗದ್ದೆ ಮಾರ್ಗದಲ್ಲಿ ನಡೆದು ಮಾಂಡವಿ ಶಂಕರನಾರಾಯಣ ದೇವಸ್ಥಾನ ತಲುಪಿದೆ. ದೇವಸ್ಥಾನಕ್ಕೆ ಇನ್ನು ನೂರು ಮೀಟರ್ ದೂರ ಇರುವಾಗ 3 ಜಿಂಕೆಗಳು ಮೇಯುತ್ತಿದ್ದವು. ನನ್ನನ್ನು ನೋಡಿ ಚಂಗನೆ ಹಾರಿ ಕಾಡಿನಲ್ಲಿ ಕಣ್ಮರೆಯಾದವು. ಮಾಂಡವಿಯಿಂದ ನೇರವಾಗಿ ನೈಋತ್ಯ ದಿಕ್ಕಿನಲ್ಲಿ ಸಾಗಿ ನರಸೀಪುರಕ್ಕೆ ಹೋಗುವ ಪ್ರಾಚೀನ ಕಾಲ್ದಾರಿಯೊಂದಿತ್ತು. ಅದೀಗ ಸಂಪೂರ್ಣ ಮರೆಯಾಗಿತ್ತು. ನಾನು ಏಕಾಂಗಿ. ನನ್ನ ಚಾರಣದ ಮಿತ್ರರು ಜತೆಯಲ್ಲಿದ್ದಿದ್ದರೆ ದಾರಿಯ ಗೊಡವೆಬಿಟ್ಟು ನರಸೀಪುರದ ದಿಕ್ಕು ಹಿಡಿದು ಸಾಗುತ್ತಿದ್ದೆವು. ಜತೆಗೆ, ಹೊತ್ತು ಕಂತುವ ಮೊದಲು ಗಮ್ಯ ತಲುಪುವ ಅನಿವಾರ್ಯ. ಪುನಃ ಅಮಾಸೆ ಬೈಲಿನ ಮುಖ್ಯ ರಸ್ತೆಗೆ ಬಂದೆ. ಇದರಿಂದಾಗಿ ಮತ್ತೆ ಮೂರ್ನಾಲ್ಕು ಕಿಲೋಮೀಟರ್ ನಡಿಗೆ ಜಾಸ್ತಿಯಾಯಿತು.

ವಾಹನಗಳ ಭರಾಟೆ

ಅಮಾಸೆಬೈಲ್ - ನರಸೀಪುರ ರಸ್ತೆ ಈಗ ಧರ್ಮಸ್ಥಳ - ಕೊಲ್ಲೂರು ರಾಜರಸ್ತೆಯಾಗಿ, ವಾಹನಗಳ ಭರಾಟೆ ಜೋರಾಗಿದೆ! ಅದು ಬಹುಪಾಲು ಕಾಲ್ದಾರಿಯಾಗಿದ್ದ 1977ರ ಕಾಲದಲ್ಲಿ ನಾನು ನಡೆದು ಹೋದ ದಾರಿ.

▸▸ ಮೂರನೇ ಪುಟಕ್ಕೆ

ವಲಸೆಯಲ್ಲಿ ಈ ಹಕ್ಕಿಗಳು ಎತ್ತಿದ ಕೈ; ನೋಡಲು ಸುಂದರ. ಶ್ವೇತ ವರ್ಣದ ಈ ಹಕ್ಕಿ ನೀರಿಗೆ ಧುಮುಕುವುದನ್ನು ನೋಡುವುದೇ ಒಂದು ಚಂದ.

ವಿಶಾಲ ರೆಕ್ಕೆಯ ಲಿಟಲ್ ಟರ್ನ್



» ಶಶಿಧರಸ್ವಾಮಿ ಆರ್. ಹಿರೇಮಠ

ಕಮಲಾಪುರದ ಪಂಪಯ್ಯಸ್ವಾಮಿ ಮಳೇಮಠ, ನಾನು ಸೇರಿಕೊಂಡು ತುಂಗಭದ್ರಾ ಹಿನ್ನೀರಿನ ಜೌಗು ಜಾಗೆಯನ್ನು ತಲುಪಿದಾಗ ಸಮಯ ಸಂಜೆ ನಾಲ್ಕು ಗಂಟೆ. ಈ ಹಿನ್ನೀರು ಬೇಸಿಗೆಯಲ್ಲಿ ಬತ್ತುತ್ತಾ ಹೋಗಿ ಜೌಗು ಜಾಗೆ ನಿರ್ಮಾಣಗೊಂಡು, ಅನೇಕ ವಲಸೆ ಹಕ್ಕಿಗಳಿಗೆ ಆಶ್ರಯ ತಾಣದ ಬಿಡಾಗುತ್ತದೆ. ಅನತಿ ದೂರದಲ್ಲಿ ಬೆಳ್ಳನೇ ಹಕ್ಕಿಯೊಂದು ಆಕಾಶದಿಂದ ರೆಕ್ಕೆಗಳನ್ನು ಜೋರಾಗಿ ಬಡಿಯುತ್ತಾ ಇಳಿದು, ನಿಧಾನವಾಗಿ ಹೆಜ್ಜೆ ಹಾಕುತ್ತಾ ಸಣ್ಣಸಣ್ಣ ಕಲ್ಲುಗಳ ಜೋಡಣೆಯಿರುವ ಜಾಗೆಯತ್ತ ಸಾಗತೊಡಗಿತು. ತಕ್ಷಣವೇ ಮಾರುದ್ದ ಲೆನ್ಸ್‌ನಲ್ಲಿ ನೋಡಿದಾಗ, ಹತ್ತಿರದಲ್ಲಿ ಗೂಡಿದ್ದು ಅದರಲ್ಲಿ ಎರಡು ಮಣ್ಣಿನ ಬಣ್ಣದಿಂದ ಕೂಡಿದ ಮೊಟ್ಟೆಗಳಿರುವುದು ಕಂಡಿತು. ಹಕ್ಕಿಯು ಗೂಡಿನತ್ತ ಸಾಗಿ ಮೊಟ್ಟೆಗಳನೊಮ್ಮೆ ನೋಡಿ, ತನ್ನ ಕಾಲುಗಳನ್ನು ಮಡಚಿ ಹೊಟ್ಟೆಯನ್ನು ಮೊಟ್ಟೆಗಳಿಗೆ ಹಚ್ಚಿ ಕುಳಿತುಕೊಂಡು ಕಾವು ನೀಡತೊಡಗಿತು. ಈ ಎಲ್ಲ ದೃಶ್ಯಗಳನ್ನು ನನ್ನ ಕ್ಯಾಮರಾದಲ್ಲಿ ಕ್ಲಿಕ್ಕಿಸಿಕೊಂಡೆ. ವಿಜಯನಗರ(ಹೊಸಪೇಟೆ)ದ ತುಂಗಭದ್ರಾ ಡ್ಯಾಮಿನ ಹಿನ್ನೀರಿನ ಜೌಗು ತಾಣಕ್ಕೆ, ಸಂತಾನಾಭಿವೃದ್ಧಿಗಾಗಿ ವಲಸೆ ಬರುವ ಚಳಿಗಾಲದ ಅಥಿತಿ ಹಕ್ಕಿಗಳೇ ಲಿಟಲ್ ಟರ್ನ್ ಹಕ್ಕಿಗಳು. ಮುಖ್ಯವಾಗಿ ಬಿಳಿ ಬಣ್ಣವೇ ಎದ್ದು ಕಾಣುವ ಈ ಹಕ್ಕಿಗಳು ನೋಡಲು ಚಂದ; ವಲಸೆ ಹೋಗುವುದರಲ್ಲಿ ಎತ್ತಿದ ಕೈ.

ಈ ಹಕ್ಕಿಗಳನ್ನು ಇಂಗ್ಲೀಷಿನಲ್ಲಿ ಲಿಟಲ್ ಟರ್ನ್ ಎಂದಿದ್ದಾರೆ. ಸುಮಾರು 2125 ಸೆಂ.ಮೀ. ಗೊರವಂಕ ಗಾತ್ರದ ಬೂದು-ಬಿಳಿ ಬಣ್ಣದ ಹಕ್ಕಿ. ಇದರ ರೆಕ್ಕೆಗಳ ಹರಿವು 4147 ಸೆಂ.ಮೀಗಳಷ್ಟು. ಮುಖ್ಯವಾಗಿ ಬಿಳಿ-ಬೂದು ಬಣ್ಣದಲ್ಲಿರುತ್ತವೆ, ಕಪ್ಪು ತಲೆ, ತಿಳಿ ಬೂದು ಬೆನ್ನು ಮತ್ತು ಬೂದು-ಬಿಳಿ ರೆಕ್ಕೆಗಳನ್ನು ಹೊಂದಿರುತ್ತವೆ. ಕಣ್ಣು ಗಾಢ ಕಂದು ಬಣ್ಣದ್ದಾಗಿವೆ. ಸಂತಾನೋತ್ಪತ್ತಿ ಸಮಯದಲ್ಲಿ, ಕೊಕ್ಕು ಹಳದಿ ಬಣ್ಣದ್ದಾಗಿ ತುದಿಯು ಕಪ್ಪು, ಸಣ್ಣ, ಮೊನಚಾದ ಬಿಳಿ ಹುಬ್ಬು ಮತ್ತು ಕಪ್ಪು ಕಣ್ಣಿನ ರೇಖೆಯು ಕೊಕ್ಕನ್ನು ತಲುಪುತ್ತದೆ. ಸಂತಾನೋತ್ಪತ್ತಿ ಸಮಯದಲ್ಲಿ ಪುಕ್ಕಗಳಲ್ಲಿ, ನೆತ್ತಿಯ ಮುಂಭಾಗವು ಬಿಳಿ ಬಣ್ಣದಿಂದ ಕೂಡಿರುತ್ತದೆ.

ಇವು ವಲಸೆಗಾರ ಹಕ್ಕಿಗಳಾಗಿದ್ದು ಸಮುದ್ರತೀರದಲ್ಲಿ ಕಂಡುಬಂದರೂ, ಚಳಿಗಾಲದಲ್ಲಿ ಸ್ಥಳೀಯವಾಗಿ ಒಳನಾಡಿನಲ್ಲಿಯೂ ಕಂಡುಬರುತ್ತದೆ. ಸಣ್ಣ ಮೀನುಗಳು, ಕೀಟಗಳು, ಸಣ್ಣ ಜಲಚರ ಜೀವಿಗಳನ್ನು ತಿನ್ನುತ್ತದೆ. ಆಳವಿಲ್ಲದ ನೀರಿನಲ್ಲಿ ಆಹಾರದ ಬೇಟೆಗೆ ಆದ್ಯತೆ ನೀಡುತ್ತವೆ ಮತ್ತು ಬೇಟೆಯನ್ನು ಹಿಡಿಯಲು ನೀರಿಗೆ ಧುಮುಕುವ ಮೊದಲು ದೇಹವನ್ನು ಅಡ್ಡಲಾಗಿ ಮತ್ತು ಕೊಕ್ಕನ್ನು ಕೆಳಗೆ ತೋರಿಸುವ ಮೂಲಕ ಸ್ವಲ್ಪ ಸಮಯ ಗಾಳಿಯಲ್ಲಿ ಸುಳಿದಾಡಿ(ಹಾವರಿಂಗ್) ಬೇಟೆಯ ಇರುವಿಕೆಯನ್ನು ಖಚಿತಪಡಿಸಿಕೊಂಡು, ತಕ್ಷಣವೇ ನೀರಿಗೆ ರಭಸವಾಗಿ ಧುಮುಕಿ ಬೇಟೆಯನ್ನು ಕಬಳಿಸುತ್ತವೆ.

ಸಂತಾನೋತ್ಪತ್ತಿ ಸಮಯವು ಮೇ ಮಾಹೆಯಿಂದ ಜೂನ್ ತಿಂಗಳು; ಮಣ್ಣಿನಲ್ಲಿ ತಟ್ಟೆಯಂತಹ ಗುಣಿಗಳಲ್ಲಿ, ನುರುಜು ಕಲ್ಲುಗಳು ಹಾಗೂ ಕಪ್ಪೆಚಿಪ್ಪನ್ನು ಬಳಸಿ ಗೂಡನ್ನು ನಿರ್ಮಿಸಿ, ಕಂದು ಚುಕ್ಕೆಗಳಿರುವ ಮರಳು ಬಣ್ಣದ 2-3 ಮೊಟ್ಟೆಗಳನ್ನು ಇಟ್ಟು ಮರಿಮಾಡಿಸುತ್ತವೆ. ಸಂಸಾರಿಕ ಹೊಣೆಯನ್ನು ಗಂಡು-ಹೆಣ್ಣು ಹಕ್ಕಿಗಳೆರಡೂ ನಿರ್ವಹಿಸುತ್ತವೆ.

ಮೊಟ್ಟೆಗಳಿಗೆ ಕಾವು ನೀಡುವ ಪಾಳೆ ಬದಲಾವಣೆಗಾಗಿ ಹಕ್ಕಿಯು ಗೂಡಿನಿಂದ ಹಾರಿ ಹೋದ ಕೂಡಲೇ ನಾವು ಕ್ಯಾಮರಾವನ್ನು ಪ್ಯಾಕ್ ಮಾಡಿಕೊಂಡು ಮರಳಿದೆವು.

▸▸ ಚಿತ್ರಗಳು: ಲೇಖಕರವು

ಪುಸ್ತಕ ವಿಮಾನ

ಸ್ವಾತಂತ್ರ್ಯ ಪೂರ್ವಕಾಲದಲ್ಲೇ ಯುದ್ಧ ವಿಮಾನ ತಯಾರಿಕೆಯಲ್ಲಿ ತೊಡಗಿಕೊಂಡಿದ್ದ ಎಚ್.ಎ.ಎಲ್.ಸಂಸ್ಥೆಯ ಅಧ್ಯಕ್ಷರಾಗಿದ್ದ ಕೃಷ್ಣದಾಸ್ ನಾಯರ್ ಅವರ ಆತ್ಮಕಥೆಯ ಕನ್ನಡ ಅನುವಾದ ಈಗ ಪ್ರಕಟಗೊಂಡಿದೆ.

ಸಾಧನೆ ಪ್ರತೀಕ ಕೃಷ್ಣ ದಾಸ್

» ದ್ವಾರನಕುಂಟೆ ಪಾತಣ್ಣ

ಆತ್ಮಕಥನ ಇಲ್ಲವೇ ಜೀವನ ಚರಿತ್ರೆ ಎನ್ನುವ ಪದವೇ ಸೂಚಿಸುವಂತೆ, ತಾನು ಸಾಗಿಬಂದ ಹಾದಿಯ ನೆನಪುಗಳನ್ನು ಪುನರ್ ನಿರ್ಮಿಸಿಕೊಳ್ಳುವ ಅಥವಾ ನವೀಕರಿಸಿಕೊಳ್ಳುವ ವಿಶಿಷ್ಟ ಸಂದರ್ಭ. ಈ ಪುನರ್ ನಿರ್ಮಿಸುವುದು ವೈಯಕ್ತಿಕವಾದುದು ಮತ್ತು ಜತೆಯಲ್ಲೇ ಸಮಷ್ಟಿಯೂ ಹೌದು. ತನ್ನ ಜೀವನದಲ್ಲಿ ಅಂದರೆ ಬಾಲ್ಯದಿಂದ ಆರಂಭಿಸಿ ಓದು, ಉದ್ಯೋಗ, ಮದುವೆ, ಮಕ್ಕಳ ಪೋಷಣೆ ಹಾಗೂ ಅವರುಗಳನ್ನು ದಡಕ್ಕೆ ಸೇರಿಸುವುದು, ಕ್ರಮೇಣ ನಿವೃತ್ತಿ ಇವೆಲ್ಲವುಗಳ ಜತೆ ಅದುವರೆಗೂ ಸಾಧಿಸಿದ ಸಾಧನೆಯ ಹಿನ್ನೋಟದ ಕಿರು ನೋಟವೇ ಕಥೆಯಾಗಿ ತನ್ನನ್ನು ತಾನು ಒಳಗೊಳ್ಳುವ ಒಟ್ಟಂದದ ಪರಿಕಲ್ಪನೆಯ ಹಾದಿಯೇ ಆತ್ಮಕಥನ. ಈ ಕಾರಣದಿಂದಲೇ ಆತ್ಮಕಥೆಯು ಒಂದರ ಮುಖಾಮುಖಿ ಓದುಗನ ಪಾಲಿಗೆ ಲೇಖಕನ ಜತೆ ಕಾಲಘಟ್ಟ ಒಂದನ್ನು ಅರಿತುಕೊಳ್ಳುವ ಅವಕಾಶವನ್ನು ಒದಗಿಸಿಕೊಡುತ್ತದೆ.

ಈ ಹಿನ್ನೆಲೆಯಲ್ಲಿ ಡಾ. ಸಿ ಜಿ. ಕೃಷ್ಣದಾಸ ನಾಯರ್ ಅವರ 'ಆದರ್ಶ ಅಧ್ಯಕ್ಷ' ಜೀವನ ಚರಿತ್ರೆ ವಿಶಿಷ್ಟವಾದುದು. ಸಮಕಾಲಿನ ಸಂದರ್ಭದಲ್ಲಿ ಕಂಪನಿಯೊಂದರಲ್ಲಿ ಉದ್ಯೋಗಿಯಾಗಿ ಸೇರಿ, ಅದೇ ಸಂಸ್ಥೆಯಲ್ಲಿ ಅಧ್ಯಕ್ಷ ಸ್ಥಾನಕ್ಕೇರಿದ, ತನ್ನ ಜೀವನದ ಏಳುಬೀಳುಗಳ ಮೊತ್ತದ ಅನಾವರಣವೇ 'ಆದರ್ಶ ಅಧ್ಯಕ್ಷ'. ಕೃಷ್ಣದಾಸ್ ಅವರ ಪೂರ್ವಿಕರು ಮಂಗಳೂರಿನ ಕಡೆಯಿಂದ ವಲಸೆ ಬಂದು ಕೇರಳದ ಹಳ್ಳಿಯಲ್ಲಿ ನೆಲೆಸಿದರೆಂದು ಅವರೇ ಹೇಳಿಕೊಂಡಿದ್ದಾರೆ. ಕೃಷ್ಣದಾಸ ನಾಯರ್ ಅವರ ಬಾಲ್ಯ ಜೀವನ ಆಶಾದಾಯಕವಾಗಿರಲಿಲ್ಲ; ಅವರು ಕಷ್ಟಪಟ್ಟು, ಪರಿಶ್ರಮದಿಂದ ಮೇಲೆ ಬಂದವರು.



ಆದರ್ಶ ಅಧ್ಯಕ್ಷ
ಲೇ: ಪಿ. ತಂಗಚನ್ ಮತ್ತು ಕೆ.ಎ.ಮುರಳೀಧರನ್
ಅನು: ಮು.ನಂ.ಗಜೇಂದ್ರ
ಪ್ರ: ಶ್ರೀನಿವಾಸ ಪ್ರಕಾಶನ ಬೆಂಗಳೂರು
9342064009, ಬೆಲೆ ರು.350/-

ನಮ್ಮ ದೇಶಕ್ಕೆ ಸ್ವಾತಂತ್ರ್ಯ ದೊರಕುವ ಮೊದಲೇ, 1940 ರಲ್ಲಿ ವಾಲ್ ಚಂದ್ ಹೀರಾಚಂದ್ ಅವರು ಬೆಂಗಳೂರಿನಲ್ಲಿ ಹಿಂದುಸ್ತಾನ್ ಏರೋನಾಟಿಕ್ ಲಿಮಿಟೆಡ್ (ಎಚ್.ಎ.ಎಲ್.) ಸ್ಥಾಪಿಸಿದರು. ಎರಡನೇ ವಿಶ್ವಯುದ್ಧದ ಸಮಯದಲ್ಲಿ ಯುದ್ಧ ವಿಮಾನಗಳನ್ನು ತಯಾರಿಸುವುದರಲ್ಲಿ ಕೈಜೋಡಿಸಿದ ಸಂಸ್ಥೆ ಇದು. ಇಂತಹ ಪ್ರತಿಷ್ಠಿತ ಎಚ್.ಎ.ಎಲ್.ಗೆ ಕೃಷ್ಣದಾಸ ನಾಯರ್ ಅವರು 1970ರ ದಶಕದಲ್ಲಿ ಸೇರಿದರು. ನಂತರದ ದಿನಗಳಲ್ಲಿ ಅವರು ಏರೋಸ್ಪೇಸ್ ಮೆಟೀರಿಯಲ್ಸ್ ಅಭಿವೃದ್ಧಿಯ ವ್ಯವಸ್ಥಾಪಕರಾಗಿ, ಪ್ರಯೋಗಾಲಯದ ಮುಖ್ಯಸ್ಥರಾಗಿ, ಕೊನೆಗೆ ಬೆಂಗಳೂರು ಸಂಕೀರ್ಣದ ವ್ಯವಸ್ಥಾಪಕ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದರು. ಅಂತಹ ಪ್ರತಿಷ್ಠಿತ ಸಂಸ್ಥೆಯಲ್ಲಿ ಉನ್ನತ ಸ್ಥಾನಕ್ಕೆ ಏರಿದ್ದು ಅವರ ಬದ್ಧತೆ ಮತ್ತು ಶ್ರಮದ ಪ್ರತೀಕ.

ಕೃಷ್ಣದಾಸ್ ನಾಯರ್ ರಕ್ಷಣಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಭಾರತದ ಅತಿದೊಡ್ಡ ಸಾರ್ವಜನಿಕ ವಲಯದ ಸಂಸ್ಥೆಯಾದ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ ನ ಪ್ರಥಮ ವ್ಯವಸ್ಥಾಪಕ ನಿರ್ದೇಶಕ ಮತ್ತು ಅಧ್ಯಕ್ಷರಾಗಿದ್ದರು. ಎಚ್.ಎ.ಎಲ್. ಸಂಸ್ಥೆಯನ್ನು ಲಾಭ ಗಳಿಸುವ ಕಂಪನಿಯನ್ನಾಗಿ ರೂಪಿಸಿದ್ದು ಮಾತ್ರವಲ್ಲ, ಅದನ್ನು ಸ್ಪರ್ಧಾತ್ಮಕ ಏರೋಸ್ಪೇಸ್ ಉದ್ಯಮವಾಗಿಯೂ ರೂಪಿಸಿದ್ದಾರೆ. ಡಾ.ಎಪಿಜೆ ಅಬ್ದುಲ್ ಕಲಾಂ ಅವರ ಜತೆ ಸಹ ವೃತ್ತಿ ನಿರ್ವಹಿಸಿದ ಕೃಷ್ಣ ದಾಸ್ ಅವರ ಕುರಿತು ಡಾ.ಯು.ಆರ್.ರಾವ್ ಅವರ ಮಾತು ಹೀಗಿದೆ: ಲಘು ಯುದ್ಧ ವಿಮಾನದ ಅಭಿವೃದ್ಧಿಯಲ್ಲಿ ದಾಸ್ ಅವರ ಕೊಡುಗೆ, ಸಮರ್ಪಣಾ ಭಾವ, ದಾರ್ಶನಿಕ ನಿರ್ವಹಣೆ ಮೆಚ್ಚತಕ್ಕದ್ದು.

ಎಚ್.ಎ.ಎಲ್. ಸಂಸ್ಥೆಯನ್ನು ಕಟ್ಟುವಲ್ಲಿ ಅವರ ದೂರದೃಷ್ಟಿ ಹಾಗೂ ನಾಯಕತ್ವ ಗುಣ ನಮ್ಮ ದೇಶದ ಯುವಜನತೆಗೆ ಸ್ಫೂರ್ತಿ ತುಂಬಬಲ್ಲದು. ಇಂತಹದೊಂದು ಅಪರೂಪದ ಪುಸ್ತಕವು ಕನ್ನಡಕ್ಕೆ ಅನುವಾದಗೊಂಡಿದ್ದು ವಿಶೇಷ ಎನಿಸಿದೆ.

ಕನ್ನಡ ಸಂಸ್ಕೃತಿ ಚರಿತ್ರೆಯ ಅನಾವರಣ

» ಪ್ರೊ. ಜಿ.ಎನ್.ಉಪಾಧ್ಯ, ಮುಂಬೈ

ಕನ್ನಡ ಮನಸ್ಸು ಭಿನ್ನ ಭಿನ್ನ ಸಂದರ್ಭಗಳಲ್ಲಿ ಎದುರಾದ ಸವಾಲುಗಳಿಗೆ ಹೇಗೆ ಸ್ಪಂದಿಸಿದೆ ಎಂಬುದರ ಹುಡುಕಾಟದ ಜತೆಜತೆಗೆ ಹೊಸ ತಲೆಮಾರಿಗೆ ನಮ್ಮ ಕನ್ನಡ ಪರಂಪರೆಯೊಂದಿಗೆ ಸಂಬಂಧ ಕಲ್ಪಿಸುವ ಒಂದು ವಿನೂತನ ಪ್ರಯತ್ನವೂ ಇದಾಗಿದೆ. 'ಹೊಸದು ಹೊನ್ನು ಹಳೆಯದೆಲ್ಲ ಮಣ್ಣು' ಎಂಬ ವಸಾಹತುಶಾಹಿ ನಿಲುವನ್ನು ಪ್ರಶ್ನಿಸುವ ಹಂಬಲವೂ ಈ ಕೃತಿಯಲ್ಲಿ ಒಡೆದು ಕಾಣುತ್ತದೆ.

ಕನ್ನಡ ಸಾಹಿತ್ಯ ಪರಂಪರೆ ಮತ್ತು ವರ್ತಮಾನ ಇದು ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ ಅವರ ಇತ್ತೀಚಿನ ಮಹತ್ವದ ವಿಮರ್ಶಾ ಕೃತಿ. ಸಾವಿರಾರು ವರ್ಷಗಳ ಸಮೃದ್ಧವಾದ ಉಜ್ವಲವಾದ ಕನ್ನಡ ಸಾಹಿತ್ಯ ಪರಂಪರೆ, ಅಲ್ಲಿನ ಗುಣಾತಿಶಯ, ವಸಾಹತುಶಾಹಿಯ ಪ್ರಭಾವಕ್ಕೊಳಗಾದ ಮನಸ್ಥಿತಿಯ ವಿಮರ್ಶೆಯಿಂದ ಕನ್ನಡಕ್ಕೆ ಆದ ನಷ್ಟ, ಭಗ್ನ ಸ್ಥಿತಿಯ ವಾಸ್ತವಗಳನ್ನು ಸಾರವತ್ತಾಗಿ ವಿಶ್ಲೇಷಿಸಿ ನಮ್ಮ ದೃಷ್ಟಿ ತಿದ್ದುವ ಪ್ರಯತ್ನವನ್ನು ಮಾಡಿರುವುದು ಈ ಕೃತಿಯ ಅತಿಶಯತೆ. ಹೊಸ ತಿಳಿವಿನ ಬೆಳಕಿನಲ್ಲಿ ಕನ್ನಡ ಸಂಸ್ಕೃತಿ ಚರಿತ್ರೆಯನ್ನು ಇಲ್ಲಿ ಆಪ್ತವಾಗಿ ಕಟ್ಟಿಕೊಡಲಾಗಿದೆ.

ಸಾಹಿತ್ಯ-ಸಮಾಜ, ಪರಂಪರೆ-ಆಧುನಿಕತೆ, ಮಾರ್ಗ-ದೇಸಿ ಇವುಗಳ ನಡುವಿನ ಸಮನ್ವಯ, ಸಂಘರ್ಷ, ಸ್ಥಾಪಿತ ಕೃತಿಗಳ ಪುನರ್ವಿಮರ್ಶೆ, ಮರುವ್ಯಾಖ್ಯಾನ, ತೀರ್ಮಾನ ಇಲ್ಲಿ ಹರಳುಗಟ್ಟಿದೆ. ಕನ್ನಡ ಪರಂಪರೆಯನ್ನು ಗಮನಿಸಿದರೆ ಅದು ವಾಗ್ವಾದಗಳ ಪರಂಪರೆ ಎನ್ನುವುದು ಅರಿವಾಗುತ್ತದೆ. ನಮ್ಮ ಹಿರಿಯರು ವಾಗ್ವಾದಗಳ ಮೂಲಕವೇ ಕನ್ನಡ ಜಗತ್ತನ್ನು, ಕನ್ನಡ ಮನಸ್ಸನ್ನು ಕಟ್ಟುತ್ತ ಬಂದಿದ್ದಾರೆ. ಸಾವಿರ ವರ್ಷದ ಕನ್ನಡ ಸಾಹಿತ್ಯ ಚರಿತ್ರೆ ವಾಗ್ವಾದಗಳ ಮೂಲಕವೇ ಬೆಳೆದು ಬಂದಿದೆ. ಆರೋಗ್ಯಕರ ಚರ್ಚೆಗೆ ಹಾದಿಮಾಡಿಕೊಟ್ಟಿದೆ, ಮಾತ್ರವಲ್ಲ, ಕನ್ನಡ ಸಾಹಿತ್ಯ ಚರಿತ್ರೆಯೆಂದರೆ ಅದು ಸಂಘರ್ಷಗಳ ಚರಿತ್ರೆ, ಸೃಜನಶೀಲ ಮನಸ್ಸುಗಳ ಅರ್ಥಪೂರ್ಣ ಸಂವಾದ. ನಮ್ಮಲ್ಲಿನ ಬಹುಮುಖೀ ಸಂಸ್ಕೃತಿಯನ್ನು ನಿರ್ನಾಮಗೊಳಿಸಿ ಏಕಮುಖಿ ಸಂಸ್ಕೃತಿಗೆ ಹಾದಿ ಮಾಡಿಕೊಟ್ಟ ಸಾಹಿತ್ಯಾಧ್ಯಯನದ ಸ್ವರೂಪದ ಬಗೆಗೆ ಇಲ್ಲಿ ದೊಡ್ಡ ಪ್ರಮಾಣದಲ್ಲಿ ಮರುಚಿಂತನೆ ನಡೆದಿರುವುದು ಸಾಂಪ್ರತ ಕೃತಿಯ ಹೆಚ್ಚುಗಾರಿಕೆ.



ಕನ್ನಡ ಸಾಹಿತ್ಯ ಪರಂಪರೆ ಮತ್ತು ವರ್ತಮಾನ
ನರಹಳ್ಳಿ ಬಾಲಸುಬ್ರಹ್ಮಣ್ಯ
ಅಭಿನವ, ಬೆಂಗಳೂರು
ಪುಟಗಳು: 200, ಬೆಲೆ 200
ವರ್ಷ: 2024
ಸಂಪರ್ಕ: 9448804905

ಸಾಹಿತ್ಯಕ್ಕೂ ವಿಮರ್ಶೆಗೂ ಇರುವ ಸಂಬಂಧ ಘನಿಷ್ಠವಾದುದು. ವಿಮರ್ಶೆ ನಮ್ಮಲ್ಲಿ ಇವತ್ತು ಪ್ರಮುಖ ಸಾಹಿತ್ಯ ಪ್ರಕಾರವಾಗಿ ಬೆಳೆದಿದೆ. ಕವಿ ಮತ್ತು ವಿಮರ್ಶಕರ ದಾಂಪತ್ಯದಿಂದಲೇ ಸರಸ್ವತೀ ತತ್ವದ ವಿಜಯ ಎಂಬುದು ಅಭಿನಗುಪ್ತನ ಮತ. ಕ್ರಿಯಾತ್ಮಕವಾದ ಸಾಹಿತ್ಯದಂತೆ ಕ್ರಿಯಾತ್ಮಕವಾದ ವಿಮರ್ಶೆ ಸಾರಸ್ವತ ಲೋಕದ ದೋಹದ. ಇದನ್ನು ಒಂದು ವ್ರತದಂತೆ ನಡೆಸಿಕೊಂಡು ಬಂದವರು ನರಹಳ್ಳಿ ಬಾಲಸುಬ್ರಹ್ಮಣ್ಯ. ಅವರ ಹಿಂದಿನ ಕೃತಿಗಳಂತೆ ಇದು ಸಹ ಸಾಂಸ್ಕೃತಿಕವಾಗಿ ಅತ್ಯಂತ ಮಹತ್ವದ ಸಂಗತಿಗಳನ್ನು ಒಳಗೊಂಡಿರುವುದು ವಿಶೇಷ.

ನಮ್ಮ ಸಮಕಾಲೀನ ಕನ್ನಡ ವಿಮರ್ಶಕರಲ್ಲಿ ಡಾ. ನರಹಳ್ಳಿ ಅವರದು ಎದ್ದು ಕಾಣುವ ಹೆಸರು. ಅವರು ನಮ್ಮ ನಡುವಿನ ಸೂಕ್ಷ್ಮ ಸಂವೇದನಾಶೀಲ ವಿಮರ್ಶಕ, ಚಿಂತಕ, ವಾಗ್ಮಿ. ಇಡಿಯಾದ ಸಾಹಿತ್ಯ ಅಧ್ಯಯನದಲ್ಲಿ, ಸಮಗ್ರ ಅಧ್ಯಯನದಲ್ಲಿ ಅವರಿಗೆ ವಿಶೇಷವಾದ ಆಸ್ಥೆ. ಸಮಗ್ರ ಓದಿನ ಪರಿಕಲ್ಪನೆ ಇಂದಿನ ಬಹುಮುಖ್ಯ ಸಾಂಸ್ಕೃತಿಕ ಅಗತ್ಯವಾಗಿದೆ. ಇತ್ತೀಚೆಗೆ ನಮ್ಮ ಅಧ್ಯಯನ ಕ್ರಮದಲ್ಲಿ ಎರಡು ಬಗೆಯ ಓದಿನ ಕ್ರಮ ನನಗೆ ಬಹುಮುಖ್ಯವೆನ್ನಿಸಿದೆ. ಒಂದು ಸಮಗ್ರ ಓದು; ಮತ್ತೊಂದು ಸಾವಧಾನದ ಓದು. ಇದುವರೆಗಿನ ನಮ್ಮ ಅಧ್ಯಯನದ ಕ್ರಮವೇ ಒಂದು ರೀತಿ ಬಿಡಿ ಓದಿನ ಪರಂಪರೆಯಾಗಿಬಿಟ್ಟಿದೆ ಎಂಬುದನ್ನು ಮನಗಂಡ ಅವರು ಸಮಗ್ರ ಅಧ್ಯಯನ ಇಂದಿನ ತುರ್ತು ಎನ್ನುತ್ತಾ ಆ ಮಾರ್ಗದಲ್ಲಿ ಕುವೆಂಪು, ಅನಕೃ, ಕೆಎಸ್‌ನ, ಜಿಎಸ್‌ಎಸ್ ಮೊದಲಾದ ಧೀಮಂತ ಲೇಖಕರ ಸಾಧನೆಯನ್ನು ತಾಳೆ ಹಾಕಿ ನೋಡಿ, ಕನ್ನಡ ಪರಂಪರೆಯನ್ನು ಹೊಸ ಬಗೆಯಲ್ಲಿ ಅರ್ಥೈಸಿದ ಶ್ರೇಯಸ್ಸು ನರಹಳ್ಳಿ ಅವರಿಗೆ ಸಲ್ಲುತ್ತದೆ. ಪ್ರಸಕ್ತ ಕೃತಿಯೂ ಕನ್ನಡ ಸಾಹಿತ್ಯವನ್ನು ಇಡಿಯಾಗಿ ನೋಡಿ ಮಾಡಿದ ಮರುಮೌಲ್ಯಮಾಪನವೂ ಅಹುದು.

ನಮ್ಮ ಕಾಲದ ಆಸ್ಥೆ, ಆತಂಕಗಳನ್ನು ಕನ್ನಡ ಸಾಹಿತ್ಯದ ಹಿನ್ನೆಲೆಯಲ್ಲಿ ಅನುಸಂಧಾನ ಮಾಡಿಕೊಳ್ಳವ ಕ್ರಮ, ಪರಂಪರೆ ಹೇಗೆ ವರ್ತಮಾನಕ್ಕೂ ಸ್ಪಂದಿಸುತ್ತಿದೆ ಎಂಬುದನ್ನು ಅರಿತುಕೊಳ್ಳುವ ಹಿನ್ನೆಲೆಯಲ್ಲಿ ಈ ಕೃತಿ ಮೈಪಡೆದಿದೆ. ಹಲ್ಮಿಡಿ ಶಾಸನ, ಕವಿರಾಜಮಾರ್ಗದಿಂದ ತೊಡಗಿ ಹಳಗನ್ನಡ ನಡುಗನ್ನಡ ಸಾಹಿತ್ಯ ಆಕೃತಿಗೊಂಡ ಬಗೆ, ಅದರ ಪರಂಪರೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಹೊಸ ಚಿಂತನೆಗಳನ್ನು ಲೋಕಮುಖಕ್ಕೆ ಕಟ್ಟಿಕೊಟ್ಟಿರುವುದು ಈ ಕೃತಿಯ ಬಲ್ಮೆ. ಪ್ರಮುಖ ಕವಿ, ಕೃತಿಗಳ ಅಂತಃಸತ್ವವನ್ನು ಗುರುತಿಸಿ ಸಾಹಿತ್ಯ ಪರಂಪರೆಯ ದಾರಿಯಲ್ಲಿ ಅವು ತೆರೆದುಕೊಳ್ಳುವ ವಿಚಾರ ಪ್ರಪಂಚವನ್ನು ನರಹಳ್ಳಿಯವರು ಇಲ್ಲಿ ಅನಾವರಣಗೊಳಿಸಿರುವ ಪರಿ ಮನೋಜ್ಞವಾಗಿದೆ.

'ಹಿಂದಣ ಹೆಜ್ಜೆಯ ಕಂಡಲ್ಲದೆ ನಿಂದ ಹೆಜ್ಜೆಯನರಿಯಬಾರದು' ಇದು ಅಲ್ಲಮನ ಮಾತು. ಪರಂಪರೆಯ ಅರಿವು ವರ್ತಮಾನದ ಅನೇಕ ಸಮಸ್ಯೆಗಳಿಗೆ ಪರಿಹಾರದ ಸಾಧ್ಯತೆಗಳನ್ನು ಸೂಚಿಸುತ್ತದೆ. ಸಂವೇದನಾಶೀಲ ಸೂಕ್ಷ್ಮ ಮನಸ್ಸುಗಳು ಈ ಹಿಂದೆ ಇಂಥ ಸಮಸ್ಯೆಗಳಿಗೆ ಹೇಗೆ ಮುಖಾಮುಖಿಯಾಗಿದ್ದವು ಎಂಬುದನ್ನು ಬೊಟ್ಟು ಮಾಡಿ ತೋರಿಸುವ ಪ್ರಸಕ್ತ ಕೃತಿ ಇಂದಿನ ಬಿಕ್ಕಟ್ಟುಗಳಿಗೆ ಬಿಡುಗಡೆಯ ಒಳನೋಟಗಳನ್ನು ಸಹ ಒದಗಿಸುತ್ತದೆ. ವಿಮರ್ಶೆಯ ಸಾಧನಗಳಲ್ಲಿ ತುಲನೆ ಬಹು ಮುಖ್ಯವಾದದ್ದು. ಒಂದೇ ಪರಂಪರೆಯಲ್ಲಿನ ಕೃತಿಗಳನ್ನು ತೂಗಿ ನೋಡಿದಾಗ ಹೊಸ ಅರ್ಥಲೋಕ ಹೇಗೆ ತೆರೆದುಕೊಳ್ಳಬಲ್ಲದು ಎಂಬುದಕ್ಕೂ ಈ ಕೃತಿ ಮಾದರಿಯಾಗಿದೆ.

ಪ್ರಭುತ್ವಕ್ಕೆ ಸೃಜನಶೀಲತೆ ಡೊಗ್ಗು ಸಲಾಮು ಹಾಕುತ್ತಿರುವ ಸಂದರ್ಭದಲ್ಲಿ ಪಂಪನ ಸೃಜನಶೀಲ ಪ್ರತಿಭೆ ಪ್ರಭುತ್ವವನ್ನು ಎದುರಿಸಿದ ಕ್ರಮ ಅತ್ಯಂತ ಪ್ರಸ್ತುತ. ಧಾರ್ಮಿಕ ಸಂಸ್ಥೆಗಳು ಸೃಷ್ಟಿಸುತ್ತಿರುವ ಹಿಂಸೆ, ಭಯೋತ್ಪಾದನೆಯ ಹೊತ್ತಿನಲ್ಲಿ ವಚನಕಾರರು ಧರ್ಮದ ಸಾಂಸ್ಥಿಕ ರೂಪವನ್ನು ವಿರೋಧಿಸಿದ ಕ್ರಮ ಅಧ್ಯಯನಯೋಗ್ಯ. ಪ್ರವೃತ್ತಿ-ಸಂಸ್ಕೃತಿಗಳ ಸಂಘರ್ಷವನ್ನು ಜನ್ನ ಚಿತ್ರಿಸಿದ್ದು, ಲೌಕಿಕ ಅಲೌಕಿಕಗಳನ್ನು ರತ್ನಾಕರ ವರ್ಣಿ ದಿನನಿತ್ಯದ ಬದುಕಿನಲ್ಲಿ ಅಳವಡಿಸಿಕೊಂಡದ್ದು, ಕನಕದಾಸರು ಪಟ್ಟಭದ್ರ ವ್ಯವಸ್ಥೆಯನ್ನು ವಿರೋಧಿಸಿದ್ದು, ಕುಮಾರವ್ಯಾಸ ಭಕ್ತಿಯ ಆವೇಶದಲ್ಲೂ ಕಲಾತ್ಮಕ ಎಚ್ಚರವನ್ನು ಕಾಯ್ದುಕೊಂಡದ್ದು ಈ ಎಲ್ಲದರ ಸೂಕ್ಷ್ಮ ಅಧ್ಯಯನ ಸಮಕಾಲೀನ ಸಾಹಿತ್ಯ ಸಂಸ್ಕೃತಿಗೆ ಮಾತ್ರವಲ್ಲ, ನಮ್ಮ ಬದುಕಿಗೂ ಮಾರ್ಗದರ್ಶನ ನೀಡಬಲ್ಲುದು. ಎಲ್ಲಕ್ಕಿಂತ ಮುಖ್ಯವಾಗಿ 'ಜನ ಬದುಕಬೇಕೆಂದು ಕಾವ್ಯಮುಖದಿಂ ಪೇಳ್ದನನಪೇಕ್ಷೆಯಿಂದ' ರಾಘವಾಂಕನ ಈ ಪರಿಕಲ್ಪನೆಯಂತೂ ಭಾರತೀಯ ಕಾವ್ಯಮೀಮಾಂಸೆಯಲ್ಲಾಗಲೀ ಪಾಶ್ಚಾತ್ಯ ಕಾವ್ಯಮೀಮಾಂಸೆಯಲ್ಲಾಗಲೀ ಕಾಣಸಿಗದ, ಕನ್ನಡಕ್ಕೇ ವಿಶಿಷ್ಟವಾದ ಮಹತ್ವದ ಕಾವ್ಯ ಚಿಂತನೆಯಾಗಿದೆ' ಹೀಗೆ ನಮ್ಮ ಸಾಹಿತ್ಯದ ನಿನ್ನೆ ಮೊನ್ನೆಗಳ ಪುನರವಲೋಕನ, ವಿಚಾರ ವಿಮರ್ಶೆ ಈ ಕೃತಿಯಲ್ಲಿ ಹಾಳತವಾಗಿ ಪಡಿಮೂಡಿದೆ. ಶ್ರೇಷ್ಠ ಸಂಸ್ಕೃತಿ ಚಿಂತಕರಾಗಿರುವ ನರಹಳ್ಳಿ ಅವರ ವಿಮರ್ಶೆಯ ಬರವಣಿಗೆ ಇಲ್ಲಿ ಚೇತೋಹಾರಿಯಾಗಿದ್ದು, ಅಷ್ಟೇ ಲವಲವಿಕೆಯಿಂದ ಕೂಡಿದೆ. ಸಮಚಿತ್ತದ ಸಮ ತೂಕದ ನಿರ್ಗಳ ವಿಚಾರ ಸರಣಿಯಿಂದ ಕೂಡಿರುವ ಒಂದು ಅಪೂರ್ವ ಗ್ರಂಥವನ್ನು ರಚಿಸಿದ ಡಾ. ನರಹಳ್ಳಿ ಅವರು ಕನ್ನಡಿಗರೆಲ್ಲರ ಕೃತಜ್ಞತೆಗೂ ಪಾತ್ರರಾಗುತ್ತಾರೆ. ಕನ್ನಡ ಸಾಹಿತ್ಯ ಇಟ್ಟ ಹೆಜ್ಜೆ ತೊಟ್ಟರೂಪ, ಅದರ ಮಹತಿಯನ್ನು ಎತ್ತಿ ಹೇಳುವ ಅಲ್ಲಿ ನಡೆದ ವಾಗ್ವಾದಗಳ ಕುರಿತ ಈ ಅಧ್ಯಯನ ನಮ್ಮ ಅರಿವನ್ನು ನಿಶಿತಗೊಳಿಸುತ್ತದೆ ಎಂದರೆ ಅತ್ಯುಕ್ತಿಯಾಗದು.

ಇಂಥ ಪರಂಪರೆಯ ವಾರಸುದಾರರಾದ ನಾವು ವಾಗ್ವಾದಗಳ ಮೂಲಕವೇ ಇಂದು ಕನ್ನಡವನ್ನು, ಕನ್ನಡ ಜಗತ್ತನ್ನು ಕಟ್ಟಬೇಕಾಗಿದೆ. ವಾಗ್ವಾದಗಳನ್ನು ಹತ್ತಿಕ್ಕುವ ಪ್ರತಿಷ್ಠಿತ ಶಕ್ತಿಗಳ ವಿರುದ್ಧ ಸೆಣಸಬೇಕಿದೆ. ಸಂವಾದ ಸಾಧ್ಯವಾಗದ ಸ್ಥಿತಿ ಪ್ರಜಾಪ್ರಭುತ್ವಕ್ಕೆ ಮಾರಕ ಎಂಬ ಸತ್ಯವನ್ನು ತಿಳಿಯಬೇಕಾಗಿದೆ. ನಮ್ಮೆಲ್ಲರ ಹೃದಯ ರಣರಂಗವಾಗದ ಹಾಗೆ ನೋಡಿಕೊಳ್ಳುವ ಜವಾಬ್ದಾರಿ ಎಲ್ಲ ಸಂವೇದನಾಶೀಲ ಮನಸ್ಸುಗಳ ಮೇಲಿದೆ ಎಂಬುದನ್ನು ಅವರು ಸಕಾರಣವಾಗಿ ಈ ಕೃತಿಯಲ್ಲಿ ಮನದಟ್ಟು ಮಾಡಿಕೊಟ್ಟಿದ್ದಾರೆ. ವಿಮರ್ಶೆ ಸಹ ಒಂದು ಸೃಜನಶೀಲ, ಸಾಂಸ್ಕೃತಿಕ ಚಟುವಟಿಕೆ ಎಂಬುದಕ್ಕೂ ಈ ಕೃತಿ ಸಾಕ್ಷಿಯಾಗಿದೆ. ಬಹು ಆಯಾಮಗಳ, ಪ್ರಖರ ಚಿಂತನೆಯ, ವಿಚಾರ ವಿಮರ್ಶೆಯ ಈ ಕೃತಿಗಾಗಿ ಡಾ. ನರಹಳ್ಳಿ ಅವರಿಗೆ ವಿಶೇಷವಾದ ಅಭಿನಂದನೆಗಳು.

ಕಾಡಲ್ಲಿ ಸೀತೆ ನಾಡಲ್ಲಿ ಯಾಗ!

ಅಶ್ವಮೇಧಯಾಗದ ಕಥೆಯ ಜತೆಯಲ್ಲೇ, ಹಿಂದೆ ನಡೆದ ಹಲವು ಪ್ರಮುಖ ವಿದ್ಯಮಾನಗಳನ್ನು, ಉಪಕಥೆಗಳನ್ನು ಹೇಳುವ ಮುದ್ದಣ ವಿರಚಿತ 'ಶ್ರೀ ರಾಮಾಶ್ವಮೇಧಂ' ಕೃತಿಯ ಹಳಗನ್ನಡ ರೂಪ, ಹೊಸಗನ್ನಡದ ಅರ್ಥ, ಟಿಪ್ಪಣಿಗಳೆಲ್ಲವೂ ಈ ಸಂಗ್ರಹಯೋಗ್ಯ ಗ್ರಂಥದಲ್ಲಿದೆ.

» ಡಾ. ಬಿ ಜನಾರ್ದನ ಭಟ್

ಕವಿ ಮುದ್ದಣನ (ನಂದಳಿಕೆ ಲಕ್ಷ್ಮೀನಾರಾಯಣಯ್ಯ : 1870-1901) ಪ್ರಸಿದ್ಧ ಕೃತಿ 'ಶ್ರೀ ರಾಮಾಶ್ವಮೇಧಂ'. ಅದು ಹಳಗನ್ನಡ ಗದ್ಯರೂಪದಲ್ಲಿದೆ. ಅದನ್ನು ಅರ್ಥಮಾಡಿಕೊಳ್ಳಲು ನೆರವಾಗುವಂತೆ ತೆಕ್ಕುಂಜ ಗೋಪಾಲ ಕೃಷ್ಣ ಭಟ್ಟರು (1916-1980) 'ಮುದ್ದಣಕವಿ ರಚಿತಂ - ಶ್ರೀ ರಾಮಾಶ್ವಮೇಧಂ ಟಿಪ್ಪಣಿ - ಸಾರ ಸಮೇತಂ' ಎಂಬ ಗ್ರಂಥವನ್ನು 1972 ರಲ್ಲಿ ಪ್ರಕಟಿಸಿದ್ದರು. ಶೀರ್ಷಿಕೆಯಲ್ಲಿ ಸೂಚಿಸಿದಂತೆ ಇದಕ್ಕೆ ಪದ ವಿಂಗಡಣೆ ಮಾಡಿ ಅರ್ಥ ಹೇಳಿದ್ದಲ್ಲದೆ, ಸರಳ ಕನ್ನಡದ (ಹೊಸಗನ್ನಡ) 'ಅನುವಾದ'ವನ್ನೂ ಅವರು ಕೊಟ್ಟಿದ್ದರು. ಪ್ರತಿ ಪುಟದಲ್ಲಿ ಮೂರು ಭಾಗಗಳಿದ್ದು ಮೇಲೆ ಮೂಲ, ನಡುವೆ ಟಿಪ್ಪಣಿ, ಶಬ್ದಾರ್ಥ ವಿಭಾಗ, ಕೆಳಭಾಗದಲ್ಲಿ ಆಮೂಲಕ ಕನ್ನಡದ ಕೃತಿಯೊಂದನ್ನು ಅದೇ ಭಾಷೆಯಲ್ಲಿ ಆಧುನಿಕ ಗದ್ಯಾನುವಾದ ಮಾಡುವ ವಿಶಿಷ್ಟ ವಿದ್ಯಮಾನವೊಂದು ಸಂಭವಿಸಿತು. (ಹಿಂದೆ ಮುಳಿಯ ತಿಮ್ಮಪ್ಪಯ್ಯ ಪಂಪನನ್ನು ಹೀಗೆಯೆ ಅನುವಾದಿಸಿದ್ದರು). ಹೀಗೆ ತೆಕ್ಕುಂಜ ಅವರು ವಿದ್ಯಾರ್ಥಿಗಳಿಗೂ, ಸಾಮಾನ್ಯ ಓದುಗರಿಗೂ, ಅಧ್ಯಯನಕಾರರಿಗೂ ಸಹಾಯವಾಗುವಂತಹ ಗ್ರಂಥವೊಂದನ್ನು ಪ್ರಕಟಿಸಿದರು.

ಈ ಪುಸ್ತಕ ಜನಪ್ರಿಯವಾಗಿ ಪ್ರತಿಗಳು ಮುಗಿದಿದ್ದ ಕಾರಣ ಮುದ್ದಣ ಪ್ರಕಾಶನದ ನಂದಳಿಕೆ ಬಾಲಚಂದ್ರ ರಾಯರು ಡಾ. ಪಾದೇಕಲ್ಲು ವಿಷ್ಣು ಭಟ್ಟರ ಸಂಪಾದಕತ್ವದಲ್ಲಿ 2006 ರಲ್ಲಿ ಅದನ್ನು ಮರುಮುದ್ರಿಸಿದರು. ಆಗ ಅಗತ್ಯ ಕಂಡಲ್ಲಿ ಹೆಚ್ಚುವರಿ ಟಿಪ್ಪಣಿಗಳನ್ನು ಬರೆದು ಸೇರಿಸಿ, ಹಾಗೆ ಸೇರಿಸಿದುದನ್ನು ಬೇರೆಯಾಗಿ ತೋರಿಸಿದರು. ಆ ಮುದ್ರಣವನ್ನು ಆಗ ಅಮೇರಿಕದಲ್ಲಿ ನಡೆದ 'ಅಕ್ಕ ಸಮ್ಮೇಳನ'ದಲ್ಲಿ ಬಿಡುಗಡೆಗೊಳಿಸಲಾಗಿತ್ತು. ಅದರ ಪ್ರತಿಗಳೂ ಮುಗಿದುಹೋದುದರಿಂದ ಈಗ ಮತ್ತೆ ನಂದಳಿಕೆ ಬಾಲಚಂದ್ರ ರಾಯರು ಇದನ್ನು ಮತ್ತೊಮ್ಮೆ ಪ್ರಕಟಿಸಿದ್ದಾರೆ. ಪಾದೇಕಲ್ಲು ವಿಷ್ಣು ಭಟ್ಟರೇ ಇದರ ಸಂಪಾದಕರು. ಅವರು 2006 ರಲ್ಲಿ ಬರೆದ ಪ್ರಸ್ತಾವನೆಯು ವಿಶಿಷ್ಟ ಅಧ್ಯಯನವಾಗಿದ್ದು, ಅದನ್ನು ಇಲ್ಲಿಯೂ ಮುದ್ರಿಸಲಾಗಿದೆ. ತೆಕ್ಕುಂಜ ಅವರ ಮುನ್ನುಡಿ ಇತ್ಯಾದಿ ಹಳೆಯ ಗ್ರಂಥದ ಎಲ್ಲ ಸಂಗತಿಗಳೂ ಇಲ್ಲಿ ಮರುಮುದ್ರಣವನ್ನು ಕಂಡಿವೆ. ಈಗ ಪಾದೇಕಲ್ಲು ಅವರು ಮತ್ತೊಂದು ಸಂಪಾದಕೀಯವನ್ನು ಬರೆದಿದ್ದಾರೆ.



ಮುದ್ದಣಕವಿ ರಚಿತಂ ಶ್ರೀ ರಾಮಾಶ್ವಮೇಧಂ ಟಿಪ್ಪಣಿ, ಸಾರ ಸಮೇತಂ
ಲೇ: ತೆಕ್ಕುಂಜ ಗೋಪಾಲಕೃಷ್ಣ ಭಟ್ಟ
ಸಂ: ಡಾ. ಪಾದೇಕಲ್ಲು ವಿಷ್ಣು ಭಟ್ಟ
ಪ್ರ: ಮುದ್ದಣ ಪ್ರಕಾಶನ, ನಂದಳಿಕೆ, ಉಡುಪಿ ಜಿಲ್ಲೆ
9448144495
ಪರಿಷ್ಕೃತ ತೃತೀಯ ಮುದ್ರಣ: 2025
ಬೆಲೆ: ರು.655/-

ಪಾದೇಕಲ್ಲು ಅವರು ನಾಲ್ಕು ಅನುಬಂಧಗಳನ್ನು ಕೊಟ್ಟಿದ್ದಾರೆ. ಅವು: 1.ಮುದ್ದಣನ ದೇಶೀ ಶಬ್ದ ಸಂಪತ್ತು (ತೆಕ್ಕುಂಜ ಗೋಪಾಲಕೃಷ್ಣ ಭಟ್ಟರ ಲೇಖನ 1976), 2. ಗ್ರಂಥ - ಲೇಖನ ಸೂಚಿ (ಶ್ರೀ ರಾಮಾಶ್ವಮೇಧ ಗ್ರಂಥದ ಕುರಿತು ಬಂದ ಪುಸ್ತಕಗಳು ಹಾಗೂ ಲೇಖನಗಳ ಪಟ್ಟಿ), 3. ಮುದ್ದಣ ಗ್ರಂಥಲೋಕ (ಮುದ್ದಣನ ಕೃತಿಗಳ ಪ್ರಕಟಣೆಗಳು ಹಾಗೂ ಅವನ ಬಗ್ಗೆ ಬಂದ ಕೃತಿಗಳ ಪಟ್ಟಿ, ಪ್ರೊ. ಎ. ವಿ. ನಾವಡರ 'ಮುದ್ದಣ ಕೃತಿ ಕರಜನ'ದಿಂದ ಸ್ವೀಕರಿಸಿದ ಪಟ್ಟಿ), 4. ನಾಮ - ನಾಮಾಂತರ ಸೂಚಿ (ಮುದ್ದಣ ಪೌರಾಣಿಕ ವ್ಯಕ್ತಿಗಳಿಗೆ ಬಳಸಿದ ವಿವಿಧ ಹೆಸರುಗಳ ಪಟ್ಟಿ). ಹೀಗೆ 'ಶ್ರೀ ರಾಮಾಶ್ವಮೇಧ'ದ ಬಗ್ಗೆ ಇದೊಂದು ಅಧ್ಯಯನ ಪ್ರೇರಕ ಅಧ್ಯಯನ ಸಹಾಯಕ ಗ್ರಂಥವಾಗಿದೆ.

ಈ ಪ್ರಕಟಣೆ ಮುದ್ದಣನ ಗ್ರಂಥಕ್ಕೆ ಸಂದ ಗೌರವ ಎಂದು ಹೇಳಬಹುದು. ಈ ಬಗೆಯಲ್ಲಿ ಗ್ರಂಥ ಸಂಪಾದನೆ ಮಾಡಿ ಸದಾ ಆಸಕ್ತರಿಗೆ ದೊರೆಯುವಂತೆ ಮಾಡಿದ ಸಂಪಾದಕರು ಮತ್ತು ಪ್ರಕಾಶಕರು ಅಭಿನಂದನಾರ್ಹರು.

'ಶ್ರೀ ರಾಮಾಶ್ವಮೇಧ'ದ ಮೂಲ ಪದ್ಮಪುರಾಣದ ಶೇಷ ರಾಮಾಯಣ. ಈ ಎರಡು ಗ್ರಂಥಗಳನ್ನು ಸಿದ್ಧಮೂಲೆ ಶಂಕರನಾರಾಯಣ ಭಟ್ಟರು ಹೋಲಿಸಿ ಒಂದು ತಃಖ್ತೆಯನ್ನು ರಚಿಸಿದ್ದು, ಅದನ್ನು ಪಾದೇಕಲ್ಲು ತಮ್ಮ ಪ್ರಸ್ತಾವನೆಯಲ್ಲಿ ಇಡಿಯಾಗಿ ಕೊಟ್ಟಿದ್ದಾರೆ.

ಆಧುನಿಕ ಕಾಲದ ಮುದ್ದಣ ಮತ್ತು ಮನೋರಮೆಯರ ಸರಸ ಸಂವಾದದಿಂದ 'ಶ್ರೀ ರಾಮಾಶ್ವಮೇಧ' ಪ್ರಾರಂಭವಾಗುತ್ತದೆ. ಜಡಿಮಳೆ ಧಾರಾಕಾರವಾಗಿ ಸುರಿಯುತ್ತಿರಲು ಜನರಿಗೆ ಬಲು ಬೇಸರವಾಗುತ್ತದೆ. ಆಗ ಮಡದಿ ಮನೋರಮೆ ಏನಾದರೊಂದು ಕತೆ ಹೇಳೆಂದು ಕೇಳಲು ಆಕೆಯ ಬೇಸರ ಕಳೆಯಲು ಮುದ್ದಣ ಕತೆ ಹೇಳತೊಡಗುತ್ತಾನೆ. ರಾವಣನ ವಧೆಯಾದ ಬಳಿಕ ರಾಮಚಂದ್ರನು ರಾಜ್ಯವಾಳುತ್ತಿರುವಾಗ, ಅಶ್ವಮೇಧ ಯಾಗ ಮಾಡಿದ ಕಥೆ ಈ ಕೃತಿಯಲ್ಲಿದೆ. ಸೀತೆಯನ್ನು ಅವನು ಪರಿತ್ಯಾಗ ಮಾಡಿ ಏಕಾಂಗಿಯಾಗಿದ್ದ. 'ರಾವಣನಂತಹ ಬ್ರಾಹ್ಮಣನನ್ನು ಕೊಂದುದರಿಂದ ತನಗೆ ಬ್ರಹ್ಮಹತ್ಯಾ ದೋಷ ಬರಬಹುದು. ಆ ತಪ್ಪಿಗೆ ಪ್ರಾಯಶ್ಚಿತ್ತವೇನು?' ಎಂದು ಚಿಂತಿಸುತ್ತಿರುವಾಗ ಅಗಸ್ತ್ಯ ಮುನಿಗಳು ಸೂಚಿಸಿದ ಪರಿಹಾರ ರಾಮಾಶ್ವಮೇಧ. ಅದರಂತೆ ರಾಮಚಂದ್ರನು ಅಶ್ವಮೇಧ ಯಾಗವನ್ನು ಕೈಗೊಂಡು, ಯಜ್ಞಾಶ್ವವನ್ನು ಪೂಜಿಸಿ ಒಂದು ವರ್ಷ ಪರ್ಯಂತ ಅದನ್ನು ಸ್ವೇಚ್ಛೆಯಾಗಿ ತಿರುಗಲು ಬಿಟ್ಟು, ರಾಜರಿಂದ ಕಪ್ಪಕಾಣಿಕೆಗಳನ್ನು ತರಿಸಿ, ಅದು ಹಿಂದಿರುಗಿ ಬಂದ ಬಳಿಕ ಯಾಗ ಪರಿಸಮಾಪ್ತಿ ಮಾಡುವುದೇ ಇಲ್ಲಿಯ ಕಥಾವಸ್ತು.

ಆದರೆ ಇದರಲ್ಲಿ ಹಿಂದಿನ ಕತೆಗಳೂ ಬರುತ್ತವೆ. ಸೀತೆ ಗರ್ಭಿಣಿಯಾದುದು, ಆಕೆಯ ಬಯಕೆ, ಸೀತಾ ಪರಿತ್ಯಾಗ, ವಾಲ್ಮೀಕಿಯಿಂದ ಸೀತೆಯ ರಕ್ಷಣೆ, ಆಶ್ರಮದಲ್ಲಿ ಲವ ಕುಶರ ಜನನ, ಅವರ ವಿದ್ಯಾಭ್ಯಾಸ, ಕ್ಷೇತ್ರ ಮಹಾತ್ಮೆಗಳು ಇತ್ಯಾದಿ ಉಪಕಥೆಗಳು ಬರುತ್ತವೆ.

ಲವ ಕುಶರು ಕುದುರೆಯನ್ನು ಕಟ್ಟಿ ರಾಮನೊಡನೆ ಯುದ್ಧ ಮಾಡುವುದು. ರಾಮನಿಗೆ ಅವರು ತನ್ನ ಮಕ್ಕಳೆಂದು ತಿಳಿಯುವುದು, ಮತ್ತೆ ಯಜ್ಞ ಪರಿಸಮಾಪ್ತಿ ಇದು ಮುಖ್ಯ ಕಥೆಯ ನಡೆಯಾಗಿದೆ. ನಡು ನಡುವೆ ಮುದ್ದಣ ಮನೋರಮೆಯರ ಸಲ್ಲಾಪ ಬರುತ್ತದೆ. ಒಟ್ಟಿನಲ್ಲಿ ಕನ್ನಡ ಕಾವ್ಯ ರಸಿಕರನ್ನು ಈ ಕೃತಿಯು ಬಹುವಾಗಿ ಸೆಳೆದಿದೆ. ಅದರ ಒಂದು ಸಂಗ್ರಹಯೋಗ್ಯ ಆವೃತ್ತಿ ಇದು.

ವಿಶ್ವವಾಣಿ ಅಂಕಿತ ಟಾಪ್ ಟೆನ್



1
ಏರುಘಟ್ಟದ ನಡಿಗೆ
(ಪ್ರೊ. ಮಾಧವ ಗಾಡ್ಗೀಳರ ಆತ್ಮಕಥೆ)
ಅನು : ಶಾರದಾ ಗೋಪಾಲ, ನಾಗೇಶ ಹೆಗಡೆ
ಪ್ರ: ಆಕೃತಿ - ಆಶಯ ಪಬ್ಲಿಕೇಷನ್ಸ್, ಮಂಗಳೂರು
ಬೆಲೆ : ರೂ 650/-



2
ಅಘೋರಿಗಳ ಲೋಕದಲ್ಲಿ
(ನಿಷಿದ್ಧ ಪ್ರಪಂಚದ ಅನುಭವ)
ಲೇ: ಸಂತೋಷಕುಮಾರ ಮೆಹೆಂದಳೆ
ಪ್ರ: ಅಂಕಿತ ಪುಸ್ತಕ, ಬೆಂಗಳೂರು
ಬೆಲೆ : ರೂ 350/-



3
ಹಸಿರು ಅಧ್ಯಾತ್ಮ
(ಹಸಿರು ಪರಿಸರ ಕುರಿತ ಪ್ರಬಂಧಗಳು)
ಲೇ: ನರೇಂದ್ರ ರೈ ದೇರ್ಲ
ಪ್ರ: ಪುಸ್ತಕ ಮನೆ, ಕಾರ್ಕಳ
ಬೆಲೆ : ರೂ 180/-



4
ಉದ್ಯಮ ರತ್ನ ರತನ್ ಟಾಟಾ
(ಜೀವನ ಚರಿತ್ರೆ)
ಲೇ: ಡಾ। ವಾಸುದೇವ ಶೆಟ್ಟಿ
ಪ್ರ: ಚಿನ್ಮಯ ಪ್ರಕಾಶನ, ಬಳೇಪೇಟೆ
ಬೆಲೆ : ರೂ 220/-

5
ಥೇರೀಗಾಥಾ ಕಾಣಿಸಿದ ಹೆಣ್ಣು
(ಬೌದ್ಧ ಧರ್ಮದಲ್ಲಿ ಮಹಿಳೆ)
ಲೇ: ಶೈಲಜಾ
ಪ್ರ: ಜೀರುಂಡೆ ಪುಸ್ತಕ, ಬೆಂಗಳೂರು
ಬೆಲೆ : ರೂ 195/-



6
ಪೆನ್ನು ಮತ್ತು ಎಮ್ಮೆ
(ಕಥೆಗಳು)
ಡಾ। ಕರೀಗೌಡ ಬೀಚನಹಳ್ಳಿ
ಪ್ರ: ಕೆಜಿಬಿ ಪ್ರತಿಷ್ಠಾನ, ಬೆಂಗಳೂರು
ಬೆಲೆ : ರೂ 150/-



7
ಬೆಳುದಿಂಗಳ ನೋಡಾ
(ಬೇಂದ್ರೆ ಕೆಲವು ಪ್ರಸಂಗಗಳು)
ಡಾ। ಎಚ್.ಎಸ್. ಸತ್ಯನಾರಾಯಣ
ಪ್ರ: ಅಮೂಲ್ಯ ಪುಸ್ತಕ, ಬೆಂಗಳೂರು
ಬೆಲೆ : ರೂ 150/-



8
ಅವಿಭಕ್ತ - (ಶ್ರೀ ವಿಠ್ಠಲ ಚಿಂತನೆಗಳ ವ್ಯಾಖ್ಯಾನಗಳು)
ಮರಾಠಿ ಮೂಲ : ದ.ರಾ.ಬೇಂದ್ರೆ
ಅನು : ಆನಂದ ಝುಂಜರವಾಡ
ಪ್ರ: ಪ್ರಕೃತಿ ಪ್ರಕಾಶನ, ಬೆಂಗಳೂರು
ಬೆಲೆ : ರೂ 225/-



9
ರಾಗಿ ತಂದೇವಾ ನಾವು
(ಸಾಂಸ್ಕೃತಿಕ ಶೋಧ)
ಲೇ: ಪಿ.ಚಂದ್ರಿಕಾ
ಪ್ರ: ಅವನಿ ಪ್ರಕಾಶನ, ಪುಟ್ಟಯ್ಯನ ಪಾಳ್ಯ
ಬೆಲೆ : ರೂ 150/-



10
ಬೆಸ್ಟ್ ಆಫ್ ಜೋಗಿ
(ಜೋಗಿಯವರ ಆಯ್ದ ಬರಹಗಳು)
ಸಂ : ವಿಕಾಸ್ ನೇಗಿಲೋಣಿ, ರಾಜೇಶ್ ಶೆಟ್ಟಿ
ಪ್ರ: ಸಪ್ನ ಬುಕ್‌ಹೌಸ್
ಬೆಲೆ : ರೂ 425/-

ಮಾಹಿತಿ: ಅಂಕಿತಪುಸ್ತಕ, 53, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು-560004. ದೂರವಾಣಿ: 26617100/26617755
ಮೊಬೈಲ್ ನಂ: 9019190502

ಕಾಪಿ ವೀರರ ನಾಟೀ ಪರಿಣತಿ!

ಸುಲಲಿತ ಪ್ರಬಂಧ
» ಚಂದ್ರಶೇಖರ ಹೆಗಡೆ

ಕಾಪಿಗೆ ಹೋದ ಮಾನ ನಿಷ್ಠೆಯಿಂದ ಎಷ್ಟು ಪರೀಕ್ಷೆ ಬರೆದರೂ ಬಾರದು ಎಂಬ ಸತ್ಯ ತಿಳಿದವರು ಕಾಪಿಯ ಗೋಜಿಗೇ ಹೋಗುವುದಿಲ್ಲ. ಇಂತಹ ಕಾಪಿ ವೀರರು ಇರುತ್ತಾರೆಂದೇ ಸ್ಕ್ವಾಡ್ ತಂಡದವರು ತಮ್ಮ ಚಾಕಚಕ್ಯತೆಯಿಂದ, ಸಂಶಯ ಬಂದ ವಿದ್ಯಾರ್ಥಿಯ ಜನ್ಮವನ್ನೇ ಜಾಲಾಡಿಬಿಡುವಷ್ಟು ಶೋಧನೆಗಿಳಿಯುವುದು!

ಪರೀಕ್ಷೆ ಎಂದರೆ ವಿದ್ಯಾರ್ಥಿಗಳೆಲ್ಲಾ ಬಳಲಿ ಬೆಂಡಾಗಿ ಅದುರಿ ಹಣ್ಣಾಗಿ ಮುದುಡಿ ತಲ್ಲಣಿಸುವ ಕಾಲವೊಂದಿತ್ತು ಎಂಬುದನ್ನು ಹೇಳಿದರೆ ಈಗಿನ ವಿದ್ಯಾರ್ಥಿಗಳು ಬಹುಶಃ ಅದು ಕೃತಯುಗದ ಮಾತಿರಬೇಕು ಎಂದು ಹೇಳಿದವರನ್ನೇ ಗೇಲಿ ಮಾಡುತ್ತಾರೆ. ನಮ್ಮದೇ ಸಾಕ್ಷಿಯನ್ನು ಕೊಟ್ಟರೂ ನಿಮ್ಮದು ಪುಕ್ಕಲು ಪ್ರವೃತ್ತಿಯಾಗಿರಬೇಕು ಎಂಬ ಸಂಶಯದಿಂದಲೇ ದಿಟ್ಟಿಸಿ ನೋಡಿ ನಕ್ಕುಬಿಡುತ್ತಾರೆ. ಹೌದು, ಈಗ ಪರೀಕ್ಷಾ ಪೇ ಚರ್ಚಾ ಯಾಕೆ ಎನ್ನುವಿರೇನು? ಬನ್ನಿ ಪರೀಕ್ಷೆಯ ಕೊಠಡಿಯೊಳಗೊಮ್ಮೆ ವಿಹರಿಸಿ ಬರೋಣ.

ಪರೀಕ್ಷೆ ಎಂದರೆ ಸಾಕು ಅಂದು ನಮಗಿದ್ದ ಭಯವನ್ನು ಈಗಿನ ನಮ್ಮ ವಿದ್ಯಾರ್ಥಿಗಳ ಕಣ್ಣುಗಳಲ್ಲಿ ಶೋಧಿಸಿ ನೋಡಿದರೆ ಯಾವ ಸುಳುಹೂ ದೊರೆಯುವುದಿಲ್ಲ. ಭಯ ಹೋಗಲಿ ಕೆಲವು ವಿದ್ಯಾರ್ಥಿಗಳು ಮೇಲ್ವಿಚಾರಕರಾಗಿ ಬಂದವರನ್ನೇ ಭಯಪಡಿಸುವಷ್ಟು ಸರಕು ಸರಂಜಾಮುಗಳನ್ನು ಹೊತ್ತು ಬರುವುದನ್ನು ನೋಡಿದರೆ, ನಿಜವಾದ ಪರೀಕ್ಷೆ ವಿದ್ಯಾರ್ಥಿಗಳದಲ್ಲ ಅಧ್ಯಾಪಕರದ್ದೇ ಎಂದೆನಿಸುತ್ತದೆ. ಯಶಸ್ಸಿಗೆ ಕಳ್ಳದಾರಿಗಳನ್ನು ಹುಡುಕುವ ಪ್ರವೃತ್ತಿ ಇಂದಿನ ವಿದ್ಯಾರ್ಥಿಗಳಲ್ಲಿ ಹೆಚ್ಚಾಗು ತ್ತಿದೆ. ಹೀಗಾಗಿಯೇ ಆಗಾಗ ಪ್ರಶ್ನೆಪತ್ರಿಕೆ ಸೋರಿಕೆ, ನಕಲು ಪ್ರಕರಣಗಳು ವರದಿಯಾಗುವುದನ್ನು ಕಾಣುತ್ತೇವೆ.

ಒಂದು ಬಾರಿ ಮೇಲ್ವಿಚಾರಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ. ಪರೀಕ್ಷೆ ಶುರುವಾಗಿ ಒಂದರ್ಧ ಗಂಟೆ ಕಳೆದಿರಬೇಕು. ವಿದ್ಯಾರ್ಥಿಗಳು ಗಂಭೀರವಾಗಿಯೇ ಉತ್ತರ ಬರೆಯುವುದರಲ್ಲಿ ತಲ್ಲೀನರಾಗಿದ್ದರು. ಅಷ್ಟರಲ್ಲಿ ಮೊದಲನೇ ಡೆಸ್ಕ್ ನಲ್ಲಿ ಕುಳಿತಿದ್ದ ಹುಡುಗಿಯೊಬ್ಬಳು ಹೊರಳಿ ಯಾರನ್ನೋ ಸನ್ನೆಯಿಂದ ಕರೆಯುತ್ತಿರುವಂತೆ ಕಂಡಿತು. ಅವಳು ಬೀರಿದ ನೋಟದ ಬೆನ್ನು ಹತ್ತಿ ಸುಮ್ಮನೇ ಕಣ್ಣು ಹಾಯಿಸಿದರೆ ಅವಾಕ್ಕಾಗುವ ಸರದಿ ನನ್ನದಾಯಿತು. ಈಕೆ ಇರುವುದು ಮೊದಲನೇ ಬೆಂಚಿನಲ್ಲಿ. ಮಾತನಾಡಿಸಲು ಬಯಸುತ್ತಿರುವ ಅವಳ ಗೆಳತಿ ಇರುವುದು ಕೊನೆಯ ಎಂಟನೇ ಸಾಲಿನಲ್ಲಿ. 'ಉತ್ತರ ಧ್ರುವದಿಂ ದಕ್ಷಿಣ ಧ್ರುವಕೂ' ಇದೆಂತಹ ಸಂಬಂಧವಯ್ಯ ಎಂದುಕೊಂಡ ನಾನು ಶಬ್ದಕ್ಕಂಜಿ ಹೇಗೆ ಸಂವಾದ ಮಾಡುತ್ತಾರೋ ಪರೀಕ್ಷಿಸಿಯೇ ಬಿಡಬೇಕು ಎಂದು ನೋಡಿಯೂ ನೋಡದವನಂತೆ ಮತ್ತೊಬ್ಬ ವಿದ್ಯಾರ್ಥಿಯ ಕಡೆಗೆ ಗಮನ ಹರಿಸಿದೆ. ಇವರಿಬ್ಬರನ್ನೂ ಸಾಕ್ಷಿ ಸಮೇತವಾಗಿಯೇ ಹಿಡಿದರಾಯಿತು ಎಂಬ ದೂರಾಲೋಚನೆ ನನ್ನದಾಗಿತ್ತು.

ಒಕ್ಕಣ್ಣಿನ ಪತ್ತೇದಾರಿ

ಒಕ್ಕಣ್ಣಿನಿಂದ ಇವರ ರಂಗೋಲಿ ಕೆಳಗೆ ನುಸುಳುವ ನಾಟಕವನ್ನು ಸೂಕ್ಷ್ಮವಾಗಿ ಗಮನಿಸಿದ ನನಗೆ ಅಚ್ಚರಿ ಕಾದಿತ್ತು. ಮೊದಲನೇ ಬೆಂಚಿನಲ್ಲಿರುವಾಕೆ ಕೈಸನ್ನೆಯಲ್ಲಿಯೇ ಎರಡು ಎಂದು ತೋರಿಸಿದರೆ ಕೊನೆಯ ಬೆಂಚಿನಲ್ಲಿರುವ ಗೆಳತಿ ಮೂರು ಎಂದು ಮರಳಿ ಸನ್ನೆ ಮಾಡಿದಳು. ನಂತರ ಆಕೆಯ ಸರದಿ ಕೊನೆಯಲ್ಲಿರುವಾಕೆ ನಾಲ್ಕು ಎಂದು ಬೆರಳು ತೋರಿದರೆ ಮೊದಲ ಬೆಂಚಿನಲ್ಲಿರುವ ಹುಡುಗಿ ಎರಡು ಎಂದು ಸನ್ನೆ ಮಾಡಿದಳು. ಏನಿದೇನಿದು ವಿಚಿತ್ರ ಎಂದು ಇಬ್ಬರ ಉತ್ತರ ಪತ್ರಿಕೆಯನ್ನೂ ಕಸಿದುಕೊಂಡು ನಿಲ್ಲಿಸಿ 'ಪರೀಕ್ಷಾ ಕೊಠಡಿಯಲ್ಲಿ ಏನಮ್ಮಾ ನಿಮ್ಮ ಹುಚ್ಚಾಟ'? ಎಂದು ಕೇಳಿದರೆ 'ಏನೂ ಇಲ್ಲ ಸರ್ ನಾವು ಮಾತನಾಡೇ ಇಲ್ಲ' ಎಂದು ಹಾರಿಕೆಯ ಸಮಜಾಯಿಷಿ ನೀಡಿದ ಹುಡುಗಿಯನ್ನು ಗದರಿಸಿ ಕೇಳಿದಾಗ ಬೆಚ್ಚಿಬೀಳುವ ಸರದಿ ನನ್ನದಾಯಿತು.

ಕಣ್ಣೀರಿನ ಅಸ್ತ್ರ

'ಏನದು ಮಾತಿಲ್ಲದ ನಿನ್ನ ಕೈಸನ್ನೆಯ ಅರ್ಥ?' ಎಂದು ಗದರಿ ಕೇಳಿದಾಗ, ಹೆಣ್ಣುಮಕ್ಕಳ ಎಂದಿನ ಅಸ್ತ್ರವಾದ ಕಣ್ಣೀರುಗರೆಯುತ್ತಾ 'ಏನಿಲ್ಲ ಸರ್ ನಾನು. ಎರಡನೇ ಪ್ರಶ್ನೆಗೆ ಉತ್ತರವನ್ನು ಎರಡು ಎಂದು ತೋರಿಸಿ ಅವಳನ್ನು ಕೇಳಿದೆ. ಅವಳು ಬಹು ಆಯ್ಕೆಯ ನಾಲ್ಕು ಉತ್ತರಗಳಲ್ಲಿ ಮೂರನೆಯದು ಎಂದು ಬೆರಳ ಸನ್ನೆ ಮಾಡಿದಳು. ಮರಳಿ ಅವಳು ನಾಲ್ಕನೇ.. ಪ್ರಶ್ನೆಗೆ ಉತ್ತರವೇನೆಂದು ಕೇಳಿದಳು. ನಾನು ಎರಡನೆಯದು ಎಂದು ಸನ್ನೆ ಮಾಡಿದೆ' ಎಂದು ಮುಜುಗರದಿಂದ ಹೆದರುತ್ತಲೇ ವಿವರಿಸಿದ್ದನ್ನು ಕೇಳಿ ಚಕಿತನಾದೆ. ಸುಮ್ಮನಾಗದೇ ಮುಂದುವರೆದು ಹಾಗಾದರೆ 13 ಹಾಗೂ 14 ನೇ ಪ್ರಶ್ನೆಗಳಿಗೆ ಉತ್ತರ ಬೇಕಾದರೆ ಹೇಗೆ ಕೇಳುವಿರಿ ಒಮ್ಮೆ ಹೇಳಿಬಿಡು. ಉಳಿದವರಿಗೂ ಸ್ವಲ್ಪ ಅನುಕೂಲವಾಗಲಿ ಎಂದು ವ್ಯಂಗ್ಯ ಮಾಡಿ ಕೇಳಿದೆ.

'ಸರ್.' ಎಂದು ಬೆದರಿ ಬಿಕ್ಕಿದಳು. ನಿಮ್ಮ ಕುತಂತ್ರವನ್ನು ತಿಳಿಯಲೇಬೇಕು ಬೇಗ ಹೇಳು ಎಂದು ಜೋರು ಬಾಯಿ ಮಾಡಿದಾಗ ಮುಂದುವರೆದು 'ಹದಿಮೂರನೇ ಪ್ರಶ್ನೆಗೆ ಉತ್ತರ ಕೇಳಬೇಕಾದರೆ.. ಬಲಗೈನ ಒಂದು ತೋರುಬೆರಳನ್ನು ಮೊದಲು ತೋರಿ ನಂತರ ಎಡಗೈನ ಮೂರು ಬೆರಳುಗಳನ್ನು ತೋರಿಸುವಂತೆ ಮಾತನಾಡಿಕೊಂಡಿದ್ದೆವು' ಎಂದು ಹೇಳಿದ್ದನ್ನು ಕೇಳಿದ ನಾನು ಮೂರ್ಛೆ ಹೋಗುವುದೊಂದೇ ಬಾಕಿ. ಇಷ್ಟು ಚಾಣಾಕ್ಷತೆಯನ್ನು ಓದುವುದರಲ್ಲಿ ತೋರಿದರೆ ಪ್ರಥಮ ದರ್ಜೆಯಲ್ಲಿಯೇ ಪಾಸಾಗಬಹುದು ಎಂದು ಇಬ್ಬರ ಪತ್ರಿಕೆಗಳನ್ನೂ ಕಸಿದುಕೊಂಡು ಹೊರಹಾಕಿದೆ. ಬೆರಳುಗಳ ಚಾಕಚಕ್ಯತೆಯನ್ನೇ ತಮ್ಮ ಬಂಡವಾಳವಾಗಿಸಿಕೊಂಡು ಹೀಗೂ ಕಾಪಿ ಮಾಡಬಹುದು ಎಂಬುದನ್ನು ತೋರಿಸಿದ್ದರು. ಅವರ ಕುತಂತ್ರದ ಬಾಲವನ್ನು ಕತ್ತರಿಸಿ ಹೊರಹಾಕಿದಾಗಲೇ ಅವರಿಗೆ ತಮ್ಮ ತಪ್ಪಿನ ಅರಿವಾಗಿತ್ತು. ಆದರೆ ಕಾಲ ಮಿಂಚಿ ಹೋಗಿತ್ತು.

ಮತ್ತೊಂದು ಸಲ ನನ್ನ ಗೆಳೆಯರೊಬ್ಬರು ಪರೀಕ್ಷೆಯ ಮೇಲ್ವಿಚಾರಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಎಂದಿನಂತೆ ಪರೀಕ್ಷೆ ಶುರುವಾಗಿತ್ತು. ಒಬ್ಬ ಹುಡುಗನ ಅಸಹಜ ವರ್ತನೆಗಳನ್ನು ಕಂಡು ಸಂಶಯ ಬಂದ ಗೆಳೆಯ ಪ್ರಾಧ್ಯಾಪಕರು ಅವನ ಹತ್ತಿರ ಹೋಗಿ 'ಎದ್ದು ನಿಲ್ಲೋ, ಕಿಸೆಯಲ್ಲಿ ಏನಾದರೂ ಕಾಪಿ ಇಟ್ಟಿದ್ದೀಯಾ ತೆಗೀ ನೋಡೋಣ ' ಎಂದು ಭೌತಿಕ ಪರೀಕ್ಷೆಗಿಳಿದರು. ಕಿಸೆಯಲ್ಲಿ ಏನೂ ಇಲ್ಲ. 'ಡೆಸ್ಕ್‌ನಲ್ಲಿ ಏನಾದರೂ ಇಟ್ಟಿದ್ದೀಯಾ ತೋರಿಸು' ಎಂದು ಬೆಂಚನ್ನೆಲ್ಲಾ ಪರೀಕ್ಷಿಸಿದರು. ಅಂಗಿಯ ತುದಿಯಲ್ಲಿ, ಅಂಗೈಗಳಲ್ಲಿ ಎಲ್ಲ ಕಡೆಯೂ ತಮ್ಮ ಪತ್ತೇದಾರಿ ಕಣ್ಣುಗಳನ್ನು ತೂರಿದರೂ ಏನೂ ಸಿಗದೇ ಹೋದಾಗ 'ಸರಿ ಕೂತಕೋ' ಎಂದು ಅನುಮಾನದಿಂದಲೇ ಹೇಳಿ ಕೈಬಿಟ್ಟರು. ಹದಿನೈದು ನಿಮಿಷ ಕಳೆದಿರಬೇಕು ಮತ್ತೆ ಆ ಹುಡುಗ ಏನೋ ಕಸಿವಿಸಿಗೊಂಡವನಂತೆ ಬರೆಯಲಾಗದೇ ಅತ್ತಿತ್ತ ಹೊರಳಲಾರಂಭಿಸಿದ್ದ. ಈ ಬಾರಿ ಪ್ರಾಧ್ಯಾಪಕರು ಆ ಹುಡುಗನನ್ನು ಮತ್ತೊಮ್ಮೆ ಎಬ್ಬಿಸಿ ನಿಲ್ಲಿಸಿ ಚೆಕ್ ಮಾಡಿದರು. ಅವನನ್ನು ಎಷ್ಟೇ ತಡಕಾಡಿದರೂ ಏನೂ ಸಿಗುತ್ತಿಲ್ಲ. ಡೆಸ್ಕ್ ಬಿಟ್ಟು ಹೊರಗೆ ಬಾ ನೋಡೋಣ ಎಂದರ.

ಕಾಪಿಯ ವಾಸನೆ ಹೊಡೆಯುತ್ತಿತ್ತು!

ಆ ಹುಡುಗ ಹೆದರುತ್ತಾ ಹೊರಗೆ ಬಂದ. ಕಾಪಿಯ ಅದ್ಯಾವ ಸುಳಿವೂ ಸಿಗುತ್ತಿಲ್ಲ. ಪ್ರಾಧ್ಯಾಪಕರಿಗೆ ಮಾತ್ರ ಬಲವಾದ ಕಾಪಿಯ ವಾಸನೆ ಮಾತ್ರ ಕಾಡುತ್ತಲೇ ಇತ್ತು. ಮೈ ಕೈಗಳನ್ನೆಲ್ಲಾ ಮುಟ್ಟಿ ತಡಕಾಡಿದರೂ ಕಾಪಿಯ ಒಂದು ಚೀಟಿಯೂ ದೊರೆಯುತ್ತಿಲ್ಲ. ಮೇಲಿಂದ ಕೆಳಗೊಮ್ಮೆ ಆ ಹುಡುಗನನ್ನು ತಮ್ಮ ಎಕ್ಸ್- ರೇ ಕಣ್ಣುಗಳ ಮೂಲಕ ಇಣುಕಿದರು. ಕಾಲಿನಲ್ಲಿ ವಿಶೇಷವಾದ ಚಪ್ಪಲಿಗಳು ಕಂಡದ್ದನ್ನು ನೋಡಿ 'ಚಪ್ಪಲಿ ತೆಗೆ' ಎಂದರು. ಚಪ್ಪಲಿಯಿಂದ ಕಾಲುಗಳು ಹೊರಗೆ ಬಂದಿದ್ದೇ ತಡ ಕಾಲಿಗಂಟಿಕೊಂಡಿದ್ದ ಕಾಪಿಯ ತುಣುಕುಗಳು ದಂಡಿ ದಂಡಿಯಾಗಿ ಹೊರಚೆಲ್ಲಿದ್ದನ್ನು ಕಂಡು ಪ್ರಾಧ್ಯಾಪಕರು ದಂಗಾದರು. 'ಅಬ್ಬಾ! ಇದೆಂತಹ ಟ್ಯಾಲೆಂಟು ಮೆಚ್ಚಲೇಬೇಕು ನಿನ್ನ ಕಾಪಿ ಪರಾಕ್ರಮವನ್ನು' ಎಂದು ಅಲ್ಲಿದ್ದವರೆಲ್ಲಾ ಬಾಯಿ ಮೇಲೆ ಬೆರಳಿಟ್ಟುಕೊಂಡರು. ಕೊನೆಗೆ ಅವನಿಗೆ ಪರೀಕ್ಷೆ ಬರೆಯಲಿಕ್ಕೆ



ಅವಕಾಶ ನೀಡದೇ ಕೊಠಡಿಯಿಂದಲೇ ಹೊರಹಾಕಲಾಯಿತು.

ಪತ್ರ್ಯ ಎಂದರೆ ಸರಸ್ವತಿಯ ಸಮಾನವೆಂದುಕೊಂಡು ಹಣೆಗೊತ್ತಿಕೊಳ್ಳುತ್ತಿದ್ದ ಕಾಲವೆಲ್ಲಿ ? ಪುಸ್ತಕದ ಹಾಳೆಗಳೆಂದರೆ ಚಪ್ಪಲಿ ಕೆಳಗೆ ಬಚ್ಚಿಟ್ಟುಕೊಳ್ಳುವ ಕಾಲ ಕಸದಂತೆ ಕಾಣುವ ಇಂದಿನ ಅಧ್ಯಯನ ಸಂಸ್ಕೃತಿಯೆಲ್ಲಿ ಎಂಬ ಚಿಂತೆಯ ಗೆರೆಗಳು ನನ್ನ ಹಣೆಯ ಮೇಲೆ ಗೊತ್ತಿಲ್ಲದೇ ಢಾಳಾಗಿ ಕಾಣಿಸಿದವು. ಬಹುಶಃ ಆತ ಹಿಂದಿನ ಜನ್ಮದಲ್ಲಿ ಭೃಗು ಮಹರ್ಷಿಯಾಗಿದ್ದಿರಬೇಕೆಂದೆನಿಸಿತು. ಭೃಗು ಮಹರ್ಷಿಗೆ ಪರಮಶಿವನಂತೆ ಮೂರು ಕಣ್ಣುಗಳಿದ್ದವಂತೆ. ಮೂರನೇ ಕಣ್ಣು ಮಾತ್ರ ಆತನ ಪಾದದ ಕೆಳಗೆ ಇದ್ದು ಕಾಲ ಕೆಳಗಿನ ಲೋಕಗಳನ್ನೆಲ್ಲಾ ದರ್ಶಿಸಲು ನೆರವು ನೀಡುತ್ತಿತ್ತು ಎಂಬುದನ್ನು ಓದಿದ್ದ ನನಗೆ ಪಾದದಡಿಯಲ್ಲಿ ಕಾಪಿ ಚೀಟಿಗಳನ್ನು ರಾಶಿ ರಾಶಿಯಾಗಿ ಬಚ್ಚಿಟ್ಟುಕೊಂಡು ಬಂದಿದ್ದ ವಿದ್ಯಾರ್ಥಿಯು ಕೂಡ ತನ್ನ ಪಾದದಲ್ಲಿಯೂ ಒಂದು ಕಣ್ಣನ್ನಿಟ್ಟುಕೊಂಡಿರಬೇಕು. ಅದರ ಸಹಾಯದಿಂದಲೇ ಈತ ಪರೀಕ್ಷೆಯನ್ನು ಬರೆಯುತ್ತಿದ್ದಿರಬೇಕು ಎಂಬ ಸಂಶಯ ಮೂಡಲು ಸಮಯ ಹಿಡಿಯಲಿಲ್ಲ. ಆಧುನಿಕ ಕಾಲದ ಅತಿಮಾನುಷ ಶಕ್ತಿವಂತ ಎಂಬ ಬಿರುದನ್ನಾದರೂ ಕೊಟ್ಟುಕಳಿಸಿದರಾಯಿತು ಎಂದುಕೊಂಡರೆ ಅಂತಹ ಯಾವುದೇ ಗುರುತುಗಳೂ ಯೋಗ್ಯತೆಗಳೂ ಅವನಲ್ಲಿರಲಿಲ್ಲ ಎಂಬುದು ನಿರಾಶೆ ಮೂಡಿಸಿತು.

ಮತ್ತೊಂದು ಕಾಲೇಜಿನಲ್ಲಿ ನಾನು ಕೊಠಡಿ ಮೇಲ್ವಿಚಾರಕನಾಗಿ ಕಾರ್ಯ ನಿರ್ವಹಿಸುತ್ತಿದ್ದಾಗ ವಿಚಕ್ಷಣ ದಳದವರು ಇದ್ದಕ್ಕಿದ್ದಂತೆ ದಿಢೀರನೇ ಬಂದು ನನ್ನ ಕೊಠಡಿಯಲ್ಲಿ ಒಂದೆರಡು ಸುತ್ತು ಹಾಕಿ ಎಲ್ಲರನ್ನೂ ಪರೀಕ್ಷಿಸಿದರು. ಕೆಲವು ಕ್ಷಣಗಳ ನಂತರ ಒಬ್ಬ ಹುಡುಗಿಯ ಉತ್ತರಪತ್ರಿಕೆಯನ್ನು ಕಸಿದುಕೊಂಡರು. 'ಯಾಕೆ ಸರ್ ಏನಾಯಿತು' ಎಂದು ಸಹಜವಾಗಿ ಅವರನ್ನು ಕೇಳಿದೆ. 'ನೋಡ್ರಿ, ಕಾಪಿಯನ್ನು ಹೇಗೆ ಮಾಡಬೇಕೆಂದು ನಿಮ್ಮ ಹುಡುಗರಿಂದಲೇ ಕಲಿಯಬೇಕು' ಎಂದು ತಿವಿದರು.

'ಅಂಥದ್ದೇನಾಯಿತು ಹೇಳಿ ಸರ್' ಎಂದು ಕೇಳಿಕೊಂಡೆ. 'ನನ್ನ ಇಪ್ಪತ್ತು ವರ್ಷಗಳ ಸೇವೆಯಲ್ಲಿ ಈ ತರಹದ ಪ್ರಸಂಗವನ್ನು ನಾನೂ ಇದೇ ಮೊದಲು ನೋಡ್ತಾ ಇರೋದು. ನೋಡ್ರಿ ಇಲ್ಲಿ' ಎಂದು ಹಾಲ್ ಟಿಕೆಟನ್ನು ನನ್ನ ಕೈಗಿತ್ತರು. ನಾನು ಸಹಜವಾಗಿ ಹಾಲ್ ಟಿಕೆಟ್ ನೋಡಿದೆ. 'ನಾನು ಸಹಿ ಹಾಕಿದ್ದೇನಲ್ಲ ಸರ್, ಆಕೆ ಉತ್ತರ ಪತ್ರಿಕೆಯ ಸಂಖ್ಯೆಯನ್ನೂ ಬರೆದಿದ್ದಾಳೆ..ಎಲ್ಲವೂ ಸರಿಯಾಗಿಯೇ ಇದೆಯಲ್ಲ' ಎಂದು ಕುತೂಹಲದಿಂದ ಉತ್ತರಿಸಿದೆ. 'ಸರಿಯಾಗಿ ಇನ್ನೊಮ್ಮೆ ಹಾಲ್ ಟಿಕೆಟ್ಟಿನ ಹಿಂಬದಿಯನ್ನು ನೋಡ್ರಿ..' ಎಂದು ಗದರಿದರು.

ಸೂಕ್ಷ್ಮ ಕರಕುಸುರಿ ಕಲೆ

ಸೂಕ್ಷ್ಮವಾಗಿ ಹಾಲ್ ಟಿಕೆಟ್ಟಿನ ಒಳಗೆ ಪ್ರವೇಶಿಸಿ ಕಣ್ಣುಗಳನ್ನ ಗಲಿಸಿ ನೋಡಿದೆ. ಹಾಲ್ ಟಿಕೆಟ್ ನ ಹಿಂಬದಿಯಲ್ಲಿ ಹೊರ ಜಗತ್ತಿನ ಸಾಮಾನ್ಯ ಕಣ್ಣುಗಳಿಗೆ ಸರಳವಾಗಿ ನೋಡಿದರೆ ಕಾಣದಂತೆ ಪೆನ್ಸಿಲ್ ನಿಂದ ಅತ್ಯಂತ ಸೂಕ್ಷ್ಮವಾಗಿ ಕರಕುಸುರಿ ಕೆತ್ತಿದಂತೆ ಅಕ್ಷರಗಳನ್ನು ಅಂದವಾಗಿ ಮುದ್ರಿಸಿದ ಹಾಗೆ ಬರೆದಿರುವುದನ್ನು ನೋಡಿ ನನ್ನ ಕಣ್ಣುಗಳನ್ನು ನಾನೇ ನಂಬದಾದೆ. ವಿದ್ಯಾರ್ಥಿಗಳಲ್ಲಿ ಸೃಜನಶೀಲ ಪ್ರತಿಭೆ ಸಹಜವಾಗಿರುತ್ತದೆ ಎಂಬುದನ್ನರಿತಿದ್ದ ನನಗೆ ಅವರು ಸೃಜನಶೀಲತೆಯನ್ನು ದುಷ್ಟತನಕ್ಕೂ ಹೇಗೆ ಬಳಸಿಕೊಳ್ಳುತ್ತಾರೆ ಎಂಬುದಕ್ಕೆ ಪ್ರತ್ಯಕ್ಷ ಸಾಕ್ಷಿಯೊದಗಿತ್ತು. ಅದನ್ನು ಹಾಗೆ ಕುಶಲ ಕಲೆಗಾರಿಕೆಯಿಂದ ಆ ಬಡಪಾಯಿ ಹಾಲ್‌ಟಿಕೆಟ್‌ನ ಮೇಲೆ ಬರೆಯಬೇಕಾದರೆ ಆಕೆ ಸರಿಸುಮಾರು ಎರಡು ದಿನಗಳನ್ನಾದರೂ ತೆಗೆದುಕೊಂಡಿರಬೇಕು ಎಂಬುದು ಮೇಲ್ನೋಟಕ್ಕೆ ಕಾಣಿಸುತ್ತಿತ್ತು. ಹಿಂದಿನ ಕಾಲದಲ್ಲಿ ಕಲಾತ್ಮಕವಾಗಿ ಕೆತ್ತಿದ ಅನೇಕ ಐತಿಹಾಸಿಕ ಶಿಲಾಶಾಸನಗಳನ್ನು ಹೊಂದಿರುವ ನಮ್ಮ ಪಾರಂಪರಿಕ ನಾಡಿನಲ್ಲಿ ಕಾಪಿಯನ್ನೇ ಶಾಸನದಂತೆ ಸುಂದರವಾಗಿ ಬರೆದಿರುವುದನ್ನು ಕಂಡು ಖೇದಗೊಂಡೆ. ಪ್ರಾಚೀನ ಗುಪ್ತಚಾರರ ಓಲೆಗಳನ್ನು ಈರುಳ್ಳಿ ರಸದಲ್ಲಿ ಬರೆಯುವ ಸಂಪ್ರದಾಯವಿದ್ದಿತು. ಯಾಕೆಂದರೆ ಈರುಳ್ಳಿ ರಸದಿಂದ ಬರೆದ ಪತ್ರಗಳನ್ನು ಸುಲಭವಾಗಿ ಓದಲು ಸಾಧ್ಯವಿಲ್ಲ. ಕಾರಣವಿಷ್ಟೇ. ಈರುಳ್ಳಿಯ ರಸದಿಂದ ಬರೆದರೆ ತಕ್ಷಣಕ್ಕೆ ಕಾಗದದ ಮೇಲೆ ಏನೂ ಕಾಣಿಸುವುದಿಲ್ಲ. ಓದುವವರು ಅದನ್ನು ಹಣತೆಯ ಕಾಡಿಗೆಗೆ ಹಿಡಿದಾಗ ಮಾತ್ರ ಅಕ್ಷರಗಳು ಕಪ್ಪು ಬಣ್ಣವನ್ನಂಟಿಸಿಕೊಂಡು ಸ್ಪಷ್ಟವಾಗಿ ಗೋಚರಿಸಿ ತಮ್ಮೊಳಗೆ ಅಡಗಿಸಿಟ್ಟುಕೊಂಡ ರಹಸ್ಯವನ್ನು ಹೊರಹಾಕುತ್ತವೆ. ಬರಹದ ಇಂತಹ ಕೌಶಲ್ಯಗಳು ಹಾಗೂ ಕಲೆಗಳು ಇಂದು ಕಾಪಿ ಮಾಡುವುದಕ್ಕಾಗಿ ಬಳಕೆಗೊಳ್ಳುತ್ತಿರುವುದನ್ನು ಪ್ರತ್ಯಕ್ಷ ಕಂಡು ವಿಷಾದದಿಂದ ಮರುಗಿದೆ.

ನನ್ನ ಗೆಳೆಯರೊಬ್ಬರು ತಮ್ಮ ಕಾಲೇಜಿನಲ್ಲಿ ಮೇಲ್ವಿಚಾರಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಎಂದಿನಂತೆ ಪರೀಕ್ಷೆ ಆರಂಭವಾಗಿ ವಿದ್ಯಾರ್ಥಿಗಳೆಲ್ಲರೂ ಉತ್ತರ ಬರೆಯುವುದರಲ್ಲಿ ತಲ್ಲೀನರಾಗಿದ್ದಾರೆ. ಒಬ್ಬ ವಿದ್ಯಾರ್ಥಿ ತಲೆಯೆತ್ತದೇ ನಿರಂತರವಾಗಿ ಉತ್ತರ ಬರೆಯುವುದರಲ್ಲಿ ನಿರತನಾಗಿದ್ದನ್ನು ಕಂಡ ಅಧ್ಯಾಪಕರು 'ಪರೀಕ್ಷೆ ಬರೆದರೆ ಹೀಗೆ ಬರೆಯಬೇಕು..ಆಹಾ.. ಎಂತಹ ಪರಕಾಯ ಪ್ರವೇಶ!..ಎಂತಹ ಅವಧಾನ..ಇಂತಹ ಬುದ್ಧಿ ಎಲ್ಲಾ ಹುಡುಗರಿಗೆ ಬಂದುಬಿಟ್ಟರೆ ಕಾಪಿ ಸಂಸ್ಕೃತಿಯನ್ನೇ ಬೇರುಸಮೇತ ಕಿತ್ತೆಸೆಯಬಹುದಲ್ಲ ಎಂದುಕೊಂಡು ಶಹಭಾಷ್ ಎಂದು ಮನದಲ್ಲೇ ಮೆಚ್ಚಿಕೊಳ್ಳುತ್ತಾ ಆ ಹುಡುಗನ ಹತ್ತಿರ ಹೋಗಿದ್ದಾರೆ. ಗುರುಗಳು ಬಂದುದನ್ನು ಗಮನಿಸಿದ ಆ ಹುಡುಗ ತಲ್ಲಣಿಸಿದಂತೆ ಗಾಬರಿಗೊಂಡು ಸ್ವಲ್ಪ ಬರೆಯುವುದನ್ನು ನಿಲ್ಲಿಸಿ ಅಂಗಿಯನ್ನು ಸರಿಪಡಿಸಿಕೊಂಡು ನಿಧಾನವಾಗಿ ತಲೆಯೆತ್ತಿ ಬರೆಯಲು ಪ್ರಯತ್ನಿಸಿದ. ಓಹೋ ಹುಡುಗ ಅದೆಷ್ಟು ವಿಧೇಯಗುರುಗಳು ಎದುರಿಗೆ ಬಂದ ತಕ್ಷಣವೇ ಗೌರವಕ್ಕೆ ಬರೆಯುವುದನ್ನೇ ನಿಲ್ಲಿಸಿ ಸಂಕೋಚದಿಂದ ಮುದುಡಿ ಹೋದನಲ್ಲ ಎಂದು ಮತ್ತೆ ಅವನಿಂದ ದೂರ ಹೋದರಂತೆ ಅಧ್ಯಾಪಕರು. ನಂತರ ಕೊಠಡಿಯ ಹೊರಗೆ ಕಿಟಕಿಯಲ್ಲಿ ನಿಂತೇ ಎಲ್ಲರತ್ತ ಕಣ್ಣಾಡಿಸಿದ ವಿಚಕ್ಷಣ ದಳದ ಮುಖ್ಯಸ್ಥರು ಆ ಹುಡುಗನ ತಲೆಬಾಗುವಿಕೆಯಿಂದ ಸಂಶಯ ಬಂದು ಅವನನ್ನು ಎಬ್ಬಿಸಿ ಭೌತಿಕವಾಗಿ ಪರೀಕ್ಷಿಸಿ ಇದ್ದಕ್ಕಿದ್ದಂತೆ ಅವನ ಉತ್ತರ ಪತ್ರಿಕೆಯನ್ನು ಕಸಿದುಕೊಂಡು ಹೊರಟು ಹೋದರು. ಇಡೀ ಕೊಠಡಿಯಲ್ಲಿ ಯಾವುದೇ ಅಲುಗಾಟವಿಲ್ಲದೇ ನಿಶ್ಚಿಂತೆಯಿಂದ ಉತ್ತರ ಬರೆಯುತ್ತಿದ್ದ ಈ ಹುಡುಗನ ಉತ್ತರಪತ್ರಿಕೆಯನ್ನು ಕಸಿದುಕೊಂಡು ಹೋಗಿದ್ದನ್ನು ನೋಡಿ ಅಧ್ಯಾಪಕರಿಗೆ ಅಚ್ಚರಿಯಾಯಿತು.

ವಿಚಕ್ಷಣ ದಳದ ಪ್ರಾಧ್ಯಾಪಕರನ್ನು ತಡೆದು 'ಸರ್ ಅವನು ಅಂತಹ ಹುಡುಗನಲ್ಲಪರೀಕ್ಷೆಯನ್ನು ಶಾಂತಚಿತ್ತನಾಗಿ ಬರೆಯುತ್ತಿದ್ದ ಅವನ ತಪ್ಪಿಲ್ಲಉತ್ತರಪತ್ರಿಕೆ ಕೊಟ್ಟುಬಿಡಿ' ಎಂದು ತಮ್ಮ ವಿದ್ಯಾರ್ಥಿಯ ಪರವಾಗಿ ವಾದ ಮಂಡಿಸಿದ ಅಧ್ಯಾಪಕರಿಗೆ 'ತಪ್ಪು ಮಾಡದೇ ನಾವು ಉತ್ತರಪತ್ರಿಕೆ ತಗೊಂಡಿಲ್ಲ. ಅವನೇನು ಮಾಡಿದ್ದಾನೆ ಅಂತ ಅವನನ್ನೇ ಕೇಳ್ರಿ' ಎಂದವರೇ ಭರ್ರನೇ ಕೆಳಗಿಳಿದು ಹೋಗಿಬಿಟ್ಟರು. ಸಪ್ಪೆ ಮುಖ ಮಾಡಿ ಡೆಸ್ಕಿನಲ್ಲಿ ಕುಳಿತ ಹುಡುಗನನ್ನು ಅಧ್ಯಾಪಕರು ಕೇಳಿದರು. ತಲ್ಲಣಿಸುವ ಸರದಿ ನನ್ನ ಗೆಳೆಯ ಅಧ್ಯಾಪಕರದ್ದಾಗಿತ್ತು. ಅವನು ಕಾಪಿಗಾಗಿ ಚೀಟಿಯನ್ನು ತಂದಿರಲಿಲ್ಲ ನಿಜ. ಆದರೆ ತನ್ನ ಅಂಗಿಯ ತುದಿಯ ಹಿಂಬದಿಯನ್ನೇ ಹಾಳೆಯನ್ನಾಗಿ ಮಾಡಿಕೊಂಡು ಅದರ ಮೇಲೆ ಪತ್ಯದ ಒಂದಷ್ಟು ಅಂಶಗಳನ್ನು ಸುಂದರವಾಗಿ ಬರೆದುಕೊಂಡು ಬಂದಿದ್ದ. ತುದಿಯಂಗಿಯತ್ತ ಕಣ್ಣು ನೆಡುವುದಕ್ಕೆಂದೇ ಆತ ತಲೆಯೆತ್ತದೇ ನಿಯತವಾಗಿ ಉತ್ತರ ಬರೆಯುತ್ತಿದ್ದನೆಂಬ ಸಂಗತಿ ಹೊಳೆದ ಅಧ್ಯಾಪಕರಿಗೆ ಪೇಚಿಗೆ ಸಿಲುಕುವಂತಾಯಿತು. ಇಂಥ ದ್ವಿಮುಖವಾಡಗಳ ಹುಡುಗರ ಪಕ್ಷವನ್ನು ವಹಿಸಿ ನಾವೇನಾದರೂ ವಿಚಕ್ಷಣ ದಳದ ಮುಂದೆ ಬಲವಾದ ವಾದವನ್ನು ಮಂಡಿಸಿದರೆ, ಅಲ್ಲಿಗೆ ನಮ್ಮ ಕಥೆಯೂ ಮುಗಿಯಿತೆಂದೇ ಅರ್ಥ. ಮುಗ್ಧತೆಯೇ ಮಾಯವಾಗಿರುವ ಕಾಲದಲ್ಲಿ ಅದನ್ನರಸುವ ದುಸ್ಸಾಹಸ ನಮ್ಮದಾಗಿದ್ದಕ್ಕೆ ವಿಷಾದವೂ ಉಂಟಾಯಿತು.

ಅದಕ್ಕೇ ಅಲ್ಲವೇ ಹಿರಿಯರು ಹೇಳಿದ್ದು ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡು ಎಂದು. ಪರೀಕ್ಷಾ ಸಂದರ್ಭದಲ್ಲಿಯಂತೂ ಪ್ರಮಾಣಿಸಿ ನೋಡುವ ಕಣ್ಣುಗಳು ಮೈತುಂಬಾ ಇದ್ದರೂ ಕಡಿಮೆಯೇ. ಹೀಗಾಗಿ ಪರೀಕ್ಷಾ ಮೇಲ್ವಿಚಾರಕರಾದವರು ಶತಾವಧಾನಿಗಳಾಗಿದ್ದರೆ ಒಳ್ಳೆಯದು ಎಂಬ ಸತ್ಯವನ್ನು ಅರುಹುವಂತೆ ಮಾಡಿತು ಈ ಘಟನೆ. ಒಮ್ಮೆ ಕಾಪಿಗೆ ಹೋದ ಮಾನ ನಿಷ್ಠೆಯಿಂದ ಎಷ್ಟು ಪರೀಕ್ಷೆ ಬರೆದರೂ ಬಾರದು ಎಂಬ ಸತ್ಯ ತಿಳಿದವರು ಕಾಪಿಯ ಗೋಜಿಗೇ ಹೋಗುವುದಿಲ್ಲ. ಇಂತಹ ಕಾಪಿ ವೀರರು ಇರುತ್ತಾರೆಂದೇ ಸ್ಕ್ವಾಡ್ ತಂಡದವರು ತಮ್ಮ ಚಾಕಚಕ್ಯತೆಯಿಂದ, ಸಂಶಯ ಬಂದ ವಿದ್ಯಾರ್ಥಿಯ ಜನ್ಮವನ್ನೇ ಜಾಲಾಡಿಬಿಡುವಷ್ಟು ಶೋಧನೆಗಿಳಿಯುವುದನ್ನು ನಾನು ಕಂಡಿದ್ದೇನೆ.

ಇನ್ನು ಕೆಲವು ಹುಡುಗರಂತೂ ಕಾಪಿ ಮಾಡಿ ಅವಮಾನಕ್ಕೊಳಗಾಗುವುದಕ್ಕಿಂತ ಉತ್ತರ ಪತ್ರಿಕೆ ಹೇಗಿತ್ತೋ ಹಾಗೆ ಶುಭ್ರವಾಗಿ ಮರಳಿ ಒಪ್ಪಿಸಿದರೆ ಮುಗಿಯಿತೆಂದು, ಪರೀಕ್ಷೆ ಆರಂಭವಾಗಿ ಒಂದು ಗಂಟೆಯಲ್ಲಿಯೇ ಉತ್ತರಪತ್ರಿಕೆಯನ್ನು ಮರಳಿಸಿ ಆರೋಗ್ಯದ ನೆಪ ಹೇಳಿ ಎದ್ದು ಹೋಗಿಬಿಡುತ್ತಾರೆ. ಇಂಥವರನ್ನು ಪಲಾಯನವಾದಿಗಳು ಎಂದು ಕರೆದರೆ ಸರಿಹೋದೀತೇನೋ!

ಪಂಚ ಶಂಕರನಾರಾಯಣ ಪರಿಕ್ರಮ

ಮೊದಲ ಪುಟದಿಂದ

ಸ್ವಲ್ಪ ದಿನಗಳಲ್ಲಿ ಅದರ ಸ್ವಲ್ಪ ದೂರಕ್ಕೆ ಜಲ್ಲಿ ಬಿತ್ತು. ಆಗ ಸೈಕಲ್ಲಿನಲ್ಲಿ ಬಂದಿದ್ದೆ. ನರಸೀಪುರ ಬಿಟ್ಟರೆ ಮತ್ತೆ ಮನೆ ಕಾಣಬೇಕಾದರೆ ಬೆಳ್ವೆ ಅಥವಾ ಎಳ್ಳಂತೂರು ತಲುಪಬೇಕು. ಕೈಚಾಚಿದರೆ ಆ ಕಡೆ ಈ ಕಡೆ ಮರಗಳು ಕೈಗೆ ತಗಲುವಷ್ಟು ಕಿರಿದಾದ ಕಾಲ್ದಾರಿ. ಈಗ ಪುಟ್ಟ ವಿಮಾನ ಇಳಿಯುವಷ್ಟು ಅಗಲವಾದ ರಸ್ತೆಯಾಗಿದೆ. ಉದ್ದಕ್ಕೂ ರಬ್ಬರ್, ಅಡಿಕೆ ತೋಟಗಳು; ದೇವರಿಗೇ ಮುಜುಗರ, ಗಾಬರಿ ಆಗುವಷ್ಟು ವೈಭವದ ದೇವಾಲಯಗಳು, ಆ ಕಾಡಿನ ನಡುವೆ. ಅಲ್ಲಲ್ಲಿ ಡ್ಯಾಮ್‌ಗಳು, ಸೇತುವೆಗಳು, ಕಾಲುವೆಗಳು, ರಿಸಾರ್ಟುಗಳು, ಹೋಂ ಸ್ಟೇಗಳು, ಮನೆಮಹಲುಗಳು... ಮತ್ತು 'ಕಾಡು ಉಳಿಸಿ, ವನ್ಯಜೀವಿಗಳನ್ನು ಕಾಪಾಡಿ' ಎಂಬ ಅಸಂಖ್ಯ ಬೋರ್ಡುಗಳು.

ನರಸೀಪುರ ಮತ್ತು ಹೆಂಗೊಳ್ಳಿ ನಡುವೆ ಒಂದು ಕಡೆ 25-30 ಎಕರೆ ರಬ್ಬರ್ ತೋಟವನ್ನು (ನಾನು ಮೊದಲು ನೋಡಿದ ಕಾಲಕ್ಕೆ ಗೊಂಡಾರಣ್ಯ) ಕಡಿದು ನೆಲಸಮ ಮಾಡಿ ನೀವು ಕಲ್ಪಿಸಲೂ ಅಸಾಧ್ಯವಾದಂತಹ ಒಂದು ಅದ್ಭುತ ಮಹಲು, ನಂದನವನ ಮೇಲೇಳುತ್ತಿದೆ. ಅದೊಂದು ಬಾರ್ ರೆಸ್ಟೋರೆಂಟ್. ಈ ಪ್ರದೇಶದಲ್ಲಿ ಅಷ್ಟು ದೊಡ್ಡ, ವಿಶಾಲ ಪಡಖಾನೆ ಮತ್ತೆಲ್ಲಿಯೂ ಇರಲಿಕ್ಕಿಲ್ಲ.

ರೆಸಾರ್ಟ್ ಹೋಂಸ್ಟೇ

ಬೆಳ್ವೆ ಮತ್ತು ಎಳ್ಳಂತೂರು ಕಡೆಯಿಂದ ಅಮಾಸೆಬೈಲ್ ಮತ್ತು ಈ ಕಡೆ ಮಡಾಮಕ್ಕಿ ದಾರಿಗಳು, ಕಾಲ್ದಾರಿಗಳು ಮತ್ತು ಊರುಮನೆಗಳೆಂದರೆ ನನಗೆ ತೀರಾ ಪರಿಚಿತ. ಆದರೆ ರಿಸಾರ್ಟ್, ಹೋಂ ಸ್ಟೇ, ಡ್ಯಾಮ್‌ಗಳು, ಸೇತುವೆಗಳು, ಕಾಲುವೆಗಳು, ಎಸ್ಟೇಟುಗಳ ಬೇಲಿಗಳಿಂದಾಗಿ ನನಗೆ ದಾರಿಯ ದಿಕ್ಕು ಏನೇನೂ ಅರ್ಥವಾಗಲಿಲ್ಲ. ಯಾರನ್ನಾದರೂ ದಾರಿ ಕೇಳಿದರೆ ರಸ್ತೆ, ಆಟೋರಿಕ್ಷಾಗಳನ್ನು ತೋರುತ್ತಾರೆಯೇ ವಿನಃ ಹಳೆಯ ದಾರಿಗಳ ಬಗ್ಗೆ ಅವರಿಗೂ ಏನೂ ಗೊತ್ತಿಲ್ಲ. ಕಡೆಗೆ ನರಸೀಪುರ - ಹೆಂಗವಳ್ಳಿ -ಎಳ್ಳಂತೂರು ದಾರಿಯ ಗೊಡವೆ ಬಿಟ್ಟು ಸೀದಾ ಮರೂರು - ಬೆಳ್ವೆ ಹಾದಿ ಹಿಡಿದೆ. ಇದು ಕೂಡಾ ನನ್ನ ದಾರಿಯನ್ನು ಇನ್ನಷ್ಟು ದೀರ್ಘವಾಗಿಸಿತು.

ಬೆಳ್ವೆ ದೇವಾಲಯಕ್ಕೆ ಹೊರಗಿನಿಂದಲೇ ಒಂದು ಸುತ್ತು ಬಂದೆ. ಬೆಳ್ವೆಯಿಂದ ನರಿಕೊಡ್ಲು ಮೂಲಕ ಆಮ್ರಕಲ್ ಅಥವಾ ಆವರ್ಸೆ ಬಂಡಸಾಲೆ ಸೇರುವ ಪ್ರಾಚೀನ ಕಾಲ್ದಾರಿಯಿತ್ತು. ಅದು ಎಂದೋ ಮಸುಕಾಗಿ ಬೇಲಿ, ಅಗಳು, ದರೆಗಳ ಪಾಲಾಗಿತ್ತು; ಗೇರು ತೋಟಗಳ ಮಧ್ಯೆ ನಿಶ್ಶೇಷವಾಗಿತ್ತು. ನಾನು ಅನಿವಾರ್ಯವಾಗಿ ಬೆಳ್ವೆ ತಾರಿಕಟ್ಟೆ ಆಮ್ರಕಲ್ ದಾರಿ ಹಿಡಿಯಬೇಕಾಯಿತು. ಅಂದರೆ ಪುನಃ ಮೂರ್‍ನಾಲ್ಕು ಕಿಲೋಮೀಟರ್ ಜಾಸ್ತಿಯಾಯಿತು.

ತಾರಿಕಟ್ಟೆಗೆ ತಿರುಗುವಾಗಲೇ ಚಂದಿರನ ಬೆಳಕು ಮಂದವಾಗಿ ಹರಡಿತ್ತು. ಆದಿನ ಅದುವರೆಗೆ ಸರಿಸುಮಾರು ನಲ್ವತ್ತು ಕಿಲೋಮೀಟರಿಗೂ ಮಿಕ್ಕಿ ನಡೆದು ಸುಸ್ತಾಗಿದ್ದರೂ, ಶೂ ಮತ್ತು ಚಪ್ಪಲಿಗಳ ಕಾಟವಿದ್ದರೂ ಬೆಳದಿಂಗಳ ನಡಿಗೆ ಖುಷಿಕೊಟ್ಟಿತು.

ಆಮ್ರಕಲ್ಲಿನಿಂದ ಆವರ್ಸೆ ಬಂಡಸಾಲೆ ತನಕ ಪುನಃ ಮುಖ್ಯ ರಸ್ತೆ. ಬಂಡಸಾಲೆಯಿಂದ ಆವರ್ಸೆ ಶಂಕರನಾರಾಯಣ ದೇವಸ್ಥಾನದ ತನಕ ದಾರಿ ತುಂಬಾ ಚೆಂದ. ಅಂದಿನ ಬೆಳದಿಂಗಳಲ್ಲಿ ಚೆಲುವು ಇಮ್ಮಡಿಯಾಗಿತ್ತು. ಭೂಮಗಾತ್ರದ ಮರಗಳು, ಹೆಬ್ಬಂಡೆಗಳು. ದೇವಸ್ಥಾನದ ಎದುರು ಗದ್ದೆ ಬಯಲು. ಬಯಲಿನ ಈಚೆ ಬಹುದೊಡ್ಡ ಬಂಡೆ. ಚಿಕ್ಕವನಿದ್ದಾಗ ಆ ಬಂಡೆ ಏರಿದ್ದೆ. ಬಂಡೆಯ ಮುಂದಿರುವ ಚಿಕ್ಕ ತೊರೆಗೆ ಈಗ ಸೇತುವೆಯಾಗಿತ್ತು. ಗದ್ದೆಗೆ ಮಣ್ಣು ಹಾಕಿ ದೇವಸ್ಥಾನದ ತನಕ ಇನ್ನೂರು ಮೀಟರಿನಷ್ಟು ರಸ್ತೆ ಮಾಡಿ ಎರಡು ಊರುಗಳನ್ನು ಜೋಡಿಸಿದ್ದರು.



ದೇವಸ್ಥಾನದ ಎಡಗಡೆ ಹಿಂದೆ ಬೆಳದಿಂಗಳಲ್ಲಿ ನೂಜಿಗುಡ್ಡೆ ಭವ್ಯ, ದಿವ್ಯ ಸುಂದರವಾಗಿ ಕಾಣುತ್ತಿತ್ತು. ಚಿಕ್ಕಂದಿನಲ್ಲಿ ಯಾವತ್ತೂ ಹತ್ತಿ ಇಳಿಯುತ್ತಿದ್ದ ನೂಜಿಗುಡ್ಡೆ.

ದೇವಸ್ಥಾನ ತಲುಪುವಾಗ ರಾತ್ರಿ 8.45. ಅಷ್ಟು ಹೊತ್ತಿಗೆ ಪೂಜೆ ಮುಗಿದು ಬಲು ಹೊತ್ತಾಗಿತ್ತು. ದೇವಸ್ಥಾನಕ್ಕೆ ಹೊರಗಿನಿಂದಲೇ ಒಂದು ಸುತ್ತು ಬಂದು ಅರ್ಚಕ ಸುಬ್ರಹ್ಮಣ್ಯ ಐತಾಳರ ಮನೆ ಹೊಕ್ಕೆ. ಇಡೀ ದಿನ ಸರಿಸುಮಾರು 33-34 ಕಿಲೋಮೀಟರ್ ದೂರವನ್ನು 50-52 ಕಿಲೋಮೀಟರ್ ಗಳಿಗೆ ವಿಸ್ತರಿಸಿ 14 ಗಂಟೆಗಳಲ್ಲಿ ಕ್ರಮಿಸಿದ್ದೆ.

ನನ್ನ ಯಾತ್ರೆ ಫಲಪ್ರದವೇ? ಪುಣ್ಯದಾಯಕವೇ? ಗೊತ್ತಿಲ್ಲ. ದೇವರೇ ಹೇಳಬೇಕು. ಮಾಂಡವಿ ಶಂಕರನಾರಾಯಣ ದೇವಾಲಯದ ಬಳಿ ಮೇಯುತ್ತಿದ್ದ ಜಿಂಕೆಗಳು ಹೇಳಬೇಕು. ಎಲ್ಲೆಲ್ಲಿಂದಲೋ ನಡೆದು ದೇವರ ತಲೆಯ ಮೇಲೆ ಹೊತ್ತುಹೊತ್ತಿಗೆ ನೀರು ಹೊತ್ತು ಹಾಕಿದ ಅರ್ಚಕರು ಹೇಳಬೇಕು. ನನ್ನ ಹುಚ್ಚಿಗೆ ತಾವು ಸವೆದ ಡೆಕಾತ್ಲಾನ್ ಶೂ ಮತ್ತು ಚಪ್ಪಲಿಗಳು ಹೇಳಬೇಕು.

ಮತ್ತು ದಾರಿ ಕೇಳಿ ಸಾಗುವ ಕಾಲ ಸಂದುಹೋದ ಈ ಕಾಲದಲ್ಲಿ, ದಾರಿ ಮಧ್ಯೆ ಸಿಕ್ಕಿದವರನ್ನು ದಾರಿ ಕೇಳುವ ನನ್ನನ್ನು ಕಂಡು ಅನುಮಾನಪಟ್ಟವರಲ್ಲಿ ಮತ್ತು ವಿಸ್ಮಯಪಟ್ಟು 'ಬನ್ನಿ, ಸಾಕು ನಡೆದದ್ದು; ಬೈಕ್ ಹತ್ತಿ! ಆವರ್ಸೆಗೆ ಬಿಡುತ್ತೇನೆ' ಎಂದ ಅಪರಿಚಿತ ಸಜ್ಜನರಲ್ಲಿ ಕೇಳಬೇಕು.

ಪ್ರತಿಕ್ರಿಯಿಸಿ: viramapost@gmail.com

ಮಕ್ಕಳ ಕತೆ
» ವಿಜಯಾ ಶ್ರೀಧರ್

ಕೆಲಸದ ಭೂತ!

ಮಲೆನಾಡಿನ ಒಂದು ಪುಟ್ಟ ಹಳ್ಳಿ. ಅಡವಿಯ ಹತ್ತಿರದ ಮನೆಯಲ್ಲಿ ರಾಮಣ್ಣ ಎಂಬ ರೈತ ಇರುತ್ತಿದ್ದ. ಹೆಂಡತಿ ಸೀತಮ್ಮ. ಐದಾರು ಮಕ್ಕಳುಗಳ ಸಂಸಾರ ಅವನದು. ಸದಾ ಮನೆಯ ಎಲ್ಲರೂ ಕೆಲಸ ಮಾಡಿದರೇ ಹೊಟ್ಟೆ ತುಂಬುತ್ತಿತ್ತು. ಸ್ವಲ್ಪ ಹೊಲದ ಕೆಲಸ, ತಂದೆ-ತಾಯಿ-ಮಕ್ಕಳೇ ಹೊಲದ ಕೆಲಸ, ಮನೆ ಕೆಲಸ ಮಾಡುತ್ತಿದ್ದರು.

ಆಗಾಗ ರಾಮಣ್ಣ, ಹೆಂಡತಿ ಸೀತಮ್ಮ ಅಡವಿಗೆ ಹೋಗಿ ಕಾಡು ಹಣ್ಣು, ಒಣಗಿದ ಕಟ್ಟಿಗೆ, ಗೆಡ್ಡೆ-ಗೆಣಸು ತರುತ್ತಿದ್ದರು. ಆದರೂ ಹೊಟ್ಟೆ ತುಂಬುತ್ತಿರಲಿಲ್ಲ. ಆದರೆ ಕೆಲಸ ಮಾತ್ರ ವಿಪರೀತ. ಸದಾ ಎಲ್ಲರೂ ''ಕೆಲಸ, ಕೆಲಸ'' ಎಂದು ಬೇಸರ ಪಡುತ್ತಿದ್ದರು. ಆದರೂ ದಿನಾ ದಣಿದು, ಊಟ ಮಾಡಿ ಮಲಗುವಾಗ ಸಮಾಧಾನ, ಆನಂದದಿಂದ ಮಲಗುತ್ತಿದ್ದರು. ಈ ಹಳ್ಳಿ ಮನೆಗೆ ಯಾವ ಕೆಲಸದ ಆಳುಗಳು ಬರುತ್ತಿರಲಿಲ್ಲ.

ಒಂದು ಸಂಜೆ ರೈತ ಅಡವಿಗೆ ಹೋಗಿ ಬೋರೆ ಹಣ್ಣುಗಳನ್ನು ಕೊಯ್ದುಕೊಂಡು ಬರುತ್ತಿದ್ದ. ಆಗ ಯಾರೋ ''ನಾನು ಬರಲಾ'' ಎಂದು ಕೇಳಿದಂತೆ ಅನಿಸಿತು. ನೋಡಿದರೆ ಯಾರೂ ಇಲ್ಲ. ಬೇಗ ಬೇಗ ಮನೆಗೆ ಬಂದು ಬಿಟ್ಟ. ನಾಲ್ಕಾರು ದಿನ ಸಂಜೆ ಹೊತ್ತಿಗೆ ರೈತ ಮನೆಗೆ ಬರುವಾಗ ''ನಾನು ಬರಲಾ?, ನಾನು ಬರಲಾ?' ಎಂದು ಕೇಳಿದಂತೆ ಆಗುತ್ತಿತ್ತು. ಐದನೇ ದಿನ ರೈತ ಧೈರ್ಯ ಮಾಡಿ 'ಬಾ' ಅಂದ. ಆಗ ಅವನ ಮುಂದೆ ದುಷ್ಟ-ಪುಷ್ಟ ಮನುಷ್ಯ ಎದುರಿಗೆ ಬಂದು ನಿಂತ. ''ಅರೆ! ಇವನೆಲ್ಲಿಂದ ಬಂದ?'' ಎಂದುಕೊಂಡು ''ನೀನು ಯಾರು? ಎಂದ. ''ನಾನು ಕೆಲಸದ ಭೂತ'', ನಿನಗೆ ಸಹಾಯ ಮಾಡಲು ಬಂದಿದ್ದೇನೆ, ನನ್ನನ್ನು ನಿಮ್ಮ ಮನೆಗೆ ಕರೆದುಕೊಂಡು ಹೋಗು, ಕೆಲಸ ಮಾಡುತ್ತೇನೆ'' ಎಂದ.

ರೈತನಿಗೆ ಸಂತೋಷವಾಯ್ತು. ''ಆದರೆ ನಿನಗೆ ಸಂಬಳ ಕೊಡಲು ನನ್ನ ಬಳಿ ಹಣವಿಲ್ಲ. ಊಟ ಹಾಕುತ್ತೇನೆ'' ಎಂದ. ಅದಕ್ಕೆ ಕೆಲಸದ ಭೂತ ''ನನಗೆ ಊಟ ಬೇಡ. ರಾತ್ರಿ ಮಲಗಿ ಬೆಳಿಗ್ಗೆ ಏಳುತ್ತೇನೆ. ಆದರೆ ಸದಾ ಕೆಲಸ ಕೊಡಬೇಕು. ಹೊಲದ ಕೆಲಸ, ಮನೆ ಕೆಲಸ, ಯಾವುದೇ ಕೆಲಸವಾದರೂ ಸರಿ, ಮಾಡುತ್ತೇನೆ'' ಎಂದಿತು.

ರೈತನಿಗೆ ಸಂತೋಷವೋ ಸಂತೋಷ. ''ನಮ್ಮ ಮನೆಯಲ್ಲಿ ಸಿಕ್ಕಾಪಟ್ಟೆ ಕೆಲಸ. ಈ ಕೆಲಸದಿಂದ ನನ್ನ ಹೆಂಡತಿಗೆ ಆರೋಗ್ಯವೇ ಸರಿ ಇಲ್ಲ. ನನ್ನ ಮಕ್ಕಳಿಗೆ ದೂರದ ಶಾಲೆಗೆ ಹೋಗಲೂ ಸಮಯವಿಲ್ಲ. ಬಾ, ನೀನು ಬಂದರೆ ಉಪಕಾರವಾಗುತ್ತದೆ. ಆಗ ಭೂತ ಹೇಳಿತು, ''ಆದರೆ ನನ್ನದು ಒಂದೇ ನಿಯಮ ಇದೆ. ನಾನು ರಾತ್ರಿ ಮಲಗಿ ಬೆಳಿಗ್ಗೆ ಎದ್ದಕೂಡಲೇ ಕೆಲಸ ಕೊಡಬೇಕು. ಕೆಲಸ ಇಲ್ಲದಿದ್ದರೆ ಆ ದಿನ ನಿಮ್ಮನ್ನು ತಿನ್ನುತ್ತೇನೆ'' ಎಂದಿತು.

ರೈತನಿಗೆ ಒಂದು ಕ್ಷಣ ಭಯವಾಯ್ತು. ನಮ್ಮ ಮನೆ-ಹೊಲ ಕೆಲಸ ಮುಗಿಯುವುದೇ ಇಲ್ಲ. ಒಳ್ಳೆಯದಾಯಿತು ಎಂದು ಆ ಭೂತವನ್ನು ಮನೆಗೆ

ಕರೆತಂದ. ಭೂತ ಬಂತು. ಆಯಿತು, ಮನೆ ಕೆಲಸ, ಹೊಲದ ಕೆಲಸ, ಅಂಗಳದ ಕೆಲಸ ಒಂದೆರಡು ದಿನಗಳಲ್ಲೇ ಮುಗಿಸಿತು. ರೈತ, ಹೆಂಡತಿ-ಮಕ್ಕಳು ಈಗ ಖುಷಿಯಾಗಿದ್ದರು. ಒಂದು ದಿನ ರಾತ್ರಿ ಮಲಗುವ ಮುನ್ನ ಭೂತ ಹೇಳಿತು ''ಎಲ್ಲಾ ಕೆಲಸ ಮುಗಿದಿದೆ. ನಾಳೆ ಏನು ಕೆಲಸ ಎಂದು ವಿಚಾರ ಮಾಡಿ'' ಎಂದಿತು.

ರೈತನಿಗೆ ಭಯವಾಯ್ತು. ಯಾವ ಕೆಲಸ ಹೇಳಿದರೂ ಕ್ಷಣದಲ್ಲಿ ಮಾಡಿ ಮುಗಿಸುತ್ತಿತ್ತು, ಭೂತ. ಕೆಲಸ ಕೊಡದ ದಿನ ನಿಮ್ಮನ್ನೇ ತಿನ್ನುತ್ತೇನೆ ಎಂದು ಅದರ ಕರಾರು ನೆನಪಾಯ್ತು. ರಾತ್ರಿ ನಿದ್ರೆ ಮಾಡದೇ ರೈತ ಅಳತೊಡಗಿದ. ಹೆಂಡತಿ-ಮಕ್ಕಳು ಹೆದರಿದರು. ಅವರ ಕಿರಿ ಮಗಳು ತುಂಬಾ ಜಾಣೆ. ''ಅಪ್ಪಾ, ಅಳಬೇಡ. ನಾಳೆ ನಾನೊಂದು ಕೆಲಸ ಆ ಭೂತಕ್ಕೆ ಕೊಡುತ್ತೇನೆ. ಯಾರೂ ಹೆದರಬೇಡಿ'' ಎಂದಳು.

ಬೆಳಿಗ್ಗೆ ಭೂತ ಬಂದು ಕೆಲಸ ಕೇಳಿದಾಗ ಅವರ ಮನೆಯಲ್ಲಿದ್ದ ನಾಯಿಯನ್ನು ತೋರಿಸಿ, ''ನೋಡು ಈ ನಾಯಿಯ ಬಾಲ ಡೊಂಕಾಗಿದೆ, ಅದನ್ನು ನಿನ್ನ ಕೈಯಿಂದಲೇ ನೇರ ಮಾಡು. ಬೇರೆ ಸಾಧನ ಉಪಯೋಗಿಸುವಮತಿಲ್ಲ'' ಎಂದಳು. ಭೂತ ಖುಶಿಯಿಂದ ಒಪ್ಪಿತು. ನಾಯಿ ಬಾಲ ನೇರ ಮಾಡಲು ಇಡೀ ದಿನ ಪ್ರಯತ್ನ ಮಾಡಿದರೂ ಬಾಲ ಡೊಂಕೆ! ರಾತ್ರಿ ಸುಸ್ತಾಗಿ ಭೂತ ಮಲಗಿತು. ಬೆಳಿಗ್ಗೆ ಎದ್ದು ಮತ್ತೆ ಪ್ರಯತ್ನ ಮಾಡಿತು. ಒಂದು ಕೋಲು ಕಟ್ಟಿ ಬಾಲ ನೇರ ಮಾಡಲು ನೋಡಿತು. ರೈತ ರಾಮಣ್ಣ ಬಂದು ಕೋಲು ತೆಗೆದಾಗ ಬಾಲ ಮತ್ತೆ ಡೊಂಕೆ! ಭೂತ ಸೋತು ಶರಣಾಯಿತು. 'ನಾನು ಅಡವಿಗೆ ಹೋಗುತ್ತೇನೆ, ತಪ್ಪಾಯಿತು ಎಂದು ಮಾಯವಾಯ್ತು. ರೈತನ ಮನೆಯವರ ಜೀವ ಉಳಿಯಿತು.

ಮಕ್ಕಳೇ! ಇದರಲ್ಲಿ ಎರಡು ನೀತಿಗಳಿಗೆ (1) ಏನಾದರು ನಾಯಿಬಾಲವು ಡೊಂಕೆ! (2) 'ಕೆಲಸದ ಭೂತ' ಅಂದರೆ ಅತಿ ಯಾಂತ್ರಿಕತೆ. ಅಂದರೆ ಕೆಲಸ ಮಾಡುವ ಯಂತ್ರಗಳು ನಮಗೆ ಅಪಾಯ ತರಲೂ ಬಹುದು ಎಂದು ತಿಳಿದಿರಬೇಕು.

ಕಾಫಿತೋಟದಲ್ಲಿ ನೆಮ್ಮದಿಯ ತಂಗಾಳಿ!

» ಅನಿಲ್ ಹೆಚ್.ಟಿ.

ಕಾಫಿಯ ಸ್ವಾದಕ್ಕೆ ಸರಿಸಾಟಿ ಮತ್ತೊಂದಿಲ್ಲ ಎಂಬುದು ಕಾಫಿ ಪ್ರಿಯರ ಅಂಬೋಣ. ಕಾಫಿಯ ಅರೋಮಾ ವಿಶಿಷ್ಟ, ಅನನ್ಯ. ಮುಂದುವರಿದ ದೇಶಗಳಲ್ಲೂ ಕಾಫಿ ಬಹು ಜನಪ್ರಿಯ ಪೇಯ. ನಮ್ಮ ದೇಶದಲ್ಲಿ ಕಾಫಿ ಬೆಳೆಯುವವರ ಪಾಲಿಗೆ ಈಗ ಅಚ್ಛೇ ದಿನ್ ಬಂದಿದೆ. 16 ವರ್ಷಗಳ ಬಳಿಕ ಭಾರತದ ಕಾಫಿ ಬೀಜಕ್ಕೆ ಊಹೆಗೂ ನಿಲುಕದಂಥ ಬೆಲೆ ದೊರಕಿದೆ.

ಕಾಫಿ ತೋಟಗಳಲ್ಲಿ ಕೆಲವು ವಾರಗಳಿಂದ ನೆಮ್ಮದಿ ನೀಡುವ ತಂಗಾಳಿ ಬೀಸುತ್ತಿದೆ! ಕರುನಾಡಿನ ಕಾಫಿ ಬೆಳೆಗಾರರ ಮೊಗದಲ್ಲೀಗ ಹೂಮಳೆಯಂಥ ಮುಗುಳ್ನಗೆ! ಬೆಟ್ಟಗುಡ್ಡಗಳ ನಡುವೆ, ಕಷ್ಟಕರ ಕೆಲಸವನ್ನು ಮಾಡಿಸುತ್ತಾ, ಕಾಫಿಗಿಡಗಳ ಉಸ್ತುವಾರಿ ನೋಡಿಕೊಳ್ಳುವವರ ಮನಸ್ಸು ಪುಳುಕಗೊಂಡಂತಿದೆ.

ಇದಕ್ಕೆಲ್ಲಾ ಕಾರಣವಾದದ್ದು ಕಾಫಿ ಬೆಳೆಯ ಬೆಲೆ ಏರಿಕೆ. 16 ವರ್ಷಗಳ ತರುವಾಯ ಕಾಫಿ ಬೆಲೆ ಈಗ ಗಗನಕ್ಕೇರಿದೆ ಎನ್ನಬಹುದು. ಮೂರು ಸಾವಿರ ರುಪಾಯಿ ಇದ್ದ ಕಾಫಿಗೆ, ಈಗ 14 ಸಾವಿರ ರುಪಾಯಿ ದೊರಕುತ್ತಿದೆ ಎಂದರೆ ಯಾರು ತಾನೆ ಸಂಭ್ರಮ ಪಡುವುದಿಲ್ಲ ಹೇಳಿ!

ಕಾಫಿ ತೋಟಗಳು ಹೆಚ್ಚಾಗಿರುವ ಕರ್ನಾಟಕದ ಕೊಡಗು, ಚಿಕ್ಕಮಗಳೂರು, ಸಕಲೇಶಪುರ ಜಿಲ್ಲೆಗಳಲ್ಲಿ ಈಗ ಕಾಫಿ ಕುಯ್ಲು ಭರದಿಂದ ಸಾಗುತ್ತಿದೆ. ಡಿಸೆಂಬರ್ ಮೂರನೇ ವಾರದಿಂದ ಇಲ್ಲಿ ಕಾಫಿ ಫಸಲಿನ ಕುಯ್ಲು ಹಬ್ಬದ ಸಂಭ್ರಮದಂತೆ ನಡೆಯುತ್ತಿದೆ. ಕಳೆದ ಒಂದೂವರೆ ದಶಕಗಳಿಂದ ಕಾಫಿ ತೋಟಗಳಲ್ಲ ಮಹಾಮಳೆ, ಅತಿವೃಷ್ಟಿ, ಅನಾವೃಷ್ಟಿಯ ಹೊಡೆತದಿಂದಾಗಿ ಸ್ವಲ್ಪ ನಲುಗಿದ್ದವು. ಕೆಲವು ವರ್ಷ ಅಕಾಲಿಕ ಮಳೆ ಬಂದು ಗಿಡದಲ್ಲಿ ಕಂಡುಬಂದಿದ್ದ ಫಸಲು ಬೆಳೆಗಾರನ ಮನೆಗೆ ತಲುಪದಂಥ ದುಸ್ಥಿತಿ ನಿರ್ಮಾಣವಾಗಿತ್ತು. ಕಾಫಿ ಬೆಳೆದವನ ಕಥೆ ಇಷ್ಟೇ ಎಂಬ ನೋವು ತೋಟಗಳಲ್ಲಿ ಮಡುಗಟ್ಟಿತ್ತು. ಅದಕ್ಕೆ ಸರಿಯಾಗಿ ಮೂರು ವರ್ಷಗಳಿಂದ ಅಕಾಲಿಕ ಅಧಿಕ ಮಳೆಯೂ ಕೂಡ ಕಾಫಿ ತೋಟಗಳಲ್ಲಿ ಫಸಲು ನಷ್ಟಕ್ಕೆ ತನ್ನ ಕೊಡುಗೆಯನ್ನೂ ನೀಡಿತ್ತು.

ಈ ವರ್ಷ ಕಾಫಿ ಬೆಳೆಗಾರ ಒಂದಿಷ್ಟು ನೆಮ್ಮದಿ ಪಡುವಂಥ ಸುಖಿ ದಿನಗಳು ಬಂದಂತಿದೆ. ಅರೆಬಿಕಾ ತಳಿಯ 50 ಕೆಜಿ ಪಾರ್ಚ್‌ಮೆಂಟ್ ಚೀಲಕ್ಕೆ ಈ ವರ್ಷ, 29 ಸಾವಿರ ರುಪಾಯಿ ದೊರಕಿದರೆ, ಚೆರಿ ಕಾಫಿಯ ಚೀಲಕ್ಕೆ 17 ಸಾವಿರ ರು. ದರವಿದೆ. ರೋಬಸ್ಟಾ ತಳಿಯ 50 ಕೆಜಿ ಪಾರ್ಚ್‌ಮೆಂಟ್ ಕಾಫಿ ಚೀಲಕ್ಕೆ 25,000 ರುಪಾಯಿ ದರ ದೊರಕುತ್ತಿದ್ದರೆ, ಚೆರಿ ಚೀಲಕ್ಕೆ 14,000 ರುಪಾಯಿ ಬೆಲೆ ಸಿಕ್ಕುತ್ತಿದೆ.

ಉಲ್ಲಾಸದಿಂದ ಅರಳಿದ ಮನಸ್ಸು

ಈ ಬೆಲೆ ಕಾಫಿ ಬೆಳೆಗಾರನ ಊಹೆಗೂ ಮೀರಿದ್ದಾಗಿದೆ. ಹೀಗಾಗಿ ತೋಟದಲ್ಲಿ ಮಳೆಯ ಸಿಂಚನದಿಂದ ಕಾಫಿ ಹೂ ಅರಳಿದಂತೆ ಕಾಫಿ ಬೆಳೆಗಾರನ ಮನಸ್ಸು ಉಲ್ಲಾಸದಿಂದ ಅರಳಿದೆ. ಪ್ರತೀ ವರ್ಷವೂ, ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಭಾರತೀಯ ಕಾಫಿಯು ಜಗತ್ತಿನ 60 ಕ್ಕೂ ಅಧಿಕ ದೇಶಗಳ ಕಾಫಿ ಜತೆ ಮಾರುಕಟ್ಟೆಯಲ್ಲಿ ಪೈಪೋಟಿ ನಡೆಸಬೇಕಾಗಿತ್ತು. ಅದರಲ್ಲಿಯೂ ಜಗತ್ತಿನಲ್ಲಿಯೇ ಅತೀ ಹೆಚ್ಚು ಕಾಫಿ ಬೆಳೆಯುವ ವಿಯೆಟ್ನಾಂ ಮತ್ತು ಬ್ರೆಜಿಲ್‌ನ ಪಾರುಪತ್ಯದಿಂದಾಗಿ ಭಾರತೀಯ ಕಾಫಿ ಸಾಕಷ್ಟು ಸವಾಲನ್ನು ಎದುರಿಸಬೇಕಾಗಿತ್ತು.

ಬ್ರೆಜಿಲ್‌ನಲ್ಲಿ ಕುಸಿತ

ಆದರೆ ಈ ಸಾಲಿನಲ್ಲಿ, ವಿಯೆಟ್ನಾಂ ಮತ್ತು ಬ್ರೆಜಿಲ್ ದೇಶಗಳಲ್ಲಿ ಅಕಾಲಿಕ ಮಳೆ, ಅನಾವೃಷ್ಟಿ ಏಕಕಾಲದಲ್ಲಿ ಸಂಭವಿಸಿ ಅದರ ಪರಿಣಾಮ ಆ ದೇಶಗಳ ಕಾಫಿ ಫಸಲಿನ ಮೇಲೆ ಉಂಟಾಗಿದೆ. ಜತೆಗೇ ಆ ಎರಡೂ ದೇಶಗಳಲ್ಲಿಯೂ ಕಾಫಿ ಸಸಿಗಳ ಮರುನಾಟೀಕರಣ ಸಮಾರೋಪಾದಿಯಲ್ಲಿ ಸಾಗಿದೆ. ಅಂದರೆ ಹಳೆಯ ಕಾಫಿ ಗಿಡಗಳನ್ನು ಕಡಿದು ಹಾಕಿ ಹೊಸದ್ದಾಗಿ ಕಾಫಿ ಸಸಿ ನೆಟ್ಟರೆ ಭವಿಷ್ಯದಲ್ಲಿ ಭರ್ಜರಿ ಫಸಲು ದೊರಕುತ್ತದೆ ಎಂಬ ಲೆಕ್ಕಾಚಾರದಿಂದ ಆ ದೇಶಗಳಲ್ಲಿ ಮರುನಾಟೀಕರಣ ನಡೆಯುತ್ತಿದೆ. ಹೀಗಾಗಿ, ಆ ದೇಶಗಳಿಂದ ಜಾಗತಿಕ ಮಾರುಕಟ್ಟೆಗೆ ಸರಬರಾಜಾಗಬೇಕಾಗಿದ್ದ ಕಾಫಿಯಲ್ಲಿ ಭಾರೀ ಕುಸಿತ ಕಂಡಿದೆ. ವಿಶ್ವದ ಕಾಫಿ ಮಾರುಕಟ್ಟೆಯ ರಾಜ–ಮಹಾರಾಜರು ಎಂದು ಕರೆಸಿಕೊಂಡಿದ್ದ ದೇಶಗಳಿಂದ ನಿರೀಕ್ಷಿತ ಪ್ರಮಾಣದಲ್ಲಿ ಕಾಫಿ ಸರಬರಾಜಾಗದಿರುವ ಹಿನ್ನಲೆಯಲ್ಲಿ ಭಾರತೀಯ ಕಾಫಿಗೆ ಉತ್ತಮ ಬೇಡಿಕೆ, ಬೆಲೆ ದೊರಕಲು ಸಾಧ್ಯವಾಗಿದೆ. ಭಾರತೀಯ ಕಾಫಿಯ ಗುಣಮಟ್ಟವೂ ಹೋಲಿಕೆಯಲ್ಲಿ ಇತರ ದೇಶಗಳಿಗಿಂತ ಉತ್ತಮವಾಗಿಯೂ ಇರುವ ಕಾರಣ ದಿನೇದಿನೇ ಜಾಗತಿಕ ಕಾಫಿ ಮಾರುಕಟ್ಟೆಯಲ್ಲಿ ಭಾರತದ ಕಾಫಿ ತನ್ನ ಪಾರಮ್ಯ ಹೆಚ್ಚಿಸಿಕೊಳ್ಳುತ್ತಲೇ ಇದೆ. ಹೀಗಾಗಿ ನಮ್ಮ ದೇಶದ ಕಾಫಿಯ ಬೆಲೆಯಲ್ಲಿಯೂ ಅನಿರೀಕ್ಷಿತ ಹೆಚ್ಚಳ ಕಾಣುವಂತಾಗಿದೆ.

ಕರ್ನಾಟಕದ ಪಾಲು ಶೇ.70

- ಕಾಫಿ ತೋಟ ಮತ್ತು ಕಾಫಿ ಉದ್ಯಮದಲ್ಲಿ ಅಂದಾಜು 8 ಲಕ್ಷ ಕಾರ್ಮಿಕರು ಸಕ್ರಿಯರಾಗಿದ್ದಾರೆ.
- ಭಾರತದಿಂದ ವಿದೇಶಗಳಿಗೆ ರಫ್ತಾಗುವ ಕಾಫಿ - 87,938 ಮೆಟ್ರಿಕ್ ಟನ್
- ಭಾರತದಲ್ಲಿ ಕಾಫಿ ಬೆಳೆಯಲಾಗುತ್ತಿರುವ ಪ್ರದೇಶ - 4.79 ಲಕ್ಷ ಹೆಕ್ಟೇರ್
- ಜಗತ್ತಿನ ಒಟ್ಟು ಕಾಫಿ ಉತ್ಪಾದನೆಯಲ್ಲಿ ಭಾರತದ ಪಾಲು ಸುಮಾರು ಶೇ.4. ಬ್ರೆಜಿಲ್‌ನ ಪಾಲು ಸುಮಾರು ಶೇ.29.
- ಭಾರತದಲ್ಲಿ ಕಾಫಿ ಉತ್ಪಾದನೆ - 3.52 ಲಕ್ಷ ಮೆಟ್ರಿಕ್ ಟನ್ (ಅರೇಬಿಕಾ - 1 ಲಕ್ಷ ಮೆಟ್ರಿಕ್ ಟನ್ , ರೋಬಸ್ಟಾ - 2.52 ಲಕ್ಷ ಮೆಟ್ರಿಕ್ ಟನ್)
- ಕರ್ನಾಟಕದಲ್ಲಿ ಕಾಫಿ ಬೆಳೆಯುವ ಪ್ರದೇಶ- 2.46 ಲಕ್ಷ ಹೆಕ್ಟೇರ್ (ಕೊಡಗು - 1.07 ಲಕ್ಷ ಹೆಕ್ಟೇರ್, ಚಿಕ್ಕಮಗಳೂರು - 98 ಹೆಕ್ಟೇರ್, ಹಾಸನ - 41 ಸಾವಿರ ಹೆಕ್ಟೇರ್)
- ಭಾರತದ ಒಟ್ಟು ಕಾಫಿ ಬೀಜ ಉತ್ಪಾದನೆಯಲ್ಲಿ ಕರ್ನಾಟಕದ ಪಾಲು - ಶೇ. 70.

ಮಲೆನಾಡಿನಲ್ಲಿ ಹಿಂದಿ!

ಕಾಫಿ ಬೀಜಕ್ಕೆ ಈ ವರ್ಷ ಬೆಲೆ ಹೆಚ್ಚಾದ ಕೂಡಲೇ ಸಮಸ್ಯೆಗಳೆಲ್ಲವೂ ಅಂತ್ಯವಾದವು ಎಂದೇನಲ್ಲ. ಕಾಫಿ ತೋಟಗಳಲ್ಲಿ ಕೆಲಸ ಮಾಡಲು ಅತ್ಯಗತ್ಯವಾಗಿ ಬೇಕಾದ ಕಾರ್ಮಿಕರ ಕೊರತೆ ಪ್ರತೀ ಜಿಲ್ಲೆಯಲ್ಲಿಯೂ ಭಾದಿಸುತ್ತಿದೆ. ಕಾರ್ಮಿಕರ ಕೊರತೆಯಿಂದಾಗಿ ಪರರಾಜ್ಯದಿಂದ ಕಾರ್ಮಿಕರನ್ನು ತೋಟಗಳಿಗೆ ಕರೆಸಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ. ಅಸ್ಸಾಂ, ಪಶ್ಚಿಮ ಬಂಗಾಳ, ಮಿಜೋರಾಂ, ಜಾರ್ಖಂಡ್‌ಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಮಿಕರು ಕರ್ನಾಟಕದ ಕಾಫಿ ತೋಟಗಳಿಗೆ ಬರುತ್ತಿದ್ದಾರೆ. ಒಂದು ಅಂದಾಜಿನ ಪ್ರಕಾರ ಕಳೆದ ಜನವರಿಯಲ್ಲಿ ಕೊಡಗಿಗೆ ಈ ರೀತಿ ಬಂದ ವಲಸೆ ಕಾರ್ಮಿಕರ ಸಂಖ್ಯೆ 1.60 ಲಕ್ಷದಷ್ಟಿದೆ. ಕೊಡಗಿನ ಪ್ರತೀ ಊರಿನಲ್ಲೂ ಹಿಂದಿ ಮಾತನಾಡುವ ಪರರಾಜ್ಯಗಳ ಕಾರ್ಮಿಕರು ಹೇರಳವಾಗಿ ಕಾಣಸಿಗುತ್ತಿದ್ದಾರೆ. ಕೊಡಗಿನ ವಾರದ ಸಂತೆಯಲ್ಲಿ ಕನ್ನಡದ ಬದಲಿಗೆ ಹಿಂದಿ ಭಾಷೆಯೇ ಕೇಳಿಬರುವಂತಾಗಿದೆ! ಅನೇಕ ಬೆಳೆಗಾರರು ಕನ್ನಡ, ಕೊಡವ, ಅರೆಭಾಷೆ, ಮಲಯಾಳದಂತೆಯೇ ಈಗ ಹಿಂದಿಯಲ್ಲಿಯೂ ಸರಾಗವಾಗಿ ಮಾತನಾಡಲು ಹಿಂದಿ ಭಾಷಿಕ ಕಾರ್ಮಿಕರೇ

ಕಾರಣವಾಗಿದ್ದಾರೆ. ಹಿಂದಿ ಭಾಷೆ ತಿಳಿಯದೇ ಹೋದರೆ ತೋಟಗಳಲ್ಲಿ ವಲಸೆ ಕಾರ್ಮಿಕರಿಂದ ಕೆಲಸ ಮಾಡಿಸಲೇ ಅಸಾಧ್ಯ ಎಂಬಂಥ ಪರಿಸ್ಥಿತಿ ಕಾಫಿ ತೋಟಗಳಲ್ಲಿ ನಿರ್ಮಾಣವಾಗಿದೆ. ಹೀಗಾಗಿ, ಕೊಡಗಿನ ಕಾಫಿ ತೋಟಗಳ ಮಾಲಿಕರೂ, ಮನೆಯವರೂ ಈಗ ಹಿಂದಿ ಕಲಿಯಲೇಬೇಕಾದ ಅನಿವಾರ್ಯತೆಯಲ್ಲಿ ಸಿಲುಕಿದ್ದಾರೆ ಎಂದು ಧಾರಾಳವಾಗಿ ಹೇಳಬಹುದು!

ಅಧಿಕ ವೇತನದ ಸಮಸ್ಯೆ

ಕಾರ್ಮಿಕರಿಗೆ ಅಧಿಕ ವೇತನ ನೀಡಿಕೆ, ರಸಗೊಬ್ಬಗಳಿಗೆ ಬೆಲೆ ಏರಿಕೆಯಂಥ ಸಮಸ್ಯೆಗಳೂ ಕಾಫಿ ಬೆಳೆಗಾರರನ್ನು ಭಾದಿಸುತ್ತಿದೆ. ಎಲ್ಲಕ್ಕಿಂತ ಮುಖ್ಯವಾಗಿ ಹವಾಮಾನ ವೈಪರೀತ್ಯದ ಪರಿಣಾಮ ಕಾಫಿ ಫಸಲಿಗೂ ಹೊಡೆತ ನೀಡಿದೆ. ಬೆಲೆ ಇದ್ದರೂ ನಿರೀಕ್ಷಿತ ಬೆಳೆ ಇಲ್ಲದೇ ಇರುವುದೂ ಕೊಂಚ ಮಟ್ಟಿಗೆ ನಿರಾಶೆಗೂ ಕಾರಣವಾಗಿದೆ. ಅಕಾಲಿಕ ಮಳೆ, ಕಾಫಿ ಕೊಯ್ಲಿನ ದಿನಗಳಲ್ಲಿಯೇ ಮಳೆಯ ಸಿಂಚನ, ಮಂಜಿನ ವಾತಾವರಣದಿಂದಾಗಿ ಕಾಫಿ ಹಣ್ಣು ಒಣಗದಿರುವುದು ಕೂಡ ಒಂದು ಸಮಸ್ಯೆಯಾಗಿ ಪರಿಣಮಿಸಿದೆ.

ತೋಟದ ಆನೆಗಳ ಕಾಟ!

ಕರ್ನಾಟಕ ಕಾಫಿ ತೋಟಗಳಲ್ಲಿ ಬೆಳೆಗಾರರು ಕಾಡಾನೆಗಳ ಮುಖಾಮುಖಿಯ ಭೀತಿಯಲ್ಲಿಯೇ ತೋಟಗಳಲ್ಲಿ ಹೆಜ್ಜೆ ಹಾಕುವಂಥ ಪರಿಸ್ಥಿತಿಯಿದೆ. ಕಾಡಾನೆ, ಸಾಕಾನೆಗಳ ಜತೆಗೇ ತೋಟದಲ್ಲಿಯೇ ಹುಟ್ಟಿ, ಅದೇ ಸರಹದ್ದಿನಲ್ಲಿ ಬೆಳೆದ 'ತೋಟದಾನೆ' ಎಂಬ ಹೊಸ ತಳಿಯ ಆನೆಗಳೂ ಕಾಣಸಿಕ್ಕುತ್ತಿದೆ. ದಟ್ಟ ಕಾಡನ್ನೇ ಕಾಣದೇ ತೋಟಗಳಲ್ಲಿಯೇ ಹುಟ್ಟಿ, ಇಲ್ಲಿಯೇ ಬೀಡು ಬಿಟ್ಟು, ಕಾಫಿ ತೋಟಗಳ ಮಧ್ಯೆ ಏಕಾಏಕಿ ಜನರ ಮೇಲೆ ಧಾಳಿ ಮಾಡುವ ಇಂಥ ಆನೆಗಳ ಹಾವಳಿ ಮಿತಿ ಮೀರುತ್ತಿದೆ. ಕಾಡಾನೆ ಸಮಸ್ಯೆಯನ್ನು ವಾಸ್ತವ ನೆಲಗಟ್ಟಿನಲ್ಲಿ ತೋಟಗಳಿಗೆ ಭೇಟಿ ಡಿನೀಡಿ ಅಧ್ಯಯನ ಮಾಡಿ ಪರಿಹಾರ ಕಂಡುಕೊಳ್ಳಬೇಕಾದ ಸಚಿವರು, ಹಿರಿಯ ಅಧಿಕಾರಿಗಳು ಬೆಂಗಳೂರಿನಲ್ಲಿ ಎಸಿ ಕೋಣೆಯಲ್ಲಿ ಕುಳಿತು, ಕಾಡಾನೆಗಳಿಗೆ ಪ್ರತ್ಯೇಕ ಧಾಮ ರೂಪಿಸುತ್ತೇವೆ ಎಂಬ ಅವಾಸ್ತವಿಕ ಯೋಜನೆ ಸಿದ್ಧಪಡಿಸುತ್ತಿದ್ದಾರೆ.

ಇಂಥ ಹಲವಷ್ಟು ಸಮಸ್ಯೆಗಳ ನಡುವೆಯೇ, 2025 ರ ಪ್ರಾರಂಭದಿಂದಲೂ ಒಂದೇ ಸಮನೆ ಏರಿಕೆ ಕಾಣುತ್ತಿರುವ ಬೆಲೆಯಿಂದಾಗಿ, ಕಾಫಿ ಬೆಳೆಯುವ ಬೆಳೆಗಾರ ಮುಂದಿನ 2-3 ವರ್ಷಗಳೂ ಇದೇ ರೀತಿ ಉತ್ತಮ ಬೆಲೆ ದೊರಕುತ್ತದೆ ಎಂಬ ಆಶಾಭಾವನೆಯಿಂದ ಸಂಭ್ರಮಿಸುತ್ತಿದ್ದಾನೆ. ಕಾಡಾನೆ, ವನ್ಯಜೀವಿಗಳ ಕಾಟ, ಅಕಾಲಿಕ ಮಳೆಯ ದುಸ್ವಪ್ನದ ನಡುವೆಯೂ ಕಾಫಿ ಬೆಳೆಗಾರ ಕೆಲಕಾಲವಾದರೂ ನೆಮ್ಮದಿಯಿಂದ ನಿದ್ದೆ ಮಾಡುವಂತಾಗಿದೆ.

ತಂದೆ ಹೇಳಿದ ಕೋರ್ಸ್ ಅಧ್ಯಯನ ಮಾಡಬೇಕೆ?

Ask the Editor

• ವಿಶ್ವೇಶ್ವರ ಭಟ್

ಸತಾಯಿಸುವ ಪ್ರಶ್ನೆಗಳಿಗೆ ಸಂತೈಸುವ ಉತ್ತರ

ಯಾವುದೇ ವಿಷಯದ ಬಗ್ಗೆ ಏನು ಪ್ರಶ್ನೆಯನ್ನಾದರೂ ಕೇಳಿ

asktheeditorvv@gmail.com

ಸಿ.ಡಿ. ದಿನೇಶ, ಬೆಂಗಳೂರು

- **ಸಂಪಾದಕರೇ, ನನ್ನ ತಂದೆ ವಕೀಲರು. ನನಗೂ ಕಾನೂನು ವಿಷಯವನ್ನು ವ್ಯಾಸಂಗ ಮಾಡು ಅಂತ ಒತ್ತಾಯ ಮಾಡುತ್ತಿದ್ದಾರೆ. ಅದಕ್ಕೆ ನನ್ನ ತಾಯಿ ಕೂಡ ಸಾಥ್ ನೀಡುತ್ತಾರೆ. ನನಗೆ ಕಾನೂನಿನ ವಿಷಯದಲ್ಲಾಗಲಿ, ಆ ವೃತ್ತಿಯಲ್ಲಾಗಲಿ, ಸ್ವಲ್ಪವೂ ಆಸಕ್ತಿ ಇಲ್ಲ. ಆದರೆ ನನ್ನ ತಂದೆ-ತಾಯಿ ಕೇಳುತ್ತಿಲ್ಲ. ಅವರ ಮನಸ್ಸನ್ನು ಹೇಗೆ ಪರಿವರ್ತಿಸುವುದು ತಿಳಿಯುತ್ತಿಲ್ಲ. ಏನಾದರೂ ಉಪಾಯ ಹೇಳಿ?**

- ದಿನೇಶ ಅವರೇ, ಮೊದಲನೆಯದಾಗಿ ಹೇಳುತ್ತೇನೆ, ನಿಮ್ಮ ತಂದೆ- ತಾಯಿ ನಿಮ್ಮ ವೈರಿಗಳಲ್ಲ. ಈ ಭೂಮಿ ಮೇಲೆ ನಿಮಗೆ ಸಿಗಬಹುದಾದ ಅತ್ಯಂತ ಆಪ್ತ ಸ್ನೇಹಿತ, ಹಿತೈಷಿ ಅಥವಾ ಮಾರ್ಗದರ್ಶಕ ರೆಂದರೆ ತಂದೆ -ತಾಯಿಗಳು. ಅವರ ಮನಸ್ಸಿನಲ್ಲಿ ನಿಮ್ಮ ಬಗ್ಗೆ ಕಿಂಚಿತ್ತೂ ಅನ್ಯಭಾವ ಇರಲು ಸಾಧ್ಯವಿಲ್ಲ. ಅವರು ಏನೇ ಹೇಳಿದರೂ ನಿಮ್ಮ ಒಳ್ಳೆಯದಕ್ಕೇ. ಅದರಲ್ಲಿ ಅವರ ಹಿತಾಸಕ್ತಿಗಿಂತ ನಿಮ್ಮ ಹಿತಾಸಕ್ತಿಯೇ ಹೆಚ್ಚು.

ಇನ್ನು, ನಿಮ್ಮ ತಂದೆಯವರು ವಕೀಲರು. ಅವರು ಈಗಾಗಲೇ ಈ ವೃತ್ತಿಯಲ್ಲಿ ಸಾಕಷ್ಟು ಅನುಭವ, ಸಂಪರ್ಕ, ಸಂಬಂಧಗಳಿಸಿದ್ದಾರೆ. ಅವರ ನೆಲೆಯಲ್ಲಿ ತಮ್ಮದೇ ಆದ ಒಂದು ಸಾಮ್ರಾಜ್ಯವನ್ನು ಸ್ಥಾಪಿಸಿದ್ದಾರೆ. ಆ ಸಾಮ್ರಾಜ್ಯಕ್ಕೆ ನಿಮ್ಮನ್ನೇ ಮುಂದಿನ ಅಧಿಪತಿಯನ್ನಾಗಿ ಮಾಡುವ ಹಂಬಲ, ಲೆಕ್ಕಾಚಾರ ಅವರದ್ದು. ಅವರು ಸಾಧಿಸಿದ್ದೆಲ್ಲವನ್ನೂ ನಿಮಗೆ ಸುಲಭವಾಗಿ ಧಾರೆಯೆರೆಯುವ, ಹಸ್ತಾಂತರಿಸುವ ಸದಾಶಯ ಅವರದ್ದು. ತಂದೆಯವರ ಅನುಭವ, ವೃತ್ತಿ ಘನತೆ, ಅವರ ಹೆಸರು, ಪ್ರಸಿದ್ಧಿ ನಿಮಗೆ ತನ್ನಷ್ಟಕ್ಕೆ ಬಳುವಳಿಯಾಗಿ ಬಂದುಬಿಡುತ್ತದೆ.

ನೀವು ಬೇರೆ ವೃತ್ತಿಯನ್ನು ಆಯ್ದುಕೊಂಡರೆ, ಎಲ್ಲವನ್ನೂ ಆರಂಭದಿಂದಲೇ ಶುರು ಮಾಡಬೇಕು. ಈ ಲೆಕ್ಕಾಚಾರದಿಂದ ಅವರು ತಮ್ಮ ವೃತ್ತಿಗೆ ಬಾ ಎಂದು ಒತ್ತಾಯಿಸುತ್ತಿರಬಹುದು. ಅದನ್ನು ಹೊರತು ಪಡಿಸಿ ಅವರಿಗೆ ಬೇರೆ ಯಾವ ಸ್ವಾರ್ಥವಿದ್ದೀತು? ತನ್ನ ಮಗ ಬಹುಬೇಗ ಮತ್ತು ಸುಲಭವಾಗಿ ಬದುಕನ್ನು ಕಟ್ಟಿಕೊಳ್ಳಬಹುದು ಎಂದು ಅವರುಯೋಚಿಸಿರಬಹುದು. ವಕೀಲಿ ವೃತ್ತಿ ಹೆಸರು ಮತ್ತು ಹೆಸರು ಗಳಿಸಲು ಉತ್ತಮ ವೃತ್ತಿ ಎಂದು ಅವರುಯೋಚಿಸಿದ್ದಿರಬಹುದು. ಒಬ್ಬ ತಂದೆ ಹೀಗೆ ಯೋಚಿಸುವುದರಲ್ಲಿ ತಪ್ಪೇನೂ ಇಲ್ಲ. ಎಲ್ಲ ತಂದೆ - ತಾಯಿ ಸಹಯೋಚಿಸುವುದೂ ಹೀಗೆ.

ಇಷ್ಟಾಗಿಯೂ, ನಿಮಗೆ ನಿಮ್ಮ ತಂದೆ ವೃತ್ತಿ ಇಷ್ಟವಾಗದಿರಬಹುದು. ನೀವು ಬೇರೆ ವೃತ್ತಿಯಲ್ಲಿ ಮುಂದುವರಿಯಲು ನಿರ್ಧರಿಸಿರ ಬಹುದು. ತಪ್ಪೇನೂ ಇಲ್ಲ. ಆದರೆ ಯಾವ ಕಾರಣಕ್ಕೂ ತಂದೆ ಮನಸ್ಸನ್ನು ಘಾಸಿಗೊಳಿಸಬೇಡಿ. ತಂದೆಯವರಿಗೆ ನಿಮ್ಮ ನಿಲುವನ್ನು ಮನವರಿಕೆ ಮಾಡಿಕೊಡಿ. ನೀವು ಏನು ಮಾಡಬೇಕೆಂದಿರುವಿರಿ ಎಂಬ ಬಗ್ಗೆ ಅವರಿಗೆ ಭರವಸೆ ತುಂಬುವುದು ನಿಮ್ಮದೇ ಹೊಣೆ. ಯಾವ ಸಂದರ್ಭದಲ್ಲೂ ಅವರ ಮನಸ್ಸಿಗೆ ನೋವಾಗದಂತೆ ವರ್ತಿಸಿ. ಅವರವೃತ್ತಿಯ ಬಗ್ಗೆ ಎಂದೂ ಲಘುವಾಗಿ ಮಾತಾಡಬೇಡಿ. ನೀವು ಆಯ್ದುಕೊಂಡ ಕ್ಷೇತ್ರ, ವಕೀಲಿ ವೃತ್ತಿಗಿಂತ ಉತ್ತಮವಾದುದು ಎಂದು ನಿಮ್ಮ ತಂದೆಯವರಿಗೆ ದೃಢವಾದರೆ ಅಲ್ಲಿಗೆ ನಿಮ್ಮ ಸಮಸ್ಯೆಗೆ ಪರಿಹಾರ ಸಿಕ್ಕಂತೆ.

ಎಂ. ವಿಶ್ವನಾಥ, ಕತ್ತರಿಗುಪ್ಪೆ, ಬೆಂಗಳೂರು

- **ಭಟ್ರೇ, ನನಗೆ ನಲವತ್ನಾಲ್ಕು ವರ್ಷ. ಖಾಸಗಿ ಕಂಪನಿಯಲ್ಲಿ ಉದ್ಯೋಗಿ. ನನಗೆ ಜಿಮ್‌ಗೆ ಹೋಗಬೇಕು ಅಂತ ವಿಪರೀತ ಬಯಕೆ. ಆದರೆ ಹೋಗಲು ಆಗುತ್ತಿಲ್ಲ. ಕಳೆದ ಒಂದು ವರ್ಷದಿಂದ ನನ್ನ ಆಸೆಯನ್ನು ಕಾರ್ಯರೂಪಕ್ಕೆ ತರಲು ಸಾಧ್ಯವಾಗಿಲ್ಲ. ಏನೋ ಆಲಸ್ಯ, ಕುಂಟು ನೆಪದಿಂದಾಗಿ ಅದು ಈಡೇರುತ್ತಿಲ್ಲ. ನಾನು ನಾಳೆಯಿಂದ ಜಿಮ್‌ಗೆ ಹೋಗಬೇಕು ಅಂದ್ರೆ ಏನು ಮಾಡಬೇಕು?**

- ವಿಶ್ವನಾಥ ಅವರೇ, ಜಿಮ್ ವಿಷಯದಲ್ಲಿ ಎಲ್ಲರೂ ನಿಮ್ಮ ಹಾಗೆ. ಯಾರೂ ಸಹ ಒಂದೇ ಪ್ರಯತ್ನಕ್ಕೆ ಜಿಮ್‌ಗೆ ಹೋಗಲಾರಂಭಿಸಿದ್ದನ್ನು ನಾನಂತೂ ನೋಡಿಲ್ಲ. ಈ ವಿಷಯದಲ್ಲಿ ಎಲ್ಲರೂ postpone ಮಾಡುವವರೇ. ಯಾರಾದರೂ ಜಿಮ್‌ಗೆ ಹೋಗುವವರನ್ನು ಕಂಡರೆ, ಅವರೂ ಸಹ ಬಹಳ ದಿನ ಮುಂದೂಡಿ, ನಂತರ ಹೋಗಲಾರಂಭಿಸಿದವರು ಎಂದು ಭಾವಿಸಬಹುದು.

ಇಂದೇ ಜಿಮ್‌ಗೆ ಹೋಗಬೇಕು ಎಂದು ನಿರ್ಧರಿಸಿ, ಇಂದೇ ಜಿಮ್‌ಗೆ ಸೇರಿದವರು ಬಹಳ ಜನ ಇರಲಾರರು. ಅಂದುಕೊಂಡವರೆಲ್ಲ ಜಿಮ್ ಸೇರಿದ್ದರೆ, ನಮ್ಮ ದೇಶದಲ್ಲಿ ಬಾರ್‌ಗಿಂತ ಜಿಮ್‌ಗಳೇ ಹೆಚ್ಚಿರುತ್ತಿದ್ದವು. ಅನೇಕರಿಗೆ ದೇಹ ದಂಡಿಸುವುದು ಮೊದಲ ಆದ್ಯತೆ ಅಲ್ಲ. ಬೇರೆಯವರನ್ನು ನೋಡಿ ಪ್ರಭಾವಿತರಾಗಿ ಜಿಮ್‌ಗೆ ಹೋಗುವವರೇ ಹೆಚ್ಚು. ಜಿಮ್‌ಗೆ ಸೇರಿ ಎರಡು ವಾರಗಳಲ್ಲಿ ಬಿಟ್ಟವರೇ ಹೆಚ್ಚು. ಒಂದು ವೇಳೆ ಅವರು ಸತತವಾಗಿ ಒಂದು ತಿಂಗಳು ಜಿಮ್‌ಗೆ ಹೋಗಿದಿದ್ದರೆ ಅವರು ಎಂದೂ ಜಿಮ್‌ಗೆ ಹೋಗುವುದನ್ನು ತಪ್ಪಿಸುತ್ತಿರಲಿಲ್ಲ ಅಥವಾ ಬಿಡುತ್ತಿರಲಿಲ್ಲ.

ಜಿಮ್‌ಗೆ ಸೇರುವುದು ಮತ್ತು ಒಂದು ತಿಂಗಳು ಸತತ ಹೋಗುವುದು ನಿಜಕ್ಕೂ ಸವಾಲಿನ ಕೆಲಸವೇ. ಎಲ್ಲರಿಗೂಇವೆರಡನ್ನೂ ಮಾಡಲು ಸಾಧ್ಯವಾಗಲಿಕ್ಕಿಲ್ಲ. ಅದಕ್ಕಾಗಿ ಎಲ್ಲರಿಗೂ ಜಿಮ್ ಗೆ ಸೇರುವುದು ಮತ್ತು ಮುಂದುವರಿಯುವುದು ಕಷ್ಟವೇ.

ನಿಮ್ಮದು ತುಸು ಭಿನ್ನ ಪ್ರಕರಣ. ಜಿಮ್‌ಗೆ ಹೋಗಬೇಕು ಎಂದು ವರ್ಷದಿಂದ ಯೋಚಿಸುತ್ತಿದ್ದೀರಿ. ಆದರೆ ಹೋಗಲು ಸಾಧ್ಯವಾಗಿಲ್ಲ. ನೀವು ಅಂದುಕೊಂಡಿದ್ದನ್ನು ಕಾರ್ಯರೂಪಕ್ಕೆ ತರುವ ಮನೋಭಾವದವರಲ್ಲ. ಇದು ಕೆಟ್ಟ ಚಾಳಿ. ಅಂದುಕೊಳ್ಳುವುದು ಮುಖ್ಯವಲ್ಲ, ಆದರೆ ಅಂದುಕೊಂಡಿದ್ದನ್ನು ಕಾರ್ಯರೂಪಕ್ಕೆ ತರುವುದು. ನಾವು ಮನಸ್ಸಿನಲ್ಲಿಯೋಚಿಸಿದ್ದನ್ನು ಅಲ್ಲಿಯೇ ಇಟ್ಟುಕೊಂಡರೆ, ಯೋಚಿಸಿ ಫಲವಿಲ್ಲ. ಕಾರ್ಯರೂಪಕ್ಕೆ ಬಂದಾಗಲೇ ಯೋಚಿಸಿದ್ದಕ್ಕೆ ಬೆಲೆ.

ಜಿಮ್ ಒಂದೇ ಅಲ್ಲ, ನೀವು ಏನನ್ನೇ ನಿರ್ಧರಿಸಿ, ಅದನ್ನು ಜಾರಿಗೊಳಿಸಬೇಕು. ಹಾಗೆ ಮಾಡದಿದ್ದರೆ, ಅದು ಮನಸ್ಸಿನಲ್ಲಿಯೇ ಉಳಿದು ಬಿಡುತ್ತದೆ. ಅದರಿಂದ ನಿಮಗೆ ಏನು ಪ್ರಯೋಜನವಾದಂತಾಯಿತು? ಅಂದುಕೊಂಡಿದ್ದನ್ನು ಮಾಡುವ ಸುಲಭ ಮಾರ್ಗವೆಂದರೆ, ಮಾಡುವುದು. ಇದೊಂದು ರೀತಿಯಲ್ಲಿ ತಣ್ಣೀರು ಸ್ನಾನ ಮಾಡಿ ರೂಢಿಯಿಲ್ಲದವರು ತಣ್ಣೀರುಸ್ನಾನ ಮಾಡಿದಂತೆ. ಚಕ್ಕನೆ ಹಿಂದೆ ಮುಂದೆ ನೋಡದೇ ತಣ್ಣೀರನ್ನು ಮೈಮೇಲೆ ಸುರುವಿಕೊಳ್ಳಬೇಕು. ಅದರ ಬಗ್ಗೆ ಯೋಚಿಸುತ್ತಾ ಕುಳಿತರೆ, ಯೋಚಿಸುತ್ತಲೇ ಇರಬೇಕಾಗುತ್ತದೆ. ಕೆಲವುನಿರ್ಧಾರಗಳನ್ನು ಯೋಚಿಸಿ ಕೈಗೊಳ್ಳಬೇಕು. ಇನ್ನು ಕೆಲವನ್ನು ಕೈಗೊಳ್ಳಬೇಕು, ಯೋಚಿಸುತ್ತಾ ಇರಬಾರದು. ಆ ಪೈಕಿ ಜಿಮ್‌ಗೆ ಹೋಗುವುದೂ ಸೇರಿದೆ. ನಾಳೆಯೇ ಹೋಗಿ ಜಿಮ್‌ಗೆ ಸೇರಿಕೊಳ್ಳಿ, ನಿಮಗೆ ಯಾವ ಕಾರಣವನ್ನೂ ಹೇಳಬೇಡಿ.

ವಿನೋದ ಕಾಮತ, ಹುಬ್ಬಳ್ಳಿ

- **ಸಂಪಾದಕರೇ, ಇತ್ತೀಚಿನ ದಿನಗಳಲ್ಲಿ ಓದುವ ಸಾಕಷ್ಟು ಸರಕುಗಳು ವಾಟ್ಸಾಪ್‌ನಲ್ಲಿ ಹರಿದು ಬರುತ್ತಲೇ ಇರುತ್ತವೆ. ಆದರೆ ಅವೆಲ್ಲವನ್ನು ಓದಲು ಸಮಯ ಸಿಗುವುದಿಲ್ಲ. ಓದದಿದ್ದರೂ ಸಮಾಧಾನವಾಗುವುದಿಲ್ಲ. ಅವೆಲ್ಲವುಗಳನ್ನು ಓದಲು ಹೇಗೆ ಸಮಯವನ್ನು ಹೊಂದಿಸಿಕೊಳ್ಳಬೇಕು ಎಂಬುದೇ ಅರ್ಥವಾಗುವುದಿಲ್ಲ. ಈ ವಿಷಯದಲ್ಲಿ ನನಗೆ ನಿಮ್ಮ ಸಲಹೆ ಸೂಚನೆಗಳು ಬೇಕು.**

- ಕಾಮತ ಅವರೇ, ಸಾಮಾಜಿಕ ಜಾಲತಾಣ ವ್ಯಾಪಕವಾಗುತ್ತಿರುವ ಈ ಕಾಲಘಟ್ಟದಲ್ಲಿ ಮಾಹಿತಿ ಪ್ರವಾಹದ ರೀತಿಯಲ್ಲಿ ಹರಿದು ಬರುತ್ತದೆ. ಫೇಸ್ಬುಕ್, ಎಕ್ಸ್, ಇನ್ಸ್ಟಾಗ್ರಾಮ್ ಹಾಗೂ ಮತ್ತಿತರ ಪ್ಲಾಟ್‌ಫಾರ್ಮಗಳಿಂದ ಮಾಹಿತಿ ದಂಡಿಯಾಗಿ ಬರುತ್ತವೆ. ದಿನದ ಯಾವುದೇ ಹೊತ್ತಿನಲ್ಲಿ ವಾಟ್ಸಪ್ ಓಪನ್ ಮಾಡಿದರೂ ಹೊಸ ಮೆಸೇಜುಗಳು ಬಂದಿರುತ್ತವೆ. ಎಷ್ಟು ಸಂದರ್ಭದಲ್ಲಿ ನಮಗೆ ಬರುವ ಎಲ್ಲಾ ಮಾಹಿತಿ ಅಥವಾ ಸಂದೇಶಗಳನ್ನು ಓದಲು ಆಗುವುದಿಲ್ಲ, ಕಾರಣ ಸಮಯದ ಅಭಾವ.

ನಮಗೆ ಬರುವ ಎಲ್ಲಾ ಮಾಹಿತಿಯನ್ನು ಓದಲೇಬೇಕು ಎಂದೇನೂ ಇಲ್ಲ. ಕಾರಣ ನಮಗೆ ಬೇಕಾಗಿರುವುದಿಲ್ಲ. ಬುರ್ಕಿನೊ ಫಾಸೊ ಎಂಬ ದೇಶದಲ್ಲಿ ಮಹಿಳೆಯರು ಕೆಲಸಕ್ಕೆ ಹೋಗುವುದಿಲ್ಲ ಎಂಬ ಮಾಹಿತಿಯನ್ನು ತೆಗೆದುಕೊಂಡು ಏನು ಮಾಡುವುದು? ನಮ್ಮ ಜ್ಞಾನಾರ್ಜನೆಗೆ ಯಾವ ಮಾಹಿತಿ ಬೇಕು ಎಂದು ನಿರ್ಧರಿಸುವುದು ಬಹಳ ಮುಖ್ಯ. ಬಂದ ಮಾಹಿತಿ ಎಲ್ಲವೂ ನಮಗೆ ಬೇಕಾಗಿರುವುದಿಲ್ಲ. ಹೀಗಾಗಿ ನಾವು ವಿಷಯ ಆಯ್ಕೆ ಮಾಡಿಕೊಳ್ಳುವುದು ಉತ್ತಮ. ಬಂದ ಮೆಸೇಜುಗಳೆಲ್ಲ ಉಪಯುಕ್ತ ಎಂದು ಭಾವಿಸಬೇಕಿಲ್ಲ. ಆ ಪೈಕಿ ನಿರರ್ಥಕವಾದವುಗಳೇ ಜಾಸ್ತಿ. ಯಾರು ಸಮರ್ಪಕವಾಗಿ ವಿಷಯ ಆಯ್ಕೆ ಮಾಡಿಕೊಂಡು ತಮಗೆ ಬೇಕಾದ ಮಾಹಿತಿಯನ್ನು ಪಡೆಯುತ್ತಾರೋ ಅಂಥವರಿಗೆ ಸಾಕಷ್ಟು ಸಮಯ ಸಿಗುತ್ತದೆ. ಬಂದಿದ್ದನ್ನೆಲ್ಲ ಓದುವುದೆಂದರೆ ನದಿಯಲ್ಲಿನ ಮೀನು ನೀರು ಕುಡಿದಂತಾಗಬಹುದು.

ಜಿ.ಪ್ರಭಾಕರ ರೆಡ್ಡಿ (ಇಮೇಲ್ ಮೂಲಕ)

- **ಸಂಪಾದಕರೇ, ನಾನು ಮತ್ತು ನನ್ನ ಅಣ್ಣ ನಮ್ಮ ಕುಟುಂಬದೊಂದಿಗೆ ಒಟ್ಟಿಗೆ ಒಂದೇ ಮನೆಯಲ್ಲಿದ್ದೇವೆ. ನಾನು ಮತ್ತು ನನ್ನ ಅಣ್ಣನ ಮಧ್ಯೆ ಸಮಸ್ಯೆ ಇಲ್ಲ. ಆದರೆ ನನ್ನ ಮತ್ತು ಅವನ ಹೆಂಡತಿ ಮಧ್ಯೆ ಹೊಂದಾಣಿಕೆ ಇಲ್ಲ. ನಮ್ಮ ತಂದೆ ಸಾಯುವಾಗ 'ನೀವಿಬ್ಬರೂ ಒಟ್ಟಿಗೆ ಇರಬೇಕು' ಎಂದು ಹೇಳಿದ್ದರು. ಈಗ ಪರಿಸ್ಥಿತಿ ಕೈ ಮೀರಿ ಹೋಗುತ್ತಿದೆ. ನಾವಿಬ್ಬರೂ ಬೇರೆ ಬೇರೆ ಮನೆ ಮಾಡಲು ಅಣ್ಣನಿಗೂ ಮನಸ್ಸಿಲ್ಲ. ಆದರೆ ಒಟ್ಟಿಗೆ ಇರಲು ನನ್ನ ಮತ್ತು ಅವನ ಪತ್ನಿಗೆ ಸಾಧ್ಯವಾಗುತ್ತಿಲ್ಲ. ಏನು ಮಾಡುವುದು ತಿಳಿಯುತ್ತಿಲ್ಲ.**

-ರೆಡ್ಡಿ ಅವರೆ, ನಿಮ್ಮದು ಊರಲ್ಲಿ ಇಲ್ಲದ ಹೊಸ ಸಮಸ್ಯೆ ಅಲ್ಲ. ಇದು ಎಲ್ಲೆಡೆ ಸಹಜವಾಗಿರುವ ಸಮಸ್ಯೆ. ನೀವು ಅಣ್ಣ -ತಮ್ಮ ಒಟ್ಟಿಗೆ ಇರುವುದೂ ಈ ದಿನಗಳಲ್ಲಿ ಕಷ್ಟವೇ. ಆದರೆ ನಿಮ್ಮಿಬ್ಬರ ಮಧ್ಯೆ ಹೊಂದಾಣಿಕೆ ಇರುವುದು ಸಮಾಧಾನದ ಸಂಗತಿಯೇ. ಅದೇ ಹೊಂದಾಣಿಕೆ ನಿಮ್ಮಿಬ್ಬರ ಪತ್ನಿಯರ ಮಧ್ಯವೂ ಇರಬೇಕೆಂದು ನಿರೀಕ್ಷಿಸುವುದು ಸರಿಯಲ್ಲ. ನಿಮ್ಮ ತಂದೆಯವರ ಮಾತನ್ನು ಈಡೇರಿಸಲು ನೀವು ಒಟ್ಟಿಗೇ ಇರುವುದರಿಂದ ಆಗುವ ಲಾಭಕ್ಕಿಂತ ಹಾನಿಯೇ ಹೆಚ್ಚು.

ಮಕ್ಕಳು ಒಟ್ಟಿಗೇ ಇರಬೇಕೆಂದು ಎಲ್ಲ ತಂದೆ -ತಾಯಿಗಳೂ ಬಯಸುತ್ತಾರೆ. ಆದರೆ ಈ ದಿನಗಳಲ್ಲಿ ಅದು ಕಾರ್ಯಸಾಧುವಲ್ಲ. ಬೇರೆ ಬೇರೆಯಾಗಿದ್ದರೇ ಹೆಚ್ಚು ಪ್ರೀತಿ, ಅನ್ಯೋನ್ಯತೆಯಿಂದ ಇರಬಹುದು. ಈ ದಿನಗಳಲ್ಲಿಎಲ್ಲರೂ ಖಾಸಗಿತನ ಅಥವಾ private space ಬಯಸುತ್ತಾರೆ. ಒಂದೇ ಮನೆಯಲ್ಲಿ ಒಟ್ಟಿಗೇ ಬದುಕುವ ಮನಸ್ಥಿತಿ ಮರೆಯಾಗುತ್ತಿದೆ. ಗಂಡ -ಹೆಂಡತಿ ಸಹ ಬೇರೆ ಬೇರೆ ಕೋಣೆಗಳಲ್ಲಿ ಇರುವುದನ್ನು ಇಷ್ಟಪಡುವ ಕಾಲಘಟ್ಟದಲ್ಲಿದ್ದೇವೆ.

ಹೀಗಿರುವಾಗ ಅಣ್ಣ -ತಮ್ಮ ಒಟ್ಟಿಗೇ ಸಂಸಾರ ಮಾಡಬೇಕೆಂದು ನಿರೀಕ್ಷಿಸುವುದು ಕಷ್ಟ. ಈ ವಿಷಯದಲ್ಲಿ ನೀವು ವಾಸ್ತವವಾಗಿ ಚಿಂತಿಸುವುದು ಒಳ್ಳೆಯದು. ಅಪ್ಪನ ಆಸೆಯನ್ನು ಈಡೇರಿಸಲು ಹೋಗಿ ಅನಗತ್ಯ ತಾಪತ್ರಯಗಳನ್ನು ತಂದುಕೊಳ್ಳಬೇಡಿ. ಪ್ರಾಕ್ಟಿಕಲ್ ಆಗಿ ಯೋಚಿಸುವುದು ಜಾಣತನ. ನೀವು ಅಣ್ಣ -ತಮ್ಮಂದಿರು ಒಂದೇ ಮನೆಯಲ್ಲಿದ್ದು ಹೊಡೆದಾಡುವುದಕ್ಕಿಂತ, ಬೇರೆ ಬೇರೆ ಮನೆಗಳಲ್ಲಿ, ಖುಷಿಯಿಂದ ಇರುವುದು ಒಳ್ಳೆಯದಲ್ಲವೇ?

ಈ ಮೂಲಕ ನಿಮ್ಮ ತಂದೆಯವರ ಆಸೆಯನ್ನು ಪೂರೈಸಬಹುದು. ಒಂದೇ ಮನೆಯಲ್ಲಿ ಇರುವುದು ಅಂದರೆ ಏನು ? ಒಂದೇ ಮನೆಯಲ್ಲಿ ಎಲ್ಲ ಹೇಗಿದ್ದೇವೆ ಎಂಬುದು ಮುಖ್ಯ. ''ನೀರು ಹತ್ತಿರವಿರಬೇಕು, ಒಡಹುಟ್ಟಿದವರು ದೂರವಿರಬೇಕು'' ಎಂಬ ಗಾದೆಯನ್ನು ಕೇಳಿರಬಹುದು. ಆದ್ದರಿಂದ ನಿಮ್ಮನ್ನು ಅಗಲಿದ ತಂದೆಯವರ ಮಾತನ್ನುಈಡೇರಿಸಲೇ ಬೇಕು ಎಂಬ ಒತ್ತಡಕ್ಕಿಂತ, ನಿಮ್ಮ ಜತೆ ಇರುವವರ ಆಸೆಯನ್ನು ಈಡೇರಿಸಬೇಕು ಎಂಬ ಒತ್ತಾಸೆಗೆ ತಲೆಬಾಗುವುದು ವಿಹಿತ.

ಕಳತ್ತೂರು ವಾಸುದೇವಮೂರ್ತಿ, ಬೆಂಗಳೂರು

- **ಭಟ್ರೇ, ನಮ್ಮ ಮನೆಯಲ್ಲಿ ನಾನು, ಪತ್ನಿ, ಮಗ ಮತ್ತು ಮಗಳೊಂದಿಗೆ ಸಂತೃಪ್ತ ಜೀವನ ಸಾಗಿಸುತ್ತಿದ್ದೇನೆ. ಆದರೂ ನನ್ನಮನಸ್ಸಿನಲ್ಲಿ ಒಂದು ಕೊರಗಿದೆ. ಅದೇನೆಂದರೆ, ನಮ್ಮ ಮನೆಯಲ್ಲಿ ಯಾರೂ ಓದುವುದೇ ಇಲ್ಲ. ನಮ್ಮ ಮನೆಯಲ್ಲಿ ನನ್ನತಂದೆಯವರು ಸಂಗ್ರಹಿಸಿದ ಪುಸ್ತಕ ಸೇರಿದಂತೆ, ಉತ್ತಮ ಗ್ರಂಥಾಲಯವಿದೆ. ಆದರೆ ನನ್ನ ಇಬ್ಬರು ಮಕ್ಕಳು ಪುಸ್ತಕವನ್ನೇ ಹಿಡಿಯುತ್ತಿಲ್ಲ. ಗ್ರಂಥಾಲಯದ ಕಡೆಯೂ ಸುಳಿಯುವುದಿಲ್ಲ. ಸದಾ ಮೊಬೈಲ್ ಹಿಡಿದು ಬಿದ್ದಿರುತ್ತಾರೆ. ಅವರಿಗೆ ಪುಸ್ತಕ ಓದಿಸುವುದು ಹೇಗೆ?**

- ವಾಸುದೇವಮೂರ್ತಿಯವರೇ, ಇದೊಂದು ಈ ತಲೆಮಾರಿಗೆ ಅಂಟಿದ ವಿಚಿತ್ರ ಕಾಯಿಲೆ ಮತ್ತು ಘೋರ ಶಾಪ. ಪುಸ್ತಕ ಹಿಡಿದು ಓದುವವರು ಅಪರೂಪವಾಗಿದ್ದಾರೆ. ಅವರಿಗೆ ಮೊಬೈಲಿನಲ್ಲಿ ಬರುವುದಷ್ಟೇ ಜ್ಞಾನ ಎಂದು ಭಾವಿಸಿದ್ದಾರೆ. ಇದಕ್ಕೆ ಕಾರಣ ಸರಳ. ಅವರಿಗೆ ಪುಸ್ತಕದೊಳಗೆ ಏನಿದೆ ಎಂಬುದು ಗೊತ್ತಿಲ್ಲ. ಒಂದು ವೇಳೆ ಅದರಲ್ಲಿರುವ ಜ್ಞಾನಸಂಪತ್ತು ಗೊತ್ತಾದರೆ ಅವರು ಖಂಡಿತವಾಗಿಯೂ ಬಿಡುವುದಿಲ್ಲ. ಆದರೆ ಪುಸ್ತಕವನ್ನು ಹಿಡಿಯಲು ಮೊಬೈಲ್ ಬಿಡುತ್ತಿಲ್ಲ. ಅವರಿಗೆ ಎಷ್ಟೇ ಸಮಯವಿದ್ದರೂ ಮೊಬೈಲ್ ನೋಡಿ ಮುಗಿಯುವುದಿಲ್ಲ. ಹೀಗಿರುವಾಗ ಪುಸ್ತಕ ಹಿಡಿಯಲು ಪುರುಸೊತ್ತಾದರೂ ಎಲ್ಲಿದೆ?

ಈಗಿನ ಕಾಲದಲ್ಲಿ ಎಲ್ಲ ತಂದೆ -ತಾಯಿಯರ ಮುಂದಿರುವ ದೊಡ್ಡ ಸವಾಲು ಅಂದ್ರೆ ತಮ್ಮ ಮಕ್ಕಳಿಗೆ ಪುಸ್ತಕದ ರುಚಿ ಹತ್ತಿಸುವುದು. ಮೊಬೈಲ್ ಮತ್ತು ಕಂಪ್ಯೂಟರ್ ಎರಡೂ ಪುಸ್ತಕ ವಿರೋಧಿ. ಯಾರು ಹೆಚ್ಚುಹೆಚ್ಚು ಕಂಪ್ಯೂಟರ್ ಮತ್ತು ಮೊಬೈಲ್ ಬಳಸುತ್ತಾರೋ, ಅವರು ಸ್ವಾಭಾವಿಕವಾಗಿ ಪುಸ್ತಕಗಳಿಂದ ದೂರ. ಪುಸ್ತಕ ಓದಲು ಏಕಾಗ್ರತೆ ಬೇಕು ಮತ್ತು ಪುಸ್ತಕ ಓದುವಾಗ ಅದೊಂದನ್ನೇ ಓದಬೇಕು. ಆದರೆ ಮೊಬೈಲ್ ಮತ್ತು ಕಂಪ್ಯೂಟರ್ ಬಳಸುವಾಗ ಹಾಗಲ್ಲ. ಈ ಆಕರ್ಷಣೆ ಪುಸ್ತಕದಿಂದ ವಿಮುಖರಾಗುವಂತೆ ಮಾಡಿದೆ.

ನಿಮ್ಮ ಮಕ್ಕಳಿಗೆ ಪುಸ್ತಕ ಓದಿ ಎಂದು ಗದರುವುದರಿಂದ ಅವರು ಪುಸ್ತಕ ಓದುವುದಿಲ್ಲ. ಪುಸ್ತಕದಲ್ಲಿ ಏನಿದೆ ಎಂಬುದನ್ನು ಅವರಿಗೆ ಮನವರಿಕೆ ಮಾಡಿಕೊಡಬೇಕು. ಅದಕ್ಕೆ ಅವರಿಗೆ ಪುಸ್ತಕಗಳನ್ನು ಓದಿಸಬೇಕು. ಆರಂಭದಲ್ಲಿ ಒಂದೆರಡು ಪುಸ್ತಕಗಳನ್ನು ಓದಿದರೆ ಅವರೇ ಸ್ವಾಭಾವಿಕವಾಗಿ ಆಕರ್ಷಿತರಾಗುತ್ತಾರೆ. ಅಷ್ಟಕ್ಕೂ ಮೊಬೈಲ್ ಮತ್ತು ಕಂಪ್ಯೂಟರ್ ಬಿಡುತ್ತಿಲ್ಲ. ಈ ಜನಾಂಗ ಪುಸ್ತಕದಿಂದ ದೂರವಾದರೆ, ಅವರನ್ನು ಪುನಃ ಹತ್ತಿರಕ್ಕೆ ತರುವುದು ಕಷ್ಟ. ನಿಮ್ಮ ಮಕ್ಕಳು ಪುಸ್ತಕ ಓದುವುದಿಲ್ಲ ಎಂಬುದು ನಿಮ್ಮ ಮನೆಯಲ್ಲಿ ಸಂಘರ್ಷದ ವಿಷಯವಾಗುವುದು ಬೇಡ. ಅದಕ್ಕಾಗಿ ಕಿತ್ತಾಟ ಬೇಡ. ನಿಮ್ಮ ಮಕ್ಕಳ ರೂಮಿನಲ್ಲಿ ಒಳ್ಳೆಯ ಪುಸ್ತಕಗಳನ್ನು ಇಡಿ. ಆ ಕೃತಿಯ ಬಗ್ಗೆ ನೀವು ಮಾತಾಡಿ. ಅವರಲ್ಲಿ ಪುಸ್ತಕ ಓದಿನ ಅಭಿರುಚಿ ಮೂಡಿಸಲು ಪ್ರಯತ್ನಿಸಿ.